# ಅಪರಂಜಿ

ತಿಳಿನಗೆಯ ಕಾರಂಜಿ

ಎಪ್ರಿಲ್ 2021

**ಯುಗಾದಿ ವಿಶೇಷಾಂಕ**




## ತ್ರಿಶಂಕು

ಬಿಡಿ ಪ್ರತಿ: ರೂ. 30/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 38**

**ಸಂಚಿಕೆ – 07**

**ಎಪ್ರಿಲ್ – 2021**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಮೊದಲ ಮಾತು | ಶಿವಕುಮಾರ್ | 3 |
| ಅಪರಂಜಿ ಕಿಡಿ | ಪ್ರಕಾಶ್ | 4 |
| ಬಿದ್ದೂರಿನ ಬಿಗ್‌ಬೆನ್ | ಶ್ರೀನಿವಾಸ ವೈದ್ಯ | 5 |
| ವಾಲ್ಮೀಕಿಯ ನೆನಪಲ್ಲಿ.... | ಎಸ್.ಆರ್. ವಿಜಯಶಂಕರ್ | 14 |
| ಮಲ್ಲೇಶ್ವರದ ಮಾಲಿನಿ ಮೇಡಂ | ವತ್ಸನ | 17 |
| ಸಂಪಾದಕರಿಗೊಂದು ಪತ್ರ | ಕೆ. ಎಸ್. ಶ್ರೀಶೈಲನ್ | 21 |
| ಶೀನಣ್ಣನೂ ವಿಧಿಯೂ | ಅ.ರಾ.ಸೇ. | 22 |
| ಗರಿಕೆ ಮದ್ದು | ಎಂ.ಎಸ್.ನರಸಿಂಹಮೂರ್ತಿ | 26 |
| ಬಿಜಲಾನಿ ಮತ್ತು ..... | ನಂದಿನಿ ಕಾಪಡಿ | 29 |
| ಅನುಶಾಸನ ಪರ್ವ | ರಮೇಶಚಂದ್ರ | 35 |
| ತುಂತುರು | ದನಂಆ | 38 |
| ಆ ಹದಿನೈದು ದಿನಗಳು | ಡಿ.ವಿ. ಗುರುಪ್ರಸಾದ್ | 40 |
| ಮೋಹನಮೂರ್ತಿಯ ಮಹಾಪುರಾಣ | ಟಿ.ಎಸ್. ಶ್ರವಣಕುಮಾರಿ | 43 |
| ಮನೆಯಿಂದಲೇ ಕೆಲಸ.. | ಜಿ.ವಿ.ಅರುಣ | 47 |
| ಹೆಚ್ಚೆಚ್ಚು ಮೊಮ್ಮಕ್ಕಳು ಬರಲಿ | ಎಚ್.ಗೋಪಾಲಕೃಷ್ಣ | 50 |

ವ್ಯಂಗ್ಯಚಿತ್ರ

ಮುಖಪುಟ : ಇಂಟರ್ ನೆಟ್ ಕೃಪೆ

ಒಳಪುಟಗಳಲ್ಲಿ : ರಘುಪತಿ ಶೃಂಗೇರಿ, ಪ್ರಕಾಶ್ ಶೆಟ್ಟಿ, ನಾಗನಾಥ್



*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

| | | |
|---|---|---|
| ಅಪ್ಪ ಎಂಬ ಮಗು | ಬೇಲೂರು ರಾಮಮೂರ್ತಿ | 53 |
| ಹರಕೆ | ಗೌತಮ | 58 |
| ಲೈಫ್ ಸರ್ಟಿಫಿಕೇಟ್ | ಡಾ. ಶ್ಯಾಮಲಾ ರವಿಶಂಕರ್ | 61 |
| ವ್ಯಂಗ್ಯಚಿತ್ರಾವಳಿ | ರಘುಪತಿ ಶೃಂಗೇರಿ | 64 |
| ನಾನು ನಾನೇನೇ? | ಸಿ.ಆರ್. ಸತ್ಯ | 66 |
| ಒಂಟೇ ಹೋಯ್ತು | ಕೃಷ್ಣ ಸುಬ್ಬರಾವ್ | 68 |
| ಜೀವ್ಸ್ ಕೆಲಸಕ್ಕೆ ಸೇರಿದ | ಪಾಲಹಳ್ಳಿ ವಿಶ್ವನಾಥ್ | 71 |
| ಕಲ್ಲು ಹುಚ್ಚಿನ ಕಲ್ಲೂ | ಚಿತ್ರಾ ರಾಮಚಂದ್ರನ್ | 74 |
| ಕನಸೆಂಬ ಕೌತುಕ ಲೋಕ | ಕೆ.ವಿ. ರಾಜಲಕ್ಷ್ಮಿ | 78 |
| ನಾನು ನಾನೇನಾ? | ಶ್ರೀಧರ ಬಾಣಾವರ | 82 |
| ವಿಲೇವಾರಿ | ವಸುಮತಿ ಉಡುಪ | 84 |
| ದೇವರ ಅಪ್ಪಣೆ | ಸೀತಾತನಯ | 87 |
| ಊಟದ ಆಟ | ಶ್ರೀ ಲಕ್ಷ್ಮಿ | 92 |
| ಯಜಮಾನರ ಉಗಾದಿ ಉಡುಗೊರೆ | ಸಹನಾ ಪ್ರಸಾದ್ | 94 |
| ಆಚಾರವಿಲ್ಲದ ನಾಲಗೆ | ಈಶ್ವರಚಂದ್ರ | 96 |
| ಅವನು ನಾನಲ್ಲ... ನಾನು ಅವನಲ್ಲ | ವೈ.ಎಸ್. ಗುಂಡೂರಾವ್ | 98 |
| ಜಿಪುಣತನ ವಂಶಪಾರಂಪರ್ಯವೇ | ಡಾ. ಸಿ.ಕೆ.ರೇಣುಕಾರ್ಯ | 103 |
| ಆಸೆ | ಎಚ್. ಡುಂಡಿರಾಜ್ | 104 |
| ಪಾರ್ವತೀಪತೆಯೇ ಹರಹರಾ... | ಶರತ್ ಕಲ್ಕೋಡ್ | 105 |
| ನೀರಜ ಕವನ ಬರೆದಾಗ | ಜಿ.ವಿ. ನಿರ್ಮಲ | 107 |
| ಪ್ರಾಣಿಗಳ ಪಬ್ ಪಾರ್ಟಿ | ಇ.ಆರ್. ರಾಮಚಂದ್ರನ್ | 111 |
| ಎಲ್ಲಿ ಹೋದವು ಆ ದಿನಗಳು | ವಾಣಿ ಸುರೇಶ್ | 114 |
| ಇದೂ ಒಂದು ಚಟವೇ | ಕುಮುದಾ ಪುರುಷೋತ್ತಮ್ | 117 |
| ನಮ್ಮೊಳಗೊಬ್ಬ ಕಳ್ಳನಿದ್ದಾನೆಯೇ | ಗಣೇಶ ಹೆಗಡೆ | 119 |
| ಪುಸ್ತಕ ಪರಿಚಯ | ಬೇಲೂರು ರಾಮಮೂರ್ತಿ | 122 |
| ಕೊಂಕು ಜೀವಿ | ಪ್ರಕಾಶ್ ಶೆಟ್ಟಿ | 123 |
| ಧವಳಕೇಶ ಚರಿತ್ರೆ | ಮಹಾಬಲ ಕೆ.ಎನ್. | 125 |




# ಮೊದಲ ಮಾತು

**- ಶಿವಕುಮಾರ್**

ಕಳೆದ ಯುಗಾದಿಯಂದು ಕರೋನಾದ ಕರಾಳ ಛಾಯೆಯಲ್ಲಿ ಶಾರ್ವರಿ ಸಂವತ್ಸರವನ್ನು ಬರಮಾಡಿಕೊಳ್ಳುವಾಗ, ಪ್ಲವನಾಮ ಸಂವತ್ಸರದ ಹೊತ್ತಿಗಾದರೂ ಪರಿಸ್ಥಿತಿ ತಿಳಿಯಾಗಬಹುದೆಂದು ಆಶಿಸಿದ್ದೆವು. ಈಗ ಒಂದು ವರ್ಷದ ನಂತರ ಜನಜೀವನ ಬಹು ಮಟ್ಟಿಗೆ ಸುಧಾರಿಸಿರುವಂತೆ ಕಾಣುತ್ತಿದೆ. ಆದರೂ ಖಂಡಿತವಾಗಿ ಪ್ಯಾಂಡೆಮಿಕ್ ಮೇಲೆ ವಿಜಯ ಸಾಧನೆಯಾಗಿದೆಯೆಂದು ಹೇಳಲಾಗದು. ಎಲ್ಲ ಎಚ್ಚರಿಕೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದರ ಜೊತೆಗೆ ಸರ್ಕಾರದ ಲಸಿಕೆ ಕಾರ್ಯಕ್ರಮದ ಸಂಪೂರ್ಣ ಪ್ರಯೋಜನವನ್ನು ಪಡೆಯುವುದು ಜಾಣತನ.

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರೂ, ಅಪರಂಜಿಯ ಬರಹಗಾರ ಬಳಗದ ಹಿರಿಯರೂ ಆದ ಶ್ರೀಯುತ ಶ್ರೀನಿವಾಸ ವೈದ್ಯರ "ಬಿದ್ದೂರಿನ ಬಿಗ್‌ಬೆನ್" ಎಂಬ ಲೇಖನ, ಹಾಗೂ ಕೊರವಂಜಿಯ ಲೇಖಕರಾಗಿದ್ದ ಅ.ರಾ.ಸೇ. ಅವರ "ಶೀನಣ್ಣನೂ ವಿಧಿಯೂ" ಎಂಬ ಬರಹ, ಇವೆರಡೂ ಕನ್ನಡ ಹಾಸ್ಯಸಾಹಿತ್ಯ ಪ್ರಕಾರದಲ್ಲಿ ಗೋಲ್ಡ್ ಸ್ಟಾಂಡರ್ಡ್ ಎನ್ನಬಹುದಾದಂತಹ ಲೇಖನಗಳು. ನಮ್ಮ ಹೊಸ ಪೀಳಿಗೆಯ ಓದುಗರಿಗೆ ಈ ಸಾಹಿತ್ಯದ ಸೊಗಡನ್ನು ಪರಿಚಯಿಸುವ ಉದ್ದೇಶದಿಂದ ಈ ಎರಡು ಲೇಖನಗಳು ಈ ಸಂಚಿಕೆಯಲ್ಲಿ ಪುನಃ ಬೆಳಕು ಕಾಣುತ್ತಿವೆ. ವಿಮರ್ಶಕರೆಂದೇ ಖ್ಯಾತಿ ಪಡೆದಿರುವ ಶ್ರೀಯುತ ಎಸ್.ಆರ್. ವಿಜಯಶಂಕರ್ ಅವರು ನಮ್ಮ ಕೋರಿಕೆಯನ್ನು ಮನ್ನಿಸಿ ಸ್ವಾರಸ್ಯವಾದ ಲೇಖನವೊಂದನ್ನು ನೀಡಿದ್ದಾರೆ. ಶ್ರೀಯುತರಿಗೆ ಅಪರಂಜಿ ಆಭಾರಿ.

ಈ ಯುಗಾದಿ ವಿಶೇಷ ಸಂಚಿಕೆಯ ತಯಾರಿಗೆ ಅನೇಕ ಪ್ರತಿಭಾವಂತ ಲೇಖಕ ಲೇಖಕಿಯರು ಕೈಜೋಡಿಸಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದ್ದಾರೆ. ಅವರೆಲ್ಲರಿಗೂ ಅಪರಂಜಿಯ ಹೃದಯಪೂರ್ವಕ ಕೃತಜ್ಞತೆಗಳು. ಅಚ್ಚುಕಟ್ಟಾಗಿ ಸಂಚಿಕೆ ಹೊರಬರಲು ಕಾರಣರಾದ ಒಮೆಗಾ ಲೇಸರ್‌ಟೆಕ್‌ನ ಶ್ರೀ ರವೀಂದ್ರರಾವ್, ಮುದ್ರಣ ಮತ್ತು ಅಂಚೆ ರವಾನೆಯ ಹೊಣೆಯನ್ನು ಹೊತ್ತಿರುವ ರವಿ ಗ್ರಾಫಿಕ್ಸ್‌ನ ಶ್ರೀ ವಿ.ಆರ್. ಭರತ್ ಅವರುಗಳಿಗೆ ನಮ್ಮ ನಮನಗಳು. ಈ ಪ್ಲವನಾಮ ಸಂವತ್ಸರವು ಎಲ್ಲರಿಗೂ ಸಕಲ ಸನ್ಮಂಗಳಗಳನ್ನು ಉಂಟುಮಾಡಲೆಂದು ಅಪರಂಜಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.





# ಅಪರಂಜಿ ಕಿಡಿ

- ಪ್ರಕಾಶ್

ಅಂಗಿ ಬಿಚ್ಚಿ ಪ್ರತಿಭಟನೆ ; ಶಾಸಕ ಅಮಾನತು – ಪತ್ರಿಕೆ

**ಪಾಪ, ಚರ್ಚೆಯ ಬಿಸಿ ಜೋರಾಯಿತೇನೋ !!**

***

**ಪಿಚ್ಚಿನ ಬಗ್ಗೆ ಜಗಳದಲ್ಲಿ ಕ್ರಿಕೆಟ್ ಬಡವಾಯಿತು ಅನ್ನಬಹುದು ಈಗ !!**

***

ಜೀವನ ಸೂಚ್ಯಂಕದಲ್ಲಿ ಬೆಂಗಳೂರಿಗೆ ಅಗ್ರಸ್ಥಾನ – ಸುದ್ದಿ

**ಅರೆ ! ನಮಗೆ ಇದು ತೋಚಿಯೇ ಇರಲಿಲ್ಲವಲ್ಲ !!**

***

**ನಾವು ಹಿಂದುಳಿದವರು ಎಂದು ಕರೆಸಿಕೊಳ್ಳಲು ಜನ ಮುನ್ನುಗ್ಗುತ್ತಿರುವುದನ್ನು ನೋಡಿ ಅಪರಂಜಿ ಸಖೇದಾಶ್ಚರ್ಯ ಪಟ್ಟಳಂತೆ !!**

***

"ಜಾಣ ನಡೆಯಿಂದ ಕನ್ನಡದ ಉಳಿವು"–ಪತ್ರಿಕೆಯಲ್ಲಿ ಹೇಳಿಕೆ

**ಒಪ್ಪಬೇಕಾದ ಮಾತು ಎಂದು ಅಪರಂಜಿ ತಲೆದೂಗಿದಳಂತೆ!!**

***

ಹಲಸಿನ ಬೀಜದಿಂದ ಚಾಕೊಲೇಟ್ ತಯಾರಿಕೆ – ಸುದ್ದಿ

**ಅದನ್ನ "ಜಾಕೊಲೇಟ್" ಎಂದು ಕರೆಯುತ್ತಾರಂತೆ !!**

***

ಕ್ರಿಕೆಟ್ ಬೆಟ್ಟಿಂಗ್ ; ಕಾನ್ಸ್ಟಬಲ್‌ಗಳೇ ರೂವಾರಿ – ಪತ್ರಿಕೆ

**"ಬೇಲಿಯೇ ಎದ್ದು .........!!**



# "ಬಿದ್ದೂರಿನ ಬಿಗ್‌ಬೆನ್"

– ಶ್ರೀನಿವಾಸ ವೈದ್ಯ

**(ಶ್ರೀನಿವಾಸ ವೈದ್ಯರು ಅಪರಂಜಿ ಬಳಗದ ಹಿರಿಯ ಲೇಖಕರು. ತಮ್ಮ ಲೇಖನ ವ್ಯವಸಾಯದ ತಾರುಣ್ಯದಲ್ಲಿ ಬರೆದ ಲೇಖನವಿದು. ಕೋವಿಡ್‌ನೊಂದಿಗಿನ ಗಂಭೀರ ಸಂಗ್ರಾಮವನ್ನು ಇಷ್ಟು ದಿನ ಇದುರಿಸಿದ ನಮ್ಮ ಓದುಗರು, ಈಗ ಪ್ಲವ ನಾಮ ಸಂವತ್ಸರವನ್ನು ಸಂಭ್ರಮದಿಂದ ಇದಿರುಗೊಳ್ಳಲೆಂದು ಈ ಲೇಖನವನ್ನು ಮತ್ತೆ ನೀಡುತ್ತಿದ್ದೇವೆ. ಸದಭಿರುಚಿಯ ಹಾಸ್ಯಸಾಹಿತ್ಯಕ್ಕೆ ಇದೊಂದು ಸುವರ್ಣ ಮೇಲ್ಪಂಕ್ತಿ ಎಂದು ನಮ್ಮ ದೃಢ ನಂಬಿಕೆ. ಓದಿ ಆನಂದಿಸಿ)**

***

ಸಿಟ್ಟು, ಕೋಪ, ತಾಪ. ಸನ್ನಿ, ಪಿತ್ತಕೆರಳುವಿಕೆ, ತಲೆತಿರುಕತನ ಇತ್ಯಾದಿಗಳಲ್ಲಿ ತರತಮಗಳು ಹೇಗೋ ನನಗೆ ತಿಳಿಯದು. ಆದರೆ ಇವುಗಳನ್ನೆಲ್ಲಾ ಮೀರಿದ ಒಂದು ವ್ಯವಸ್ಥೆ ಇರುವುದೆಂದೂ ಅದಕ್ಕೆ ಇಂಗ್ಲೀಷಿನಲ್ಲಿ "ಶಂಖವಾದ್ಯ"ವೆಂದು ಹೇಳುವರೆಂದೂ ಕೇಳಿಬಲ್ಲೆ. ಅಲ್ಲದೇ ಸ್ವಾನುಭವದಿಂದ ಕೂಡ ಕಂಡಿದ್ದೇನೆ.

ಆ ಕತೆ ಹೀಗಿದೆ. ನೀವು ಸುಜ್ಞಾನದಿಂದ ಕೇಳಿ.

***

ಇತ್ತೀಚೆಗೆ ಚುನಾವಣೆಯ ಕೆಲಸಕ್ಕೆಂದು ಕರ್ನಾಟಕದ ಅತಿ ಕೊನೆಯ ಕೊಂಪೆಯಾದ ಬಿದ್ದೂರಿಗೆ ಹೋಗಿದ್ದೆ. ಬಿದ್ದೂರು ನಾಗರೀಕತೆಯಿಂದ ದೂರವಾಗಿ ತನ್ನ ಪಾಡಿಗೆ ತಾನು ಬಿದ್ದು ಕೊಂಡಿದ್ದ ಒಂದು ಕುಗ್ರಾಮ.

ಚುನಾವಣೆಯ ಕೆಲಸವೆಲ್ಲ ಮುಗಿದಾಗ ಮುಚ್ಚಂಜೆಯಾಗಿ ಬಿದ್ದೂರಿನ ದಾರಿಯಾಗಿ ಹೋಗುವ ಕೊನೆಯ ಬಸ್ಸು ಹೊರಟು ಹೋಗಿತ್ತು. ಮರು ದಿನ ಬೆಳಿಗ್ಗೆ ಏಳರವರೆಗೆ ಬೇರೆ ಬಸ್ಸು ಬಿದ್ದೂರಿನ ಮೇಲೆ ಹಾಯುವದಿಲ್ಲ. ಹೀಗಾಗಿ ಅಂದಿನ ರಾತ್ರಿಯನ್ನು ಬಿದ್ದೂರಿನಲ್ಲಿ ಕಳೆಯುವ ಮಹಾ ಸೌಭಾಗ್ಯ ನನ್ನದಾಗಿತ್ತು. ಮುಂದೇನಪ್ಪಾ? ಎಂದು ಮತಿಭ್ರಾಂತನಾಗಿ ನಿಂತಾಗ ಒಮ್ಮೆಲೆ ನನ್ನ ಚಡ್ಡಿ–ದೋಸ್ತಿ ಪಾಟೀಲ ಪರಮೇಶಿ ಪ್ರತ್ಯಕ್ಷನಾದ. ತಮಿಳು ಪಿಕ್ಚರಿನಲ್ಲಿ ದೇವರು ಪ್ರತ್ಯಕ್ಷನಾದಂತೆ.

"ನೀನ್ಯಾಕೊ, ಇಲ್ಲಿ?

"ನಿನಗೇನು ಬ್ಯಾನಿ ಬಂದಿತ್ತೋ ಬಿದ್ದೂರಿಗೆ ಬರಲಿಕ್ಕೆ?" ಇತ್ಯಾದಿ ಕುಶಲ ಪ್ರಶ್ನೆಗಳಾದ ಮೇಲೆ ತಿಳಿದದ್ದು ಇಷ್ಟು. ದೇಶದ ಕೊಂಪೆ ಕೊಂಪೆಗಳಲ್ಲಿ ಹೇಗೆ ಚುನಾವಣೆ ನಡೆಸುವುದು ಅವಶ್ಯವೋ ಹಾಗೆಯೇ ದೇಶದ ಅತಿ ಕೆಟ್ಟ ಕೊಂಪೆಯಲ್ಲಿ ಕೂಡ ಒಂದು ರಾಷ್ಟ್ರೀಕೃತ ಬ್ಯಾಂಕಿನ ಶಾಖೆ ಇರಲೇ ಬೇಕು. ಚುನಾವಣೆಯ ಕೆಲಸಕ್ಕೆ ಬಿದ್ದೂರಿಗೆ ಬಂದ ಪಾಪಿ ನಾನಾದರೆ ಅಲ್ಲಿಯ ಬ್ಯಾಂಕ್ ಮ್ಯಾನೇಜರ ಪಾ. ಪ. ಅಂದರೇ ಪಾಟೀಲ ಪರಮೇಶಿ. ಅಂತೂ ರಾತ್ರಿಯ ಚಿಂತೆ ತಪ್ಪಿತ್ತು.



ಊಟ ಮುಗಿಸಿ ಇನ್ನೇನು ಹಾಸಿಗೆಯ ಮೇಲೆ ಉರುಳಬೇಕೆಂದಾಗ ಕೈಗಡಿಯಾರ ನೋಡಿಕೊಂಡೆ. ಆದಾವಾಗಲೋ ಬಂದು ಬಿದ್ದಿತ್ತು. ಪರಮೇಶಿಯ ವಾಚು ಕೆಟ್ಟು ಕಳೆದ ನಾಲ್ಕು ತಿಂಗಳಿಂದ ರಿಪೇರಿಗೆ ಬಿದ್ದಿತ್ತಂತೆ ಹುಬ್ಬಳ್ಳಿಯಲ್ಲಿ. ಆದರೂ ಬೆಳಿಗ್ಗೆ ಕರೆಕ್ಟಾಗಿ ಆರು ಗಂಟೆಗೆ ಎಬ್ಬಿಸುವ ಭರವಸೆಯಿತ್ತ ಪರಮೇಶಿ. ನನಗೆ ನಂಬಿಕೆಯಿಲ್ಲ.

“ಈ ಬಿದ್ದೂರಾಗ ಬೇರೆ ಎಲ್ಲೂ ಗಡಿಯಾರ ಇಲ್ಲೇನೊ ಪರಮೇಶಿ?” ಎಂದೆ.

“ಇಲ್ಲ”

“ಮತ್ತ ನೀ ಹೆಂಗ ನನ್ನ ಕರೆಕ್ಟ ಆರಕ್ಕ ಎಬ್ಬಿಸ್ತೀ?”

“ಹೆಂಗಂದ್ರ ಕರೆಕ್ಟ ಆರಕ್ಕೇ ಬಾಜೂದ ಮನೀ ಹಾರೂರ ಮುದಿಕಿ ರಿಂದವ್ವ ಎದ್ದು ದೇವರ ನಾಮ ಹಾಡತಿರ್ತಾಳ ಆವಾಗ ನಾ ಅಲ್ಲ ನಮ್ಮಪ್ಪ ಏಳ್ತಾನ.”

“ಆಕಿ ಎದ್ದಾಗ ಕರೆಕ್ಟ ಆರು ಹೊಡೆದಿರತದ ಅಂತ ಯಾತರ ಮ್ಯಾಲಿಂದ ಹೇಳ್ತಿ?”

“ಯಾಕಂದ್ರ ಗೌಡರ ಕೋಣಾ ಒದರಿದ ಮ್ಯಾಲನ ರಿಂದವ್ವ ಏಳ್ತಾಳ”

ನನಗೆ ಒಂದು ಕಡೆ ನಗೆ, ಬೆಳಿಗ್ಗೆ ಬಸ್ಸು ಸಿಕ್ಕೀತೋ ಇಲ್ಲವೋ ಎಂಬ ಹೆದರಿಕೆ. ಲಘು ಹೃದಯದ ಪರಮೇಶಿಯನ್ನು ಕಂಡು ಹತಾಶತನ, ದಿಗ್ಭ್ರಾಂತಿ, ಎಲ್ಲ ಒಟ್ಟು ಗೂಡಿಸಿ ಕೇಳಿದೆ.

“ಹಾಂಗಂದರೇನೋ ಪರಮೇಶಿ?”

“ಅಂದರೆ ದಿನಾಲೂ ಕರೆಕ್ಟಾಗಿ ಬೆಳಿಗ್ಗೆ ಆರಕ್ಕೇ ಗೌಡರ ಕೋಣ ಒದರ್ತದ” ನಾನು ಹಣೆ ಚಚ್ಚಿಕೊಂಡು ಕೇಳಿದೆ.

“ಅಲ್ಲೋ–ಕೋಣ ಒದರಿದಾಗ ಆರು ಹೊಡೆದಿರತದ ಅಂತ ಹೇಂಗ ಹೇಳತಿ?”

“ಹೇಂಗಂದ್ರ ಕರೆಕ್ಟ ಆರು ಹೊಡೆದಾಗನ ಕೋಣ ಒದರತೈತಿ. ನನಗೆ ಬ್ರಹ್ಮಾಂಡ ಸಿಟ್ಟು ಬಂತು. ನುಂಗಿಕೊಂಡೆ.

***

“ಪರಮೇಶೀ” ಎಂದೆ ನಿದ್ದೆ ಬಾರದೇ ಹೊರಳಾಡುತ್ತಾ.

“ಏನೋ” ಎಂದನವನು ಅದೇ ಸ್ಥಿತಿಯಲ್ಲಿ.

ಈ ಊರಾಗ ಗಡಿಯಾರನs ಇಲ್ಲಿಂದ್ರ ಯಾರಿಗೂ ಟೈಮು ಎಷ್ಟು ಎಂದು ತಿಳಿಯುವ ಜರೂರು ಇಲ್ಲೇನು”

“ಇಲ್ಲ”

“ಅಂದರೇ”

“ಅಂದರ ಈ ಊರವರೆಲ್ಲ ಒಕ್ಕಲತನಾ ಮಾಡ್ತಾರ. ಮುಂಜಾನೆದ್ದು ಹೊಲಕ್ಕ ಹೋಗ್ತಾರ ಸಂಜಿಕೆ ಬರ್ತಾರ. ಹೀಂಗಾಗಿ ಟೈಮ್ ಎಷ್ಟು ಆತು ಎಷ್ಟು ಹೋತು ತಿಳಕೊಂಡು ಯಾರಿಗೇನು ಆಗಬೇಕಾಗೇತಿ”?

“ಹೋಗಲಿ ನಿನಗರ ಬ್ಯಾಂಕ್‌ಗೆ ಹೋಗಲಿಕ್ಕೆ, ಬ್ಯಾಂಕ್ ಬಂದು ಮಾಡಲಿಕ್ಕೆ ಟೈಮ್ ಎಷ್ಟು ಎಂದು ತಿಳಕೊಳ್ಳೋದು ಬ್ಯಾಡೇನು,”

“ಬ್ಯಾಡ”

“ಅಂದರೇ”

“ಅಂದರೇ ನಾನೂ ಸೂರ್ಯ ನೆತ್ತಿಮ್ಯಾಗೆ ಬಂದಾಗ ಬ್ಯಾಂಕ ತಗಿತೇನಿ. ಸಂಜೀಮುಂದ ಮುಚ್ಚತೀನಿ. ಈ ಬ್ಯಾಂಕಿನ್ಯಾಗ ನಾನೆ ಮ್ಯಾನೇಜರ ಕಮ್ ಕ್ಲಾರ್ಕ ಕಮ್ ಪ್ಯೂನ್ ಕಮ್ ಗಿರಾಕಿ.

“ಅಂದರ ಬ್ಯಾಂಕಿಗೆ ಯಾರೂ ಬರೂದು ಇಲ್ಲೇನು?”



"ಇಲ್ಲ"

"ಅಂದರೇ....

"ಅಂದರ, ಈ ಊರವರು ಮತ್ತು ಅಜೂಬಾಜೂ ಹಳ್ಳೀಯವರು ಎಲ್ಲಾರೂನೂ ಬ್ಯಾಂಕಿನಾಗ ಸಾಲಾ ತೊಗೊಂಡು ಬಿಟ್ವಾರ. ಇನ್ಯಾರೂ ಬರಾಂಗಿಲ್ಲ?"

'ಅಲ್ಲೋ ಪರಮೇಶಿ ಯಾರಾರ ಸಾಲಾ ಮರು ಪಾವತಿ ಮಾಡಲಿಕ್ಕೆ ಬಂದರೆ?

"ಎನ್‌ಕ್ವಾಯರಿ ಆಗತೈತಿ"

"ಅಂದರೆ"

"ಅಂದರೆ, ಹುಚ್ಚಪ್ಪ! ಈಗ ಹಳ್ಳಿ ಊರಾಗ ಬ್ಯಾಂಕಿನ ಸಾಲಾ ಯಾರೂ ಮರಳಿ ಕೊಡುವುದಿಲ್ಲ. ಹಂತದರಾಗ ಯಾರಾರ ತಿರುಗ ಕೊಡಾಕ ಬಂದ್ರ, ಇದರಾಗೇನೋ ಫ್ರಾಡ ಐತಿ ಮ್ಯಾನೇಜರೂ ಮತ್ತು ಸಾಲಾ ತೊಗೊಂಡವ್ರು ಕೂಡಿ ಏನೋ ಮಸಲತ್ತು ಮಾಡ್ಯಾರ ಅಂತ ಮ್ಯಾಗಿನವರಿಗೆ ಸಂಶೆ ಬಂದು ಎನ್‌ಕ್ವಾಯರೀ ಮಾಡ್ತಾರ"

ದೇಶದಲ್ಲಿ ಬ್ಯಾಂಕಿಂಗ್ ಉದ್ದಿಮೆ ಸಾಧಿಸಿದ ಪ್ರಗತಿಯನ್ನು ಕಂಡು ನಿಜವಾಗಿ ಹೆಮ್ಮೆ ತಾಳಿದೆ,

"ಪರಮೇಶಿ" ಎಂದೆ

"ಏ, ನೀನು ಎನ್‌ಕ್ವಾಯರೀಗೆ ಬಂದವರಂಗೆ ಮಾತಾಡಾಕಹತ್ತೀಯಲ್ಲ, ಮಕ್ಕೊ ಮಕ್ಕೊ" ಎನ್ನುತ್ತ ತಾನೂ ಮಕ್ಕೊಂಡು ಮುಸುಕೆಳೆದ.

ಅವನ ಆ ಸ್ಥಿತಪ್ರಜ್ಞತೆಯನ್ನು ಕಂಡು ಹೊಟ್ಟೆ ಉರಿಯಿತು ವಿಪರೀತ ಕೋಪಬಂತು ತಾಳಿಕೊಂಡೆ.

ಗಾಳಿಯೇ ಇಲ್ಲದೆ ಬಯಲು ಸೀಮೆಯ ಆ ಕಗ್ಗತ್ತಲೆಯ ಭಯಾನಕ ರಾತ್ರಿಯಲ್ಲಿ ಇನ್ನೇನು ಕಣ್ಣಿಗೆ ಕಣ್ಣು ತಾಗಬೇಕು ಅಷ್ಟರಲ್ಲಿ ಒಮ್ಮೆಲೇ ಹತ್ತಾರು ಜೆಟ್ ವಿಮಾನಗಳು ಪ್ರಳಯಾಂತಕ ಸದ್ದು ಮಾಡುತ್ತ ಮೈಮೇಲೆ ಹಾರಿದಂತೆಯೂ, ನೂರಾರು ಮುಳ್ಳು ಹಂದಿಗಳೋ, ಕಣೀಹಂದಿಗಳೋ ನನ್ನ ದೇಹಕ್ಕೆ ತೆಕ್ಕೆ ಹಾಯ್ದು ನನ್ನ ದೇಹವನ್ನು ಕೋಸಂಬರಿಗೆ ಕೊಚ್ಚಿದಂತೆಯೂ ಆಗಿ ವೇದನೆಯನ್ನು ತಾಳದೇ.

"ಪರಮೇಶೀೀ" ಎಂದು ಕಿರುಚಿದೆ.

ನನ್ನ ದೋಸ್ತ ಗಾಬರಿಯಾಗಿ ನಿದ್ದೆಗಣ್ಣಿನಲ್ಲಿಯೇ ಎದ್ದು ಕುಳಿತು "ಏನಾಯ್ತೋ?" ಎಂದ.

"ಥೂ.... ನಿನ್ನ. ಒಂದೀಟ ಡೋಮಿ ತಡದರಯಷ್ಟ ಒದರ್ಯಾಡ್ತಿಲೇ" ಎಂದ.

"ಡೋಮಿ?, ಎಂದೆ ಇನ್ನಷ್ಟು ಗಾಬರಿಯಲ್ಲಿ. ಇದು ಯಾವ ರೆಪ್ಟೈಲ್ ಜಾತಿಯೋ ಆಫ್ರಿಕದ ಚೇಳೋ ಎಂದು ತಿಳಿಯದೆ.

ನನ್ನ ಅಜ್ಞಾನಕ್ಕೆ ಕನಿಕರಿಸುತ್ತ ಪರಮೇಶಿ ನನಗೆ ತಿಳಿಹೇಳಿದ.

"ಅಲ್ಲಪಾ! ಏಕೀಕರಣ ಆಗಿ ಇಷ್ಟ ವರಸ ಆತು. ಇನ್ನರು ನಿನ್ನ ಆ ಮೈಲಾಪುರ ಖಂನಡ ಬಿಟ್ಟು ಒಂದೀಟು ಸುದ್ದ ಖಂನಡ ಕಲೀ... ಡೋಮಿ ಅಂದರ ಗುಂಗಾಡು ಅಂದ್ರ ಸೊಳ್ಳೆ, ಬೆಂಗಳೂರ ಖಂನಡದಾಗ ಮಾಸ್ಕಿಟೋ.... ಅನಾಫಿಲೀಸ್ ತಿಳೀತ" ಎಂದ "ತಿಳೀತು ಪರಮೇಶಿ ತಿಳೀತು ಈ ಡೋಮಿಗಳು ಹೀಗೇ ನನ್ನ ರಕ್ತ ಕುಡೀತಾ ಇದ್ದರೆ ಬೆಳಿಗ್ಗೆ ಏಳೋ ಪ್ರಶ್ನೆಯೇ ಇಲ್ಲ" ಎಂದೆ.



ಏ ಸುಮ್ನ ಮಾಕ್ಕೊ ಹೊದಕೊಂಡು ಮುಂಜಾನೆ ಕೋಣ ಒದರುತ್ತಲೇ

ಎಬ್ಬಿಸ್ತೇನಿ. ಈಗ ಸಾಡೇ ಬಾರಾಕ್ಕ ಬಂತು ಮಕ್ಕೊ ಎನ್ನುತ್ತಾ ಮುಸುಕನೆಳೆದ ಮಹಾನುಭಾವ. ಅಂತೂ ನನ್ನ ಮರುದಿನದ ಪ್ರಯಾಣ ಕೋಣದ ಮೇಲೆಯೇ ಎಂದು ನಿಖರವಾಯಿತು. ಒಂದು ತೆರನಾದ ಹತಾಶತನವೂ ತಾಪವೂ ಉಂಟಾಯಿತು. ಉರಿದುಕೊಂಡೆ. ಮತ್ತು ಸಾಡೇ ಬಾರಕ್ಕ ಬಂದುದರಿಂದ ಸುದ್ದ ಕನ್ನಡದಲ್ಲಿ ಬಿದ್ದುಕೊಂಡು ಡೋಮಿಗಾಹುತಿಯಾದೆ.

***

ಕೆಲನಿಮಿಷಗಳಲ್ಲಿ ಮತ್ತೆ ಮುಳ್ಳು ಹಂದಿಗಳು ಜೇಟ್ ವಿಮಾನಗಳಲ್ಲಿ ಬಂದು ನನ್ನನ್ನು ಕೊಚ್ಚತೊಡಗಿದವು.

"ಪರಮೇಶೀ....." ಎಂದೆ.

"ಮತ್ತೇನಪಾ ನಿಂದು" ಎಂದ ತ್ರಸ್ತನಾಗಿ,

"ದನದ ಡಾಕ್ಟರ ಹತ್ತಿರ ಇಂಜೆಕ್ಷನ ಚುಚ್ಚಿಸಿಕೊಂಡಂಗ ಆಗತೈತೋ" ಎಂದೆ ದೈನ್ಯದಲ್ಲಿ.

ಪರಮೇಶಿಗೆ ನಿಜವಾದ ಕೋಪಬಂತು.

"ನೀ ಸುಮ್ನ ಮಕೋತಿಯಿಲ್ಲೋ... ಮಗನ ನಿಮ್ಮ ಬೆಂಗಳೂರಿನ ಸೊಳ್ಳೆ ಎಂ. ಎಸ್. ಸುಬ್ಬಲಕ್ಷ್ಮೀ ಹಂಗ ಪದ ಹಾಡತಾವೇನು. ಮಲ್ಲೇಶ್ವರದ ಮಾಸ್ಕಿಟೋ ಕಚ್ಚಿದರ ಹೇಮಮಾಲಿನಿ ಮುತ್ತಿಟ್ಟಂಗ ಆಗತೈತೇನು? ಸುಮ್ನ ಮಕ್ಕೊ. ಈಗ ಇನ್ನೇನು ಕೋಣ ಒದರೋ ಹೊತ್ತಾತು" ಎಂದು ಬಿದ್ದುಕೊಂಡ.

ಮತ್ತೆ ಕೋಣ. ಅಯ್ಯೋ ರಾಮಾ ಎನ್ನುತ್ತ ತಲೆ ತಲೆ ಚಚ್ಚಿಕೊಂಡೆ ಸನ್ನಿತನದಲ್ಲಿ.

***

ಬಿದ್ದೂರಿನ ಈ ಭಯಾನಕ ದೋಮಿಗಳ ಹಾವಳಿಯಲ್ಲಿ ನನಗೆ ನಮ್ಮ ಮಲ್ಲೇಶ್ವರಂನ ಮಾಸ್ಕಿಟೋಗಳ ನೆನಪಾಗಿ ಒಂದು ತೆರನ Home sickness ಉಂಟಾಯಿತು, ಮಲ್ಲೇಶ್ವರದ ಸೊಳ್ಳೆಗಳದು ಏನು ನಯ ಏನು ಬನಪು, ಆಹಾ! ಇನ್ನೇನು ಕಣ್ಣಿಗೆ ಕಣ್ಣುತಾಗುತ್ತದೆ ಎನ್ನುವಾಗ ಮೆಲ್ಲ ಮೆಲ್ಲನೇ ಮೃದು ಹೆಜ್ಜೆಯಲ್ಲಿ ಬಂದು ಕಿವಿಯ ಹಿಂದುಗಡೆ ಕಳ್ಳದನಿಯಲ್ಲಿ ಶಂಕರಾಭರಣದ್ದೋ ಕಾಫೀ ರಾಗದ್ದೋ ಒಂದು ತುಣುಕನ್ನು ಮೆಲ್ಲ ಮೆಲ್ಲನೇ ಗುಣ ಗುಣಿಸುತ್ತಾ ನಿಮ್ಮ ಪ್ರತಿಕ್ರಿಯೆಗೆ ದಾರಿ ಕಾಯುತ್ತಾ ಒಮ್ಮೆ ಬಳಿ ಬಂದು, ಇನ್ನೊಮ್ಮೆ ದೂರ ಸಾಗಿ, ಒಮ್ಮೆ ಕಂಡು ಒಮ್ಮೆ ಕಾಣದಾಗಿ ಯಮುನೆಯ ತಟದಲ್ಲಿ ಗೋಪಿಕೆಯರನ್ನು ಗೋಳು ಹೊಯ್ಯುವ ಕಳ್ಳ ಕೃಷ್ಣನಂತೆ ಲಲ್ಲೆಗೈದು ನಿಮ್ಮ ಕಿವಿ, ಎಡ ಕೆನ್ನೆ ಕತ್ತುಗಳನ್ನೆಲ್ಲಾ ಕಚುಗಳಿ ಇಡುತ್ತವೆ. ನೀವು ಸ್ವಲ್ಪ ಕೈ ಎತ್ತಿದರೆ ಸಾಕು ಗಾವುದ ಗಾವುದ ಹಿಂದಕ್ಕೋಡುತ್ತವೆ. ಮತ್ತೆ ಸಮಯ ನೋಡಿ ಮೆಲ್ಲ ಮೆಲ್ಲನೇ ಸರಸಕ್ಕಿಳಿಯುತ್ತವೆ. ನೀವು ಗಂಭೀರರಾಗಿ ಸುಮ್ಮನೆ ಇದ್ದರೆ, ಅಭಯಾರಣ್ಯದ ಜಿಂಕೆಗಳಂತೆ ಮತ್ತೆ ಧೈರ್ಯ ತಾಳಿ ಒಂದೊಂದೇ ಸುತ್ತು ಸುತ್ತುತ್ತಾ ನಿಮ್ಮ ಬಳಿ ಬರುತ್ತವೆ. ಇನ್ನೂ ಸುಮ್ಮನಿದ್ದರೆ ಮೂರನೆಯ ನಾಲ್ಕನೆಯ ಸುತ್ತಿನಲ್ಲಿ ನಿಮ್ಮ ಕಿವಿಯ ಬಳಿ ಇಳಿದು ಕಿವಿಯ ಮೇಲು ಪದರನ್ನು ಮೆಲ್ಲನೇ ಕಚ್ಚುತ್ತವೆ.

'ಆಹಾ ಏನು ಸುಖ! ಏನು ಹಿತ'!

ನೀವು ಇನ್ನೇನು ನಿದ್ದೆಯ ಆಳಕ್ಕಿಳಿಯಬೇಕೆನ್ನುವಾಗ ನಿಮ್ಮ ಬಳಿ ಬಂದು ನಿಮ್ಮ



ಕಿವಿಯನ್ನು ತುಟಿಯಲ್ಲಿ ಕಚ್ಚುತ್ತಿದ್ದ ನಿಮ್ಮ ಸರಸಿ ಹೆಂಡತಿಯನ್ನು ಹೇಗೆ ಮೆಲ್ಲನೇ "ಹೋಗೇ" ಎಂದು ತಳ್ಳುತ್ತೀರಲ್ಲವೇ ಹಾಗೇ ನೀವು ಸ್ವಲ್ಪ ತಳ್ಳಿದಾಗ ಅವರು ಮುನಿಸಿಕೊಂಡು "ಊಂ... ಎಂದು ದೂರ ಸಾಗುತ್ತಾರಲ್ಲವೇ, ಹಾಗೆನೇ ಮಲ್ಲೇಶ್ವರದ ನಿಮ್ಮ ನೆಚ್ಚಿನ ಸೊಳ್ಳೆ ಕಚ್ಚಿದಾಗ ನೀವು ಕೊಂಚ ಮೈ ಅಲುಗಿಸಿದರೆ ಸಾಕು, ಅದು ಮುನಿಸಿಕೊಂಡು ಹನಿಗಣ್ಣಾಗಿ ದೂರದೂರಕ್ಕೆ.....

'ನಿನಗಾಗಿ ಓಡೋಡಿ ಬಂದಿದ್ದೆ..... ನಾನು

ಮುಸುಕೆಳೆದೆ ಸೊಂಭೇರಿ ನೀನು... ಊ... ಊ,

ನಿನಗಾಗಿ....... ॥ ಪಲ್ಲ ॥

ಸರಸಕ್ಕೆ ಬಂದಿದ್ದೆ ನಾನು

ಅರಸಿಕನೋ ಬೇವಾರ್ಶಿ ನೀನು..... ಮುಮು

॥ ಅನುಪಲ್ಲ ॥

....... ಎಂದು ರಾಗವಾಗಿ ಹಾಡುತ್ತಾ ಹಾರುತ್ತವೆ.

ಅಂತಹ ನಯನಾಜೂಕಿನ ಒನಪು ವೈಯಾರದ ಆ ಸುಸಂಸ್ಕೃತ ಸೊಳ್ಳೆಗಳೆಲ್ಲಿ? ಈ ಬಿದ್ದೂರಿನ ಕಣೆ ಹಂದಿಗಳೆಲ್ಲಿ? ಎಂದು ಯೋಚಿಸಿ ಇನ್ನೇನು ನಿದ್ರೆ ಬಂದಿತೆಂದಾಗ "ಢ.. ಣ್.... ಎಂದು ಒಂದೇ ಒಂದು ಗಂಟೆಯ ಸದ್ದಾಗಿ ಅದರ ಅಲೆಗಳು ರಾತ್ರಿಯ ನೀರವತೆಯನ್ನೆಲ್ಲ ಭೇದಿಸಿಕೊಂಡು, ಬಿದ್ದೂರಿನ ಈ ಸಮಯಾತೀತದ ಪ್ರಪಂಚಕ್ಕೂ ಸಮಯಾಸಮಯ ಉಂಟೆಂದು ಹೇಳಿಕೊಂಡು ತೇಲಿದವು.

"ಪರಮೇಶಿ" ಎಂದೆ

"ಊಂ" ಎಂಬ ಧ್ವನಿ ಬಂತು ಮುಸುಕಿನಿಂದ.

"ಈ ಊರಾಗ ಗಡಿಯಾರನು ಇಲ್ಲಾ ಅಂತಿದ್ದೀ. ಮತ್ತೆ ಒಂದು ಗಂಟೆ ಹೊಡಿಯಿತಲ್ಲೋ" ಎಂದೆ ಅಂಜತ್ತ ಅಳುಕುತ್ತ.

"ಗೌಡರ ಮನ್ಯಾಗ ತರತೇನಿ ಅಂತಿದ್ದರು ತಂದಾರೋ ಏನೋ" ಎಂದು ತನಗೂ ನನಗೂ ತಿಳಿಯದ ದನಿಯಲ್ಲಿ ನಿದ್ದೆಗಣ್ಣಲ್ಲಿ ಮರ್ಮರಿಸಿದ.

ಆ ಒಂದು ಗಂಟೆಯಿಂದ ನನ್ನ ಮಾನಸಿಕ ಉಲ್ಬಣ ಇನ್ನೂ ಹೆಚ್ಚಾಯಿತು. ಮಧ್ಯರಾತ್ರಿಯ, ಸಮಯ ಭಯಾನಕ ಕತ್ತಲೆ. ಗಡಿಯಾರದ ಒಂದೇ ಒಂದು ಗಂಟೆಯ ಸದ್ದು. ಅದು ಹನ್ನೆರಡು ಮುವತ್ತೇ,? ಒಂದೋ? ಒಂದು ಮುವತ್ತೆ? ಅಥವಾ ಎಷ್ಟು ಮುವತ್ತೋ? ಏನೂ ತಿಳಿಯದೇ ಮುಂದಿನ ಗಂಟೆಗೆ ಕಾತುರರಾಗಿ ಕಾಯುತ್ತಾ ಬಿದ್ದುಕೊಂಡ ಅನುಭವ ನಿಮಗೆಲ್ಲ ಇರಬಹುದು. ನೀವು ಕಣ್ಣು ಬಿಟ್ಟುಕೊಂಡು ತೊಲೆಗಳನ್ನೋ ಜಂತಿಗಳನ್ನೋ ಎಣಿಸುತ್ತಾ ಅಥವಾ ಕಣ್ಣು ಮುಚ್ಚಿಕೊಂಡು ಕುರಿಗಳನ್ನು ಕುಣಿಸುತ್ತಾ ಬಿದ್ದು ಕೊಂಡಾಗ ಮುಂದಿನ ಗಂಟೆ ನಿಮ್ಮನ್ನು ಯುಗಯುಗಗಳವರೆಗೆ ಕಾಯಿಸುತ್ತಿದ್ದಾಗ ನಿಮಗೆ ಮೈಯಲ್ಲಿ ಪರಚಿಕೊಳ್ಳುವಂತಾಗುವದಿಲ್ಲವೇ. ನನಗೂ ಹಾಗೇ ಆಗಿ ನನ್ನ ಪಿತ್ತ ಕೆರಳತೊಡಗಿತ್ತು.

ಒಂದು ಕಡೆ ಜೇಟ್ ವಿಮಾನಗಳೂ ಮುಳ್ಳು ಹಂದಿಗಳೂ, ಇನ್ನೊಂದು ಕಡೆ ಒಮ್ಮೆ ತಾಳಬದ್ಧವಾಗಿ ಇನ್ನೊಮ್ಮೆ ತಾಳ ತಪ್ಪಿ ತಡೆ ತಡೆದು ಬರುತ್ತಿದ್ದ ಪರಮೇಶಿಯ ಗೊರಕೆ.



ಒಮ್ಮೆ ಮಂದ್ರಗತಿಯಲ್ಲಿ

ಒಮ್ಮೆ ಧ್ರುತದಲ್ಲಿ.

ಮೂರು ಮೂರು ಗೊರಕೆಗಳಿಗೊಮ್ಮೆ ತಬಲಾದ ಝುಳುಕು.

ಅಯ್ಯೋ ನನ್ನ ಕರ್ಮವೇ ಈ ಬಿದ್ದೂರಿಗೆ ನಾನೇ ಬರಬೇಕಿತ್ತೇ ಎಂದು ತಲೆತಲೆ ಬಡಿದುಕೊಂಡೆ ಕೆರಳಿದ ಪಿತ್ತದಲ್ಲಿ.

ಅಂದಿನ ರಾತ್ರಿ ತ್ರೇತಾಯುಗದ ಗಂಟೆಯೇ ಕೊನೆಯ ಗಂಟೆಯಾಯಿತು.

ಒಮ್ಮೆಲೇ ಸನಿಹದಲ್ಲೆಲ್ಲೋ ಒಂದು ಕೋಳಿ ಭಯಾನಕವಾಗಿ ಬಿಟ್ಟೂ ಬಿಡದೇ "ಕೊ–ಕ್ಕೊ–ಕ್ಕೊ... ಕೆ–ಕ್ಕೆ–ಕ್ಕೆ– ಎಂದು ಒಮ್ಮೆಲೇ "ಖ್ಕೈ–ಖ್ಕೈ ಎಂದು ಕೆಮ್ಮಿ ಶಾಂತವಾಯಿತು. ಅಂತೂ ಬೆಳಗಾಯಿತೆಂದುಕೊಂಡು

"ಪರಮೇಶೀ" ಎಂದೆ

ಗೊರಕೆಯ ಸದ್ದು ಮೆಲ್ಲಮೆಲ್ಲನೆ ಕಡೆಮೆಯಾಗುತ್ತಾ ಮಧ್ಯದಲ್ಲಿ ಬೆಂಗಳೂರಿನಲ್ಲಿ ನೀರಿಲ್ಲಿದೇ ಬರುವ ಬೇಸಿಗೆ ನಲ್ಲಿಯಂತೆ "ಸುಟರ್ಸ್SSSSSSS ಫಟ್" ಎಂದು ಸದ್ದು ಮಾಡಿ ಮೊದಲಿನ ಗತಿಗೇರಿತು.

"ಪರಮೇಶೀ... ಎಂದೆ ಈ ಸಲ ಸ್ವಲ್ಪ ಗಟ್ಟಿಯಾಗಿ. ಪರಮೇಶಿ ಒಂದು ಸುತ್ತು ಈ ಬದಿಯಿಂದ ಆ ಬದಿಗೆ ಹೊರಳಿ ಕಣ್ಣು ತೆರೆದು ಬಾಯಿ ಮುಚ್ಚಿ ಕೊಂಡ.

"ಏಳೋ ಬೆಳಗಾಯಿತು ಕೋಳಿ ಕೂಗಿತು" ಎಂದೆ.

"ಅಥೆಂಗ ಕೋಳಿ ಕೂಗತದಲೇ ಇನ್ನೂ ಕೋಣನS ಒದರಿಲ್ಲ" ಎಂದ.

"ಇದೀಗ ನಾನೇ ಕೇಳಿದೆ ಮಹಾರಾಯ ನಿಜವಾಗಿಯೂ ಕೋಳಿ ಕೂಗಿತು" ಎಂದೆ.

"ಹೆಂಗ ಕೂಗಿತು ಹೇಳು" ಎಂದಾ

ನನ್ನ ತಾಳ್ಮೆಗೂ ಒಂದು ಮಿತಿ ಉಂಟಲ್ಲವೇ ನಾನು ಕಿರುಚಿಕೊಂಡೆ.

"ಹೆಂಗ ಕೂಗಿತಂದ್ರ, ಕಂಠೀರವ ಸ್ಟೇಡಿಯಂದಾಗ ಕೆಟ್ಟು ಹೋದ 'ಮೈಕಿ'ನಲ್ಲಿ ನೆಗಡಿಯಾದ ಗುಂಡೂರಾಯರು ಮಾಡಿದ ಭಾಷಣದಂತಿತ್ತು.

"ಹಂಗಾರ ಅದಲ್ಲೇಳು" ಎಂದ ಪರಮೇಶಿ ನಿರಾಸಕ್ತಿಯಿಂದ.

"ಏನೋ ಹಂಗಂದ್ರ?" ಕೇಳಿದೆ ತಿಳಿಯದೇ.

"ನೋಡು ಬಾಜೂದ ಮನ್ಯಾಗ ಹಾರೂರಾವ ರಾಮಭಟ್ಟ ಇರತಾನ, ಅವರು ಅವಾಗೀವಾಗ ಕೋಳಿ ತಿಂತಾರ, ಮಂದಿಗೆ ಗೊತ್ತಾಬಾರದಂತ ರಾತ್ರಿ ಕೋಳಿ ಕೊಯ್ತಾರ, ಪಾಪ. ನಿದ್ದೀ ಮಾಡತಿರತಾವ ಕೋಳಿ, ಅವನ್ನೆಬ್ಬಿಸಿ ಕುತಿಗೆ ಕೊಯ್ದರ ಹಂಗ ಧನೀ ತಗೀತಾವ, ತಿಳೀತಲ್ಲೊ, ಇನ್ನರ ಸ್ವಲ್ಪ ನಿದ್ದೆ ಮಾಡು ಮಹಾರಾಯ ಕೋಣ ಒದರೋ ಟೈಮ ಆಗಾತ ಬಂತು" ಎಂದು ಬಿದ್ದುಕೊಂಡ.

ಅಂತೂ ನಿದ್ದೆಯಲ್ಲಿದ್ದ ಕೋಳಿಗೂ ಗುಂಡೂರಾಯರಿಗೂ ಇರುವ ಈ ಬಾದರಾಯಣ ಸಂಬಂಧವನ್ನು ನೆನೆಯುತ್ತಾ ಮಲಗಿದೆ.

***

ಮೂಡಣದ ಕಿಟಕಿ– ಇರುವದೊಂದೇ ಕಿಟಕಿ–ಯಿಂದ ಒಮ್ಮೆಲೇ ಪ್ರಕಾಶ ಮಾನವಾದ ಬೆಳಕು ತೂರಿಬಂತು. ಕೆಂಪು ಕೆಂಪಾಗಿ ಉಜ್ವಲ ಪ್ರಕಾಶ. ಕೊನೆಗೂ ಗೆದ್ದೆ. ಸೂರ್ಯೋದಯವಾಯಿತೆಂದು ಎದ್ದೆ.



"ಪರಮೇಶೀ" ಎಂದೆ

"ಭೇ–ಭೇ–ಥೂ–ಪಿಟ್ ಇತ್ಯಾದಿಗಳ ಒಂದು ಸಮ್ಮಿಶ್ರ ಸ್ವರವನ್ನು ಹೊರಡಿಸುತ್ತಾ ಕೊನೆಗೆ "ಮತ್ತೇನಪಾ" ಎಂದ.

"ಬೆಳಗಾಯಿತು ಏಳು" ಎಂದೆ.

"ಅಧೆಂಗೆ ಬೆಳಗಾಗತಲೇ ಇನ್ನೂ ಕೋಣನ ಒದರಲಿಲ್ಲ" ಎನ್ನುತ್ತ ಕಣ್ಣು ತಿಕ್ಕುತ್ತ ಎದ್ದು ಕುಳಿತ.

"ನೋಡು ಖೋಲಿ ತುಂಬ ಬೆಳಕು– ಸೂರ್ಯೋದಯ... ಎಂದು ನಾನು ಹೇಳುತ್ತಿದ್ದಂತೆಯೇ ಪರಮೇಶಿ ಕಿಟಕಿಯ ಬಳಿ ಬಂದು ಹೊರಗೆ ಹಣಿಕಿಕ್ಕಿದ ಮತ್ತೆ ಮರಳಿಬಂದು ಕಾಲಿನಿಂದ ಚಾದರವನ್ನೆಳೆದುಕೊಳ್ಳುತ್ತಾ ತೃಪ್ತನಾಗಿ ಗೊಣಗಿದ.

"ನಿಮಗ ಶಾರದೂರವರಿಗೆ ಬುದ್ಧಿಗಿದ್ಧಿ ಆಯಿತೋ ಇಲ್ಲೋ? ಸೂರ್ಯೋದಯ ಹೀಂಗ್‌ರತ್ತೈತೇನ್ನು....

"ಮತ್ತ ಅದೇನು" ಎಂದು.

"ಹುಚ್ಚಾ! ಇಲೆಕ್ಶನ್ ಟೈಮ್ಯೆಲಿ, ಇರುದ್ದ ಪಾರ್ಟಿಯವರು ಒಬ್ಬರಿ ಗೊಬ್ಬರ ಬಣವಿ ಸುಡಾಕ ಹತ್ಯಾರ–ಅದರ ಬೆಳಕಿದು" ಎನ್ನುತ್ತ ನನ್ನ ಆಜ್ಞಾನಕ್ಕೆ ವ್ಯಗ್ರನಾಗಿ ಮತ್ತೆ ತನ್ನ ನಿದ್ರಾಸಂಗೀತವನ್ನು ಪ್ರಾರಂಭಿಸಿದ.

ಆಯುಷ್ಯವನ್ನೆಲ್ಲ ಕೇವಲ ಋತುಚಕ್ರಗಳಲ್ಲಿ ಬಹಳವಾದರೆ ಹಗಲು ರಾತ್ರಿಗಳಲ್ಲಿ ಮಾತ್ರ ವಿಂಗಡಿಸಿಕೊಂಡಿರುವ ಬಿದ್ದೂರಿನ ಈ ಸುಖೀ ಪ್ರಜೆಗಳೆಲ್ಲಿ, ಗಳಿಗೆಗೊಮ್ಮೆ ಕೈಗಡಿಯಾರ ನೋಡಿಕೊಳ್ಳುತ್ತ ಕಳೆದು ಹೋಗುತ್ತಿರುವ ಜೀವನದ ಕ್ಷಣಗಳನ್ನು ನಿರರ್ಥಕವಾಗಿ ಎಣಿಸುತ್ತ ಎದೆಗೆಡುತ್ತಿರುವ ನಾನೆಲ್ಲಿ, ಎಂದು ವ್ಯಥಿತನಾದೆ. ಆದರೂ ಬೆಳಿಗ್ಗೆ ಏಳಲೇಬೇಕಲ್ಲ. ಬಿದ್ದೂರಿನ ಮೇಲೆ ಹಾಯುವ ಬೆಂಗಳೂರ ಬಸ್ಸನ್ನು ಹಿಡಿಯಲೇ ಬೇಕಲ್ಲ. ಇಲ್ಲದಿದ್ದರೆ ಇನ್ನೊಂದು ರಾತ್ರಿ ಕೋಸಂಬರಿಯಾದೇನಿಲ್ಲಿ ಎಂದು ಚಿಂತಿತನಾದೆ.

ಏನೇನೊ ವಿಚಾರ–ಚಿಂತೆ–ಬಣಿವೆಗಳನ್ನೆಲ್ಲ ಸುಟ್ಟು ಬಿಟ್ಟರೆ ದನಗಳಿಗೆ ಒಣಹುಲ್ಲು ಸಿಗುವದೆಂತು? ಎಂದಮೇಲೆ ಬಿದ್ದೂರಿನ ಆ ಟೈಮ್ ಕೀಪರ ಕೋಣಕ್ಕೆ ಆಹಾರವೆಲ್ಲಿ? ಆಹಾರವೇ ಇರದಿದ್ದರೇ ಅದು ಒದರುವದೇನು... ಅದು ಒದರದಿದ್ದರೆ ..ಆರು ಗಂಟೆ...ರಿಂದವ್ವ ಹಾರೂರ ಮುದಕಿ... ಬೆಂಗಳೂರು ಬಸ್ಸು..... ಎಂದು ಗಾಬರಿಯಲ್ಲಿ ಭೀತತಂದ್ರಿಯಲ್ಲಿ ಮುಳುಗಿದಾಗ ಕಣ್ಣು ಎಳೆದೆಳೆದು ಕೊಂಡು ಬೆಳಗಿನ ಝೂಾವದ ಅರ್ಧ ನಿದ್ರೆ ಸುಷುಪ್ತೆಯಂತಹ ಅವಸ್ಥೆಯಲ್ಲಿ ಏನೇನೋ ಹರಕು ಹರಕು ತುಣಕು ತುಣಕು ಕನಸುಗಳು.

...ಆಫ್ರಿಕಾ ಖಂಡದ ಯಾವದೋ ಒಂದು ಘನಘೋರವಾದ ಕಾಡಿನಲ್ಲಿ ಬೇಟೆಗಾರರ ಸಫಾರಿ ತಂಡವೊಂದರ ಸೇವಕನಾಗಿ ನಾನು ತಲೆಯ ಮೇಲೆ ಮತ ಪೆಟ್ಟಿಗೆಯನ್ನು ಹೊತ್ತುಕೊಂಡು ಅವರ ಹಿಂದೆ ಹಿಂದೆ ಹೊರಟಿದ್ದೆ. ಇಕ್ಕಟಾದ ಮುಗ್ಗಟಾದ ದಾರಿ. ಒಮ್ಮೆಲೇ ಎದುರಿನಿಂದ ಹತ್ತಿಪ್ಪತ್ತು ದೈತ್ಯಕಾರದ ಕಾಡು ಕೋಣಗಳು ಮೆಲ್ಲ ಮೆಲ್ಲಗೆ ಧೀರ ಗಂಭೀರ ಗತಿಯಲ್ಲಿ ನಮ್ಮತ್ತಲೇ ಬರುತ್ತಿದ್ದವು. ಕೋವಿಹಿಡಿದ ಸಫಾರಿಗಳು ನನ್ನೊಬ್ಬನನ್ನೇ ಬಿಟ್ಟು ಸರಸರನೇ ಮರವೇರಿದರು. ಇನ್ನೇನು ನಾನು ತಲೆಯ ಮೇಲಿನ ಮತಪೆಟ್ಟಿಗೆಯನ್ನು ಕೆಳಗೆ ಹಾಕಿ ಓಡಬೇಕೆಂದಾಗ ಪೆಟ್ಟಿಗೆಯ ಒಂದು ಮೊಳೆಗೆ ಸಿಕ್ಕು ಕೈಗಡಿಯಾರ ಜಜ್ಜಿ ಹೋಯಿತು. ಕೋಣಗಳು



ತೀರ ಸಮಿಪಕ್ಕೆ ಬಂದಿದ್ದವು. ಒಂದು ರಾಕ್ಷಸಕೋಣವಂತೂ ಕೆಂಗಣ್ಣಿನಿಂದ ನನ್ನನ್ನೇ ನೋಡುತ್ತ ಕಾಲುಗಳಿಂದ ನೆಲ ಕೆದರುತ್ತ ಕೋಡುಗಳನ್ನು ಕೆಳಗಿಳಿಸಿ ಇನ್ನೇನು 'ಚಾರ್ಜ' ಮಾಡಬೇಕು, ನನ್ನ ಮೈಬೆವೆತು ತೆರೆದ ಬಾಯಿಂದ ಧ್ವನಿ ಹೊರಡದೇ ಕಿರುಚಿಕೊಳ್ಳುತ್ತಿದ್ದೆ. ಅಷ್ಟರಲ್ಲಿ ನೂರಾರು ಸಾವಿರಾರು ಬಿದ್ದೂರ ಡೋಮಿಗಳು ಕಾಡುಕೋಣಗಳ ಮೇಲೆ ದಾಳಿಯಿಟ್ಟವು. ಈ ಅನಿರೀಕ್ಷಿತ ದಾಳಿಗೆ ಕಂಗೆಟ್ಟು ಕೋಣಗಳೆಲ್ಲ ವಿಕಾರವಾಗಿ ಧ್ವನಿ ತೆಗೆಯುತ್ತ ದಾರಿ ಸಿಕ್ಕತ್ತ ಓಡತೊಡಗಿದವು. ಎಷ್ಟೋ ಕೋಣಗಳು ನನ್ನನ್ನು ಕೆಡವಿ ಕೋಡುಗಳಿಂದ ನನ್ನ ಪಕ್ಕೆಗಳನ್ನು ತಿವಿತಿವಿದು ಓಡುತ್ತಿದ್ದವು.

***

ಕನಸು ಒಡೆದಾಗ ಪರಮೇಶಿ ನನ್ನ ಪಕ್ಕೆಗಳನ್ನು ತಿವಿತಿವಿದು ಎಬ್ಬಿಸುತ್ತಿದ್ದ.

"ಏಳಲೇ ಕೋಣ ಒದರಿತು ಕೇಳಸಲಿಲ್ಲೇನಾ?" ಎಂದ. ಎದ್ದವನೇ ಬೇಗನೇ ಬಸ್ಸಿಗೆ ಓಡಿದೆ. ರಾತ್ರಿಯೆಲ್ಲ ನಿದ್ದೆಯಿಲ್ಲ. ಈ ಡೋಮಿಗಳು ಬೇರೆ. ಈಗ ಗಂಟೆ ಎಷ್ಟೋ ತಿಳಿಯದು. ರಾತ್ರಿ ಒಂದು ಗಂಟೆಯ ಮೇಲೆ ಬೇರೆ ಗಂಟೆ ಕೇಳಿಲ್ಲ ಬಸ್ಸು ಎಲ್ಲಿ ನಿಲ್ಲುತ್ತದೋ ಎಲ್ಲಿ ತಪ್ಪಿಹೋಗುತ್ತದೋ ಎಂದು ನರ್ವಸ್ಸನಾದೆ, ಎಂಕ್ಷೈಂಟಿತನಾದೆ.

ನನ್ನ ಹಾಲತ್ತಿಗೆ ನಾನೇ ಕನಿಕರಿಸತೊಡಗಿದ್ದೆ, ಬೀದಿಯಲ್ಲಿ ಎದುರು ಮನೆಯ ಹಾರೂರ ಮುದಿಕಿ ರಿಂದವ್ವ ಮನೆಬಾಗಲಿಗೆ ರಂಗೋಲಿ ಇಕ್ಕುತ್ತ 'ಏಳಯ್ಯಾ ಗೋಪಾಲ ಇನ್ನೆಷ್ಟು ನಿದ್ರೆ..... ಎಂದು ಹಾಳತಾದ ಸೂಜಿಯಲ್ಲಿ ಹಾಳಾದ ಗ್ರಾಮಫೋನು ರೆಕಾರ್ಡಿನಂತೆ ಕಿರುಚುತ್ತಿದ್ದಳು. ಈ ಡೋಮಿಗಳ ಹಾವಳಿ ಅದಾದ ಸೂ..... ಮಗ ಗೋಪಾಲ ಮಲಗುತ್ತಾನೆ ಎಂದುಕೊಳ್ಳುತ್ತಾ "ಅಮ್ಮಾ ಬೆಂಗಳೂರ ಬಸ್ಸು ಯಾವ ಕಡೆ ಬರುತ್ತದೆ?" ಎಂದು ಕೇಳಿದೆ ರಿಂದವ್ವನನ್ನು. "ತಮ್ಮಾ ಇದೇ ರಸ್ತೆ ಹಿಡಿದು ಒಂದೆರಡು ಮೂರು ಮೈಲು ನಡೀತಾ ಹೋದರ ಬಿದ್ದೂರ ಕತ್ತರಿ (Cross) ಹತ್ತರ ಏಳುಗಂಟೆಗೆ ಬೆಂಗಳೂರ ಬಸ್ಸು ಬರ್ತದ"

"ಎರಡು–ಮೂರು ಮೈಲಿ... ಬಿದ್ದೂರ ಕತ್ತರಿ" ಎನ್ನ ಎದೆ ಹೊಡೆದುಕೊಳ್ಳ ತೊಡಗಿತು.

"ಅಮ್ಮಾ ಈಗ ಗಂಟೆ ಎಷ್ಟಾಗಿರಬಹುದು" ಎಂದೆ.

"ಆರನಕಾ ಹೊಡೆಯಿತಲ್ಲ ತಮ್ಮಾ ಈಗಿನ್ನೂ ಒದರಿತ್ತು ಕೋಣ" ಎಂದಳಾರಿಂದಿ.

ನನಗೆ ಹುಚ್ಚು ಹಿಡಿಯುವದೊಂದೇ ಬಾಕಿ. ಎರಡು ಮೂರು ಮೈಲು ನಡೆಯಲು ಎಷ್ಟು ಸಮಯ ಬೇಕಾಗಬಹುದು. ಬಿದ್ದೂರಿನ ಕತ್ತರಿ ಎಲ್ಲಿ exact ಆಗಿ ಬರುತ್ತದೆ. ಒಂದು ವೇಳೆ ಈ ಗೌಡರ ಕೋಣ ಇವತ್ತು ಆರರ ಬದಲು ಏಳಕ್ಕೆ ಒದರಿದ್ದರೆ, ಏನುಗತಿ... ಇದೇನು ಅವಸ್ಥೆ ತಂದೆ ದೇವಾ ಎಂದು ಕೊಳ್ಳುತ್ತಾ... ಮಮ್ಮಲ ಮರಗುತ್ತಾ, ಇದೊಂದು ಸಲ ಬೆಂಗಳೂರು ತಲುಪಿದರೆ ಸಾಕು ಮಾರಮ್ಮನಿಗೆ ಕೋಣನ ಬಲಿ ಕೊಡುತ್ತೇನೆಂದು ಬೇಡಿಕೊಂಡೆ... ಆದರೂ ಸಮಾಧಾನವಿಲ್ಲ. ಎರಡು ಮೂರು ಮೈಲು ನಡೆಯಲು ಎಷ್ಟು ಸಮಯ ಬೇಕು? ....ಈಗ ವೇಳೆ ಎಷ್ಟು? Time Please... Time Please.... Time Please- ಎಂದು ದೇಹದ ನರ ನರಗಳೆಲ್ಲ ಒಕ್ಕೊರಲಿನಿಂದ ಕೂಗತೊಡಗಿದವು.



"ಅಮ್ಮಾ" ಎಂದೆ ರಿಂದವ್ವನಿಗೆ

"ತಮ್ಮಾ" ಎಂದಳಾ ತಾಯಿ

"ಈ ಊರಾಗ ಎಲ್ಲೂ ಗಡಿಯಾರ ಇಲ್ಲೇನ್ರೀ" ಎಂದೆ ಕರುಣಾಪೂರಿತ ದನಿಯಲ್ಲಿ.

"ಯಾಕಿಲ್ಲ ತಮ್ಮಾ. ಮೊನ್ನಿನ್ನೂ ಗೌಡರ ಮನ್ಯಾಗ ಹುಬ್ಬಳ್ಳಿಯಿಂದ ಒಂದು ದೆವ್ವದಂತಹ ಗಡಿಯಾರ ತಂದು ಗೋಡೆಗೆ ಬಡದಾರ ನೋಡು. ಇಲ್ಲೇ ಮುಂದಿನ ಮನೀನ ಗೌಡರ ಮನಿ" ಎಂದಳು.

ಈ ಅಮೃತವಾಣಿಯನ್ನು ಕೇಳಿ ನನ್ನ ಎಲ್ಲ ಕಷ್ಟಗಳನ್ನೂ ಆ ಕ್ಷಣಕ್ಕೆ ಮರೆತು ದುಃಖಗಳನ್ನು ನುಂಗಿ ಗೌಡರ ಮನೆಗೆ ನುಗ್ಗಿದೆ. ಗೌಡರು ಹೊರಗಿನ ಕಟ್ಟೆಯ ಮೇಲೆ ಬೇವಿನ ಕಡ್ಡಿಯಿಂದ ಹಲ್ಲುಜ್ಜುತ್ತ ನಿಂತಿದ್ದರು.

"ಗೌಡರೇ" ಎಂದೆ.

"ಯೇನು ಸಾಯೇಬ್ರsss" ಎಂದರು.

"ನಿಮ್ಮ ಮನ್ಯಾಗ ಗಡಿಯಾರ ಆಯಿತೇನ್ರೀ" ಎಂದೆ ದೈನದಲ್ಲಿ.

"ಆಯಿತೆಲ್ರೀ... ಮೊನ್ನಿನ್ನೂ ಹುಬ್ಬಳ್ಳಿಯಿಂದ ತಂದೇವಿ" ಎಂದು ಎದುರಿನ ಗೋಡೆಯನ್ನು ತೋರಿಸಿದರು. ಅಲ್ಲಿ ಗೋಡೆಯ ಮೇಲೆ ದೊಡ್ಡದಾದ ದುಂಡು ಮುಖದ ತೂಗುವ ಪೆಂಡ್ಯೂಲಮ್ಮಿನ ಗಡಿಯಾರ ರಾರಾಜಿಸುತ್ತಿತ್ತು.

ನಾನು ಭಯ ಭಕ್ತಿಯಿಂದ, ಭಾವಾವೇಗದಲ್ಲಿ ಗಡಿಯಾರಕ್ಕೆ ಕೈ ಮುಗಿದು ನಿಂತಲ್ಲಿಯೇ ಒಂದು ಪ್ರದಕ್ಷಿಣೆ ಸುತ್ತಿದೆ. ಆರು ಗಂಟೆಯಾಗಿ ಹತ್ತು ನಿಮಿಷಗಳಾಗಿತ್ತು. ನನ್ನ ಕೈ ಗಡಿಯಾರವನ್ನು ಸರಿಯಾಗಿ adjust ಮಾಡಿಕೊಳ್ಳುತ್ತಾ ಭಾರವಿಳಿದ ನಿಟ್ಟುಸಿರಿನಲ್ಲಿ, ಗೆಲುವಿನ ಸಂತಸದಿಂದ ಗೌಡರನ್ನು ಕೇಳಿದೆ.

"ಗೌಡರೇ ಗಡಿಯಾರ ಕರೆಕ್ಟ ಆಯಿತಲ್ಲರೀ"

ಗೌಡರಿಗೆ ಕೋಪ ಬಂತು.

"ಏನ್ರೀ ಸಾಯೇಬ್ರ ಹಿಂಗ ಕೇಳ್ತೀರಿ, ಹೊಸಾದು... ಎರಡು ದಿವಸಾತು ಹುಬ್ಬಳ್ಳಿಯಿಂದ ತಂದು... ನಿನ್ನೆ ಕೀಲಿ ಕೊಡಾಕ ಮರೆತಿದ್ದೆ ರಾತ್ರಿ ಒಂದು ಗಂಟೆಗೆ ಬಂದು ಬಿದ್ದಿತ್ತು, ಈಗಿನ್ನೂ ಕೋಣ ಒದರೂತಲೇ ಆರು ಗಂಟೆಗೆ ಕರೆಕ್ಟಾಗಿ ಅಡ್ಜೆಸ್ಟ್ ಮಾಡಿಟ್ಟೇನಿ... ಮತ್ತೂ ಕರೆಕ್ಟ ಆಯಿತೇನ ಅಂತ ಕೇಳತೀರಲ್ಲರೀ"

ನನ್ನ ಕಣ್ಣು ಕತ್ತಲೆ ಕವಿಯಿತು. ತಲೆ ಕಾಯ್ದು ಇನ್ನೇನು ಸಿಡಿಯುವಂತಾಯಿತು. ಸಿಟ್ಟು, ಕೋಪ, ಸನ್ನಿ, ತಲೆತಿರುಕತನಗಳೆಲ್ಲ ಒಮ್ಮೆಲೇ ಒಟ್ಟುಗೂಡಿ ಒಂದರ ಮೇಲೊಂದರಂತೆ ಪೈಪೋಟಿ ನಡೆಸಿ ಮುಗಿಬಿದ್ದವು. ಪರಿಸ್ಥಿತಿಯ ಹತಾಶತನ ನನ್ನ ದೈನ್ಯಾವಸ್ಥೆಯನ್ನು ಹೆಚ್ಚಿಸಿತು ಸಾತ್ವಿಕ – ಸಂತಾಪದಲ್ಲಿ ನನ್ನ ಕುತ್ತಿಗೆಯ ನರಗಳು ಉಬ್ಬಿದವು. ಕಂಠ ಬಿಗಿಯಿತು ದನಿ ನಡುಗತೊಡಗಿತು. ತಡೆ ಹಿಡಿದು ಬಿಕ್ಕುಗಳು ಬಂದವು. ಕಣ್ಣುಗಳಲ್ಲಿ ಒಮ್ಮೆಲೇ ಗಂಗೆ ಉಕ್ಕಿದಳು. ಮೊದಲು ಮೆಲ ಮೆಲನೇ ಆಮೇಲೆ ವೇಗವನ್ನು ಹೆಚ್ಚಿಸಿ ಒಮ್ಮೆ ಎಡಗೈ, ಇನ್ನೊಮ್ಮೆ ಬಲಗೈಯಾಗಿ ನನ್ನ ತೆರೆದ ಬಾಯಿಯ ಮೇಲೆ ಕುಟ್ಟುತ್ತ Oh God Oh God ಎಂದು ಇಂಗ್ಲಿಷಿನಲ್ಲಿ ಶಂಖವಾದ್ಯ ಮಾಡುತ್ತ ಅಲ್ಲಿಂದ ನಾಗಾಲೋಟದಲ್ಲಿ ಓಟಕಿತ್ತೆ ಬಿದ್ದೂರಿನ ಕತ್ತರಿಗೆ.

■



# ವಾಲ್ಮೀಕಿಯ ನೆನಪಲ್ಲಿ...

**– ಎಸ್.ಆರ್.ವಿಜಯಶಂಕರ್**

ಉದ್ದವಾದ ಬಿಳಿ ಗಡ್ಡ, ತಲೆಗೂದಲು ಸುತ್ತಿದ ಜಡೆ, ಬಲದ ಕೈಯ್ಯಲ್ಲಿ ಕಮಂಡಲ, ಎಡದ ಕೈಯ್ಯಲ್ಲಿ ದಂಡ, ಬೆಳಗಿನ ಬ್ರಾಹ್ಮೀ ಮಹೂರ್ತದಲ್ಲೇ ನದಿಯಿಂದ ಸ್ನಾನಮಾಡಿ ಬರುವುದು ಕಂಡ ಕೂಡಲೇ ಯಾರೋ ದೊಡ್ಡ ಸ್ವಾಮಿಗಳು ಎಂಬುದು ಸ್ಪಷ್ಟವಾಗಿತ್ತು. ಹತ್ತಿರ ಬಂದಾಗ ಮೈಯೆಲ್ಲ ಹುತ್ತಕಟ್ಟಿ ಅಲ್ಲಲ್ಲಿ ಗೆದ್ದಲುತಿಂದ ಕಲೆಯೆಲ್ಲಾ ಚರ್ಮದ ಮೇಲೆ ಕಂಡಾಗ ನಿಚ್ಚಳವಾಯಿತು – ಬಂದವರು ಆದಿಕವಿ ವಾಲ್ಮೀಕಿ ಎಂಬುದು. ರಾಜಾ ರವಿವರ್ಮನ ಕ್ಯಾಲೆಂಡರ್ ಚಿತ್ರವೂ ನೆನಪಿದ್ದುದರಿಂದ ಅನುಮಾನವೇ ಹುಟ್ಟಲಿಲ್ಲ. ಎದ್ದುನಿಂತು ಕೈಮುಗಿದೆ.

'ತವ ವಿಮರ್ಶನ ವೃತ್ತಿಂ ಕರೋತಿ ಇತಿ ಮಮ ಶ್ರುಣಾತಾಂ' ಎಂದರು.

ಏನೋ ಸಂಸ್ಕೃತ ಪಂಡಿತರ ಬೆತ್ತಕ್ಕೆ ಹೆದರಿ ಹೈಸ್ಕೂಲಿನಲ್ಲಿ ನಾಲ್ಕು ದೇವನಾಗರಿ ಅಕ್ಷರ ಕಲಿತದ್ದು ಬಿಟ್ಟರೆ, ಬೇರೇನೂ ತಿಳಿಯದ ನಾನು, 'ಮಮ ಸಂಸ್ಕೃತಂ ನ ಜಾನಾಮಿ. ಕಿಂಚಿತ್ ಕಿಂಚಿತ್.....' ಎಂದೇನೋ ತಡವರಿಸಲು ಹೊರಟಾಗ ಆದಿ ಕವಿಗಳು ಹೇಳಿದರು;

'ವತ್ಸ ಭಯ ಬೇಡ. ನಾನು ಕನ್ನಡ ಮಾತನಾಡಬಲ್ಲೆ"

'ಆದರೆ ನೀ...ವು ಸಂಸ್ಕೃತದ ಆದಿಕವಿಗಳು' ಎಂದು ತಬ್ಬಿಬ್ಬಾದೆ.

'ನನಗೆ ಹೇಗೆ ಕನ್ನಡ ತಿಳಿಯುತ್ತದೆಂದು ಆಶ್ಚರ್ಯವೇ ವತ್ಸ' ಎಂದರು.

ಹೌದೆಂದು ತಲೆಯಾಡಿಸಿದೆ.

'ನೋಡು, ಈ ಕನ್ನಡ ಕವಿಗಳು ತಮಗೆ ಇಷ್ಟಬಂದಂತೆ ನನ್ನ ಆದಿಕಾವ್ಯವನ್ನು ಬದಲಾಯಿಸಿ ಬರೆದುದನ್ನು ಓದಿ ಕನ್ನಡ ಕಲಿತದ್ದು. ನಿಮ್ಮ ದೇಸಿ, ಮಾರ್ಗ ಅವು ಇವು ಓದಿ ತಲೆ ಕೆಟ್ಟುಹೋಗುವಷ್ಟು ಕನ್ನಡ ಗೊತ್ತು ' ಎಂದರು.

ಆಗ ನನಗೆ ಧೈರ್ಯ ಬಂತು. ಆದಿ ಕವಿಗಳೇ, ತಾವು ಬಂದಂತಹ ಕಾರ್ಯ ಏನೆಂದು ಅಪ್ಪಣೆಯಾಗಬೇಕು ಎಂದು ಹೇಳಿ, ಕವಿಗಳಿಗೆ ಖುಷಿಯಾಗಲೆಂದು 'ರಾಮಾಯ ರಾಮಭದ್ರಾಯ ...' ಪೂರ್ತಿ ಕೋಟ್ ಮಾಡಿ ನಮಸ್ಕರಿಸಿದೆ.

ಕವಿಗಳ ಮನಸ್ಸು ತುಸು ಪ್ರಸನ್ನವಾಯಿತು. ನೀನು ವಿಮರ್ಶೆ ಬರೆಯುತ್ತೀಯಲ್ಲ. ಆದ್ದರಿಂದ ಒಂದು ಕೆಲಸವಾಗಬೇಕು ಎಂದರು.

ಅಯ್ಯೋ ನಿಮ್ಮಂತಹ ದೊಡ್ಡವರಿಗೆಲ್ಲಾ ಏನು ಕೆಲಸ ವಿಮರ್ಶಕರ ಹತ್ತಿರ. ರಾಮಾಯಣ ತುಂಬಾ ಹಳೆ ಗ್ರಂಥ. ಹಾಗಾಗಿ ಭಾನುವಾರದ ಪುಸ್ತಕ ವಿಮರ್ಶೆಗೆ ಅವಕಾಶವಿಲ್ಲ ಎಂದೆ.

ಪುಸ್ತಕ ವಿಮರ್ಶೆ ಹಾಳಾಗಿ ಹೋಗಲಯ್ಯ. ಆದರೆ ನೀವು ವಿಮರ್ಶಕರು ಹೀಗೆ ಹೇಳಬಹುದೆ? ಎಂದರು

ನಾನೇನು ರಾಮನನ್ನು ಬೈದು, ಸೀತೆಯನ್ನು ಅಪಹಾಸ್ಯ ಮಾಡಿ ಬರೆಯಲಿಲ್ಲವಲ್ಲ ಮಹಾ ಕವಿಗಳೇ ಎಂದೆ



ಆದಿ ಕವಿ ವಾಲ್ಮೀಕಿ ಬಹಳ ಗಂಭೀರವಾದರು. ನಿಧಾನವಾಗಿ ಮಂದ್ರಸ್ಥಾಯಿಯಲ್ಲಿ

‘ವಾಲ್ಮೀಕಿ ಅನುಷ್ಟುಭ್ ಛಂದಸ್ಸು ಕಂಡು ಹಿಡಿದವನಲ್ಲ ಎನ್ನಬಹುದೆ ಈ ವಿಮರ್ಶಕರು’ ಎಂದರು.

ಯಾರು ಸ್ವಾಮಿ ನಿಮ್ಮ ಬಗ್ಗೆ ಅಷ್ಟು ಧೈರ್ಯದಿಂದ ಹೇಳಬಲ್ಲ ವಿಮರ್ಶಕರು. ಅದೂ ಇಂದಿನ ಕಾಲದಲ್ಲಿ – ಎಂದು ಕೇಳಿದಾಗ ಅವರು, ‘ಅದೇ ಗೌರೀಶ ಕಾಯ್ಕಿಣಿ ಎಂಬ ವಿಮರ್ಶಕರಿದ್ದಾರಂತಲ್ಲ’ ಎಂದರು.

ಇದೊಳ್ಳೆ ಗ್ರಹಚಾರ. ಅತ್ತ ಗೌರೀಶರನ್ನೂ ಬಿಡುವಂತೆ ಇಲ್ಲ. ಸ್ನೇಹಿತ ಜಯಂತರ ತಂದೆ. ಇತ್ತ ಕವಿಗೆ ಸಿಟ್ಟುಬಂದರೆ ಜನಸಾಮಾನ್ಯರಿಂದ ಪೆಟ್ಟೇ ಗತಿ. ಹೀಗೆ ಯೋಚಿಸುತ್ತಿದ್ದಾಗ ಆದಿ ಕವಿಗಳೇ ಹೇಳಿದರು. ‘ಅನುಷ್ಟುಭ್ ಪೂರ್ವದಿಂದಲೂ ವೈದಿಕ ಯುಗದಿಂದಲೂ ಇತ್ತು. ವೇದಗಳಲ್ಲಿ ಇದೆ. ಐತರೇಯ ಬ್ರಾಹ್ಮಣದಲ್ಲಿ ತುಂಬಾ ಕಂಡುಬರುತ್ತದೆ’ ಎಂದಿದ್ದಾರಂತಲ್ಲ ಎಂದರು.

ಗಾಯತ್ರೀ, ಜಗತೀ, ತ್ರಿಷ್ಟುಭ್‌ಗಳಂತೆ ಅನುಷ್ಟುಭ್ ಕೂಡಾ ವೇದ ವಾಙ್ಮಯದಲ್ಲಿ ಬರುವ ಒಂದು ಛಂದೋ ರೂಪ ಎಂದು ಗೌರೀಶ ಕಾಯ್ಕಿಣಿಯವರು ಬರೆದುದು ನಿಜ. ಇವರೇನು ದೊಡ್ಡದು ಕಂಡು ಹಿಡಿಯಲಿಲ್ಲ ಎಂದರೆ ಯಾವ ಕವಿಗೆ ತಾನೆ ಬೇಸರವಾಗುವುದಿಲ್ಲ. ಆದಿ ಕವಿಯೂ ಅದಕ್ಕೆ ಅಪವಾದವಲ್ಲ. ವಿಮರ್ಶಕರು ನನ್ನ ಬರಹ ಬಂಧುಗಳು. ಹೀಗಾಗಿ ಉಪಾಯದಿಂದ ಹೇಳಿದೆ.

‘ಆದಿ ಕವಿಗಳೇ ಇದಕ್ಕೆಲ್ಲಾ ಮುಖ್ಯಕಾರಣ ಆ ಭವಭೂತಿ ಇದ್ದಾನಲ್ಲ ಅವನೇ. ಆ ಸಂಸ್ಕೃತ ನಾಟಕಕಾರ ‘‘ಅಮ್ನಾಯತ್ ಅನ್ಯತ್ರ’ ಎಂದನಲ್ಲ. ಅದೇ ಕಾರಣ ಇರಬೇಕು’ ಎಂದೆ.

ಕವಿಗಳು ಗಡ್ಡ ನೇವರಿಸಿಕೊಂಡು ಯೋಚಿಸತೊಡಗಿದರು. ನಾನು ಮುಂದುವರಿಸಿದೆ. ‘ಅಮ್ನಾಯತ್ ಅನ್ಯತ್ರ, ಅಂದರೆ ಆ ಮುಂಚೆ ಅನುಷ್ಟುಭ್ ಛಂದಸ್ಸು ವೇದಗಳಲ್ಲಿ ಪ್ರಯುಕ್ತವಾದ್ದು. ಆದಿ ಕವಿ ವಾಲ್ಮೀಕಿಗಳು ಮೊದಲಬಾರಿ ಅದನ್ನು ‘ಅನ್ಯತ್ರ’ ಅಂದರೆ ಲೌಕಿಕ ವಸ್ತುವಿನ ಅಭಿವ್ಯಕ್ತಿಗೆ ರಾಮಾಯಣ ಕಾವ್ಯದಲ್ಲಿ ಪ್ರಯೋಗಿಸಿದರು’ ಎಂದು ಅರ್ಥವಲ್ಲವೇ ? ‘ಹಾಗಾಗಿ ತಾವು ವಿಮರ್ಶಕರ ಬಗ್ಗೆ ಸಿಟ್ಟಾಗಬಾರದು. ಏನಿದ್ದರೂ ಈ ರಗಳೆ ಹುಟ್ಟುಹಾಕಿದವನೆ ನಿಮ್ಮ ಕತೆಯನ್ನೇ ಉತ್ತರ ರಾಮ ಚರಿತೆಯಲ್ಲಿ ಬರೆದ ನಾಟಕಕಾರ. ಇದೆಲ್ಲಾ ಭವಭೂತಿಯ ಕಿತಾಪತಿ.’ ಎಂದು ಮೆತ್ತಗೆ ಸೇರಿಸಿದೆ.

ನನಗೆ ಮುಖ್ಯವಾಗಿ ಈ ಆದಿಕವಿಗಳ ಕೈಗೆ ಸಿಕ್ಕಿ ವಿಮರ್ಶಕರು ಚಟ್ನಿಯಾಗುವುದು ಬೇಡ ಎಂಬ ಯೋಚನೆ ಇತ್ತು. ಇನ್ನು ನಾನು ರಾಮಾಯಣದ ಬಗ್ಗೆ ಬರೆದ ಲೇಖನಗಳು ಅವರ ದಿವ್ಯದೃಷ್ಟಿಗೆ ಗೋಚರಿಸಿ ಸಿಟ್ಟಾದರೆ ಗತಿಯೇನು ಎಂಬ ಹೆದರಿಕೆಯೂ ಇತ್ತು. ಭವಭೂತಿಯಾದರೋ ‘ಕರುಣ ಏವ ರಸಃ’ ಎಂದು ಹೇಳಿ ಕೈ ತಪ್ಪಿಸಿಕೊಳ್ಳುತ್ತಾನೆ. ನಾನಾದರೋ ಈ ಸಂಸ್ಕೃತಿ ವಿಮರ್ಶೆ ಅದು ಇದು ಎಂದು ಮಾತನಾಡುವವರು

ಓಡುವುದೆಲ್ಲಿಗೆ?



‘ಮಾ ನಿಷಾದ ...’ ಎಂದು ಶಾಪಕೊಟ್ಟ ಕವಿಯ ಸಿಟ್ಟು ನನ್ನ ಕಡೆ ತಿರುಗಿದರೆ ನನ್ನ ಹೆಂಡತಿ ಮಕ್ಕಳ ಗೋಳು ಯಾರು ನೋಡಬೇಕು ಎಂಬ ಚಿಂತೆಗೊಳಗಾಗಿದ್ದೆ.

ಆದರೆ ನನಗೆ ಆಶ್ಚರ್ಯ ಆಗುವ ಹಾಗೆ ಕವಿಗಳು ಗಂಭೀರವಾದರು. ನೀನು ಹೇಳುವುದರಲ್ಲೂ ಒಂದು ವಿಚಾರ ಇದೆ. ಭವಭೂತಿ ಹೇಳಿದ ಮಾತಿಗೆ ಗೌರೀಶರನ್ನ


ಯಾಕೆ ಪ್ರಶ್ನಿಸುವುದು. ಕವಿಗೆ ಕವಿ ಒಲಿವಂ ಎಂದಾಗುವ ಬದಲು, ಮುನಿವಂ ಎಂಬಂತಾಗಿದೆ. ಎಂದರು. ನಾನು ತುಸು ಧೈರ್ಯ ಬಂದು 'ಗುರುಂ ಗುರುಂ ದೃಷ್ಟ್ವಾತ್ ಶ್ವಾನವತ್ ಗುರ್‌ಗುರಾಯತೆ' ಎಂಬ ಮಾತಿದೆಯಲ್ಲ ಕವಿಗುರುಗಳೆ ' ಎಂದೆ. ಗಡ್ಡ ನೇವರಿಸಿ ಮುಗುಳ್‌ನಕ್ಕ ಆದಿಕವಿಗಳು ಅಂತರ್ಧಾನರಾದರು.

ನಾನು ಯೋಚಿಸತೊಡಗಿದೆ. 'ಆದಿ ಕವಿಗಳೇ ವಿಮರ್ಶೆಗೆ ಇಷ್ಟು ರಗಳೆ ಮಾಡಿಕೊಂಡರೆ ಇನ್ನು ಇಂದಿನ ಕವಿಗಳ ಪಾಡೇನು ? ಆದಿ ಕವಿಯೇ ಹೀಗಾದರೆ ಇಂದಿನ ಬೂದಿಕವಿ ಇನ್ನೇನು ಮಾಡುತ್ತಾನೆ. ಆದಿಕವಿಯಾಗಲೀ ಇಂದು ಮಂಕುಬೂದಿ ಎರಚುವ ಹಾದಿ ಕವಿಯಾಗಲಿ, ವಿಮರ್ಶಕರನ್ನು ಕಂಡರೆ ವಿಪರೀತ ಸಿಟ್ಟು ಎಂದು ಯೋಚಿಸತೊಡಗಿದೆ.

ಇದ್ದಕ್ಕಿದ್ದಂತೆ ಮನ, ಮೈ ಎಲ್ಲಾ ನಡುಗಿದಂತಾಗಿ ಎಚ್ಚರವಾಯಿತು. 'ಏನ್ರಿ ಇದು ಏಳು ಗಂಟೆಯಾಯಿತು. ಆಫೀಸಿಗೆ ಹೋಗುವುದಿಲ್ಲವೇ? ಆದಿ ಕವಿ, ಬೂದಿ ಕವಿ ಹಾದಿ ಕವಿ ಅಂತ ಕನವರಿಸುತ್ತಾ ಇದ್ದೀರಲ್ಲಾ' ಎಂದು ಹೆಂಡತಿ ಎಬ್ಬಿಸುತ್ತಿದ್ದಳು. ಏನೋ ಅಪರೂಪಕ್ಕೆ ಕನಸಲ್ಲಿ ಆದಿ ಕವಿಗಳೇ ಬಂದಿದ್ದರು ಕಣೆ ಎಂದೆ. ನೀವೋ, ನಿಮ್ಮ ಸಾಹಿತ್ಯಾನೋ, ನಿಮ್ಮ ಕನಸೋ, ಇದೆಲ್ಲ ಅತಿಯಾಯಿತಪ್ಪ. ಕಾಫಿ ಮಾಡುತ್ತೇನೆ. ಸ್ನಾನ ಮಾಡಿ ಆಫೀಸಿಗೆ ಹೊರಡಿ. ಈ ಹಾಳು ಸಾಹಿತ್ಯದ ಕತೆಯನ್ನ, ಹೇಳಿದ್ದಕ್ಕೆಲ್ಲಾ ತಲೆ ಆಡಿಸುವ ನಿಮ್ಮ ಫ್ರೆಂಡ್ಸ್ ಇದ್ದಾರಲ್ಲ, ಅದೇ ಪೊಮ್ಮ, ಅಪ್ಪಣ್ಣ, ಅದ್ರಾಮ... ಅವರಿಗೆ ಹೇಳಿ. ಬೆಳಗ್ಗೆ ಬುತ್ತಿ ಮಾಡಿ ನಿಮ್ಮನ್ನ ಹೊರಡಿಸೋದೆ ನನಗೆ ಸಾಕಾಗಿದೆ ಎಂದಳು. ನಾನು ಅಲ್ಲವೇ ಮತ್ತೆ ಎನ್ನುತ್ತಾ ಮುಖ ತೊಳೆಯಲು ಹೊರಟೆ.

■

---



# ಮಲ್ಲೇಶ್ವರದ ಮಾಲಿನಿ ಮೇಡಮ್

**– ವತ್ಸನ**

ಮಂಗಳ ಗ್ರಹದ ಮೇಲೆ ಹುಷಾರಾಗಿ ಇಳಿದ ಪರ್ಸಿವಿಯರೆನ್ಸ್ ನೌಕೆ ಅಲ್ಲಿಂದ ಕಳಿಸಿದ ವಿಡಿಯೋ ಕ್ಲಿಪ್ ಒಂದನ್ನು ಯೂಟ್ಯೂಬಿನಲ್ಲಿ ನೋಡುತ್ತಿದ್ದೆ. ನಿಜವಾಗಲೂ ಎಂಥಾ ಅದ್ಭುತಾರೀ ಇದು. ಅಲ್ಲಿನ ಸೂರ್ಯ ಎಷ್ಟೇ ಪ್ರಕಾಶಮಾನವಾಗಿದ್ರೂ ಅದರ ಸುತ್ತಲಿನ ಆಕಾಶ ಮಾತ್ರ ಕಪ್ಪಂಕಪ್ಪು. ಸೂರ್ಯನ ಬೆಳಕನ್ನು ವಿಭಜಿಸಿ ನೀಲಿ ಕಿರಣಗಳನ್ನು ಆಕಾಶದಲ್ಲೆಲ್ಲಾ ಹರಡುಕ್ಕೆ ಅಲ್ಲಿ ಇಲ್ಲಿನ ತರಹ ದಟ್ಟವಾದ ವಾತಾವರಣಾನೇ ಇಲ್ಲದಿರೋದ್ರಿಂದ ಹೀಗಾಗುತ್ತಂತೆ. ಇದನ್ನೆಲ್ಲಾ ನಾನು ಆಸಕ್ತಿಯಿಂದ ನೋಡ್ತಾ ಇದ್ರೆ ಶರಲೇಖ ಮಾತ್ರ ದೂರದಲ್ಲಿ ಮೇಜಿನ ಬಳಿ ಕುಳಿತು ಯಾವುದೋ ಕಡತಾನ ಒಂದು ದೊಡ್ಡ ಲೆನ್ಸ್ ಇಟ್ಕೊಂಡು ಪರಿಶೀಲಿಸ್ತಾ ಇದ್ದ. ನನಗೆ ರೇಗಿತು. "ಮಂಗಳ ಗ್ರಹದಿಂದ ಚಿತ್ರಗಳು ಬರ್ತಾ ಇವೆ. ನೋಡುಕ್ಕೆ ಬರೋಲ್ವೇ? ಕಡತ ನೋಡೋದು ಇದ್ದೇ ಇರುತ್ತೆ" ಅಂತ ಸ್ವಲ್ಪ ಖಾರವಾಗಿಯೇ ಹೇಳಿದೆ. ಅವ ನಗುತ್ತಾ ನನ್ನ ಕಡೆ ತಿರುಗಿದ. "ನೋಡಣ್ಣಾ, ಯಾವ ಗ್ರಹದಿಂದ ಏನು ಬಂದ್ರೆ ತಾನೇ ನನಗೇನು? ನನ್ನ ಪತ್ತೇದಾರಿ ಕೆಲಸಾನೇ ನನಗೆ ಕೈತುಂಬಾ ಇರೋವಾಗ ಇಂಥ ಅನಗತ್ಯ ವಿಷಯಗಳಿಗೆ ನನಗಿರೂ ಪುಟ್ಟ ಮಿದುಳಲ್ಲಿ ಜಾಗವೇ ಇಲ್ಲ." ಅಂದ ಶರಲೇಖ.

"ಮಹಾ ನಿನ್ನ ಪತ್ತೇದಾರಿ ಕೆಲಸ. ಅನೇಕ ಬಾರಿ ನೀನು ಅಂಥಾದೇನೂ ಕೆಲಸಾನೇ ಮಾಡದೆ ನಿನ್ನ ಗಿರಾಕಿಗಳ ಸಮಸ್ಯೆಗಳನ್ನು ಪರಿಹರಿಸಿ, ಚಪ್ಪಾಳೆ ಗಿಟ್ಟಿಸಿಕೊಂಡಿರೋದನ್ನ ನಾನು ನೋಡಿಲ್ವೇ ?" ಅಂತ ಹೇಳಿದೆ.

"ಅದೂ ನಿಜಾ ಅನ್ನು. ಈಗಿನ ಕಾಲದಲ್ಲಿ ನಾವು ಪತ್ತೇದಾರರು, ಮೊದಲಿನ ತರಹ, ಕಳ್ಳತನ, ಮೋಸ, ಸುಲಿಗೆ ದರೋಡೆ ಅಂತ ಕಾದು ಕೂತಿದ್ರೆ ಒಂದು ಕೇಸೂ ಗಿಟ್ಟೋದಿಲ್ಲ. ಯಾಕೆ ಅಂದ್ರೆ ಅವೆಲ್ಲಾ ಈಗ ರಾಜಾರೋಷವಾಗಿ ಓಪನ್ನಾಗೇ ನಡೀತಾ ಇರುತ್ವೆ. ಕಳ್ಳರು ಆ್ಯಂಟಿಸಿಪೇಟರಿ ಬೇಲ್ ತಗೊಂಡು ಮುಂದಿನ ಧಂಧೇಗೆ ತಯಾರಾಗೋದನ್ನ ದಿನಬೆಳಗಾದರೆ ಓದೋಲ್ವೇ? ಅದಕ್ಕೇ ನಾವುಗಳೂವೆ ಸಮಾಜದ ಪರಿಸರಕ್ಕೆ ತಕ್ಕಂತೆ ಬದಲಾಗ್ತಾ ಇರೋದು ಅನಿವಾರ್ಯ" ಅಂತ ಶರಲೇಖ ಹೇಳುತ್ತಿರುವಾಗಲೇ ನನ್ನ ಮೊಬೈಲ್ "ಐ ನೀಡೆಡ್ ಟು ಲೂಸ್ ಯು ಟು ಫೈಂಡ್ ಮಿ..." ಅಂತೆಲ್ಲಾ ಏನೇನೋ ಹಾಡಲು ಪ್ರಾರಂಭಿಸಿತು.

"ಥೂ ಹಾಳಾದ್ದು, ಪಕ್ಕದ ಫ್ಲಾಟಿನ ಥೋಟೂ ನಿನ್ನ ಸಂಜೆ ಇಲ್ಲಿಗೆ ಬಂದು, "ಒಂದ್ನಿಮಿಷ ಮೊಬೈಲ್ ಕೊಡಿ ಅಂಕಲ್" ಅಂತ ಮುದ್ದು ಮುದ್ದಾಗಿ ಕೇಳಿದಾಗ ಕೊಡಲೇ ಬಾರದಾಗಿತ್ತು. ಸೆಟ್ಟಿಂಗ್ಸ್ ಎಲ್ಲಾ ಏರುಪೇರು" ಅಂದ್ಕೊಳ್ತಾನೆ ಕಾಲ್ ರಿಸೀವ್ ಮಾಡ್ದೆ. ಆ ಬದಿಯಿಂದ ಸುನಯನಾ ಮಾತಾಡ್ತಾ ಇದ್ಲು. "ಅಂಕಲ್, ನನ್ಗೆ ತುಂಬಾ ಸ್ಟ್ರೆಸ್ ಆಗ್ಬಿಟ್ಟಿದೆ. ನಿಮ್ಮನ್ನ ಮತ್ತು ಶರಲೇಖ ಅಂಕಲ್‌ನ ಅರ್ಜೆಂಟಾಗಿ ನೋಡ್ಲೇ ಬೇಕು. ಯಾವಾಗ ಬರ್ಲಿ" ಅಂತ ಅವಳು ಕಾತರದಿಂದ ಕೇಳಿದಳು. ಥೋಟು ಸ್ಪೀಕರ್ ಫೋನ್‌ನ ಆನ್ ಮಾಡಿಟ್ಟಿತ್ತು. ಶರಲೇಖ "ನಾಳೆ ಬೆಳಗ್ಗೆ ಹತ್ತಕ್ಕೆ ಬರುಕ್ಕೆ ಹೇಳು" ಅಂತ ಇದ್ದಲ್ಲಿಂದಲೇ ಕೂಗಿದ. "ಕೇಳಿಸ್ತು. ತುಂಬಾ ಥ್ಯಾಂಕ್ಸ್ ಅಂಕಲ್. ಸೀಯೂ ಟುಮಾರೋ" ಅನ್ನುತ್ತಾ ಡಿಸ್ಕನೆಕ್ಟ್ ಮಾಡಿದಳು ಸುನಯನಾ.



ಈ ಸುನಯನಾ ಯಾರು? ಎಂಬ ನಿಮ್ಮ ಸರಳ ಪ್ರಶ್ನೆಗೆ ಉತ್ತರ ಮಾತ್ರ ಅಷ್ಟು ಸರಳವಲ್ಲ. ಯಾಕೇಂದ್ರೆ ನಮ್ಮಪ್ಪ ಅವಳ ತಾತ ಇಬ್ಬರೂ  ಮೈಸೂರಿನಲ್ಲಿ ಅಕ್ಕಪಕ್ಕದ ಮನೆಯಲ್ಲಿದ್ದವರು. ಸುನಯನಾ ಅಪ್ಪ ಶ್ರೀಧರ ಹೈಸ್ಕೂಲಿನಲ್ಲಿ ನನ್ನ ಸಹಪಾಠಿ. ಅವನು ಮಾಲಿನಿಯ ಕೈ ಹಿಡಿದಾಗ ನಾನು ಇವರ ಮದುವೆಗೂ ಹೋಗಿದ್ದೆ. ಒಟ್ಟಿನಲ್ಲಿ ಸುನಯನಾ ನಾನು ಎತ್ತಿ ಆಡಿಸಿದ ಮಗು. ಮಾಲಿನಿ ಜೂಆಲಜೀ ಎಮ್ಮೆಸ್ಸಿಲಿ ಗೋಲ್ಡ್ ಮೆಡಲಿಸ್ಟ್. ಶ್ರೀಧರ ಖ್ಯಾತ ಬಿಸಿನೆಸ್‌ಮನ್. ಒಬ್ಬಳೇ ಮಗಳು ಇವರಿಗೆ. ಟ್ರಾಜೆಡಿ ಅಂದ್ರೆ ಎರಡು ವರ್ಷದ ಹಿಂದೆ ಶ್ರೀಧರ ಹಾರ್ಟ್ ಅಟಾಕ್ ಆಗಿ ತೀರಿಕೊಂಡಿದ್ದ. ಆಗಿನಿಂದ ನನಗೆ ಅವರುಗಳ ಸಂಪರ್ಕ ತಪ್ಪಿಹೋಗಿತ್ತು. ಎರಡು ವರ್ಷಗಳ ನಂತರ ಸುನಯನಾಳೊಂದಿಗಿನ ಭೇಟಿ, ನ್ಯಾಯವಾಗಿ ಖುಷಿ ತರೋ ಸಂಗತಿ ಆಗಿರಬೇಕಾಗಿತ್ತು. ಆದರೆ ಮಗು ಸ್ಟ್ರೆಸ್ ಆಗಿದೆ ಅಂತ ಹೇಳಿದ ಮೇಲೆ, ಅವಳು ನಾಳೆ ಬಂದು ಮಾತಾಡೋವರೆಗೂ ಚಿತ್ತಸಿದ್ಧಿ ಇರುಕ್ಕೆ ಹೇಗೆ ಸಾಧ್ಯ?

ಮಾರನೆಯ ದಿನ ಹತ್ತು ಘಂಟೆಗೆ ಶರಲೇಖ ಮತ್ತು ನಾನು ನಮ್ಮ ವಿಸಿಟರನ್ನು ನಿರೀಕ್ಷಿಸುತ್ತಾ ಕುಳಿತಿದ್ದವು. ನನ್ನ ಮೊಬೈಲು ರಿಂಗಾಯಿತು. (ರಿಂಗ್ ಟೋನ್ ರೀಸೆಟ್ ಮಾಡಿದ್ದೆ) ಸುನಯನಾ, ಆ ಬದಿಯಿಂದ, "ಅಂಕಲ್ ಒಂಭತ್ತೂವರೆಗೇ ನಾನು ಮನೆಯಿಂದ ಹೊರಟಿದ್ದೆ. ಈ ಹಾಳು  ಟ್ರಾಫಿಕ್ ಜಾಮ್. ಬರೋದು ಸ್ವಲ್ಪ ತಡ ಆಗುತ್ತೆ." ಅಂತ ಹೇಳಿದಳು. ನಾನು ಶರಲೇಖನನ್ನು ಕುರಿತು, "ಅವಳಿರೋದು ಬ್ರೂಕ್‌ಫೀಲ್ಡ್ಸ್‌ನಲ್ಲಿ. ಇಲ್ಲಿಗೆ ಬರಬೇಕಾದರೆ ಎಂಟೂವರೆಗೆ ಹೊರಡಬೇಕಾಗಿತ್ತು. ಈಗಿನ ಕಾಲದ ಮಕ್ಕಳೆಲ್ಲಾ ಯಾಕೆ ಹೀಗೆ?" ಅಂತ ಪ್ರಶ್ನಿಸಿದೆ. ಶರಲೇಖ, "ಮನುಕುಲದ ವಿಕಾಸ ಇದಕ್ಕೆ ಮೂಲ ಕಾರಣ. ತಲೆಮಾರುಗಳು ಮುಂದುವರಿಯುತ್ತಿದ್ದಂತೆ ಯುವ ಜನತೆಗೆ ಕಾಲದ ನಿಜ ಸ್ವರೂಪದ ಅರಿವಾಗಿದ್ದು ಅವರೆಲ್ಲಾ ಕಾಲಾತೀತರಾಗುವ ಹವಣಿಕೆಯಲ್ಲಿ ಇರೋದ್ರಿಂದ ಎಂಟೂವರೆ, ಒಂಭತ್ತೂವರೆ ಇವೆಲ್ಲಾ ಅವರುಗಳಿಗೆ ಅರ್ಥಹೀನವಾಗುತ್ತವೆ" ಅಂತ ಬಹು ಗಂಭೀರಧ್ವನಿಯಲ್ಲಿ ಹೇಳಿದ.

ಹನ್ನೊಂದೂವರೆಗೆ ಸುನಯನಾ ಬಂದಳು. ಅವಳನ್ನು ನೋಡಿದ ಕೂಡಲೇ ಇದ್ದ ಕೋಪವೆಲ್ಲಾ ಕರಗಿಹೋಯಿತು. "ಏನೂ ಯೋಚನೆ ಬೇಡ ಸುನಯನಾ. ಎಲ್ಲ ವಿವರವಾಗಿ ಹೇಳು. ಯಾವ ಸಮಸ್ಯೆ ಇದ್ರೂ ಖಂಡಿತ ಪರಿಹಾರ ಮಾಡ್ತೀವಿ" ಅಂತ ಅವಳಿಗೆ ಆಶ್ವಾಸನೆ ಕೊಟ್ಟು ಸೋಫಾದ ಮೇಲೆ ಕೂರಿಸಿದೆ. ನನ್ನ ಮಾತು ಕೇಳಿ ಅವಳು ಅಳುಕ್ಕೇ ಪ್ರಾರಂಭಿಸಿದಳು. ಶರಲೇಖ ಅವಳಿಗೆ ಒಂದು ಲೋಟ ನೀರು ತಂದು ಕೊಟ್ಟ. ನೀರು ಕುಡಿದು ಸಮಾಧಾನ ಮಾಡಿಕೊಂಡು ಅವಳು ಮಾತು ಪ್ರಾರಂಭಿಸಿದಳು.

"ಸಂಕ್ಷಿಪ್ತವಾಗಿ ಹೇಳ್ತೀನಿ ಅಂಕಲ್. ನಿಮಗೆ ತಿಳಿದಿರೋ ಹಾಗೆ ನಮ್ಮಮ್ಮ ಇರೋದು ಮಲ್ಲೇಶ್ವರದಲ್ಲಿ. ನಾನೂ ವಿವೇಕ್ ಜೊತೆ ಬ್ರೂಕ್‌ಫೀಲ್ಡ್ಸ್‌ನಲ್ಲಿ ಫ್ಲಾಟ್ ತಗೊಂಡು ಇದೀವಿ. ಎರಡು ವರ್ಷದ ಹಿಂದೆ ನಮ್ಮಪ್ಪ ತೀರಿಕೊಂಡ ಮೇಲೆ ಅಮ್ಮ ಒಬ್ಬಳೇ ಅಗಿಬಿಟ್ಟಳು. ಮೊದ ಮೊದಲು ಏನೂ ಕಷ್ಟ ಆಗಲಿಲ್ಲ. ಅವಳು ಯಾವಾಗಲೂ ಏನಾದರೂ ಪ್ರಾಜೆಕ್ಟ್‌ನ ಕೈಲಿಟ್ಟುಕೊಂಡು ಅದರಲ್ಲೇ ಮುಳುಗಿ ಸುಖವಾಗಿ ಕಾಲ ಕಳೀತಿದ್ಲು. ಯಾವಾಗಿನಿಂದಲೂ ತುಂಬ ಸೆಲ್ಫ್ ರಿಲಯಂಟ್ ಅವಳು. ಆದರೆ ಈಗ ಹಲವು ತಿಂಗಳುಗಳಿಂದ ಅವಳ ನಡವಳಿಕೇನೇ ಬದಲಾಗಿದೆ. ಯಾವುದಕ್ಕೂ ಉತ್ಸಾಹವಿಲ್ಲ. ಏನೋ ಹೆದರಿಕೆ. ಕೇಳಿದರೆ "ನನಗೇನಾಗಿದೆ ಧಾಡಿ? ಅಂಥಾ ಚೆನ್ನಾಗಿದೀನಿ." ಅಂತ



ಹಾರಿಕೆಯ ಮಾತು. ನಮ್ಮನೇಗೆ ಬರುಕ್ಕೂ ಇಷ್ಟವಿಲ್ಲ. ಬಂದರೂ ಸಂಜೇಗೇ ಹೋಗಬೇಕು ಅಂತ ಹಠ. ಪ್ರಾಜೆಕ್ಟ್ ಕೆಲಸ ಎಲ್ಲಾ ನಿಂತು ಹೋಗಿದೆ. ಸೈಕಾಲಜಿಸ್ಟ್ ಹತ್ರ ಕರಕೊಂಡು ಹೋಗಿದ್ದೆ. ಅವರ ಹತ್ರ ಅಮ್ಮ ಎಷ್ಟು ಚೆನ್ನಾಗಿದ್ರೂ ಅಂದ್ರೆ ಅವರು ನನ್ನನ್ನೇ ಕುರಿತು, "ನೀನು ಸುಮ್ನೆ ಪ್ಯಾರನಾಯ್ಡ್ ಆಗಬೇಡ" ಅಂತ ಬುದ್ಧಿ ಹೇಳಿ ಕಳಿಸಿದರು. ನನಗಂತೂ ತುಂಬಾ ಯೋಚನೆ ಆಗ್ಬಿಟ್ಟಿದೆ. ಆಡುಕ್ಕಿಲ್ಲ ಅನುಭವಿಸುಕ್ಕಿಲ್ಲ ಅನ್ನೋ ತರ ಆಗಿದೆ. ನೀವು ಹಳೆಯ ಸ್ನೇಹಿತರು. ಅವಳನ್ನ ಸ್ವಲ್ಪ ಮಾತಾಡಿಸಿ, ವಿಷಯ ಏನು ಅಂತ ತಿಳಿದುಕೊಂಡು ನನಗೆ ತಿಳಿಸಿದರೆ ನಾನು ಯಾವ ಸಹಾಯ ಮಾಡುಕ್ಕೂ ಸಿದ್ಧ" ಅಂತ ಚಿಕ್ಕದಾಗಿ ಚೊಕ್ಕವಾಗಿ ಹೇಳಿದಳು ಸುನಯನಾ.

ಮಾಲಿನಿಯೊಂದಿಗೆ ಮಾತನಾಡಿ ಭೇಟಿ ನಿಗದಿಪಡಿಸಿಕೊಂಡೆ. ಅಲ್ಲಿಗೆ ಹೋಗುಕ್ಕೆ ಮುಂಚೆ ಶರಲೇಖ, "ಗೆಳೆಯನ ಪತ್ನಿ ಅಂತ ಇಮೋಷನ್ ಇರಬಾರ್ದು. ವಸ್ತುನಿಷ್ಠವಾಗಿ ಆಕೆಯನ್ನು ಗಮನಿಸು. ನಾನೂ ಅಲರ್ಟಾಗಿ ಇರ್ತೀನಿ. ಭೇಟಿ ಆದಮೇಲೆ ನಾವಿಬ್ಬರೂ ಚರ್ಚಿಸಿ ಮುಂದಿನ ಹೆಜ್ಜೆ ನಿರ್ಧರಿಸೋಣ" ಅಂತ ಕಾಷನ್ ಮಾಡಿದ್ದ.

ಆ ದಿನ ಬೆಳಗ್ಗೆ ಒಂಭತ್ತಕ್ಕೆ ಮಲ್ಲೇಶ್ವರದಲ್ಲಿನ ಮಾಲಿನಿಯ ಮನೆಲ್ಲಿದ್ದೆವು.

"ಸುನೀ ಎಲ್ಲಾ ಹೇಳಿದ್ದಾಳೆ. ನನ್ನ ಆರೋಗ್ಯದ ವಿಷಯಾನ ಹೇಗೆ ಪ್ರಸ್ತಾಪಿಸೋದು ಅಂತ ನಿಮಗೆ ಸಂಕೋಚ ಬೇಡ. ನನ್ನ ಸಮಸ್ಯೆ ನಿಮಗೆ ಅರ್ಥ ಆಗೋಹಾಗೆ ಸುನೀಗೆ ಖಂಡಿತಾ ಆಗೋದಿಲ್ಲ. ಬನ್ನಿ ಮೊದಲು ಸ್ವಲ್ಪ ತಿಂಡಿ ತಗೊಳ್ಳುವಿರಂತೆ. ಆಮೇಲೆ ಎಲ್ಲ ವಿವರಿಸ್ತೇನೆ." ಅಂತ ಹೇಳಿ ಮಾಲಿನಿ ನಮ್ಮನ್ನು ಡ್ರಾಯಿಂಗ್ ರೂಮಿನಲ್ಲಿ ಕೂರಿಸಿ ಒಳಕ್ಕೆ ಹೋದರು. ನಾನು ಇಮೋಷನ್ ಇಲ್ಲದೇ ಸುತ್ತಲಿನ ಪರಿಸರವನ್ನು ಅಲರ್ಟಾಗಿ ಗಮನಿಸಲು ಪ್ರಾರಂಭಿಸಿದೆ. ಮೊದಲಿನಿಂದಲೂ ಮಾಲಿನಿ ಮಾತುಗಾತಿ. ಆಕರ್ಷಕ ವ್ಯಕ್ತಿತ್ವ. ಆದರೆ ಈಗ ಏಕೋ ತೀವ್ರ ಕಾತರ ಕಳವಳಗಳನ್ನು ಅದುಮಿಕ್ಕಿ ಮೇಲಿನ ನೋಟಕ್ಕೆ ನಗುನಗುತ್ತಾ ಇರೋಹಾಗೆ ಕಾಣಿಸಿತು. ತಿಂಡಿಯೆಲ್ಲಾ ಆದಮೇಲೆ, ಆಕೇನೇ ಮಾತು ಪ್ರಾರಂಭಿಸಿದರು.

"ಶ್ರೀಧರ್ ಇರೋವರ್ಗೂ ನನ್ನ ಸುಖಕ್ಕೆ ಪಾರವೇ ಇಲ್ಲ ಅನ್ನೋಹಾಗಿತ್ತು. ಅವರು ಕಾಲವಾದ ಮೇಲೆ ನನಗೆ ದಿಢೀರನೆ ನನ್ನ ಒಂಟಿತನದ ಅರಿವಾಯಿತು. ಎಷ್ಟೇ ಕೆಲಸಗಳಲ್ಲಿ ತೊಡಗಿಸಿಕೊಂಡರೂ ಏನೋ ಖಾಲಿತನ. ಅಲ್ಲದೇ ನಮಗಿದ್ದ ಸ್ನೇಹಿತರೆಲ್ಲಾ ಶ್ರೀಧರನ ಸಂಪರ್ಕದಿಂದ ಆಗಿದ್ದು, ಕ್ರಮೇಣ ಅವರೆಲ್ಲಾ ದೂರವಾದರು. ಸುನೀಗೆ ನನ್ನ ಕಷ್ಟಹೇಳಿಕೊಂಡರೆ ಗಾಬರಿ ಆಗ್ತಾಳೆ ಅಂತ ಅವಳಿಂದ ಇದನ್ನೆಲ್ಲಾ ಮುಚ್ಚಿಟ್ಟಿದ್ದೇನೆ."

ಮಾಲಿನಿ ನಮ್ಮೊಂದಿಗೆ ರಿಲಾಕ್ಸ್ ಆಗ್ತಾ ಇದ್ದಂತೆ ಒಂದೊಂದಾಗಿ ಆಕೆಯ ಕಳವಳಗಳ ಸುರುಳಿಗಳು ತೆರೆದುಕೊಂಡವು. ನಿದ್ರೆಯಿಲ್ಲದ ರಾತ್ರಿಗಳು. ನಿಶಿರಾತ್ರಿಯಲ್ಲಿ ವಿವರಿಸಲಾಗದ ಗಾಬರಿ, ಇವೆಲ್ಲದರ ಜೊತೆಗೆ, ತನ್ನ ಇಷ್ಟದ ವಿಷಯವಾದ ಜೀವ ಶಾಸ್ತ್ರವನ್ನು ಆನ್‌ಲೈನ್‌ನಲ್ಲಿ ಪಾಠಹೇಳುವಾಗ ಮಾತ್ರ ಇವೆಲ್ಲ ಆತಂಕಗಳೂ ಯಕ್ಷಿಣಿಯಂತೆ ಮಾಯವಾಗುವ ಸಂಗತಿ ಇವನ್ನೆಲ್ಲಾ ನಮಗೆ ತಿಳಿಸುವ ಹೊತ್ತಿಗೆ ಗಂಟೆ ಹನ್ನೆರಡಾಗಿತ್ತು. ಆಕೆಗೆ ವಿದಾಯ ಹೇಳಿ ಮನೆಗೆ ಹಿಂತಿರುಗಿದೆವು.



ಶರಲೇಖ, "ನಿನ್ನ ಡಯಾಗ್ನೋಸಿಸ್ ಏನು?" ಅಂತ ನನ್ನನ್ನು ಕೇಳಿದ.

"ಖಿನ್ನತೆಯ ಸ್ಪಷ್ಟ ಉದಾಹರಣೆ. ಮನೆಯಲ್ಲೇ ಕುಳಿತಿದ್ದರೆ ಇನ್ನೂ ಉಲ್ಬಣವಾಗುತ್ತೆ. ಸೋಷಿಯಲ್ ಸಂಪರ್ಕ ಅತಿ ಅಗತ್ಯ" ಅಂತ ನಾನು ಹೇಳಿದೆ.

ಶರಲೇಖ ನನ್ನ ಮಾತನ್ನು ಒಪ್ಪಿದ. "ಸಂತೋಷದ ವಿಷಯವೆಂದರೆ ಆಕೆಗೆ ತನ್ನ ಸಬ್ಜೆಕ್ಟ್ ಮೇಲೆ ಇನ್ನೂ ತುಂಬಾ ಉತ್ಸಾಹ ಇರೋಹಾಗೆ ಕಾಣುತ್ತೆ. ಅದನ್ನೇ ಬಳಸಿ ಏನಾದರೂ ಪರಿಹಾರ ಹುಡುಕೋಣ" ಅಂತ ಹೇಳಿದ.

ಇದಾಗಿ ಒಂದು ವಾರ ಆಗಿರಬಹುದು. ಶರಲೇಖ ನನ್ನನ್ನು ಕುರಿತು, "ಮಾಲಿನಿಯ ಸಾಮಾಜಿಕ ಸಂಪರ್ಕಕ್ಕೆ ಒಂದು ಅವಕಾಶ ಸಿಗೋಹಾಗಿದೆ. ......ಇನ್ಸ್ಟಿಟ್ಯೂಟಿನಲ್ಲಿ ಜೂಆಲಜಿ ಪ್ರೊಫೆಸರ್ ಡಾ. ವಿಕ್ರಮ್ ಉಪಾಧ್ಯಾಯ ಅಂತ ಇದ್ದಾರೆ. ಮಕರಧ್ವಜನಿಗೆ ಅವರು ತುಂಬಾ ಬೇಕಾದವರು. ಅವರು ಮಾಲಿನಿಗೆ ರೆಗ್ಯುಲರ್ ಆಗಿ ಪ್ರಾಜೆಕ್ಟ್ ಕೊಡುಕ್ಕೆ ಮತ್ತು ಗೈಡ್ ಮಾಡುಕ್ಕೆ ಒಪ್ಪಿದಾರೆ. ನೀನು ಸುನಯನಾಗೆ ಹೇಳಿ ಎಲ್ಲ ವ್ಯವಸ್ಥೆ ಮಾಡಬಹುದು" ಅಂತ ಹೇಳಿದ.

ಎಲ್ಲಾ ಸುಗಮವಾಗಿ ನಡೆಯಿತು. ಇಂಥ ಕೆಲಸಗಳಲ್ಲಿ ಸುನಯನಾ ತುಂಬಾ ಚಾಲಾಕು. ತಾಯೀನೂ ಒಪ್ಪಿಸಿ, ವಿಕ್ರಮ್ ಅವರನ್ನೂ ಸಂಪರ್ಕಿಸಿ ನಮ್ಮ ಸಲಹೇನ ಜಾರಿಗೆ ತಂದೇಬಿಟ್ಟಳು. ಇದೆಲ್ಲಾ ಆಗಿ ಸುಮಾರು ಮೂರು ತಿಂಗಳಾಗಿರಬಹುದು. ಒಂದು ಬೆಳಗ್ಗೆ ಸುನಯನಾ ನನಗೆ ಫೋನ್ ಮಾಡಿದಳು. ಅವಳ ದನಿಯಲ್ಲಿ ಸಂತಸ ತುಂಬಿತ್ತು.

"ಅಂಕಲ್, ನಾನು ನಿಮಗೆ ಮತ್ತು ಶರಲೇಖ ಅಂಕಲ್‌ಗೆ ಎಷ್ಟು ವಂದನೆ ಹೇಳಿದ್ರೂ ಸಾಲದು. ನಮ್ಮಮ್ಮ ಈಗ ಉತ್ಸಾಹದಿಂದ ತುಂಬಿ ತುಳಕ್ತಾ ಇದ್ದಾರೆ. ಯಾವಾಗ ನೋಡಿದ್ರೂ ವಿಕ್ರಮ್ ಅದು ಹೇಳಿದ್ದಾರೆ, ವಿಕ್ರಮ್ ಇದು ಹೇಳಿದ್ದಾರೆ ಅಂತ ಸಡಗರ ಸಂಭ್ರಮಗಳಿಂದ ಓಡಾಡ್ತಾನೇ ಇರ್ತಾರೆ. ಮೊನ್ನೆ, ತೂಕ ಜಾಸ್ತಿ ಆಗ್ತಾ ಇದೇ ಕಣೇ, ಡಯಟ್ ಮಾಡ್ಬೇಕು, ನೋಡ್ದೋರು ಏನನ್ಕೋತಾರೆ ಅಂತ ಹೇಳ್ತಾ ಇದ್ರು. ಒಟ್ನಲ್ಲಿ ನನ್ನ ಮಟ್ಟಿಗೆ ಇದೊಂದು ಮಿರಕಲ್. ಯಾವಾಗಲಾದ್ರೂ ಒಮ್ಮೆ ಬಂದು ನಿಮಗೆ ಪರ್ಸನಲ್ಲಾಗಿ ಥ್ಯಾಂಕ್ಸ್ ಹೇಳ್ತೀನಿ" ಅಂತ ಹೇಳಿದಳು.

ನನಗಂತೂ ಒಂದು ದೊಡ್ಡ ಭಾರ ತಲೆಯ ಮೇಲಿಂದ ಇಳಿದಂತಾಯಿತು. ಶರಲೇಖನಿಗೆ ಅಂತಹದೇನೂ ಸಂತೋಷವಾದಂತೆ ಕಾಣಿಸಲಿಲ್ಲ.

ನಿನ್ನೆ ನನಗೊಂದು ಕಾಲ್ ಬಂತು. ಯುವತಿಯೊಬ್ಬಳ ದನಿ.

"ಡಾ. ವತ್ಸನಾ ಅವರಾ?"

"ಹೌದಮ್ಮಾ, ಯಾರು ನೀವು ಏನು ಬೇಕಾಗಿತ್ತು?"

"ನನ್ನ ಹೆಸರು ಅಕ್ಷತಾ ಉಪಾಧ್ಯಾಯ ಅಂತ. ನಮ್ಮಮ್ಮನ ಬಗ್ಗೆ ನಿಮ್ಮನ್ನು ಕನ್‌ಸಲ್ಟ್ ಮಾಡಬೇಕಾಗಿತ್ತು. ಕಳೆದ ಹಲವು ವಾರಗಳಿಂದ ಅವರಿಗೆ ಆತಂಕ ಕಳವಳ. ಯಾರೋ ನಿಮ್ಮ ಹೆಸರು ಸಜೆಸ್ಟ್ ಮಾಡಿದ್ರು. ನಿಮ್ಮನ್ನ ನೋಡುಕ್ಕೆ ಯಾವಾಗ ಬರ್ಲಿ?" ■

---

ಏನಯ್ಯಾ ಮದುವೆ ಗಿದುವೆ ಮಾಡಿಕೊಂಡಿದ್ದೀಯೋ, ಇಲ್ಲಾ ನೀನೇ ಅಡುಗೆ, ಮುಸುರೆ, ಕಸ ಹೊಡಿಯೋದು, ಬಟ್ಟೆ ಒಗೆಯೋದು ಇನ್ನೂ ಮಾಡ್ಕೊಂಡಿದ್ದೀಯೋ

ಹೌದು

ಹೌದು ಅಂದರೆ ಏನಯ್ಯಾ

ಮದುವೆನೂ ಮಾಡ್ಕೊಂಡಿದೀನಿ; ಅಡುಗೆ, ಕಸ, ಮುಸುರೆ, ಬಟ್ಟೆ ಕೆಲಸಾನೂ ಮುಂದುವರಿಸಿದೀನಿ.

**(ಪ್ರಭಣ್ಣ)**



# ಸಂಪಾದಕರಿಗೊಂದು ಪತ್ರ

ಮಾನ್ಯರೇ, ನಿಮ್ಮ ಫೆಬ್ರುವರಿ ಸಂಚಿಕೆ ನಿಜಕ್ಕೂ ಚೇತೋಹಾರಿಯಾಗಿದ್ದೇ ಅಲ್ಲದೆ, ನನ್ನ ಬಾಲ್ಯದ ನೆನಪುಗಳು ಮರುಕಳಿಸಿದವು. ಐವತ್ತನಾಲ್ಕು ಐವತ್ತೈದರ ಕಾಲಘಟ್ಟ. ಆಗತಾನೇ ನಾವು ಮೈಸೂರಿನಿಂದ ಬೆಂಗಳೂರಿಗೆ ಬಂದಿದ್ದೆವು. ಕಾದಂಬರಿ ಸಾಮ್ರಾಟ್ ಅ.ನ.ಕೃ. ಅವರ ಮನೆ ಹತ್ತಿರವೇ ನಮ್ಮ ಮನೆ. ಹತ್ತಿರದಲ್ಲೇ ಮಿನರ್ವ ಟಾಕೀಸು. ಮಾವಳ್ಳಿಗೆ ಅದೊಂದು ಲ್ಯಾಂಡ್‌ಮಾರ್ಕು. ಈ ಮಿನರ್ವ ಬಗ್ಗೆ ಹೇಳಬೇಕೆಂದರೆ ಸ್ವಯಂ ಸಂಗೀತಗಾರರಾಗಿದ್ದ ಸುಂದರ ನಟ ಹಾಗೂ ಗಾಯಕ ಹೊನ್ನಪ್ಪ ಭಾಗವತರ್ ನಿರ್ಮಿಸಿ ನಿರ್ದೇಶಿಸಿದ್ದ ಮಹಾಕವಿ ಕಾಳಿದಾಸ ಚಿತ್ರ ಇಲ್ಲೇ ಬಿಡುಗಡೆಯಾದದ್ದು. ನಮ್ಮ ಹೆಮ್ಮೆಯ ಪಂಚಭಾಷಾ ತಾರೆ ಬಿ.ಸರೋಜಾದೇವಿಯವರನ್ನು ಇವರೇ ಪರಿಚಯಿಸಿದ್ದು. ನಮ್ಮ ಕೋಲಾಟದ ಹಾಡು ಚೆಲುವಯ್ಯ ಚೆಲುವೋ ಹಾಡನ್ನ ಈ ಚಿತ್ರದಲ್ಲೇ ನಾನು ಮೊದಲು ಕೇಳಿದ್ದು. ಮಿನರ್ವದಿಂದ ಆರಂಭವಾಗುತ್ತೆ ನೋಡಿ ಕ್ಲಸ್ಟರ್ ಆಫ್ ಥಿಯೇಟರ್ಸ್. ಸ್ವಲ್ಪ ಮುಂದೆ ಹೋದರೆ ಭಾರತ್ ಟಾಕೀಸ್. ಇಲ್ಲಿ ಬರೀ ಕನ್ನಡ ಸಿನಿಮಾನೇ ಹಾಕ್ತಾ ಇದ್ರು. ದೊಡ್ಡವರ ಭೂಕೈಲಾಸ ಚಿತ್ರಾನ ಇಲ್ಲೇ ನೋಡಿದ್ದು. ಅದರ ಇದಿರು ಲೈನ್‌ನಲ್ಲಿ ನಾಗಪ್ಪನವರ ಶಿವಾಜಿ ಟಾಕೀಸ್ ಮೇಲೆ ಕುದುರೆ ಏರಿ ಕುಳಿತಿದ್ದ ಶಿವಾಜಿ ಪ್ರತಿಮೆ. ಅಲ್ಲಿಂದ ನೂರಿನ್ನೂರು ಅಡಿ ಮುಂದೆ ಹೋಗಿ ಮಾರ್ಕೆಟ್ ಕಡೆ ತಿರುಗಿದರೆ ನ್ಯೂ ಸಿಟಿ. ಇಲ್ಲಿ ಬರೀ ತಮಿಳು ತೆಲುಗು ಚಿತ್ರಗಳದ್ದೇ ರಾಜ್ಯಭಾರ. ಹಾಗೇ ಮುಂದುವರಿದರೆ ರೀಗಲ್ ಸಿನಿಮಾ. ವೈಜಯಂತಿಮಾಲ, ಪ್ರದೀಪ್ ಕುಮಾರ್ ನಟಿಸಿದ್ದ ನಾಗಿನ್ ಚಿತ್ರಾನ ನಾನು ನೋಡಿದ್ದು ಇಲ್ಲೇ. ಆ ದಿನಗಳಲ್ಲಿ ಈ ಚಿತ್ರದ 'ಮನಡೋಲೆ ಮೇರ ತನು ಡೋಲೆ' ಹಾಡನ್ನ ಗುನುಗುಟ್ಟದ ಪಡ್ಡೆ ಹುಡುಗರೇ ಇರಲಿಲ್ಲಾ ಅನ್ನಿ. ಮಾರ್ಕೆಟ್ ತನಕಾ ಹೋಗಿ ಎಡಕ್ಕೆ ತಿರುಗಿದರೆ ಹಳೆಯ ಕಾಲದ ಛತ್ರವನ್ನು ಹೋಲುವ ಪ್ಯಾರಮೌಂಟ್ ಥಿಯೇಟರು. ಬಹು ಹಿಂದೆ ಇದನ್ನ ದೊಡ್ಡಣ್ಣ ಹಾಲ್ ಅಂತ ಕರೀತಾ ಇದ್ರು.

ಮೆಜೆಸ್ಟಿಕ್ ಕಡೆ ಹೋದರೆ ಸ್ಟೇಟ್ಸ್. ಇಲ್ಲೇ ನಾಗೇಶ್ವರರಾವ್ ನಟಿಸಿದ್ದ ವಿಪ್ರನಾರಾಯಣ ನೋಡಿದ್ದು. ಮುಂದೆ ಈಗಿನ ಆಭರಣದ ಅಂಗಡಿಯ ಹಿಂದೆ ಇರುವ ಸಾಗರ್ ಥಿಯೇಟರಿಗೂ ಮುಂಚೆ ಇದ್ದ ಸಾಗರ್. ಎಡಕ್ಕೆ ತಿರುಗಿದರೆ ಕೆಂಪೇಗೌಡ (ಕಲ್ ಬಿಲ್ಡಿಂಗ್). ಅದರ ಹಿಂದೆ ಸುಬ್ಬಯ್ಯ ನಾಯ್ಡು ಅವರ ನಾಟಕದ ವೇದಿಕೆ. (ನನ್ನ ಅದೃಷ್ಟ. ಇಲ್ಲೂ ನಾನು ನಾಟಕದಲ್ಲಿ ಪಾತ್ರ ವಹಿಸಿದ್ದುಂಟು.) ಮತ್ತೆ ಕಲ್ಪನ, ಅಲಂಕಾರ್ ಯಾವುದೂ ಆಗ ಇರಲಿಲ್ಲ. ಅದರ ಮುಂದಿನ ಮೂಲೆಯಲ್ಲಿ ಗೀತಾ. ತಲೆ ಮೇಲೆ ಫ್ಯಾನು ಯಾವಾಗ ಬೀಳುತ್ತೋ ಅಂತ ಹೆದರಿಕೆ ಆಗ್ತಾ ಇತ್ತು ಆ ಥಿಯೇಟರಿನಲ್ಲಿ. ಕೊನೆಯಲ್ಲಿ ಮೆಜೆಸ್ಟಿಕ್. ಬಹುಶಃ 'ಪಾಂಡವ ವನವಾಸಮು' ಇಲ್ಲೇ ನೋಡಿದ್ದೆ ಅಂತ ಕಾಣುತ್ತೆ. ಆ ಕಡೆ ಮೂಲೇಲಿ ಗೋಡೌನ್ ಹೋಲುವ ಹಿಮಾಲಯ. ಎಂ.ಜಿ. ರಸ್ತೆಗೆ ಬಂದರೆ ಎಂಪೈರ್, ಗ್ಲೋಬ್ (ಇದು ನಂತರ ಲಿಬರ್ಟಿ ಆಯ್ತು.) ಇಲ್ಲೆಲ್ಲಾ ಇಂಗ್ಲೀಷ್ ಚಿತ್ರಗಳೇ. (ಕ್ಲಿಯೋಪಾತ್ರಾ ಇಲ್ಲೇ ನೋಡಿದ್ದು) ಬ್ರಿಗೇಡ್ ರಸ್ತೆಗೆ ಇಳಿದರೆ, ರಸ್ತೆ ಕೊನೆಯಲ್ಲಿ ಮಲೆಯಾಳಂ ಚಿತ್ರಗಳಿಗೇ ಮೀಸಲಾಗಿದ್ದ ಆಪೆರಾ.

ಫೆಬ್ರುವರಿ ತಿಂಗಳ ಸಂಚಿಕೆ ಖುಲ್ಲಂ ಖುಲ್ಲಾ ಚಿತ್ರರಂಗದ್ದು. ಆ ಕಾಲದ ನಾಯಕ ನಾಯಕಿಯರೊಂದಿಗೆ ನಟಿಸಿದ ನನಗೆ ಈ ಸಂಚಿಕೆ ಓದಿ ಹಳೆಯ ನೆನಪುಗಳ ಬುಗ್ಗೆಯೇ ಚಿಮ್ಮಿ ಹರಿಯಿತು. ಇಂತಹ ವಿಶಿಷ್ಟ ಸಂಚಿಕೆಯೊಂದನ್ನು ಹೊರ ತಂದಿದ್ದಕ್ಕಾಗಿ ನಿಮಗೆ ನನ್ನ ನಮನಗಳು.



– **ಕೆ. ಎಸ್ ಶ್ರೀಶೈಲನ್,** *ಚಲನಚಿತ್ರ ನಟ.* ■

ಕೊರವಂಜಿಯಿಂದ

# ಶೀನಣ್ಣನೂ ವಿಧಿಯೂ (ಸೂರಪ್ಪನಿಗೆ ಸೈಕಲ್ ಕಲಿಸಿದ್ದು)

**– ಅ.ರಾ.ಸೇ**

ಶೀನಣ್ಣ 1930ರಲ್ಲಿ ಸೈಕಲ್ ತೆಗೆದುಕೊಂಡ. ಅದೊಂದು 1918 ಮಾಡಲ್ ಫೋನಿಕ್ಸ್; ಸೈಜು 26 ಇಂಚು. ಅದಕ್ಕಿದ್ದುದು ಸ್ಪ್ರಿಂಗ್ ಸೀಟು. ಶೀನಣ್ಣ ಕೊಂಡಾಗ ಆ ವಾಹನದ ಯೌವನ ಆಗಲೇ ಮುಗಿದುಹೋಗಿತ್ತು. ಶೀನಣ್ಣ ಅದಕ್ಕೆ ಎರಡು ಲೋಕಲ್ ಮೇಡ್ ಕಾಟರ್ ಪಿನ್ನುಗಳನ್ನೂ, ಸೀಟಿಗೆ ಅವರಪ್ಪನ ನೀರಾ ಪಂಚೆಯನ್ನೂ ಕೂಡಿಸಿದ ನಂತರವೇ ಅದು ಯಾನಕ್ಕೆ ಸಿದ್ಧವಾದದ್ದು. ಶೀನಣ್ಣ ಆಗ ನಮ್ಮೂರಿನಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದ್ದ. ಅದರ ಕೆಲಸಗಳಿಗೆ ಅನುಕೂಲವಾಗಲೆಂದೇ ಅವನು ಸೈಕಲ್ ಕೊಂಡ. ಬೆಲೆ 15 ರೂ. ಮಾತ್ರ.

ಅದನ್ನು ಅವನು ಮೊದಲಬಾರಿ ಊರಿನಲ್ಲಿ ಸವಾರಿಮಾಡಿದ ಸಮಾರಂಭ ಅಭೂತಪೂರ್ವವಾದುದು. ಓಬಳಿಗ ಕುಂಟನಾದದ್ದೂ, ಬುಡ್ಡು ತಲೆ ಒಡೆದು ಕೊಂಡದ್ದೂ ಆಗಲೇ. ಆಗ ಸತ್ತ ಮೂರು ಕೋಳಿಪಿಳ್ಳೆಗಳನ್ನು ಜನ ಆಗಲೇ ಮರೆತಿದ್ದಾರೆ. ಆದರೂ ಅದು ಯಶಸ್ವೀಯಾನ. ನಂತರ ಶೀನಣ್ಣ ಸೈಕಲ್ ಸವಾರಿಯನ್ನು ಶಂಕರಣ್ಣನಿಗೆ ಕಲಿಸಿದ. ಆ ದಿನ ನಮ್ಮ ಅಪ್ಪ ಮೃತ್ಯುಂಜಯ ಜಪ ಮಾಡಿದ– ಶಾಂತ್ಯರ್ಥವಾಗಿ. ಶೀನಣ್ಣ ಊರ ಪುರೋಹಿತ. ಶಂಕರಣ್ಣ ನನ್ನ ಖಾಸಾ ಅಣ್ಣ. ಜೋಯ್ಸರ ಶೀನ ತಲೆ ಒಡೆದುಕೊಂಡರೆ ಅಪ್ಪ ಅಬ್ಜೆಕ್ಟ್ ಮಾಡಲು ಹೋಗುವಂತಿರಲಿಲ್ಲ. ಅಪ್ಪ ಆಗ ನಕ್ಕಿದ್ದ. ಆದರೆ ಅದು ಅವನ ಮಗನಿಗೇ ಬರುವುದೆಂದು ಅವ ಎಣಿಸಿರಲಿಲ್ಲ.

ಆಗ ಸೂರಪ್ಪ ಬೆನ್ನೂರಿನಲ್ಲಿ ಮೇಷ್ಟರಾಗಿದ್ದ. ಬೆನ್ನೂರು ನಮ್ಮೂರಿಗೆ ಐದು ಮೈಲಿ ದೂರದಲ್ಲಿದೆ. ಅಲ್ಲಿಗೆ ಓಡಾಡುವುದು ಅವನಿಗೆ ಬಲು ಕಷ್ಟವಾಗಿತ್ತು. ಹೊತ್ತಿಗೆ ಹೋಗುವುದು ಕನಸಿನ ಬುತ್ತಿ. ಬೆನ್ನೂರು ರೋಡ್ ಸೈಡ್ ಹಳ್ಳಿ. ಇನ್ಸ್‌ಪೆಕ್ಷನ್, ಸರ್‌ಪ್ರೈಸ್ ವಿಸಿಟ್ ಯಾವಾಗ ಎಂದರೆ ಆಗ ಘಟಿಸಬಹುದು. ಆದುದರಿಂದ ಸೂರಪ್ಪ ಸೈಕಲ್ ಕಲಿಯಲು ನಿರ್ಧರಿಸಿದ. ಶೀನಣ್ಣ ಸೈಕಲ್ ಕಲಿಸುವೆನೆಂದು ಆಶ್ವಾಸನೆ ಇತ್ತ.

ಶೀನಣ್ಣ ಸೈಕಲ್ ತಂದದ್ದು ಉದ್ರೆ ಮೇಲೆ. ಅವನಪ್ಪ, ವೆಂಕಪ್ಪ ದುಡ್ಡು ಕೊಡಲು ನಿರಾಕರಿಸಿದ. ಅಲ್ಲದೆ ಯಾರೂ ಇಲ್ಲದಾಗ ವೆಂಕಪ್ಪ ಸೈಕಲ್ ಹತ್ತಲು ಯತ್ನಿಸಿ ಕಡಿದುಕೊಂಡು ಬಿದ್ದ. ಆ ಸಮಯದಲ್ಲೇ ತಳವಾರ ತಿಪ್ಪಿ, ಗೊಲ್ಲರ ನಾಗಿ ಅಲ್ಲಿಗೆ ಬರಬೇಕೇ? ವೆಂಕಪ್ಪನಿಗೆ ಆ ಸೈಕಲ್ಲನ್ನು ಮಾರಲು ಶೀನಣ್ಣ ನಿರ್ಧರಿಸಿದ. ಅದನ್ನು ಕೊಂಡುಕೊಳ್ಳಲು ಸೂರಪ್ಪ ಒಪ್ಪಿದ್ದರಿಂದಲೇ ಶೀನಣ್ಣ ಸೂರಪ್ಪನಿಗೆ ಆಶ್ವಾಸನೆ ಕೊಟ್ಟದ್ದು.



ಆದರೆ ಸೂರಪ್ಪನ ಎತ್ತರ ಕೇವಲ ನಾಲ್ಕೂವರೆ ಅಡಿ. ಅವನು ಸೈಕಲ್ ಹತ್ತುವುದು ಹೇಗೆ? ಶೀನಣ್ಣ ಇದಕ್ಕೊಂದು ಪರಿಹಾರ ಕಂಡುಹಿಡಿದ. ಸೂರಪ್ಪ ನಮ್ಮ ಮನೆಯ ಮುಂದಿನ ಬೇವಿನ ಕಟ್ಟೆಯಿಂದ ಸೈಕಲ್ಲನ್ನೇರಲು ಆರಂಭಿಸಿದ.

ಅವನ ಬೆಂಗಾವಲಿಗೆ ಶೀನಣ್ಣ, ಶಂಕರಣ್ಣ ಇಬ್ಬರೂ. ಮಕ್ಕಳು ಯಾರೂ ಆ ದಾರಿಯಲ್ಲಿ ಸುಳಿಯಕೂಡದೆಂದು ಕಟ್ಟಪ್ಪಣೆ ಆಯ್ತು.

ಆದರೆ ವಿಧಿಯ ನಿರ್ಧಾರ ಇದಕ್ಕೆ ವಿರುದ್ಧವಾಗಿತ್ತು. 'ಸೂರಪ್ಪ ಸೈಕಲ್ ಕಲಿಯುವಂತೆಯೇ ಇಲ್ಲ' ಎಂಬುದೇ ವಿಧಿ ಸಂಕಲ್ಪ. ಶೀನಣ್ಣ ಇದನ್ನೆಲ್ಲಾ ಮೈಂಟ್ ಮಾಡುವವನಲ್ಲ. ಒಂದೂವರೆ ವಾರದೊಳಗಾಗಿ ಸೂರಪ್ಪ ತಾನೇ ಸೈಕಲನ್ನೇರುವಂತಾದ. ಸೂರಪ್ಪ ತಾನೊಬ್ಬನೇ ಸೈಕಲ್ ಹತ್ತಿ ಮೊದಲ ಬಾರಿ ಸವಾರಿ ಮಾಡಿದಾಗ ಆ ಶಕಟ ನೇರವಾಗಿ ದೊಡ್ಡ ಕೆರೆಯಂಗಳಕ್ಕೆ ಹೋಯ್ತು. ಅಲ್ಲಿದ್ದವರೆಲ್ಲಾ ದಿಕ್ಕಾ ಪಾಲಾಗಿ ಓಡಿದರು. 'ಸೂರಪ್ಪಾ ಟರ್ನ್‌ಮಾಡಿಕೋ' ಎಂದರು ಹಿಂದೆ ದೂರದಲ್ಲಿ ಓಡಿಬರುತ್ತಿದ್ದ ಶೀನಣ್ಣ, ಶಂಕರಣ್ಣ. 'ಸ್ಟಾಪ್ ಸ್ಟಾಪ್' ಎಂದ ಶಂಕರಣ್ಣ. ಸೂರಪ್ಪ ಸೀದಾ ನೀರಿಗೆ ನುಗ್ಗಿದ.

ಮರುದಿನ ಐಮಂಗಲ ಖಾದಿ ಕೇಂದ್ರದಲ್ಲಿ ಖಾದೀ ಟ್ರೈನಿಂಗ್ ಪಡೆಯಲು ಹೋಗಿಬಿಟ್ಟರು ಶೀನಣ್ಣ, ಶಂಕರಣ್ಣ. ಸೂರಪ್ಪ ಸೈಕಲ್ ಕೊಂಡುಕೊಂಡ.

ಅಭಿಮನ್ಯು, ಚಕ್ರವ್ಯೂಹವನ್ನು ಹೋಗುವುದನ್ನು ಮಾತ್ರ ಕಲಿತನಂತೆ. ಹಿಂತಿರುಗಿ ಬರುವುದನ್ನರಿತಿರಲಿಲ್ಲವಂತೆ. ಸೂರಪ್ಪನೂ ಹಾಗೇ; ಬೇವಿನಕಟ್ಟೆಯಿಂದ ಸೈಕಲ್ ಹತ್ತಿ ಸವಾರಿ ಮಾಡುವುದನ್ನು ಮಾತ್ರ ಕಲಿತ. ಇಳಿಯುವುದನ್ನಾಗಲೀ, ಲೆಫ್ಟ್, ರೈಟ್, ಎಬೌಟ್ ಟರ್ನುಗಳನ್ನಾಗಲೀ ಕಲಿಯಲೇ ಇಲ್ಲ. ಸೂರಪ್ಪ ಶೀನಣ್ಣನಿಗೆ ಕಾಗದ ಬರೆದ.

***ಶೀನನಿಗೆ ಆ॥ಗಳು.***

ಅಲ್ಲಲೇ ಶೀನ, ನಡುನೀರಲ್ಲಿ ಕೈಬಿಟ್ಟುಹೋದೆ. ಸೈಕಲ್ ಹತ್ತುವುದನ್ನು ಮಾತ್ರ ಕಲಿಸಿಹೋದೆ. ಇಳಿಯುವುದು ಬರುವುದೇ ಇಲ್ಲ. ಎಲ್ಲರೂ ನನ್ನನ್ನು ನೋಡಿದಾಗಲೆಲ್ಲ, "ಯಾಕೆ ಸೂರಪ್ಪ, ಸೈಕಲ್ ಇದ್ದೂ ಇದ್ದೂ ನಡೆದುಹೋಗುತ್ತೀ" ಎಂದು ಕೇಳುತ್ತಿದ್ದಾರೆ. ಜರೂರು ಕಾಗದ ಬರೆ. ಸೈಕಲ್ ಇಳಿಯುವುದು ಹೇಗೆ ಎಂಬುದನ್ನು ವಿವರವಾಗಿ ತಿಳಿಸು.

**ಇ॥ ಆಗಳು,**
**ಸೂರಪ್ಪ.**

ಉತ್ತರ ಹೀಗೆಂದು ಬಂತು.

***ಸೂರಪ್ಪನವರ ಪಾದಪದ್ಮಂಗಳಲ್ಲಿ ಶಿರಸಾಷ್ಟಾಂಗ ನ॥ಗಳು.***

ತರುವಾಯ ಉ.ಕು.ಸಾಂ. ಅಲ್ಲ ಸೂರಪ್ಪಾ ಅದು ಗೊತ್ತಿಲ್ವೇ? ಲೆಫ್ಟ್ ಬ್ರೇಕು ಮೊದಲು ಹಾಕು. ರೈಟ್ ಹಾಕಬೇಡ. ಆಮೇಲೆ ಲೆಫ್ಟ್ ಪೆಡಲಿನ ಮೇಲಿನ ಲೆಫ್ಟ್‌ಕಾಲನ್ನು ಹಾಗೇ ಇಟ್ಟು, ರೈಟನ್ನು ಕ್ಯಾರಿಯರ್ ಮೇಲೆ ಅಥವಾ ಸೀಟನ ಮುಂದೆ ಎತ್ತಿ ಲೆಫ್ಟಿಗೆ ತಂದು ನೆಲಕ್ಕಿಡು. ಇಲ್ಲದಿದ್ದರೆ ಲೆಫ್ಟಿಗೆ ವಾಲಿ ಲೆಫ್ಟ್ ಲೆಗ್ಗನ್ನು ನೆಲದ ಮೇಲೆ ಇಟ್ಟು ಗಕ್ಕನೆ ಬ್ರೇಕ್‌ಹಾಕಿ ರೈಟನ್ನು ಆಮೇಲೆ ಈಚೆಗೆ ತಾ. ದೇವರು ಶುಭವನ್ನು ಮಾಡಲಿ.



**ಇ॥ ನ॥ಗಳು,**
**ಶೀನ.**

ಸೂರಪ್ಪ ಕನ್ನಡ ಲೋಯರ್ ಸೆಕೆಂಡರಿ ಮಾತ್ರ ಪಾಸಿದವನು. ಅವನಿಗೆ ಶೀನಣ್ಣನ ಕಾಗದ ಗೋಡೆಯಾಯ್ತು. ನಂತರ ಅವನು ತನ್ನದೇ ಆದೊಂದು ನವೀನ ವಿಧಾನ ಕಂಡುಹಿಡಿದ. ಬೆನ್ನೂರಿನ ಶಾಲೆ ಹುಡುಗರಲ್ಲಿ ನಾಲ್ಕುಜನ ಬಲವಾದ ಹುಡುಗರು ಊರಿನಿಂದ ಈಚೆ ರಸ್ತೆ ಪಕ್ಕದಲ್ಲಿ ಬಂದು ನಿಲ್ಲುವಂತೆ ಏರ್ಪಾಟು ಮಾಡಿದ. ಸೂರಪ್ಪ ಸೈಕಲ್ ಹತ್ತಿ ಬರುತ್ತಿದ್ದ– ಬೆಳಿಗ್ಗೆ ಆರೂಮುಕ್ಕಾಲಿಗೆ. ಸೂರಪ್ಪನ ಸೈಕಲ್ ಹಿಡಿದು, ತರುಬಿ ನಿಲ್ಲಿಸುತ್ತಿದ್ದರು– ಹುಡುಗರು. ಅಲ್ಲಿಂದ ವಾಪಸ್ ನಮ್ಮೂರಿಗೆ ಬಂದಾಗ, ನಮ್ಮೂರಿನ ಹೊರಗೆ ಸೈಕಲ್ ತರುಬುವ ಕೆಲಸ ಬೊಮ್ಮನಿಗೆ ವಹಿಸಿಕೊಡಲ್ಪಟ್ಟಿತ್ತು.

ಹೀಗಿರುವಾಗ ಒಂದು ದಿನ D.E.O. ಸಾಹೇಬರು ಬೆನ್ನೂರು ಶಾಲೆಗೆ ಸರ್‌ಪ್ರೈಸ್ ವಿಸಿಟ್ ಕೊಟ್ಟರು. ಅವರನ್ನು ನೋಡುವ ಕುತೂಹಲದಲ್ಲಿ ಹುಡುಗರು ಆ ದಿನ ರಸ್ತೆಗೆ ಬರಲೇ ಇಲ್ಲ.

ಆ ದಿನ ಸೂರಪ್ಪ ಎಂದಿನಂತೆ ಆರೂಮುಕ್ಕಾಲಿಗೆ ಬೆನ್ನೂರಿಗೆ ಬಂದ. ಹುಡುಗರು ಕಾಣಿಸಲಿಲ್ಲ. ಜಂಘಾಬಲ ಉಡುಗಿತು. ಕೂಗಿದ ಯಾರೂ ಬರಲಿಲ್ಲ. 'ಬರ್ರೋ ಹಿಡ್ಕಳ್ರೋ' ಎಂದು ಅರಚಿದ. ಕಾಲುಗಳು ಯಾಂತ್ರಿಕವಾಗಿ ತುಳಿಯುತ್ತಲೇ ಇದ್ದವು. ನೋಡು ನೋಡುತ್ತಿದ್ದಂತೆ ಸೈಕಲ್ ಮುಂದುವರಿಯಿತು. ಸ್ವಲ್ಪ ಹೊತ್ತಿನಲ್ಲೇ ಸೂರಪ್ಪ ಕಾತರಾಳಿನ ದಾರಿಯನ್ನು ಉತ್ತರಿಸುತ್ತಿದ್ದ. ಕೆರೆ ಹಿಂಗಡೆಯ ದಿಗಂತದಲ್ಲಿ ಮರೆಯಾಯ್ತು. ಐಯನಹಳ್ಳಿ ಬಂತು. ರಸ್ತೆಯ ಪಕ್ಕದಲ್ಲಿ ಜನ ಓಡಾಡುತ್ತಿದ್ದರು. ನಾಲ್ಕಾರು ನಾಯಿಗಳು ಬೊಗಳುತ್ತಾ ಸೂರಪ್ಪನನ್ನು ಹಿಂಬಾಲಿಸಿದವು. 'ಹಿಡ್ಕೊಳ್ರೋ, ಹಿಡ್ಕೊಳ್ರೋ' ಎಂದು ಅವನು ಗೋಗರೆದ. ಜನ ನಾಯಿಗಳನ್ನು ಹಿಡಿದರೇ ಹೊರತು ಸೈಕಲ್ ಹಿಡಿಯಲಿಲ್ಲ. ಐಯನಹಳ್ಳಿ ಹಿಂದಾಯ್ತು. ಬಿಸಿಲು ಪ್ರಖರವಾಯ್ತು. ಸೂರಪ್ಪನ ಕಾಲುಗಳು ನೋಯುತ್ತಿದ್ದವು. ನಿಂತೀತೇನೋ ಎಂಬಾಸೆಯಿಂದ ಹ್ಯಾಂಡಲನ್ನು ಹಿಂದಕ್ಕೆ ಜಗ್ಗಿದ. ಲೆಫ್ಟನ್ನು ಒರಗಿಸಿ ರೈಟನ್ನು ಹಿಂದುಗಡೆಯಿಂದ ಲೆಫ್ಟಿಗೆ ತರುವುದೇ ಅವನ ಮುಂದಿದ್ದ ಸಮಸ್ಯೆ! ಬ್ರೇಕ್ ಯಾವುದು?

ಬ್ರೇಕನ್ನು ಅದು ಏನೆಂದು ತಿಳಿಯದೆ ಒತ್ತಿದ. ಆದರೆ ಬ್ರೇಕ್ ರಬ್ಬರ್ ಇರಲೇ ಇಲ್ಲ. ಸೂರಪ್ಪ ಶೀನನನ್ನು ಶಪಿಸಿದ. ವಿಧಿಯನ್ನು ಬೈದ. ಹೊಟ್ಟೆ ಸೂರಪ್ಪನನ್ನು ಶಪಿಸುತ್ತಿತ್ತು.

ಕೊನೆಗೆ ಚಿತ್ರದುರ್ಗ ಕಾಣಿಸಿತು. ಸೂರಪ್ಪ ತುಳಿಯುತ್ತಿದ್ದ. 'ಹಿಡ್ಕೊಳ್ರೋ ಸೈಕಲ್ನ' ಎಂದು ಕೂಗುತ್ತಲೂ ಇದ್ದ. ದುರ್ಗದ ನಾಯಿಗಳು ಸೂರಪ್ಪನ ಬೆನ್ನು ಹತ್ತಿದುವು. ಜೊತೆಗೆ ಹುಡುಗರೂ.

The dogs did bark, the children screamed. ದುರ್ಗದಲ್ಲೂ ಸೂರಪ್ಪನನ್ನು ಯಾರೂ ನಿಲ್ಲಿಸಲಿಲ್ಲ. ಸೈಕಲ್ ಹೋಯಿತು. ಹೋಯಿತು. ಮುಂದೆ ಬಸ್ಸುಗಳು ಬಂದಾಗ ಸೂರಪ್ಪ 'ಅಯಯ್ಯೋ ಹೋದ್ನೆಪ್ಪ' ಎಂದು ಅರಚುತ್ತಿದ್ದ. ಬಸ್ಸುಗಳು ದಾರಿಬಿಟ್ಟು ಹೋದವು. ಹನ್ನೆರಡಾಗುತ್ತಾ ಬಂತು.



ಸೂರಪ್ಪ ತುಳಿಯುತ್ತಲೇ ಇದ್ದ. ಅವನಿಗೆ ಕಾಲ ದೇಶ ವರ್ತಮಾನಗಳೆಲ್ಲಾ ಮರೆತುಹೋದವು. ಅವನು ಹತಾಶನಾದ.

ಕೊನೆಗೆ ಯಾವುದೋ ಊರು ಬಂತು. ಸೂರಪ್ಪ ಮತ್ತೆ ಹಿಡ್ಕೊಳ್ರೊ ಭಜನೆ ಆರಂಭಿಸಿದ. ಅಷ್ಟರಲ್ಲಿ ದಾರಿಯ ಮಧ್ಯೆ ಎಮ್ಮೆ ಬಂತು. ಸೈಕಲ್ಲು ಅದಕ್ಕೆ ಡಿಕ್ಕಿ ಹೊಡೆದು ಬಲಕ್ಕೆ ತಿರುಗಿತು. ಈ ಮಧ್ಯೆ ಕ್ಲಚ್ ಫೈಲಾಯಿತು. ಸೂರಪ್ಪ ಕೊನೆಗಾಲ ಬಂತೆಂದು ಕಣ್ಣುಚ್ಚಿ ರಾಮಸ್ಮರಣೆಮಾಡಿದ.

ಎಚ್ಚರವಾದಾಗ, ಶೀನಣ್ಣ ಶಂಕರಣ್ಣ ಅವನನ್ನು ಉಪಚರಿಸುತ್ತಿದ್ದರು. ಅನಾಹುತ ನಡೆದುದು ಐಮಂಗಲದಲ್ಲೇ. ನಮ್ಮೂರಿಗೆ ಅದು 35 ಮೈಲು ದೂರ. ಆ ಸಂಜೆ ಸೂರಪ್ಪನಿಗೆ ಸೈಕಲ್ ಇಳಿಯುವುದನ್ನು ಹೇಳಿಕೊಡಲು ಶೀನಣ್ಣ ತೊಡಗಿದ. ಸೂರಪ್ಪ ಇನ್ನು ಸೈಕಲ್ಲನ್ನು ಕಣ್ಣೆತ್ತಿ ನೋಡುವುದೂ ಇಲ್ಲ ಎಂದ. ಅದನ್ನು ಶೀನಣ್ಣನಿಗೆ ದಾನಮಾಡಿಬಿಟ್ಟ. ಎರಡು ದಿನದ ನಂತರ ಊರಿಗೆ ಬಂದ. ಇದಾದ ಒಂದು ವಾರಕ್ಕೆ ಶೀನಣ್ಣನಿಗೆ ಒಂದು ಕಾಗದ ಬಂತು.

***ಎಲೋ ನರಕುರಿ,***

ಇದನ್ನು ಬರೆಯುವ ನಾನು ವಿಧಿ. ನಿನ್ನ ಮೇಲೆ ನನ್ನದೊಂದು ಮೀಶೆ. ಸೂರಪ್ಪನಿಗೆ ಸೈಕಲ್ ಹೇಳಿಕೊಡುವೆಯೋ? ಮೂರ್ಖ! ನಿನ್ನಂತಹ ಬಡಗನಾಡು ಬಕರನಿಗೆ ನಾನು ಜಗ್ಗುವುದಿಲ್ಲ.

**ಇಂತು ನಿಮ್ಮಪ್ಪ,**

**ವಿಧಿ.**

■



# ಗರಿಕೆ ಮದ್ದು

**- ಎಂ.ಎಸ್.ನರಸಿಂಹಮೂರ್ತಿ**

ವಿಶ್ವನ ಮನೆಗೆ ಬಂದು ಕುಳಿತಿದ್ದೆ. ವಿಶಾಲು ನನ್ನನ್ನೇ ಅನುಮಾನದಿಂದ ಗಮನಿಸುತ್ತಿದ್ದಳು.

"ಎಮ್ಮೆಸ್ಸೆನ್ ಬರ್ಲಿಲ್ವಾ ?" ಎಂದು ಕೇಳಿದಳು.

ವಿಶ್ವ ಜೋರಾಗಿ ನಕ್ಕ.

"ಇವರೇ ಕಣೇ ಎಮ್ಮೆಸ್ಸೆನ್ ಬಿಸಿಲಿಗೆ ಬಾಡಿದ್ದಾರೆ ಅಷ್ಟೇ" ಎಂದು ಮಡದಿಯ ಬೆಪ್ಪುತನಕ್ಕೆ ಉತ್ತರಿಸಿದ.

ವಿಶಾಲು ನಂಬಲು ತಯಾರಿರಲಿಲ್ಲ.

"ಹೌದಾ? ನಾನು ಎಮ್ಮೆಸ್ಸೆನ್ ತಮ್ಮ ಅನ್ಕೊಂಡಿದ್ದೆ. ಯಾಕೆ, ಇಷ್ಟು ಸಣ್ಣ ಆಗ್ಬಿಟ್ಟಿದ್ದೀರ? ಎಷ್ಟೋ ಕೇಜಿ ಮೈಯಿಂದ ಉದುರಿಹೋಗಿದೆ" ಎಂದು ಕನಿಕರಿಸಿದಳು. ನಾನು ಮೈ ಕೈ ತಡವಿ ನೋಡಿಕೊಳ್ಳಬೇಕಾದ ಪರಿಸ್ಥಿತಿ!

ವಿಚಾರಣೆ ಇಲ್ಲಿಗೇ ನಿಲ್ಸಿದ್ರೆ ಚೆನ್ನಾಗಿತ್ತು. ಅದನ್ನ ಮುಂದುವರೆಸಿದ್ಲು.

"ಡಯಾಬಿಟಿಕ್ಕಾ ? ಡಯಾಬಿಟಿಸ್ ಬಂದ್ರೆ ಸಣ್ಣ ಆಗ್ಬಿಡ್ತೀವಿ. ಎಲ್ಲಾದ್ರೂ ತೋರ್ಸ್ಕೋದು ಒಳ್ಳೇದು".

ಸಂತೋಷವಾಗಿ ಕಾಲ ಕಳೆಯೋಣ ಅಂತ ಗೆಳೆಯನ ಮನೆಗೆ ಬಂದರೆ ರೋಗದ ಬಗ್ಗೆ ಚರ್ಚೆಯಾಗುತ್ತಿದೆ. ಅಲ್ಲಿಗೇ ವಿಶಾಲು ಮಧುಮೇಹಕ್ಕೆ ಔಷಧಿಯನ್ನೂ ಹೇಳಿದಳು.

"ಅಮೃತಬಳ್ಳಿಯಲ್ಲಿ ಕಷಾಯ ಮಾಡ್ಕೊಂಡು ಕುಡೀರಿ. ಒಂದು ಲೋಟ ನೀರಲ್ಲಿ ಒಂದು ಸ್ಪೂನು ಮೆಂತ್ಯ ರಾತ್ರಿ ನೆನೆ ಹಾಕ್ಬಿಟ್ಟು ಬೆಳಿಗ್ಗೆ ಎದ್ದು ಮೆಂತ್ಯದ ನೀರು ಕುಡಿದ್ರೆ ಸಕ್ಕರೆ ಕಾಯಿಲೆ ಕಮ್ಮಿ ಆಗುತ್ತೆ. ಇನ್ನೂ ಸುಲಭದ ಕೆಲ್ಸ ಅಂದರೆ ಬರೀ ಸೊಪ್ಪೇ ತಿನ್ನಿ" ಅಂದ್ಲು.

ನಾನು ಆಕೆಯ ಮಾತನ್ನು ತುಂಡರಿಸಲು ಹೇಳಿದೆ.

"ಹೌದು ಗರಿಕೆ ಹುಲ್ಲು ತಿಂದ್ರೆ ಒಳ್ಳೇದು ಅಂತ ವೆಟರಿನರಿ ಡಾಕ್ಟರ್ ಹೇಳಿದ್ದಾರೆ"

ವಿಶಾಲುಗೆ ನನ್ನ ಮಾತಲ್ಲಿದ್ದ ವ್ಯಂಗ್ಯ ಅರ್ಥವಾಗದೆ ಅದನ್ನು ಸಮರ್ಥಿಸಿದಳು.

"ನಿಜ, ಗರಿಕೆ ಹುಲ್ಲಷ್ಟು ಆರೋಗ್ಯಕರವಾದ ಹಸಿರು ಬೇರೆ ಯಾವ್ದೂ ಇಲ್ಲ. ಗರಿಕೆ ಹುಲ್ಲಿನ ರಸಾನ ಪಾರ್ಕ್‌ಗಳ ಹತ್ರ ಮಾರ್ತಾರೆ. ನೀವ್ಯಾಕೆ ತಗೋಬಾರ್ದು ?"

"ರಸ ಮಾಡಿ ಕುಡಿಯೋ ಬದಲು ಗರಿಕೆ ಹುಲ್ಲನ್ನೇ ನೇರವಾಗಿ ತಿಂದ್ರೆ ಹೆಚ್ಚು ಪರಿಣಾಮಕಾರಿ" ಎಂದು ವಿಶ್ವ ಮತ್ತೆ ಕಾಲೆಳೆದ. ವಿಶಾಲು ಅದಕ್ಕೊಂದು ರೆಸಿಪಿಯನ್ನು ಹೇಳೇಬಿಟ್ಟಳು.

"ಗರಿಕೆ ಹುಲ್ಲನ್ನ ಚಿಕ್ಕ ಚಿಕ್ಕದಾಗಿ ಕತ್ತರಿಸಿ ಎಣ್ಣೇಲಿ ಬಾಡಿಸ್ಬಿಟ್ಟು ಉಪ್ಪು, ಖಾರ ಹಾಕ್ಕೊಂಡು ತಿನ್ನಬಹುದು".

"ಬೇವಿನಸೊಪ್ಪು ಬೇಡವಾ ?" ಎಂದು ಕೇಳಿದೆ.

"ಅದು ಇನ್ನೂ ಒಳ್ಳೇದು. ಬೇವಿನಸೊಪ್ಪು ಒಗ್ಗರಣೆ ಹಾಕಬಹುದು"



ಯಾವುದಾದ್ರೂ ಒಳ್ಳೇ ತಿಂಡಿ ಸಿಗುತ್ತದೆ ಎಂದು ವಿಶ್ವನ ಮನೆಗೆ ಬಂದರೆ ಸೊಪ್ಪು, ಸೆದೆ ತಿನ್ನಿಸಿ ಕಳಿಸುತ್ತಾರೇನೋ ಎಂದು ಗಾಬರಿಯಾಯಿತು. ವಿಶಾಲುಗೆ ತನ್ನ ರೆಸಿಪಿ ಬಗ್ಗೆ ಖಾತ್ರಿ ಇತ್ತು.

"ನೋಡಿ, ಹಸು, ಎಮ್ಮೆ, ಕುರಿಗಳು ಹುಲ್ಲು ತಿನ್ನುತ್ತೆ. ಹುಲ್ಲು ತಿನ್ನೋ ಯಾವ್ದೇ ಪ್ರಾಣಿಗೆ ಡಯಾಬಿಟಿಸ್ ಇರೋದಿಲ್ಲ. ಬೇಕಾದ್ರೆ ನಿಮ್ಮ ವೆಟರಿನರಿ ಡಾಕ್ಟರ್‌ನೇ ಕೇಳಿ".

"ಹೌದೌದು, ಯಾವ್ದೇ ಹಸು, ಎಮ್ಮೆ, ತಾವಾಗಿ ಡಾಕ್ಟರ್ ಹತ್ರ ಹೋಗಿದ್ದನ್ನ ನಾನು ಈವರೆಗೆ ನೋಡೇ ಇಲ್ಲ. ಮನುಷ್ಯನೇ ಹೋಗೋದು" ಎಂದೆ.

"ಮನುಷ್ಯ ಯಾಕೆ ಹೋಗ್ತಾನೆ ? ಪ್ರಕೃತಿ ಕೊಡೋದನ್ನ ಅದೇ ರೀತಿಯಲ್ಲಿ ತಿನ್ನೊಲ್ಲ. ಹಿಂದಿನ ಕಾಲದಲ್ಲಿ ಗೆಡ್ಡೆ, ಗೆಣಸು ತಿಂತಾ ಇದ್ರು. ಒಳ್ಳೆ ಜೇನು ಸಿಕ್ತಾ ಇತ್ತು. ಹಲಸಿನಹಣ್ಣಿನ ಜೊತೆ ಜೇನನ್ನ ಕಲೆಸಿಕೊಂಡು ತಿಂದ್ರೆ ಅದಕ್ಕಿಂತ ಒಳ್ಳೇ ಆಹಾರ ಇಲ್ಲ"

ವಿಶ್ವ, ಕರಡಿ ರಸಾಯನದ ಬಗ್ಗೆ ಪ್ರಸ್ತಾಪ ಮಾಡಿದ.

"ಕರಡಿಗಳು ಹಲಸಿನ ತೊಳೆಗಳನ್ನೆಲ್ಲಾ ಬಾಳೆ ಎಲೆ ಮೇಲೆ ಹಾಕಿ ಅದಕ್ಕೆ ಜೇನುತುಪ್ಪ ಸುರಿದು ಕಲೆಸಿ ರಸಾಯನ ಮಾಡಿ ತಿನ್ನುತ್ತಂತೆ. ಅದಕ್ಕೇ ಕರಡೀಗೆ ಆ ಪಾಟಿ ಶಕ್ತಿ. ಹೈಟ್ ನಮ್ಮಷ್ಟೇ ಇದ್ರೂ ನಮ್ಮ ನಾಲ್ಕರಷ್ಟು ಬಲ ಕರಡಿಗೆ ಇರುತ್ತೆ" ಎಂದ.

"ಕಾಡಲ್ಲಿ ರೋಗ ಕರಡಿಗೆ ಓಕೆ. ಆದರೆ ನಮಗೆ ಒಳ್ಳೇ ಜೇನುತುಪ್ಪ ಸಿಗಬೇಕಲ್ಲ? ಬಾಟಲ್‌ನಲ್ಲಿ ಮಾರೋದೆಲ್ಲಾ ಬರೀ ಬೆಲ್ಲದ ರಸ ಅಷ್ಟೇ" ಎಂದು ರೇಗಿಸಿದೆ.

"ಯಾಕೆ, ರಸ್ತೆ ಪಕ್ಕದಲ್ಲಿ ಜೇನುಹುಟ್ಟು ಇಟ್ಕೊಂಡು ಜೇನುತುಪ್ಪ ಮಾರ್ತಾ ಇರ್ತಾರಲ್ಲ?"

"ಜೇನುಹುಟ್ಟು ಮಾತ್ರ ಒರಿಜಿನಲ್ಲು. ಬಾಟಲ್‌ನಲ್ಲಿರೋದು ಯಥಾಪ್ರಕಾರ ಜೋನಿಬೆಲ್ಲದ ಪಾಕ" ಎಂದೆ.

ಸಕ್ಕರೆ ಇಲ್ಲದ ಕಾಫಿ ಬಂತು. ಎಂದೂ ಹೀಗಾಗಿರಲಿಲ್ಲ. ಮುಖ ವಕ್ರ ಮಾಡಿಕೊಂಡು ಕುಡಿದೆ. ಅಷ್ಟಕ್ಕೇ ದಿನ ಮುಗಿಯುವಂತಿತ್ತು.

"ಅದ್ಸರಿ, ನೀವ್ಯಾಕೆ ಇಷ್ಟು ಸಣ್ಣ ಆಗಿದ್ದೀರಾ ?" ಎಂದು ಮತ್ತೆ ವಿಶಾಲು ಕೆದಕಿದಳು.

"ನಾನು ಸಣ್ಣ ಆಗೋಕೆ ಕಾರಣ ಡಯಾಬಿಟಿಸ್ ಅಲ್ಲ. ಕರೋನಾ" ಎಂದೆ.

"ಕರೋನಾದಿಂದ ಸಾಯ್ತಾರೆ ಅಂತ ಕೇಳಿದ್ದೆ. ಸಣ್ಣಾನೂ ಆಗ್ತಾರಾ ?" ವಿಶಾಲುಗೆ ಆಶ್ಚರ್ಯ.

"ಹೌದು, ಕರೋನ ಬಂದ್ಮೇಲೆ ನನ್ನ ಸೀರಿಯಲ್ಸ್ ನಿಂತ್ಹೋದ್ವು.'ಪಾ.ಪ.ಪಾಂಡು', 'ಸಿಲ್ಲಿ ಲಲ್ಲಿ' ಎಲ್ಲಾ ಸ್ಟಾಪು. ಸಂಪಾದನೆ ಇಲ್ದೆ ಸಣ್ಣ ಆಗ್ಬಿಟ್ಟೆ" ಎಂದೆ. ವಿಶಾಲು ನಿಟ್ಟುಸಿರಿಟ್ಟಳು.

"ಸರ್ಕಾರಿ ಕೆಲ್ಸ ಇರೋವರೇ ವಾಸಿ. ಅವರು ಕರೋನ ಸಂದರ್ಭದಲ್ಲಿ ಲಾಕ್‌ಡೌನ್ ಅಂತ ಮನೇಲಿದ್ರೂ ಸಂಬಳ ಬರ್ತಿತ್ತು. ನಮ್ಮ ಪಕ್ಕದ್ಮನೆ ಮೀನಾಕ್ಷಿ ಮಗಳು ಮನೇಲೇ ಕೂತ್ಕೊಂಡು ವರ್ಕ್ ಫ್ರಂ ಹೋಂ ಮಾಡ್ತಾಳೆ. ಕರೋನಾದಿಂದ ಆರಾಮಾಗ್ಹೋಯ್ತು. ಕಂಪ್ಯೂಟರ್ ಮುಂದೆ ಕೂತ್ಕೊಂಡು ಮೌಸ್ ಹಿಡ್ಕೊಂಡು 'ಯಸ್, ಯಸ್' ಅಂತ ಆಡಿಸ್ತಾ ಇದ್ರೆ ದಿನ ಕಳೆದ್ಹೋಗುತ್ತೆ. ಆಟೋ ಹಿಡಿಯೋಷ್ಟಿಲ್ಲ, ಆಫೀಸ್‌ಗೆ ಹೋಗೋಷ್ಟಿಲ್ಲ. ಬಿಸಿಲಲ್ಲಿ ಅಲೆಯೋಷ್ಟಿಲ್ಲ, ಬಾಸ್ ಕೈಲಿ ಬೈಸ್ಕೊಳ್ಳೋಷ್ಟಿಲ್ಲ."



ವಿಷಯಾಂತರ ಮಾಡಲು ವಿಶ್ವ ಪ್ರಯತ್ನ ಪಟ್ಟ.

"ವಿಶಾಲೂ, ನೀನು ಮೊನ್ನೆ ಸೀರೆಗಳ ಸೇಲ್ಸ್‌ಗೆ ಹೋಗಿದ್ಯಲ್ಲ, ಅದನ್ನ ಹೇಳು" ಎಂದ.

ವಿಶಾಲುಗೆ ಅದರಲ್ಲಿ ಆಸಕ್ತಿ ಇರಲಿಲ್ಲ.

"ಏನ್ ಸೇಲ್ಸೋ, ಏನೋ ! ಕರೋನ ಬರೋಕೆ ಮುಂಚೆ ಬಂದಿದ್ದ ಸೀರೆಗಳ್ನ ಮತ್ತೆ ತಂದ್ಹಾಕಿದ್ರು. ಹಳೇ ಮಾಲು ಯಾರು ತಗೋತಾರೆ ಹೇಳಿ. ಸೀರೆಗಳಿಗೆ ಕರೋನ ವಾಸನೆ ಹೊಡೀತಾ ಇತ್ತು" ಎಂದಳು.

"ಕರೋನಾಗೂ ವಾಸನೆ ಇರುತ್ತಾ ? ನನಗೆ ಗೊತ್ತಾಗ್ಲಿಲ್ಲ. ಈಗ ವ್ಯಾಕ್ಸಿನೇಷನ್ನೂ ಬಂದಿದೆ. ಅದಕ್ಕೆ ಔಷಧಿ ಕಂಡು ಹಿಡಿದಿದ್ದಾರೆ. ಇನ್ಮೇಲೇನೂ ತೊಂದ್ರೇನೇ ಇಲ್ಲ. ನೀವು ತಗೊಂಡ್ರಾ ಇಂಜೆಕ್ಷನ್ನು ?" ಎಂದು ವಿಶಾಲುವನ್ನು ಕೇಳಿದೆ.

"ಬೇಡಪ್ಪ, ನಮಗ್ಯಾಕೆ ? ಕರೋನಾ ತನ್ನ ಖರ್ಚಲ್ಲಿ ನನ್ನ ಕರ್ಕೊಂಡು ಹೋದರೆ ಬೇಡ ಅಂತ ನಾನು ಹೇಳೊಲ್ಲ. ಸೂಜೀನ ದೊಡ್ಡ ದೊಡ್ಡವರೆಲ್ಲಾ ತಗೊಳ್ಳಲಿ. ಮೇಲಿನವರು ಸರಿಹೋದ್ರೆ ಕೆಳಗಿರೋವರೂ ಸರಿಹೋಗ್ತಾರೆ. ನಾವು ಸದಾ ಮಾಸ್ಕ್ ಹಾಕ್ಕೊಂಡಿರ್ತೀವಿ. ಕೈಗೆ ಸ್ಯಾನಿಟೈಸರ್ ಹಾಕ್ತಿರ್ತೀವಿ" ಎಂದು ವಿಶಾಲು ನಕ್ಕಾಗ ಆಕೆಯನ್ನು ಗಮನಿಸಿದೆ. ಶರೀರ ಸ್ವಲ್ಪ ದಪ್ಪ ಆದಂತಿತ್ತು.

"ಎಲ್ರೂ ಕರೋನಾ ಸಮಯದಲ್ಲಿ ಸಣ್ಣ ಆದ್ರೆ ನೀವ್ಯಾಕೆ ದಪ್ಪ ಆಗ್ತಾ ಇದ್ದೀರಾ ವಿಶಾಲು ?"

"ಮನೇಲಿ ಕೂತು ತಿಂದ್ರೆ ಇನ್ನೇನಾಗುತ್ತೆ ? ಕರೋನಾ ಭಯಕ್ಕೆ ಆಚೆ ವಾಕಿಂಗೂ ಹೋಗ್ತಾ ಇರ್ಲಿಲ್ಲ. ಅದಕ್ಕೆ ದಪ್ಪ ಆಗಿರಬಹುದು. ತುಂಬಾ ದಪ್ಪ ಆಗಿದ್ದೀನಾ ? ಎಂದು ನನ್ನನ್ನೇ ಕೇಳಿದಳು.

"ಹೌದು, ಮುಂಚೆ ಸ್ಲಿಮ್ ಆಗಿ ಸುಂದರವಾಗಿ ಕಾಣ್ತಾ ಇದ್ರಿ. ಈಗ ಸ್ವಲ್ಪ ದಪ್ಪ ಆಗಿದ್ದೀರ. ಪ್ರಾಯಶಃ ನಿಮ್ಮ ರವಿಕೆ ನಿಮಗೆ ಸರಿಯಾದ ಮಾಹಿತಿ ಕೊಡುತ್ತೆ" ಅಂದೆ.

"ದೇವರಂಥ ಮಾತು ಹೇಳಿದ್ರಿ. ರವಿಕೆ ಟೈಟಾಗಿ ಹೊಲಿಗೆ ತೆಗೆದು ಹಾಕ್ಕೋತಾ ಇದ್ದೀನಿ. ಸಣ್ಣ ಆಗೋಕೆ ಏನ್ಮಾಡೋದೋ ಗೊತ್ತಾಗ್ತಿಲ್ಲ"

ಔಷಧಿ ಹೇಳಿ ಉಲ್ಟಾ ಹೊಡೆಯಲು ಸರಿಯಾದ ಅವಕಾಶ ನನಗೆ ಸಿಕ್ತು.

"ವಿಶಾಲು ಅವರೇ, ಮೊನ್ನೆ ನಾನು ಇಂಟರ್‌ನೆಟ್ಟಲ್ಲಿ ಓದಿದೆ. ಈ ಥರ ದಪ್ಪ ಆಗ್ತಿರೋ ಹೆಣ್ಮಕ್ಕಳು ಅದ್ರಲ್ಲೂ

40 ವರ್ಷ ದಾಟಿರೋವರು ಸಣ್ಣ ಆಗಬೇಕಾದ್ರೆ ಒಂದು ಸರಳ ಔಷಧಿ ಇದೆ"

"ಯಾವುದು ಅದು, ಬೇಗ ಹೇಳಿ. ಇಂದೇ ತಗೋತೀನಿ"

ವಿಶಾಲೂಗೆ ಕುತೂಹಲ ಹೆಚ್ಚಿತು.

"ಗರಿಕೆ ಹುಲ್ಲು ! ಗರಿಕೆ ಹುಲ್ಲಲ್ಲಿ ಪಲ್ಯ ಮಾಡ್ಕೊಂಡು ದಿನಕ್ಕೆ ಮೂರು ಸಲ ತಿಂತಾ ಇದ್ರೆ ಒಂದು ತಿಂಗಳಲ್ಲಿ ಹತ್ತು ಕೇಜಿ ಡೌನು !"

ವಿಶಾಲುಗೆ ಸಿಟ್ಟು ಬಂದು ವಿಶ್ವನ ತಲೆಗೆ ಮೊಟಕಿ ಅಡಿಗೆ ಮನೆಗೆ ಹೋದಳು. ಸಧ್ಯ, ನನ್ನ ತಲೆಗೆ ಅಪಾಯ ಆಗಲಿಲ್ಲ ಎಂದುಕೊಳ್ಳುತ್ತಾ ಅಲ್ಲಿಂದ ಕಾಲ್ತೆಗೆದೆ.



■

# ಬಿಜಲಾನಿ ಮತ್ತು ನನ್ನ ಬಿಗುಮಾನದ ಪ್ರಸಂಗ

**- ನಂದಿನಿ ಕಾಪಡಿ**

ವರ್ಷ 1979ರಲ್ಲಿ ಮುಂಬೈ ನಗರದ ಅತಿ ದೊಡ್ಡ ಕೇಂದ್ರಸರ್ಕಾರದ ಆಫೀಸಿನಲ್ಲಿ ನನ್ನ ಮೊದಲ ಹಂತದ ಪೋಸ್ಟಿಂಗ್ ಆದಾಗ ಒಂದು ತರಹ ಕಳವಳ. ಆದರೆ ನನ್ನ ಜತೆಯೇ ತರಬೇತಿ ಪಡೆದಿದ್ದ ನನ್ನ ಗೆಳತಿ ಗೆಳೆಯರೂ ಬಂದಾಗ ನನ್ನ ಭಯ ಕಡಿಮೆಯಾಗಿತ್ತು. ಮುಂಬೈ ನಗರ ಭಾರತದ 'ಮೆಲ್ಟಿಂಗ್ ಪಾಟ್' ಎಂದು ಹೆಸರು ಪಡೆದ ಏಕೈಕ ಮಹಾನಗರ. ರಾಷ್ಟ್ರದ ಎಲ್ಲ ರಾಜ್ಯಗಳಿಂದ ಬಂದಿದ್ದ ನಮ್ಮ ಕರ್ಮಚಾರಿಗಳು. ಮಧ್ಯದ ಹಂತದವರು ಮತ್ತು ಉಚ್ಚ ಅಧಿಕಾರಿಗಳು. ಬೇರೆ ಊರುಗಳಂತೆ ಇಲ್ಲಿ ಉಚ್ಚ ಅಧಿಕಾರಿಗಳಿಗೆ ಅತಿ ಮಹತ್ವವೂ ಇರಲಿಲ್ಲ ಮತ್ತು ಹೆಚ್ಚು ಗೌರವ ತೋರಿಸುವ ಅಥವಾ ಅತಿ ವಿನಯ ತೋರಿಸುವ ವಾಡಿಕೆಯೂ ಇರಲಿಲ್ಲ. ಎಲ್ಲರೂ ಸಮಾನರು. ಆದ್ದರಿಂದ ನಮಗೂ ಹೆಚ್ಚು ಗಮನ ಕೊಡುವ ಯಾರೂ ಇರಲಿಲ್ಲ. ಭಾರತೀಯ ಕೇಂದ್ರೀಯ ಸೇವೆಯಿಂದ ಬಂದಿದ್ದ ಎಂಟು ಅಧಿಕಾರಿಗಳು ನಾವು ಆರು ತಿಂಗಳಲ್ಲಿ ನಾವೂ ಆಫೀಸಿಗೆ ಹಳಬರಾದೆವು. ಸ್ವಲ್ಪ ಚೂಟಿತನ ಬಂದಿತ್ತು. ಭಯ ಹೋಗಿತ್ತು. ಒಂದು ದಿನ ಮಧ್ಯಾನ್ಹ ನಮ್ಮ ಮುಖ್ಯಸ್ಥರು ನನ್ನನ್ನು ಇಂಟರ್ಕೋಮ್ ಮೂಲಕ ಸಂಪರ್ಕಿಸಿ ಯಾವುದೋ ಫೈಲ್ ತುರ್ತಾಗಿ ತಮ್ಮ ಹತ್ತಿರ ತರಲು ಕೇಳಿದರು. ಅರ್ಧ ಟಿಫನ್ ಹಾಗೆಯೆ ಮುಚ್ಚಿಟ್ಟು ಸೆಕ್ಷನ್ ಆಫೀಸರ್ ಸರಮಳಕರ್‌ರನ್ನು ಇಂಟರ್ಕೋಮ್ ಮೂಲಕ ಕರೆಯಲು ಪ್ರಯತ್ನಿಸಿದೆ ಯಾರೂ ಎತ್ತಲಿಲ್ಲ. ಸರಿ ನಾನೆ ಸರ ಸರ ನಡೆಯುತ್ತಾ ಆ ಸೆಕ್ಷನ್ ಇದ್ದ ದೊಡ್ಡ ಹಾಲಿಗೆ ಬಂದೆ. ಆಗಿನ ಕಾಲದಲ್ಲಿ ದೊಡ್ಡ ಹಾಲಿನಲ್ಲಿ 5–6 ಸೆಕ್ಷನ್ ಗಳು ಇದ್ದವು. ಏನಿಲ್ಲ ಎಂದರೂ ಮೂವತ್ತು ಜನ ಕುಳಿತುಕೊಳ್ಳಲು ಸಾಕಷ್ಟು ಟೇಬಲ್ ಕುರ್ಚಿಗಳಿದ್ದವು. ತುಕ್ಕು ಹಿಡಿದ ಕಬ್ಬಿಣದ ಬೀರುಗಳು. ದೊಡ್ಡ ದೊಡ್ಡ ಸ್ಟೋರೇಜ್ ಬಿನ್ನುಗಳು. ಅತಿ ಎತ್ತರದ ಛಾವಣಿಯಲ್ಲಿ ಜೇಡರ ಬಲೆಗಳು ನೇತಾಡುತ್ತಿದ್ದವು. ನಾನು ಒಳಗೆ ಬಂದಾಗ ಒಂದಿಷ್ಟು ಮಹಿಳೆಯರು ಕುಳಿತು ತಾವು ತಂದಿದ್ದ ತಿಂಡಿ ಡಬ್ಬಗಳನ್ನು ಹಂಚಿಕೊಂಡು ತಿನ್ನುತ್ತಿದ್ದರು. ನನ್ನನ್ನು ನೋಡಿ "ಮೇಡಂ ಇದು ಬ್ರೇಕ್ ಸಮಯ. ನಿಮ್ಮ ಸೆಕ್ಷನ್ ಜನ ಯಾರೂ ಇಲ್ಲ" ಎಂದು ವಯಸ್ಸಾದ ಮಹಿಳೆಯೊಬ್ಬರು ಹೇಳಿದರು.

ಸರಿ ನಾನು ಸುತ್ತ ಮುತ್ತ ನೋಡಿದೆ. ಒಂದು ಮೂಲೆಯಲ್ಲಿ ಒಬ್ಬ ಮಹಿಳೆಯ ಕೂದಲನ್ನು ಕೇಶ ವಿನ್ಯಾಸ ಮಾಡುತ್ತಿದ್ದ ಒಬ್ಬ ಮಹಿಳೆ ಕಂಡರೆ, ಇನ್ನೊಂದು ಮೂಲೆಯಲ್ಲಿ ಮನೆಯಲ್ಲಿ ಹಾಕುವ ನೈಟಿ ಮಾರುತ್ತಿದ್ದ ಇನ್ನೊಬ್ಬ ಮಹಿಳೆ ಕಂಡಳು. ನಾನು ಸುಮ್ಮನೆ ನನ್ನ ಕಕ್ಷೆಗೆ ವಾಪಸು ಬಂದೆ. ಎರಡು ಗಂಟೆಯಾಯಿತು. ಮತ್ತೆ ಇಂಟರ್ಕೋಮ್ ಹಚ್ಚಿದೆ ಸೆಕ್ಷನ್ ಅಧಿಕಾರಿ ಸರಮಳಕರ್ ಅವರಿಗೆ. ಅವರು ಒಂದು ತರಹ ಆಕಳಿಸುತ್ತ ಮೇಡಂ, ಆ ಫೈಲ್ ಬಿಜಲಾನಿ ಹತ್ತಿರವಿದೆ. ಅವರು 2.30 ಗಂಟೆಯ ನಂತರ ಬರುತ್ತಾರೆ ಎಂದರು. "ಅದು ಅರ್ಜೆಂಟ್ ಫೈಲ್. ದಯವಿಟ್ಟು ಬೇಗ ಕಳಿಸಿ" ಎಂದು ನಮ್ಮ ಮುಖ್ಯಸ್ಥರ ಸೆಕ್ರೆಟರಿಗೆ ಫೋನ್ ಮಾಡಿದೆ ಅವರು "ಓ ಬಿಜಲಾನಿ ನೋಡುವ ಫೈಲ್ ಆಗಿದ್ದರೆ ಪರವಾಗಿಲ್ಲ ಆಮೇಲೆ ಕೊಡಿ" ಎಂದರು.



ಅಂದೇ ಸಂಜೆ ನನ್ನ ಬೇರೆ ಸೆಕ್ಷನ್ ಆಫೀಸರ್ ಟಿಳಕ್ ನನ್ನ ಹತ್ತಿರ ಬಂದು "ಮೇಡಂ, ಆ ಬಿಜಲಾನಿ ಬಹಳ ಕಿಲಾಡಿ ಮನುಷ್ಯ. ಹೆಸರಿಗೆ ನಮ್ಮ ಆಫೀಸಿನಲ್ಲಿ

ನೌಕರಿ.ಆದರೆ ಮೂರೂ ಹೊತ್ತು ತನ್ನ ಭಾವ ಮೈದುನನ ಆಫೀಸಿನಲ್ಲಿ ಕೆಲಸ ಮಾಡುತ್ತಾನೆ. ಅವನೊಬ್ಬ ಸ್ಟಾಕ್ ಬ್ರೋಕರ್. ದಲಾಲ್ ಸ್ಟ್ರೀಟ್ ನ ಹತ್ತಿರವೇ ಅವನ ಆಫೀಸಿದೆ. ಬಿಜಲಾನಿ ದೊಡ್ಡ ಕುಳ. ಭಾರತ ಪಾಕಿಸ್ತಾನ ಬೇರೆಯಾದಾಗ ಇವರೆಲ್ಲ ಆಶ್ರಯ ಕೋರಿ ಇಲ್ಲಿ ರೆಫ್ಯುಜೀ ಕ್ಯಾಂಪ್‌ನಲ್ಲಿ ನೆಲೆಸಿದವರು. ಈಗ ನೋಡಿ ಇವನ ಫ್ಲಾಟ್ ನಮ್ಮ ಆಫೀಸಿಗೆ ಹತ್ತಿರವಿರುವ ಕೊಲಾಬಾದಲ್ಲಿ. ಇವನಿಗೆ ಇಲ್ಲಿ ಪರ್ಮನೆಂಟ್ ನೌಕರಿ ಅಲ್ಲಿ ಬೇಕಾದಷ್ಟು ದುಡ್ಡು ಮಾಡುವ ವ್ಯವಹಾರ. ನಾವು ಇಲ್ಲಿನ ಮಣ್ಣಿನ ಮಕ್ಕಳು. ನಮ್ಮ ಸ್ಥಿತಿ ನೋಡಿ! ನೂರಾರು ಮೈಲಿ ದೂರದಿಂದ ಲೋಕಲ್ ಹಿಡಿದು ಬರುತ್ತೇವೆ. ಇವನೋ ಸ್ಕೂಟರ್ ನಲ್ಲಿ ಬರುತ್ತಾನೆ ನಿಮಗೆ ಇವನ ವಿಷಯ ಗೊತ್ತಿಲ್ಲ ಎಂದುಕೊಂಡು ತಿಳಿಸಲು ಬಂದೆ " ಎನ್ನುತ್ತಾ ಕೆಮ್ಮುತ್ತ ಹೊರಗೆ ಹೋದರು. ನನ್ನ ಪಕ್ಕದ ಮೇಜಿನಲ್ಲೇ ಕುಳಿತಿದ್ದ ನನ್ನ ಬ್ಯಾಚ್‌ಮೇಟ್ ಮತ್ತು ಸಹೋದ್ಯೋಗಿ ಬಾಲಗೋಪಾಲ್ "ಸರಿ ಇನ್ನು ಮೇಲಿನಿಂದ ನೀನೂ ಶೇರ್ ಮಾರ್ಕೆಟ್ನಲ್ಲಿ ದುಡ್ಡು ಹಾಕಿಬಿಡು. ಒಳ್ಳೆಯ ಟಿಪ್ಸ್ ಸಿಗುತ್ತದೆ ಎಂದ. ಕೈನಲ್ಲಿ ಬರುವ ಸಂಬಳ ಬರೀ 700 ರೂಪಾಯಿಗಳಲ್ಲಿ ಶೇರ್ ಎಲ್ಲಿಂದ ಕೊಂಡು ಕೊಳ್ಳೋಣ ಎಂದು ಪ್ರಲಾಪಿಸಿದೆ ನಾನು.

ನಮ್ಮ ಆಫೀಸ್ ಬೆಳಿಗ್ಗೆ 9.30 ತೆಗೆಯುವುದು. ಮಧ್ಯಾಹ್ನ 1.30–2 ಗಂಟೆಯವರೆಗೆ ಲಂಚ್ ಬ್ರೇಕ್. ನಂತರ 2–6 ಗಂಟೆಯವರೆಗೆ ಕಾರ್ಯಾಲಯ ನಡೆಯುವುದು. ನಾವು ಬೆಳಿಗ್ಗೆ ಹದಿನೈದು ನಿಮಿಷ ಮುಂಚೆ ಬಂದು ಸಂಜೆ ಹದಿನೈದು ನಿಮಿಷ ಹೆಚ್ಚು ಕುಳಿತು ನಂತರ ಮನೆಗೆ ಹೋಗುವುದು. ಮಹಾನಗರ. ದೂರ ಮತ್ತು ತುಂಬಾ ದೂರದಿಂದ ಬಾರುವ ಕರ್ಮಚಾರಿಗಳು ಬೆಳಿಗ್ಗೆ ಹತ್ತು ಗಂಟೆಯ ನಂತರವೇ ಹಾಜರಿ. ಹಾಗೆಯೇ ಸಾಯಂಕಾಲ ನಾಲ್ಕೂವರೆಯಿಂದ ನಿರ್ಗಮನ. ಲೋಕಲ್ ಸಮಯಕ್ಕೆ ಅವರ ದಿನಚರಿ. ಆದರೆ ಬಿಜಲಾನಿ ಆಫೀಸಿನ ದಿನಚರಿ ಹೀಗಿತ್ತು. ಆಫೀಸಿನ ಬಾಗಿಲು ತೆಗೆದು ಕಸ ಗುಡಿಸಿ ಧೂಳು ಹೊಡೆದು ಸ್ವಚ್ಛ ಮಾಡುವ ಕರ್ಮಚಾರಿಯ ಪ್ರಕಾರ ಅವನು ಬೆಳಿಗ್ಗೆ ಎಂಟೂವರೆಗೆ ಆಫೀಸಿಗೆ ಬಂದು ಕೆಲಸ ಮಾಡಿ ಒಂಬತ್ತೂವರೆಗೆ ದಲಾಲ್ ಸ್ಟ್ರೀಟ್ ಕಡೆಗೆ ಪಯಣ. 10 ಗಂಟೆಗೆ ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಟ್ರೇಡಿಂಗ್ ಪ್ರಾರಂಭ. ನಮ್ಮ ನಾಯಕ ಅಲ್ಲಿಂದ ಮತ್ತೆ ನಮ್ಮ ಆಫೀಸಿಗೆ 12ಗಂಟೆಗೆ ಆಗಮಿಸುತ್ತಿದ್ದ. ಮತ್ತೆ ಸರಿಯಾಗಿ 2 ಗಂಟೆಗೆ ನಿರ್ಗಮನ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಮೂರು ಗಂಟೆಗೆ ಟ್ರೇಡಿಂಗ್ ಮುಗಿದ ನಂತರ ಇವನು ಭಾವ ಮೈದುನನ ಆಫೀಸಿಗೆ ಹೋಗಿ ವರದಿ ಒಪ್ಪಿಸಿ ಮತ್ತೆ ನಮ್ಮ ಆಫೀಸಿಗೆ 4 ಗಂಟೆಗೆ ಹಾಜರ್. ಸರಿಯಾಗಿ 5 ಗಂಟೆಗೆ ನಿರ್ಗಮನ. ಆದರೆ ನಮ್ಮ ಆಫೀಸಿನಲ್ಲಿ ಇದ್ದಷ್ಟು ಹೊತ್ತು ಬಹಳ ಕಾಳಜಿಯಿಂದ ಕೆಲಸ ಮಾಡುತ್ತಿದ್ದ. ಅವನ ಕೆಲಸ ತುಂಬಾ ಉತ್ತಮವಾದದ್ದು ಎಂದು ಅವನ ಸೆಕ್ಷನ್ ಆಫೀಸರ್ ಸರಮಳಕರ್ ಅವರ ಅಭಿಪ್ರಾಯ. ಟಿಳಕ್ ಹೇಳುವ ಪ್ರಕಾರ ಬಿಜಲಾನಿ ಸರಮಳಕರ್ ಅವರಿಗೆ ಹೆದರಿಸುತ್ತಾನೆ, ದೊಡ್ಡ ದೊಡ್ಡ ಆಫೀಸರ್‌ಗಳು ತನ್ನ ಮುಷ್ಟಿಯಲ್ಲಿದ್ದಾರೆ ಇತ್ಯಾದಿ. ಮತ್ತು ಆಗಾಗ ಸೆಕ್ಷನ್‌ನಲ್ಲಿದ್ದ ವರಿಗೆಲ್ಲ ಬಟಾಟಾ ವಡಾ, ಮಿಠಾಯಿ ಪಾರ್ಟಿ ನಡೆಸುತ್ತಾನೆ. ಎಲ್ಲರೂ ಅವನಿಗೆ ಹೆದರುತ್ತಾರೆ ! !

ಒಂದು ಮಧ್ಯಾಹ್ನ ದೊಡ್ಡ ಸಾಹೇಬರಿಂದ ತುರ್ತು ಕರೆ. ಪಾರ್ಲಿಮೆಂಟ್ ಸಮಿತಿ ಗೆ ನಮ್ಮ ಕಾರ್ಯದ ಸಂಬಂಧ ಯವುದೋ ಮಾಹಿತಿ ತುರ್ತಾಗಿ ಬೇಕಿತ್ತು. ಇನ್ನೆರಡು ಗಂಟೆಗಳಲ್ಲಿ ದೆಹಲಿಯಲ್ಲಿ ಮೀಟಿಂಗ್ ಪ್ರಾರಂಭ. ಅಷ್ಟರೊಳಗೆ ಮಾಹಿತಿ ಬೇಕಿತ್ತು. ನನ್ನ ಕೆಟ್ಟ ಹಣೆ ಬರಹಕ್ಕೆ ಆ ಮಾಹಿತಿ ಬಿಜಲಾನಿ ಮಾಡುವ ಕೆಲಸಕ್ಕೆ ಸಂಬಂಧಿಸಿ



ನಮ್ಮ ನಾಯಕ ತನ್ನ ಡೆಸ್ಕಿಗೆ ಬೀಗ ಹಾಕಿ ದಲಾಲ್ ಸ್ಟ್ರೀಟಿಗೆ ಪಲಾಯನ ಮಾಡಿಯಾಗಿತ್ತು. ಈಗಿನಂತೆ ಮೊಬೈಲ್ ಫೋನಿಲ್ಲ. ಸರಮಳಕರ್ ನನ್ನ ಕೋಪದ ಮುಖ ಜೋರಾದ ಮಾತು ಕೇಳಿ ಕಣ್ಣೀರಿಡುತ್ತಾ "ನೀವೇ ಹೇಳಿ ಮೇಡಂ ಏನು ಮಾಡಲಿ" ಎಂದರು. ಕಾರ್ಪೆಂಟರ್ ಕರೆಯಿಸಿ ಬೀಗ ಒಡೆಯಿರಿ ಎಂದೆ. ಮರದಲ್ಲಿ ಮಾಡಿದ್ದ ಟೇಬಲ್ ಡೆಸ್ಕ್ ಕಾರ್ಪೆಂಟರ್‌ನ ಒಂದೇ ಹೊಡೆತಕ್ಕೆ ತೆಗೆಯಿತು. ಬಿಜಲಾನಿಯ ಡೆಸ್ಕನ್ನು ನನ್ನ ಮುಂದೆ ಒಡೆದು ತೆಗೆದಾಗ ಅದರಲ್ಲಿ ನಮ್ಮ ಆಫೀಸಿನ ಫೈಲ್ಸ್‌ಗಳೇ ಅಲ್ಲದೆ ಶೇರ್ ಅಪ್ಲಿಕೇಶನ್‌ಗಳು ಹಾಗೂ ಶೇರ್ ಟ್ರಾನ್ಸರ್ ಅಪ್ಲಿಕೇಶನ್, ಶೇರ್ ಮಾರುವ ಕೊಳ್ಳುವ ಅರ್ಜಿಗಳು ಹೀಗೆ ನೂರಾರು ಕಾಗದಗಳು ಕಂಡವು. ನನ್ನ ಕೋಪ ಶಿಖರಕ್ಕೇರಿತು.

"ಸರಮಳಕರ್, ಈತ ಇಷ್ಟು ಮುಲಾಜಿಲ್ಲದೆ ಶೇರ್ ಕೆಲಸ ಮಾಡುತ್ತಾರಲ್ಲ ನೀವು ಹೇಗೆ ಸುಮ್ಮನೆ ಇದ್ದೀರಾ" ಅಂದು ಎಲ್ಲರ ಎದುರಿಗೇ ವಿಚಾರಿಸಿ "ಮೊದಲು ಪಾರ್ಲಿಮೆಂಟ್ ಸಮಿತಿಗೆ ಬೇಕಾದ ಮಾಹಿತಿ ಕೊಡಿ ನಂತರ ಬಿಜಲಾನಿ ಬಗ್ಗೆ ಚರ್ಚಿಸೋಣ" ಎಂದೆ. ಸರಮಳಕರ್ ಬೇಗ ಬೇಗ ಫೈಲ್ ಹುಡುಕಿ ಮಾಹಿತಿ ಕೊಟ್ಟರು. ನಾನು ಸದ್ಯ ಬಚಾವಾದೆ. "ಬಿಜಲಾನಿ ಬಂದ ಕೂಡಲೇ ನನ್ನ ಹತ್ತಿರ ಕರೆದುಕೊಂಡು ಬನ್ನಿ" ಎಂದು ಆದೇಶಿಸಿ ನಾನು ಮುಖ್ಯಸ್ಥರ ಕೋಣೆಗೆ ನಡೆದೆ.

ನಂತರ ಆಫೀಸಿನ ಅಡ್ಮಿನಿಸ್ಟ್ರೇಷನ್ ನೋಡಿಕೊಳ್ಳುತ್ತಿದ್ದ ಚಿತ್ತರಂಜನ್ ರೇ ಅವರನ್ನು ನನ್ನ ಕಕ್ಷೆಗೆ ಬರ ಹೇಳಿ ಬಿಜಲಾನಿಯ ಬಗ್ಗೆ ಯಾವ ರೀತಿಯಲ್ಲಿ ಕಾರ್ಯವಾಹಿ ನಡೆಸಬಹುದು ಎಂದು ಕೇಳಿದೆ. ನಮಗೆ ಟ್ರೇನಿಂಗ್‌ನಲ್ಲಿ ಹೇಳಿಕೊಟ್ಟಿದ್ದ ನಿಯಮಗಳನ್ನು ಅವರೊಂದಿಗೆ ಚರ್ಚಿಸಿ ಬಿಜಲಾನಿ ಒಬ್ಬ ಸರ್ಕಾರೀ ನೌಕರನಾಗಿದ್ದು ಶೇರ್ ಟ್ರೇಡಿಂಗ್ ಕೆಲಸದಲ್ಲಿ ಭಾಗವಹಿಸುವುದು ಆಫೀಸಿನ ಸಮಯದಲ್ಲಿ ಹೊರಗೆ ಹೋಗಿ ಬೇರೆ ಕೆಲಸ ಮಾಡುವುದು ಇದರ ಬಗ್ಗೆ ಯಾವ ರೀತಿ "ಮೆಮೊ" ಕೊಡಬೇಕು ಎಂದು ಚರ್ಚಿಸಿ ಕೂಡಲೇ ಟೈಪಿಸ್ಟ್ ಕರೆಸಿ ಮೆಮೊ ಟೈಪ್ ಮಾಡಿಸಿ ಅದಕ್ಕೆ ಸಹಿ ಹಾಕಿ ಬಿಜಲಾನಿಯನ್ನು ನನ್ನ ಕಕ್ಷೆಗೆ ಬರ ಹೇಳಿದೆ.

ಬಿಜಲಾನಿ "ಸಾರೀ ಮೇಡಂ" ಎಂದವನೇ ಹಲ್ಲು ಕಿರಿದ. ನನ್ನ ಪಿತ್ತ ನೆತ್ತಿಗೇರಿ "ಬಿಜಲಾನಿ ನಿಮ್ಮ ಪ್ರತಿಯೊಂದೂ ಚಲನೆ ನನ್ನ ಗಮನಕ್ಕೆ ಬಂದಿದೆ. ಇದೋ ಈ ಮೆಮೋ ಸ್ವೀಕರಿಸಿ" ಎಂದವಳೇ ನನ್ನ ಮೊದಲ ಮೆಮೊ ಅವನಿಗೆ ಕೊಟ್ಟೆ. ಮುಖ ಮತ್ತು ಕಣ್ಣು ಕೆಂಪು ಮಾಡಿಕೊಂಡ ಬಿಜಲಾನಿ ಹೊರಗೆ ನಿರ್ಗಮಿಸಿದ. ಮೆಮೊದಲ್ಲಿ ಸರಕಾರಿ ನಿಯಮದ ವಿರುದ್ಧ ತನ್ನ ಖಾಸಗಿ ಕೆಲಸವನ್ನು ಮಾಡುತ್ತಿದ್ದಾನೆ. ಇದು ವಿಪರೀತ ವರ್ತನೆ. ಬಿಜಲಾನಿ ಕಾರ್ಯದ ಬಗ್ಗೆ ಲಕ್ಷ ಕೊಡುತ್ತಿಲ್ಲ. ಸಮಯದ ಪಾಲನೆ ಮಾಡುತ್ತಿಲ್ಲ, ಅವನ ನಡತೆ ಕಾರ್ಯದ ನಿಯಮ ಉಲ್ಲಂಘನೆಯಾಗಿದೆ ವಗೈರೆ. ಅವನು ಈ ನಡತೆಯ ಬಗ್ಗೆ ಸರಿಯಾದ ಸಮಜಾಯಿಷಿ ಕೊಡದೇ ಇಲ್ಲದಿದ್ದರೆ ಕಾರ್ಯದ ನಿಯಮ ಉಲ್ಲಂಘನೆಯ ಮೇಲೆ ಉಚಿತ ಕಾರ್ಯ ಕೈಗೊಳ್ಳಲಾಗುವುದು ಇತ್ಯಾದಿ ಇತ್ಯಾದಿ.

ಮಾರನೆಯ ದಿನ ಬುಧವಾರ. ದೊಡ್ಡ ಸಾಹೇಬರು ಪ್ರತಿ ಬುಧವಾರದಂದು ನಾವು 7 ಜನ ಕೇಂದ್ರೀಯ ಸೇವೆಯ ಆಫೀಸರ್‌ಗಳನ್ನೂ ತಮ್ಮ ಕಕ್ಷೆಯಲ್ಲಿ ಚಹಾ ಕುಡಿಯಲು ಕರೆದು ಕೆಲಸವಲ್ಲದೆ ಬೇರೆ ವಿಷಯಗಳನ್ನೂ ಚರ್ಚಿಸುತ್ತಿದ್ದರು. ಅಂದು ಯಾಕೋ ನನ್ನ ಬಗ್ಗೆ ಖಾರವಾಗಿದ್ದು ಕರ್ಮಚಾರಿಗಳ ಬಗ್ಗೆ ಲಕ್ಷ ಇಡಬೇಕು ಆದರೆ



ವಿಪರೀತ ಕಾರ್ಯವಾಹಿ  ನಡೆಸಬಾರದು ಎಂದು ಪರೋಕ್ಷವಾಗಿ ನಮ್ಮ ಮೂವರತ್ತ ತಿರುಗಿ ಹೇಳಿದರು. ನನ್ನ ಗೆಳತಿ ಲಕ್ಷ್ಮಿ "ಸರ್, ನಾನು ಇಲ್ಲಿಯವರೆಗೆ ಕರ್ಮಚಾರಿಗಳ ಹತ್ತಿರ ಸ್ನೇಹದಿಂದ ವರ್ತಿಸುತ್ತಿದ್ದೇನೆ. ಯಾರ ಮೇಲೂ ಕಾರ್ಯವಾಹಿ ನಡೆಸಿಲ್ಲ ಎಂದಳು. "ಸೇಮ್ ಹಿಯರ್ "ಎಂದ ಬಾಲಗೋಪಾಲ್. ನನ್ನ ಮುಖ ಬಿಸಿಯಾಯಿತು. "ಸರ್, ನಿನ್ನೆ ಇಂತಹ ಪ್ರಮಾದವಾಗಿತ್ತು ಬಿಜಲಾನಿ ಎಂಬ ಗುಮಾಸ್ತನಿಂದ! ಅದಕ್ಕೆಂದೇ ಮೆಮೊ ಕೊಡಬೇಕಾಯಿತು" ಎಂದೆ  "ನೀನು ನ್ಯಾಯಶಾಸ್ತ್ರದ ಗ್ರ್ಯಾಜುಯೆಟ್ ಎಂದು ಗೊತ್ತು. ಆದರೆ ಇಂತಹ ದೊಡ್ಡ ಕಾರ್ಯಾಲಯದಲ್ಲಿ ಎಚ್ಚರಿಕೆ ತೋರಿಸಬೇಕು. ಇಲ್ಲಿನ ಕರ್ಮಚಾರಿಗಳ ಯೂನಿಯನ್ ತುಂಬಾ ಬಲಶಾಲಿಯಾದದ್ದು. ನಿನ್ನ ಜತೆ ನನ್ನನ್ನೂ ತೊಂದರೆಗೆ ಸಿಗಿಸುತ್ತೀಯಾ" ಎಂದರು. ನಂಗೆ ಒಂದು ತರಹ ಆಘಾತ! ಹೇಗೋ ಸಾವರಿಸಿಕೊಂಡು ಹೊರ ಬಂದೆ.

ನನ್ನ ಮೇಲಿನ ಅಧಿಕಾರಿ ಮುಖರ್ಜಿ ಅವರು ನನ್ನನ್ನು ತಮ್ಮ ಕಕ್ಷೆಗೆ ಬರಮಾಡಿಕೊಂಡರು. "ನೀನು ಇನ್ನೂ ತುಂಬಾ "ಬಚ್ಚಾ ಆಫೀಸರ್ ". ಎಳೆ ನಿಂಬೆಕಾಯಿ ತರಹ. ನನ್ನ ಮಗಳು ನಿನ್ನಷ್ಟೇ ವಯಸ್ಸಿನವಳು ಅವಳಿಗೂ ತುಂಬಾ ದುಡುಕು ಬುದ್ಧಿ. ಒಂದು ಕೆಲಸ ಮಾಡು. ನಾಳೆ ಬಿಜಲಾನಿ ತನ್ನ ಜವಾಬು ಕೊಟ್ಟ ತಕ್ಷಣ ಅದನ್ನು ಒಪ್ಪಿಕೊಂಡು ಸುಮ್ಮನಾಗಿಬಿಡು. ಬೆಂಕಿಯ ಹತ್ತಿರ ಆಟ ಒಳ್ಳೆಯದಲ್ಲ ಎಂದು ನನ್ನನ್ನು ಸಮಾಧಾನ ಮಾಡಿದರು. ಆಮೇಲೆ ನನ್ನ ಹತ್ತಿರ ಬಂದು ಪಿಸುದನಿಯಲ್ಲಿ "ನಮ್ಮ ಮುಖ್ಯಸ್ಥರು ಹೊರ ದೇಶದ ಡೆಪ್ಯೂಟೇಷನ್‌ನಲ್ಲಿ ತುಂಬಾ ದುಡ್ಡು ಗಳಿಸಿದ್ದರು. ಅದನ್ನೆಲ್ಲ ಬಿಜಲಾನಿ ಹತ್ತಿರ ಇನ್ವೆಸ್ಟ್ ಮಾಡಿಸಿದ್ದಾರೆ. ಅವನ ಮೇಲೆ ಅವರಿಗೆ ತುಂಬಾ ಸ್ನೇಹ. ಅಷ್ಟೇ ಅಲ್ಲ.ಹತ್ತಾರು ಬೇರೆ ಕೇಂದ್ರ ಸರಕಾರದ ಅಧಿಕಾರಿಗಳಿಗೆ ಕೂಡ ಬಿಜಲಾನಿ ಸಹಾಯ ಮಾಡುತ್ತಾನೆ. ಹತ್ತು ರೂಪಾಯಿ ನಿವೇಶ ಹೂಡಿದರೆ ಎರಡೇ ವರ್ಷಗಳಲ್ಲಿ ನೂರು ರೂಪಾಯಿ ಮಾಡಿ ಕೊಡುತ್ತಾನೆ. ತುಂಬಾ ಚಾಣಾಕ್ಷ. ಆದರೆ ತುಂಬಾ ಕೆಟ್ಟವನು ಕೂಡ. ನಿನ್ನೆಯೇ ದೊಡ್ಡ ಸಾಹೇಬರು ನನಗೆ ಫೋನ್ ಮಾಡಿ ನಿಮ್ಮ ಮಂಜೂರು ಇಲ್ಲದೆ ಮೆಮೊ ಕೊಟ್ಟಿರುವುದು ತುಂಬಾ ತಪ್ಪು ಎಂದು ಕೂಗಾಡಿದರು. ನೀನು ಮೊದಲೇ ನಂಗೆ ಹೇಳಿದ್ದರೆ ಚೆನ್ನಾಗಿರುತ್ತಿತ್ತು ಎಂದರು. ಇಂತಹ ಕೆಲಸ ತುಂಬಾ ಯೋಚನೆ ಮಾಡಿ, ಚರ್ಚೆ ಮಾಡಿ  ನಂತರ ಮಾಡುವುದು ಸರಿ. ನಿನಗಿನ್ನೂ ಅನುಭವವಿಲ್ಲ. ಇನ್ನು ಮೇಲೆ ಈ ರೀತಿ ದುಡುಕಬೇಡ" ಎಂದರು.

"ಸರ್, ನಿಯಮ ಉಲ್ಲಂಘನೆ ನಿಜ ತಾನೇ ? ನಾನೇ ಏನಾದರೂ ಈ ಕೆಲಸ ಮಾಡಿದ್ದರೆ ನೀವು ಸುಮ್ಮನಿರುತ್ತಿದ್ದಿರಾ" ಎಂದು ಕೇಳೇ ಬಿಟ್ಟೆ. "ನೋಡು ಈಗ ನನ್ನ ತಲೆ ಕೆಡುತ್ತಿದೆ. ನಾವು ಅಧಿಕಾರಿಗಳು. ಅವರೆಲ್ಲ ಕರ್ಮಚಾರಿಗಳು. ಅವರೊಂದಿಗೆ ಕಾದಾಡುವುದು ಸರಿಯಲ್ಲ. ಯು ಮೇ ಗೋ" ಎಂದು ಫೈಲ್ ಕಡೆ ಕಣ್ಣು ಹಾಯಿಸಿದರು.. ಅಯ್ಯೋ ದೇವರೇ ಜಗತ್ತು ಎಷ್ಟು ವಿಚಿತ್ರ ಎಂದುಕೊಂಡೆ. 'ಸತ್ಯವಂತರಿಗೆ ಇದು ಕಾಲವಲ್ಲ' ಎಂದು ನಮ್ಮ ತಾಯಿ ಹಾಡುತ್ತಿದ್ದ ಪುರಂದರ ದಾಸರ ಪದ ನೆನಪು ಮಾಡಿಕೊಂಡೆ.

ಮಾರನೆಯ ದಿನವೇ ನನ್ನ ಕಾರ್ಯಾವಳಿ ಬದಲಾಗಿ ನಂಗೆ ಬೇರೆ ಸೆಕ್ಷನ್‌ಗಳ ಕಾರ್ಯ ವಹಿಸಲಾಯಿತು. ಟಿಳಕ್ ಮತ್ತು ಸರಮಳಕರ್ "ನಿಮ್ಮಂತಹ ಒಳ್ಳೆಯ ಆಫೀಸರ್ ನಮಗೆ ಸಿಗುವುದು ಕಷ್ಟ ಎಂದು ಮೊಸಳೆ ಕಣ್ಣೀರು ಕರೆದು ನನ್ನನ್ನು ಬೀಳುಕೊಟ್ಟರು ಜವಾಬು ಕೊಡದೆಯೇ ಬಿಜಲಾನಿ ಬಚಾವಾದ.



2005 ನೇ ಇಸವಿಯಲ್ಲಿ ಊರಿಂದೂರಿನಲ್ಲಿ ಕೆಲಸ ಮಾಡಿದ ನನ್ನನ್ನು ಅದೇ ಮುಂಬೈ ಕಾರ್ಯಾಲಯಕ್ಕೆ ಮುಖ್ಯಸ್ಥಳಾಗಿ ನೇಮಕ ಮಾಡಿದರು. ಕೂದಲು ನರೆತು , ಅನುಭವ ನುರಿತು, ಬೇರೆ ಬೇರೆ ಕಡೆ ಸಮರ್ಪಕವಾಗಿ ಕೆಲಸ ಮಾಡಿದ್ದ ಬಿರುದು ಹೊತ್ತು ಬಂದ ನಾನು ಈಗ ಎಳೆಯ ನಿಂಬೆಕಾಯಿಯಾಗಿರಲಿಲ್ಲ. ಆಫೀಸ್ ಕೂಡ ತುಂಬಾ ಬದಲಾಗಿತ್ತು. ಇಮಾರತು ಅದೇ.. ಆದರೆ ಮಾಡ್ಯೂಲರ್ ಫರ್ನಿಚರ್, ದೊಡ್ಡ ದೊಡ್ಡ ಕಾಂಪಾಕ್ಟರ್ ಹೊಂದಿದ್ದ ಹಾಲುಗಳು. ಎಲ್ಲೂ ಧೂಳು ಬಿದ್ದಿದ್ದು ಕಾಣದು. ಎಲ್ಲರ ಮೇಜಿನ ಮೇಲೂ ಕಂಪ್ಯೂಟರ್‌ಗಳು. ನಾನು ಹಿಂದೆ ಕುಳಿತಿದ್ದ ಕೋಣೆ  ಈಗ ಕಂಪ್ಯೂಟರ್ ಮೈಂಟೆನನ್ಸ್ ಇಂಜಿನಿಯರ್‌ಗಾಗಿ ಮೀಸಲಾಗಿತ್ತು.

ಎರಡು ದಿನಗಳ ನಂತರ ಬೇಗ ಆಫೀಸಿಗೆ ಬಂದೆ. ಸ್ವಲ್ಪೇ ಹೊತ್ತಿನಲ್ಲಿ  ಪಿ ಎ ಫೋನ್ ಮಾಡಿ ಯಾರೋ ದೊಡ್ಡವರ ಹಾಗೆ ಕಾಣುತ್ತಾರೆ ನಿಮ್ಮನ್ನು ನೋಡಲು ಬಂದಿದ್ದಾರೆ ಕಳಿಸಲೇ ಎಂದಳು. ಬಾಗಿಲು ತಳ್ಳಿಕೊಂಡು, ಒಂದು ಕೈನಲ್ಲಿ ಅತ್ಯಂತ ದೊಡ್ಡ ಪುಷ್ಪ ಗುಚ್ಛ ಇನ್ನೊಂದು ಕೈನಲ್ಲಿ ಮುಂಬೈನ ಪ್ರಖ್ಯಾತ ಚಂದು ಹಲ್ವಾಯಿ ಮಿಠಾಯಿ ಡಬ್ಬ ಹಿಡಿದುಕೊಂಡು ಬಂದ ಜೇಷ್ಠ  ನಾಗರಿಕರನ್ನು ಕುಳಿತುಕೊಳ್ಳಲು ಹೇಳಿದೆ. ನನ್ನನ್ನೇ ನೋಡುತ್ತಾ ಆತ  "ಮೇಡಂ ಗುರುತು ಸಿಗಲಿಲ್ಲವೇ, ಬಿಜಲಾನಿ" ಎನ್ನುತ್ತಾ ಹಲ್ಲು ತೋರಿಸಿ ನಕ್ಕರು. "ಬತ್ತೀಸಿ" ಎಂದು ನಾಮಧೇಯ ಮಾಡಿದ್ದ ಬಿಜಲಾನಿ!

"ಓ  ಬಿಜಲಾನಿ! ಬನ್ನಿ. ಹೇಗಿದ್ದೀರಿ "ಎಂದು ಕೇಳಿದೆ. ಪುಷ್ಪ ಗುಚ್ಛ ನನ್ನ ಟೇಬಲ್ ಮೇಲಿಟ್ಟು ಮಿಠಾಯಿ ಪ್ಯಾಕೆಟ್ ಕೊಟ್ಟ  ಭೂಪ. " ಅಭಿನಂದನೆಗಳು ಮೇಡಂ! ಮುಖ್ಯಸ್ಥರಾಗಿ ಬಂದಿದ್ದೀರಿ ಎಂದು ಹಲ್ಲು ಕಿರಿದ. ಅದು ಇದು ಮಾತಾಯಿತು. ನನ್ನ ಚಹಾ ಸಮಯ. ಆತನಿಗೂ ಚಹಾ ಕೊಟ್ಟ ನನ್ನ ಗ್ರೂಪ್ ಡಿ ಕರ್ಮಚಾರಿ. "ನಿವೃತ್ತರಾಗಿ ಎಷ್ಟು ವರ್ಷ ವಾಯಿತು ಎಂದು ಕೇಳಿದೆ. "ಮೇಡಂ ಇಪ್ಪತ್ತು ವರ್ಷ ಸರ್ವಿಸ್ ಆದ ನಂತರ ಸ್ವ ಇಚ್ಛೆಯಿಂದ ನಿವೃತ್ತಿ ಹೊಂದಿದೆ. ಈಗ ನನ್ನದೇ ಬಿಸಿನೆಸ್ ತೆಗೆದಿದ್ದೇನೆ ಎನ್ನುತ್ತಾ ಇನ್ವೆಸ್ಟ್‌ಮೆಂಟ್ ಗೇಟ್‌ವೇ ಎಂದು ಹೆಸರು ತೋರಿಸುವ ಸುಂದರ ಬಿಸಿನೆಸ್ ಕಾರ್ಡ್ ನನ್ನ ಕೈಗಿತ್ತ.

"ಮೇಡಂ ನಿಮಗೆ ಗೊತ್ತು ಈಗ ಟ್ರೇಡಿಂಗ್ ಮಾಡುವುದು ಮೊದಲ ಹಾಗಲ್ಲ. ಎಲ್ಲವೂ ಕಂಪ್ಯೂಟರ್ ಮೂಲಕ. ನನ್ನ ಮಗ ಮತ್ತು ಮಗಳು ಸೆಬಿ ನಡೆಸುವ ಪರೀಕ್ಷೆ ಮಾಡಿಕೊಂಡು ಇಬ್ಬರೂ ನನ್ನ ಜೊತೆಯೇ ಕೆಲಸ ಮಾಡುತ್ತಾರೆ ಮಗ ಮ್ಯೂಚುಯಲ್ ಫಂಡ್ಸ್ ನೋಡಿಕೊಳ್ಳುತ್ತಾನೆ. ಮಗಳು ಶೇರ್ ಮಾರ್ಕೆಟ್ ನೋಡುತ್ತಾಳೆ. 55 ಜನ ನಮ್ಮ ಕೆಲಸಗಾರರು. ಹನ್ನೆರಡು ಜನರು ಎಂ.ಬಿ.ಎ. ಮಾಡಿಕೊಂಡಿದ್ದಾರೆ, 32 ಜನ ಇಂಜಿನಿಯರ್‌ಗಳು. ಮಿಕ್ಕವರಲ್ಲಿ ಕಂಪ್ಯೂಟರ್ ಎಕ್ಸ್‌ಪರ್ಟ್ಸ್ ಮತ್ತು ಅಡ್ಮಿನಿಸ್ಟ್ರೇಷನ್ ನೋಡಿಕೊಳ್ಳುವವರು. ಒಂದು ದಿನ ನಮ್ಮ ಆಫೀಸಿಗೆ ಭೇಟಿ ಕೊಡಿ ಎಂದು ಆಮಂತ್ರಣವಿತ್ತ.

"ನೀವು ಮೊದಲಿನಂತೆಯೇ ಶೇರ್ ಟ್ರೇಡಿಂಗ್ ತಾನೇ ಎಂದು ಕೇಳಿದೆ "ಹೌದು ಮೇಡಂ. ನನ್ನ ವರ್ಷಾಂತರದ ಅನುಭವ ಮಕ್ಕಳಿಗೆ ಹೇಗೆ ಬರುತ್ತದೆ  ಹೇಳಿ " ಎಂದ. "ನೀವು ಬಂದಿದ್ದು ತುಂಬಾ ಸಂತೋಷವಾಯಿತು ನಿಮಗೂ ಮತ್ತು ನಿಮ್ಮ ಕಾರುಬಾರಿಗೂ ನನ್ನ ಶುಭಾಶಯಗಳು ಎಂದು ಹಾರೈಸಿದೆ.



"ಅಂದ ಹಾಗೆ ಮೇಡಂ ನೀವು ಸರಕಾರಿ ಕ್ವಾರ್ಟರ್ಸ್ ನಲ್ಲಿರಬೇಕಲ್ಲವೇ? ನಾನು ಕೊಲಾಬಾ ದಲ್ಲಿ ದೊಡ್ಡ ಟವರ್ ಕಟ್ಟಿಸಿದ್ದೇನೆ. 21 ಅಂತಸ್ತಿನದು. 6 ಬೆಡ್ರೂಮ್‌ಗಳಿವೆ.

2 ಗೆಸ್ಟ್ ರೂಮ್ ಕೂಡ ಇವೆ. ಯಾವಾಗಲಾದರೂ ನಿಮ್ಮ ಅತಿಥಿಗಳಿದ್ದರೆ ಖಂಡಿತ ಸಂಕೋಚವಿಲ್ಲದೆ ಫೋನ್ ಮಾಡಿ.ನೀವೂ, ನಿಮ್ಮ ಕುಟುಂಬದವರೂ ಮತ್ತು ಸ್ನೇಹಿತರಿಗೆ ನನ್ನ ಮನೆಯಲ್ಲಿ ಸದಾ ಸ್ವಾಗತ ಎನ್ನುತ್ತಾ ಮತ್ತೆ ಹಲ್ಲು ಕಿರಿದ ಬಿಜಲಾನಿ. ಅಂತಹ ಪರಿಸ್ಥಿತಿ ಬರಲಾರದು ಎಂದು ನಗುತ್ತಲೇ ಹೇಳಿದೆ. 'ಅಂದ ಹಾಗೆ ಮೇಡಂ 6 ನೇ ಪೆ ಕಮಿಷನ್ ನಂತರ ನಿಮ್ಮ ಸಂಬಳ ಹೆಚ್ಚಾಗಿರಬೇಕು. ಸ್ವಲ್ಪ ಇನ್ವೆಸ್ಟ್ಮೆಂಟ್ ನಮ್ಮ ಮೂಲಕ ಮಾಡಿ ನಿಮ್ಮ ಮಕ್ಕಳ ಮದುವೆಗೆ ಸಹಾಯ ಆಗುವುದು ಎಂದು ಉಪದೇಶಿಸಿದ ಛಲ ಬಿಡದ ವಿಕ್ರಮನಂತೆ ! 'ಅಂದ ಹಾಗೆ ಮೇಡಂ ನಿಮ್ಮ ಗೆಳತಿ ಲಕ್ಷ್ಮಿ ಮೇಡಂ ನನ್ನ ಹತ್ತಿರದಿಂದಲೇ ಸ್ವಲ್ಪ ಸ್ವಲ್ಪ ಹಣ ಶೇರ್ ಮಾರ್ಕೆಟ್ ನಲ್ಲಿ ಇನ್ವೆಸ್ಟ್ ಮಾಡುತ್ತಿದ್ದರು. ಒಳ್ಳೆಯ ಕಾಲ ನನ್ನ ಉತ್ತಮ ಸಲಹೆ.ಈಗ ಅವರ ಹತ್ತಿರ ಬಾಂದ್ರಾ ಬಡಾವಣೆಯಲ್ಲಿ 2 ಬಿ.ಎಚ್.ಕೆ. ಫ್ಲಾಟ್ ಇದೆ. ನೀವು ನಿಮ್ಮ ಊರಿನಲ್ಲಿ ಫ್ಲಾಟ್ ತೆಗೆದುಕೊಂಡಿರಬೇಕಲ್ಲವೇ. ಮುಂಬೈ ನಲ್ಲಿ ಫ್ಲಾಟ್ ತೆಗೆದುಕೊಳ್ಳುವುದು ಈಗ ಸಾಮಾನ್ಯ ಜನರಿಗೆ ಅಸಾಧ್ಯ" ಎಂದೂ ತನ್ನ ಪಾಟಿಂಗ್ ಶಾಟ್ ಕೊಟ್ಟ.

ಒಂದು ಗಳಿಗೆ ಅವನತ್ತಲೇ ನೋಡಿದೆ. ನಿಜ ಹೇಳುತ್ತೇನೆ ಅವನ ಬಗ್ಗೆ ದಯಾ ಭಾವನೆ ಬಂತು. ಕೋಪ ಒಂದು ಚೂರೂ ಬರಲಿಲ್ಲ. ಅಧಿಕಾರಿಗಳ ಜತೆ ಮೀಟಿಂಗ್ ಇದೆ. ಎಲ್ಲರೂ ಮೀಟಿಂಗ್ ರೂಮ್‌ನಲ್ಲಿ ಹಾಜರಿದ್ದರೆ ಎಂದು ಪಿಎ ಒಳಬಂದು ಹೇಳಿದಳು. ಬಿಜಲಾನಿ ಎದ್ದ. ಮತ್ತೊಮ್ಮೆ ಬತ್ತೀಸಿ ತೋರಿಸಿ ಹೊರಗೆ ಹೋದ. ಅವನು ಹೊರಗೆ ಹೋದ ಕೂಡಲೇ ಪಿಎಗೆ "ಈ ಮಿಠಾಯಿ ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಹಂಚಿಬಿಡು. ನಂಗೆ ಕೊಡುವುದು ಬೇಡ ಎಂದೆ. "ಮೇಡಂ ಎಷ್ಟು ಸುಂದರ ಹೂಗಳು" ಎಂದಳು ರಾಧಾ. "ಈ ಗುಚ್ಛವನ್ನು ನಿನ್ನ ಟೇಬಲ್ ಮೇಲೆ ಇಟ್ಟುಕೋ ಈ ಹೂವುಗಳ ವಾಸನೆಗೆ ನಂಗೆ ಅಲರ್ಜಿ" ಎನ್ನುತ್ತಾ ಅದನ್ನೂ ಹೊರಕಳಿಸಿದೆ. ನಾನು ಮೀಟಿಂಗ್ ಸಲುವಾಗಿ ಹೊರಗಿನ ಕಕ್ಷೆಗೆ ಹೋದೆ.

ಮೀಟಿಂಗ್ ಮುಗಿಸಿ ಬಂದಾಗ ಮತ್ತೆ 1979 ರಲ್ಲಿ ನಡೆದ ಬಿಜಲಾನಿ ಪ್ರಸಂಗ ನಮ್ಮ ಅಂದಿನ ಮುಖ್ಯಸ್ಥರು ನನಗೆ ಬುದ್ಧಿ ಕಲಿಸಿದ್ದು, ಮುಖರ್ಜಿ ಸರ್ ಕಲಿಸಿಕೊಟ್ಟಿದ್ದ ಅಮೂಲ್ಯ ಪಾಠ ಎಲ್ಲವೂ ನೆನಪಿಗೆ ಬಂದವು. ಸ್ವಲ್ಪ ಅನ್ಯಾಯವಾದರೂ ಸಹಿಸದ ನಾನು ಇಂದು ಬಿಜಲಾನಿ ಮಾತುಗಳನ್ನು ಸಹಿಸಿದ್ದು ಹೇಗೆ? ಒಂದು ಚೂರೂ ಕೋಪಗೊಳ್ಳದೆ ಶಾಂತ ರೀತಿಯಲ್ಲಿ ವರ್ತಿಸಿದ್ದು ಹೇಗೆ? ವಯಸ್ಸಿನ ಪರಿಣಾಮವೇ? ಅಥವಾ ನಾನು ಅಧ್ಯಾತ್ಮ ಸಾಧನೆಯಲ್ಲಿ ಮುಂದುವರೆದಿದ್ದೀನೆಯೇ? ಏನೇನೋ ವಿಚಾರಗಳು ತಲೆಯಲ್ಲಿ ಬಂದವು.

ಹನ್ನೊಂದು ಗಂಟೆಯ ಸುದ್ದಿ ನೋಡಲು ನನ್ನ ಕಕ್ಷೆಯಲ್ಲಿದ್ದ ಟಿವಿ ಆನ್ ಮಾಡಿದೆ. ರಾಜಕೀಯದ ಏರುಪೇರಿನ ಊಹೆಯಿಂದ ಸ್ಟಾಕ್ ಮಾರ್ಕೆಟ್ ಭಾರೀ ಪ್ರಮಾಣದಲ್ಲಿ ಕುಸಿದಿದೆ ಎಂದು ಒಬ್ಬ ಸುಂದರ ಹುಡುಗಿ ಕೀರಲು ದನಿಯಲ್ಲಿ ಕಿರುಚಿಕೊಳ್ಳುತ್ತಿದ್ದಳು.

ಅಲ್ಲಾರೀ ಅದು ಯಾಕೆ ನನ್ನ ಮುಖದಲ್ಲಿ ಮುಗುಳ್ನಗೆ ಬರಬೇಕು?

■



# ಅನುಶಾಸನ ಪರ್ವ

(ಲಲಿತ ಪ್ರಬಂಧ ಮಹಿಳಾ ದರ್ಬಾರ್)

**- ರಮೇಶಚಂದ್ರ**

ಮಹಾಭಾರತದ ಕೊನೆಯಲ್ಲಿ ಒಂದು ಭಾಗ... ಅನುಶಾಸನ ಪರ್ವ ಅಂತ ಬರುತ್ತೆ ಅರೆ... ಇದೇನು ಲಲಿತ ಪ್ರಬಂಧ ಅಂತ ಕರೆದು ಪುರಾಣ ಪುಣ್ಯ ಕಥೆ ಹೇಳ್ತಾ ಇದ್ದೀರಲ್ರಿ... ಅನ್ನಬೇಡಿ. ಸ್ವಲ್ಪ ನಾ ಹೇಳೋದನ್ನು ಕೇಳಿ ಯಾಕೆ ಈ ಅನುಶಾಸನ ಪರ್ವದ ಒಂದು ಉದಾಹರಣೆ ತೊಗೊಂಡೆ ಅಂದ್ರೆ... ಅದರಲ್ಲಿ ಧರ್ಮರಾಯನಿಗೆ ರಾಜ್ಯವನ್ನು ಆಳುವಾಗ ಅನುಸರಿಸ ಬೇಕಾದ ನೀತಿ– ನಿಯಮ– ಕಾನೂನು– ಕಟ್ಟಳೆ ಇತ್ಯಾದಿಗಳನ್ನು ತಿಳಿ ಹೇಳಿ ಏನು ಮಾಡಬಾರದು... ಹೌದು ಏನು ಮಾಡಬಾರದು ಎಂಬುದರ ಬಗ್ಗೆ ಎಚ್ಚರಿಕೆ ಕೊಡುತ್ತಾರೆ. ಇಂತಿಂಥ ಕೆಲಸಗಳನ್ನು, ಪಂ–ಮ–ಪಾ... ಅದೇ ಸ್ವಾಮಿ ಪಂಚ ಮಹಾ ಪಾತಕಗಳನ್ನು ಮಾಡಬೇಡಿ ಅಂತ ಕೆಂಪು ದೀಪ ತೋರಿಸುತ್ತಾರೆ... ಅಂತಹ ಒಂದು ಅನುಶಾಸನ ಪರ್ವಕ್ಕೆ ನಾನು–ಹೌದು ಶಿವ–ನಾನೆಂಬ ಈ ಪಾತಕಿ.. ದಿನಂಪ್ರತಿ– ಅಥವಾ ಎಡಮಗ್ಗುಲಲ್ಲಿ ಎದ್ದಿದ್ದರೆ ದಿನಕ್ಕೆ ಹಲವಾರು ಬಾರಿ.. ಕೊರಳು ಕೊಡ್ತಾನೆ ಇರ್ತಿನಿ. ಈಗ ಒಂದು ಕಮರ್ಶಿಯಲ್ ಬ್ರೆಕ್ ತೊಗೊಳೋಣ್ವಾ?

ಬ್ರೇಕ್ ನಂತರ ಸುಸ್ವಾಗತ... ನಾನು ಆಗಲೇ ಹೇಳಿದ ಅನುಶಾಸನ ಪರ್ವದ ಕಮಿಟಿಯ ಛೇರ್ಮನ್ನು–ಸಾರಿ–ಛೇರ್ ವುಮೆನ್– ಹೌದು ಸಾರ್ ನಿಮ್ ಊಹೆ ಕರೆಕ್ಟು, ಹಂಡ್ರೆಡ್ ಪರ್ಸೆಂಟ್ ರೈಟು, ಅವರೆ ನಮ್ ಶ್ರೀಮತಿಯವರು. ಈ ಪ್ರಬಂಧ ಓದಿದರೆ ಇದನ್ನ ಮುಚ್ಚಿಡಿ ಅಥಾವ ಬಚ್ಚಿಡಿ. ನಿಮ್ಮ ಮನೆಯವರಿಗೆ ಮಾತ್ರ ತೋರಿಸಬೇಡಿ. ನಿಮಗೇ ಲಾಸು... ಮೆಂಟಲ್ ಟಾರ್ಚರ್. ನಮ್ಮಪ್ಪ ಹೇಳ್ತಾ ಇದ್ರು "ಅನ್ ಈಕ್ವಲ್ ಕಾಂಬಿನೇಶನ್ ಈಸ್ ಆಲ್‌ವೇಸ್ ಡಿಸ್‌ಅಡ್ವಾನ್ಟೇಜ್ ಅಂಡ್ ಡೇಂಜರೆಸ್ ಟು ದಿ ವೀಕರ್ ಕ್ರಾಸ್ ಸೆಕ್ಷನ್" ಅಂತ. ನಿಮ್ಮ ಮನೆಯಲ್ಲೂ ಹಾಗೆ ತಾನೆ ಅದಕ್ಕೆ ಹೇಳಿದ್ದು ಇಷ್ಟರ ಮೇಲೆ ಓವರ್ ಅಂಡ್ ಎಬೊ ನೀವು ರಿಸ್ಕ್ ತೊಗೊಂಡರೆ ಮುಂದೆ ಆಗೋ ಅನಾಹುತಗಳಿಗೆ ಕಂಪನಿಯವರು ಜವಾಬ್ದಾರರಲ್ಲ. ಈಗ ಕನ್ನಡದಲ್ಲಿ ವಾರ್ತೆಗಳು ವಾರ್ತೆಗಳ ನಂತರ ಪ್ರಬಂಧ ಮುಂದುವರೆಯುವುದು.

ಈಗ ಮತ್ತೆ ಪ್ರಬಂಧ ಕಾರ್ಯಕ್ರಮಕ್ಕೆ ಸುಸ್ವಾಗತ. ಈಗ ವಿಷಯಕ್ಕೆ ಬರೋಣ... ಹಾಂ ಯಾವ ವಿಷಯಕ್ಕೆ ಅಂದ್ರ ಅಯ್ಯಯ್ಯೋ ಫ್ಯಾಶನ್ ಶೋನಲ್ಲಿ... ಬಿಕನಿ ಬ್ಯೂಟಿಗಳ ಕ್ಯಾಟ್ ವಾಕ್ ನೋಡ್ತಾ ನೋಡ್ತಾ ವಿಷಯಾನೇ ಮರೆತು ಬಿಟ್ಟಿದ್ದೀರಲ್ಲ ಸ್ವಾಮಿ. ನ್ಯಾಯವೇ... (ನ್ಯಾಯ ಎಲ್ಲಿದೆ ಓ ಅಣ್ಣಾ ನ್ಯಾಯ ಎಲ್ಲಿದೆ) ಅದೇ ಸ್ವಾಮಿ... ಅನುಶಾಸನ ಪರ್ವದ ವಿಷಯ ಪ್ಲೀಸ್ ಗೀವ್ ಮಿ ಎ ಪೇಷಂಟ್ ಹಿಯರಿಂಗ್ ಸಾರ್ ಈಗ ನೇರವಾಗಿ ವಿಷಯಕ್ಕೆ ಬರ್ತೀನಿ.

ಮದುವೆಯಾದ ಹೊಸದರಲ್ಲಿ... ನಮ್ಮವಳು ಇಲಿ ಇದ್ದ ಹಾಗೆ ಇದ್ದವಳು ಶೋಭನದ ಶಾಸ್ತ್ರ ಮುಗಿತಾ ಇದ್ದ ಹಾಗೆ ಹುಲಿ ಹಾಗೆ ಕನ್ವರ್ಟ್ ಆಗಿ ಬಿಟ್ಟಳು. ಇನ್ನೂ ಹೊಸದು... ಪಾಪ... ಅಂತ ಹೇಳಿ ಕೋಲೆ ಬಸವನ ಹಾಗೆ ತಲೆ ಆಡಿಸ್ದೆ ನೋಡಿ ಅಲ್ಲೇ ಬಂದಿದ್ದು ಕಷ್ಟಕ್ಕೆ. ಸರ್... ನಾವು– ನೀವು ಶುರುವಿನಿಂದಲೇ ಬಿಗಿಯಾಗಿರಬೇಕು ಸಾರ್. ಬಿಲ್ಲಿಗೆ ಕಟ್ಟಿದ ಹೆದೆಯ ನಾರಿನ ಹಾಗೆ... ಬಲೂನ್ ಒಳಗಿನ ಗಾಳಿಯ ಹಾಗೆ. ಒಂದು ಸಲ ಲೂಸ್ ಆದಿರೋ ಅಷ್ಟೆ ಹೋಯ್ತು ಗ್ರಿಪ್ಪು. ಪೂರ್ತಿ ಅವರ ವಶಕ್ಕೆ ನಮ್ಮನ್ನು ತೆಗೆದುಕೊಂಡು ಬಿಡ್ತಾರೆ. ಚಾವಟಿನೇ ಇಲ್ಲದೆ ಬುಗುರಿ ಆಡಿಸಿ ಬಿಡುತ್ತಾರೆ. ಏನಂದ್ರಿ ಅನುಶಾಸನ ಪರ್ವನೇ... ಓ ಅದಾ ಮರ್ತೇಹೋಗಿತ್ತು ನೋಡಿ ಈಗ ಒಂದು ಕಾಫಿ ಬ್ರೇಕ್



ತೊಗೊಳೋಣ್ವಾ. ತಲೆ ಸ್ವಲ್ಪ ಚುರುಕಾಗುತ್ತೆ.

ಕಾಫಿ ಬ್ರೇಕ್‌ನ ನಂತರ ಮತ್ತೆ ಸುಸ್ವಾಗತ... ಈಗ ಸೆಂಟರ್ ಆಫ್ ಅಟ್ರಾಕ್ಷನ್ ಪಾಯಿಂಟ್‌ಗೆ ಬರ್ತೀನಿ, ಅಯ್ಯಯ್ಯೋ... ಭುವನ ಸುಂದರಿ ಬ್ಯೂಟಿ ಕ್ವೀನ್‌ದು ಅಲ್ಲ ಸ್ವಾಮಿ. ಅನುಶಾಸನ ಪರ್ವದ್ದು. ನೋಡಿ ನಮ್ಮ ಶ್ರೀಮತಿ ಅವರ ಕರಾರು ಪ್ಲಸ್ ತಕರಾರುಗಳು. ಹೇಗೆ ಅಂದರೆ ಈ ಡಾಕ್ಟರುಗಳ ಅಡ್ವೈಸ್‌ನಲ್ಲಿ ಡೂಸ್ ಮತ್ತೆ ಡೋಂಟ್ಸ್ ಅಂತ ಇರುತ್ತೆ ಆದರೆ ನಮ್ಮವಳ ಅನುಶಾಸನ ಪರ್ವದಲ್ಲೋ ಬರೀ ಡೋಂಟ್ಸೇ.

ಕಾಫಿ ಕುಡಿದ ಲೋಟನಾ ಟೀಪಾಯಿ ಮೇಲೆ ಇಡಬೇಡಿ ನೊಣ ಮುತ್ತುತ್ತೆ– ಬಿಸಿನೀರು ಇಟ್ಟುಕೊಳ್ಳದೆ ಚೌರಕ್ಕೆ ಇಳಿಬೇಡಿ– ಟವೆಲ್ ಇಟ್ಕೊಳ್ಳದೆ ಸ್ನಾನಕ್ಕೆ ಹೋಗಬೇಡಿ– ಬರೀ ಟವೆಲ್ ಸುತ್ಕೊಂಡು ಚಡ್ಡಿ ಬನಿಯನ್ ಹುಡ್ಕಕ್ಕೆ ಹಿತ್ತಲ ಕಡೆ ಬರಬೇಡಿ– ಸಿಗಲಿಲ್ಲ ಅಂತ ಟವಲಲ್ಲೇ ಕಾಂಪೌಂಡ್ನಲ್ಲಿ ಸುತ್ತಬೇಡಿ– ಊದುಬತ್ತಿ ಹಚ್ಚಿದ ಬೆಂಕಿಕಡ್ಡಿನ ದೇವರ ಮನೆ ಗೂಡಲ್ಲಿ ಎಸಿಬೇಡಿ–ದೀಪದ ಬತ್ತಿ ದೊಡ್ಡದು ಮಾಡಿದ ಎಣ್ಣೆ ಕೈಯನ್ನು ಗೋಡೆಗೆ ಒರೆಸಬೇಡಿ– ಕೊಬ್ಬರಿ ಎಣ್ಣೆ ಹಚ್ಚಿಕೊಂಡು ನೀರು ಸವರಿಕೊಂಡು ತಲೆಬಾಚಿಕೊಂಡ ಬಾಚಣಿಗೆಯಲ್ಲಿ ಹಲ್ಲ ಇರುತ್ತಲ್ಲ ಅದನ್ನ ಒರೆಸದೆ ಹಾಗೆ ಇಡಬೇಡಿ– ಮೋಪಾಗಿ ಡ್ರೆಸ್ ಮಾಡಿಕೊಂಡು ಎದುರುಗಡೆ ಮನೆ ಮಿಟುಕಲಾಡಿಗೆ ಲೈನ್ ಹೊಡಿಬೇಡಿ ಅವಳಿಗೆ ಮದುವೆಯಾಗಿ ಎರಡು ಮಕ್ಕಳಿವೆ ಮರಿಬೇಡಿ– ಶಿಳ್ಳೆ ಹೊಡಿತಾ ಬೀದೀಲಿ ಠಳಾಯಿಸಬೇಡಿ– ನಾನು ದೇವರ ಪೂಜೆ ಮಾಡುವಾಗ ಡರ್ಟಿ ಪಿಕ್ಚರ್ ಸಿಡಿ ಹಾಕ್ಬೇಡಿ– ಕೆಟ್ಟದಾಗಿ ಗೂರ್ಲು ಥರ ಕೆಮ್ಮಬೇಡಿ– ಕ್ಯಾಕ್.. ಥೂಕ್ ಅಂತ ಕ್ಯಾಕರಿಸಬೇಡಿ– ಗಂಟಲು ಗಳ ಗಳ ಮಾಡಿ ಉಗಿಬೇಡಿ– ಛೀ ಛೀ ಛೀ ಎರಡು ಕೈಯಲ್ಲಿ ಹಾಗೆ ತಲೆನಾ ಪರ ಪರ ಕೆರೆದುಕೊಳ್ಳಬೇಡಿ ಹೇನೋ ಕೂರೆಯೋ ಅಂದು ಕೊಳ್ತಾರೆ– ಅಯ್ಯೋ ದೇವರೆ ಅಷ್ಟು ಜೋರಾಗಿ ಅಪಾನ ವಾಯು ಬಿಡಬೇಡ್ರಿ ಗುಂಪಲ್ಲಿ ಮಾನ ಹೋಗುತ್ತೆ– ರಸ್ತೆನಲ್ಲಿ ಉಗಿಬೇಡಿ ಬ್ಯಾಡ್ ಮ್ಯಾನರ್ಸ್– ಎಲೆ ಅಡಿಕೆ ಹಾಕ್ಕೊಂಡು ಫಂಕ್ಷನ್‌ಗಳಲ್ಲಿ ಹಲ್ಲಿಗೆ ಕಡ್ಡಿ ಹಾಕಬೇಡಿ– ಕಿವಿ ಯಾಕ್ರೀ ಹಂಗ್ ತೋಳ್ಸಿರಾ– ದೇವರೇ ಕಣ್ಣಿನ ಸಿಳ್ಳೆ ತೆಗಿತಾನೆ ಇರಬೇಡಿ– ಗೊಣ್ಣೆ ಸೀದಿ ಕಾಂಪೌಂಡ್ ಗೋಡೆಗೆ ಒರೆಸಬೇಡಿ ಅಸಹ್ಯ– ಬಾತ್‌ರೂಮ್‌ಗೆ ಹೋದಾಗ ಬಾಗಿಲು ಹಾಕ್ಕೊಳ್ಳಿ ಮಾರಾಯರೆ ಕೆಲಸದವಳು ಕಿಸಿ ಕಿಸಿ ನಗ್ತಾಳೆ– ಬಸ್ ಹಿಡಿಯಕ್ಕೆ ಹೋದಾಗ ನನ್ನ ಒಬ್ಬಳನ್ನೇ ಲಗೇಜ್ ಸಮೇತ ಬಿಟ್ಟು ಹೆಂಗಸರ ಹಿಂದೆ ಹತ್ತಬೇಡಿ–ಅಂದವಾಗಿರೋ ಹೆಂಗಸರ ಪಕ್ಕ ಕೂರಬೇಡಿ– ಕ್ಯೂಟ್ ಆಗಿರೋ ಹುಡ್ಗಿರನ್ನ ನೋಡಿ ಕರುಣೆಯಿಂದ ಸೀಟ್ ಬಿಟ್ಟು ಕೊಡಬೇಡಿ– ಕೆಟ್ಟದಾಗಿ ಹೊಟ್ಟೆ ಅಮುಕಿಕೊಂಡು ತೇಗಬೇಡಿ– ಸೂರು ಹಾರೋ ಹಾಗೆ ಸೀನಬೇಡಿ ಚಿಕ್ಕ ಮಕ್ಕಳು ಬೆದರಿ ಬಿಡ್ತಾರೆ– ಸಾಮಾನ್ ಚೀಟಿ ಮನೆಯಲ್ಲೇ ಮರೆತು ದಿನಸಿ ಅಂಗಡಿಗೆ ಹೋಗಬೇಡಿ– ಗಿಫ್ಟ್ ಸೆಂಟರ್ ಲೋಲಾಕ್ಷಿಯರು ಹೇಳಿದ್ದೆಲ್ಲಾ ಕೇಳಿಕೊಂಡು ಹಿಹಿಹಿ ಅಂತ ಹಲ್ಲು ಕಿರ್ಕೊಂಡು ಒಂದಕ್ಕೆ ನಾಲ್ಕು ಕೊಟ್ಟು ಪ್ರಸೆಂಟೇಶನ್ ತರಬೇಡಿ–ಒಡವೆ ಅಂಗಡಿಗೆ ಚೀಟಿ ದುಡ್ಡು ಕಟ್ಟಿಬನ್ನಿ ಅಂದರೆ ಅಲ್ಲಿಗೆ ಒಡವೆ ನೋಡಕ್ಕೆ ಬರೋ ಅಂದಗಾರ್ತಿಯರನ್ನೇ ಮಿಕಿ ಮಿಕಿ ಅಂತ ತಿನ್ನೋ ಹಾಗೆ ನೋಡಬೇಡಿ– ಸೈಬರ್ ಕೆಫೆ ಹುಡುಗಿಯರ ಹತ್ರ ಹರಟೆ ಕೊಚ್ತಾ ನಿಂತ್ಕೋಬೇಡಿ–ಯಾರಾದ್ರು ಸೇಲ್ಸ್‌ಗರ್ಲ್‌ಗಳು ಮನೇ ಹತ್ರ ಬಂದು... ನೈಸಾಗಿ ಟೋಪಿ ಹಾಕಿದ್ರೆ ಕಮಂಗಿ ತರಹ ಡಜನ್‌ಗಟ್ಲೆ ಐಟಂಗಳನ್ನು ತೊಗೊಂಡು ಬಿಡಬೇಡಿ–ಯಾವುದೇ ಕಾರಣಕ್ಕೂ ಆ ನಿಮ್ಮ ಧಾರವಾಡದ ಫ್ರೆಂಡನ್ನ ಮನೇಗೆ ಕರೀಬೇಡಿ ಅವತ್ತು ಆವಯ್ಯ ಜರದಾ ಬೀಡಾ ಹಾಕ್ಕೊಂಡು ಪೀಚ್ ಉಗಿದ ದರಿದ್ರದ ಆ ರಸದ ಕಲೆ ಕಾಂಪೌಂಡ್ ಮೇಲಿಂದ ಇನ್ನೂ ಹೋಗಿಲ್ಲ– ನಿಮ್ಮ ನಾಟಕದ ಖಯಾಲಿ ಪಟಾಲಂ ಟೀಂನವರನ್ನ ಟೆರೇಸ್ ಮೇಲೆ ನಾಟಕದ ರಿಹರ್ಸಲ್‌ಗೆ ದಯವಿಟ್ಟು ಕರೀಬೇಡಿ ಮಾರಾಯ್ರೇ ಅಕ್ಕ



ಪಕ್ಕದ ಮನೇಲಿ ಪರೀಕ್ಷೆಗೆ ಓದೋ ಹುಡುಗರು ಇದಾರೇ– ಟಾಮೀನ ವಾಕಿಂಗ್ ಕರಕೊಂಡು ಹೋದಾಗ ಎದುರುಗಡೆ ಮನೆ ಓನರ್ ಕಾರಿನ ಮೇಲೆ ಉಚ್ಚೆ ಹುಯ್ಯಿಸಬೇಡಿ ಅವರು ಆಗ ತಾನೆ ಗಾಡಿ ತೊಳೆದ್ದಿರ್ತಾರೆ..ಬಡ್ಕೋತಾರೆ–ನ್ಯೂ ಇಯರ್ ಪಾರ್ಟಿ ಅಂತ ಹೇಳಿ ಹೊಟ್ಟೆ ತುಂಬಾ ಎಣ್ಣೆ ಹೊಡೆದು ಮೂಗಿನ ತನಕ ತಿನ್ನಬಾರದೇ ಇದ್ದದ್ದು ತಿನ್ನಬೇಡಿ–ಹಾಳಾಗಿ ಹೋಗ್ಲಿ ತಿಂದ್ರೂವೆ ಮನೆಗೆ ಬಂದು ದೋಸೆ–ಇಡ್ಲಿ–ಪಾಯಸ ಕಕ್ಕಬೇಡಿ ಹುಟ್ಟುಗುಣ ಹಾಳಾದ್ದು ಸುಟ್ರು ಹೋಗಲ್ಲ– ನಿಮ್ಮ ಅರಾಲ್‌ಡೇಟ್ ಫ್ರೆಂಡ್ಸ್‌ಗ್ಯಾಂಗ್‌ನವರನ್ನು ಕಾಫಿಕಟ್ಟೆಗೆ ಕರಕೊಂಡು ಹೋಗಿ ಅಲ್ಲಿಂದ್ಲೇ ಸಾಗಹಾಕಿಬಿಡಿ– ಯಾರಾದ್ರು ಕ್ಯೂಟಾಗಿರೋ ಹುಡುಗೀರು ಅಡ್ರೆಸ್ ಕೇಳಿಕೊಂಡು ಬಂದ್ರೆ ಡ್ರಾಪ್ ಮಾಡಕ್ಕೆ ಹೋಗ್ಬೇಡಿ– ಹೊಸದಾಗಿ ಮದುವೆ ಆಗಿರೋ ನಿಮ್ಮ ಮಗಳನ್ನ ಮೀಟ್ ಮಾಡಕ್ಕೆ ನಾಳೆ ಅಳಿಯಂದಿರು ಬರ್ತಾ ಇದಾರೆ ಅವರನ್ನ ಘಂಟೆಗಟ್ಟಲೆ ಕೂಡಿಸಿಕೊಂಡು ನಿಮ್ಮ ಕತೆ ಕವನ ಸಾಹಿತ್ಯ ಪ್ರಶಸ್ತಿ ಅಂತ ಮೊಳೆ ಹೋಡೀ ಬೇಡಿ... ನ್ಯೂಲಿ ಮ್ಯಾರೀಡ್ ಕಪಲ್ಸು ಮರೀಬೇಡಿ.

ಸಾರ್... ಸಾರ್... ನಿಮ್ಮ ಶ್ರೀಮತಿಯವರು ಕಲಿಯುಗದ ಕಣ್ಮಣಿ ಸಾರ್.. ಪಂಚ ಮಹಾ ಪತಿವ್ರತೆಯರನ್ನ ಮೀರಿಸ್ತಾರೆ ಸಾರ್ ನಿಮ್ಮ ಶ್ರೀಮತಿಯವರ ಶ್ರೀಪಾದಗಳನ್ನ ಝೆರಾಕ್ಸ್ ಮಾಡಿಸಿ ಕಳಿಸೀ ಸಾರ್ ದಿನಾ ಹೂವಿಟ್ಟು ಪೂಜೆ ಮಾಡಿ ಪಾಪ ಕಳ್ಕೋತೀವಿ ಇನ್ನಾದ್ರೂ ಜೋಡಿ ತೆಂಗಿನಕಾಯಿ ಈಡುಗಾಯಿ ಒಡೆದು ಮಹಾಮಂಗಳಾರತೀ.....

ಅಯ್ಯೋ ಇರೀ ಸ್ವಾಮೀ ಯಾಕವಸರ ಮಾಡ್ತಾ ಇದೀರಾ... ಇನ್ನೂ ಕ್ಲೈಮಾಕ್ಸೇ ಬಂದಿಲ್ಲಾ... ನನ್ನ ಹೆಂಡ್ತಿ ಹೇಳೋ ಮುಖ್ಯವಾದಂಥಹ ಪಾಯಿಂಟ್ ಕೇಳಿ...

“ರೀ ಮುಖ್ಯವಾದ ವಿಷಯ ಕೇಳ್ರೀ... ನಮ್ಮ ಮನೆಗೆ ಬಿಂಗೋ ಆಟ ಆಡಕ್ಕೋ... ಮಂತ್ಲಿ ಮೀಟಿಂಗ್‌ಗೋ... ಕಿಟಿಪಾರ್ಟಿಗೋ ನಮ್ಮ ಮಹಿಳಾ ಮಂಡಳಿ ಮೆಂಬರ್ಸು... ಬಂದಾಗ ಮಿಕಿಮಿಕಿ ಅಂತ ಅವರ ಮುಖಾನೆ ತಿನ್ನೂ ಹಾಗೆ ನೋಡ್ತಾ ನಿಂತು ಬಿಡಬೇಡಿ– ನಿಮಗೆ ಹೆಂಗಸರ ಹತ್ತಿರ ಮಾತಿನ ಚಪಲ ಜಾಸ್ತಿ... ಹಳಸಲು ಜೋಕ್ಸ್ ಹೇಳಿ ನನ್ನ ಶೇಪ್ ಎತ್ತಬೇಡಿ– ಸೈಲೆಂಟಾಗಿ ಒಳಗೆ ಹೋಗಿ ತಟ್ಟೆಗೆ ಅನ್ನ ಬಡಿಸಿಕೊಂಡು ತಿಂದು ಮಲಗಿಬಿಡಿ– ನನಗೆ ತುಂಬಾ ನಿದ್ದೆ ಬರ್ತಾ ಇದೆ... ಮಲಕ್ಕೋತೀನಿ... ಮಲಗಿರೋವಾಗ ನನ್ನ ಹೊದಿಕೆ–ದಿಂಬು ಎಳ್ಕೋಬೇಡಿ– ನಿಮ್ಮ ಖಯಾಲಿ... ಚಪಲ ಎಫ್ ಚಾನೆಲ್ ನೋಡಿದ ಮೇಲೆ ಟಿ.ವಿ ಸ್ವಿಚ್ ರಿಮೋಟ್ ಸ್ವಿಚ್‌ಗಳನ್ನು ಆರಿಸೋದು ಮರಿಬೇಡಿ.” ಒಂದು ದೀರ್ಘ ಆಕಳಿಕೆಯೊಂದಿಗೆ ನಿರ್ಗಮನ.

ಸ್ವಾಮಿ ಈಗಲಾದರೂ ಮಹಾಮಂಗಳಾರತಿಗೆ...

ಅಯ್ಯೋ ಎಲ್ಲಿ ಬಂತು ಇವರೇ... ಇನ್ನೂ ಅಷ್ಟಾವಧಾನನೇ ಮುಗಿದಿಲ್ಲ...? ಇದುವರೆಗೆ ನೀವು ಕೇಳಿದ್ದು ಪಬ್ಲಿಕ್ ಲೈಫು... ಪ್ರೈವೇಟ್ ಲೈಫ್‌ದು ಬೇರೆ ಎಪಿಸೋಡೇ ಇದೆ ಬಟ್ ಪ್ರೈವೇಟ್ ಲೈಫ್ ಈಸ್ ಎ ಸೇಕ್ರೆಡ್ ಥಿಂಗ್ ಯು ನೋ... ಅದನ್ನ ಏನಾದರೂ ಅನಾವರಣ ಮಾಡಿದರೆ ನಮ್ಮ ಶ್ರೀಮತಿಯವರು ಮುರಾಡ ಹಾಕಿ ಕಣಿ ಹಾಕ್ಕೊಂಡು...ಮಕಾಡೆ ಮಲಗಿಬಿಡುತ್ತಾರೆ. ಆ ಏಸು ಕ್ರಿಸ್ತನೇ ಮೇಲು ಬರೀ ಟೆನ್ ಕಮಾಂಡ್‌ಮೆಂಟ್‌ಗಳನ್ನು ಹೇಳಿದ. ನನ್ನ ಹೆಂಡತಿನೋ ಟೆನ್ ಟು ದಿ ಪವರ್ ಆಫ್ ಟೆನ್ ಕಮಾಂಡ್‌ಮೆಂಟ್ಸ್‌ಗಳನ್ನು ಹೇಳಿದ್ದಾಳೆ. “ಓ... ಬಂದೆ ಕಣೇ ಬಂದೆ... ಇಗೋ ಬಂದ್ಬಿಟ್ಟೆ ಕಣೆ...” ಅಯ್ಯಯ್ಯೋ ಗುಡ್ ನೈಟ್ ಮಸ್ಕಿಟೊ ರಿಪೆಲಂಟ್ ತಗೊಂಡು ಬನ್ನಿ ಅಂತ ಬೆಳಿಗ್ಗೆನೇ ಹೇಳಿದ್ದಳು ಮರೆತೇ ಬಿಟ್ಟಿದ್ದೀನಲ್ಲಪ್ಪಾ.. ಅಯ್ಯೋ ದೇವರೇ ಈಗ ಇದೆ ಕೋರ್ಟ್ ಮಾರ್ಷಲ್, ಬಂದೆ ಕಣೇ ಬಂದೆ. ■



● ದಂನಆ



✍ ನೀವು ತೆರಿಗೆ ಕೊಡುತ್ತೀರಾ?
ಇಲ್ಲ, ಅವರೇ ಪಡೆದುಕೊಳ್ಳುತ್ತಾರೆ.

✍ ಕೆಲವರು ನಿಮಗೆ ಅಭಿನಂದನೆ ಸೂಚಿಸಿ ಅದಕ್ಕೆ ರಶೀದಿಯನ್ನು ನಿರೀಕ್ಷಿಸುತ್ತಾರೆ.

✍ ರಾಜ್ಯಪಾಲರಾಗಿ ನೇಮಕಗೊಂಡ ರಾಜಕಾರಣಿಗೆ ಸಾಂತ್ವನದ ಮಾತು: 'ಏನೂ ಚಿಂತಿಸಬೇಡಿ. ನಿಮ್ಮ ಮೇಲಿರುವ ಭ್ರಷ್ಟಾಚಾರ ಆಪಾದನೆ ಸಾಬೀತಾದರೆ ನೀವು ಸಕ್ರಿಯ ರಾಜಕಾರಣಕ್ಕೆ ಮರಳಬಹುದು'.

✍ ಎ ವೆರಿ ಲೆಂಗ್ತಿ ಸ್ಪೀಚ್ ಮೆ ನಾಟ್ ಮೇಕ್ ಆಡಿಯನ್ಸ್ ವೈಸರ್ ಬಟ್ ಸರ್ಟನ್ಲಿ ಓಲ್ಡರ್.

✍ ಶ್ರೇಷ್ಠಗ್ರಂಥ: ಜನಗಳು ಹೊಗಳುವ ಆದರೆ ಓದದ ಪುಸ್ತಕ.

✍ ನೀವು ಬಗ್ಗಿದರೆ ಮಾತ್ರ ನಿಮ್ಮ ಮೇಲೆ ಇನ್ನೊಬ್ಬರು ಸವಾರಿ ಮಾಡಲು ಸಾಧ್ಯ.

✍ ಬಾಸ್‌ಗಳು ಎಷ್ಟು ಮೂರ್ಖರಾಗಿರುತ್ತಾರೆ ಎಂಬುದು ನನಗೆ ಅರಿವಾದದ್ದು ನನ್ನ ಸ್ವಂತ ಬುಸಿನೆಸ್ ಪ್ರಾರಂಭಿಸಿದ ಮೇಲೆ.

✍ ಮ್ಯಾರೇಜಸ್ ಮೆ ಬಿ ಮೇಡ್ ಇನ್ ಹೆವನ್ ಬಟ್ ಡೋಂಟ್ ಮೇಕ್ ಇಟ್ ಹೆಲ್ ಹಿಯರ್.

✍ ಎಲ್ಲ ಪಕ್ಷಿಗಳಿಗೂ ದೇವರು ಆಹಾರ ಕೊಡುತ್ತಾನೆ ಆದರೆ ಅದನ್ನು ಗೂಡಿಗೇ ತಂದು ಕೊಡುವುದಿಲ್ಲ.

✍ ಸಕ್ಸಸ್ ಫಾರ್ ಸಮ್ ಪೀಪಲ್ ಡೆಪೆಂಡ್ಸ್ ಆನ್ ಬಿಕಮಿಂಗ್ ವೆಲ್ ನೋನ್; ಫಾರ್ ಅದರ್ಸ್ ಇಟ್ ಡೆಪೆಂಡ್ಸ್ ಆನ್ ನೆವರ್ ಬೀಯಿಂಗ್ ಫೌಂಡ್ ಔಟ್.

✍ ಒಂದು ಲೈಬ್ರರಿ ಕಾರ್ಡ್ ಮಗುವನ್ನು ದೂರದೂರಗಳಿಗೆ ಕರೆದೊಯ್ಯುತ್ತದೆ. ದೊಡ್ಡವನಾದ ಮೇಲೆ ಕ್ರೆಡಿಟ್ ಕಾರ್ಡ್ ಆ ಕೆಲಸ ಮಾಡುತ್ತದೆ.

✍ ನೆರಳಿಗೆ ಅಂಜಬೇಡ. ನೆರಳಿದೆ ಎಂದರೆ ಸಮೀಪದಲ್ಲೇ ಬೆಳಕಿದೆ ಎಂದೇ ಅರ್ಥ.

✍ ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹೋದರೆ ದಿನ ದೊಡ್ಡದಾಗಿರುವಂತೆ ಕಾಣುತ್ತದೆ.





✍ ಯು ಹ್ಯಾವ್ ಅ ಗ್ರೇಟ್ ಸೆನ್ಸ್ ಆಫ್ ರೂಮರ್!




✍ ಎರಡು ತರಹದ ಪದವೀಧರರು ಇರುತ್ತಾರೆ. ಒಬ್ಬರು, ಕಲಿಯುವುದು ಹೇಗೆಂದು ಕಲಿತಿರುವವರು; ಇನ್ನೊಬ್ಬರು, ಯೋಚಿಸುವುದು ಹೇಗೆಂದು ಕಲಿತಿರುವವರು.

✍ ಸ್ನೇಹಿತರನ್ನು ಯಾವಾಗ ಕಳೆದುಕೊಳ್ಳುತ್ತೀವೆ ಗೊತ್ತೆ? ಪದೇ ಪದೇ ಅವರನ್ನು ಸಂಪರ್ಕಿಸುತ್ತಿದ್ದರೆ ಅಥವಾ ಸಂಪರ್ಕಿಸದೆಯೇ ಇದ್ದರೆ.

✍ ಟೀವಿ ಧಾರಾವಾಹಿಗಳಲ್ಲಿ ಬರುವ ಕುಟುಂಬಗಳನ್ನು ನಾವು ಮೆಚ್ಚಲೇ ಬೇಕು ಏಕೆಂದರೆ ಅವರು ಟೀವಿ ನೋಡುತ್ತಾ ಸಮಯ ವ್ಯರ್ಥ ಮಾಡುವುದೇ ಇಲ್ಲ.

✍ ದಿ ಓನ್ಲಿ ಥಿಂಗ್ ಮೋಸ್ಟ್ ಪೀಪಲ್ ಡು ಬೆಟರ್ ದ್ಯಾನ್ ಎನಿಒನ್ ಎಲ್ಸ್ ಈಸ್ ರೀಡ್ ದೇರ್ ಓನ್ ಹ್ಯಾಂಡ್‌ರೈಟಿಂಗ್.

✍ ಮಾಡದೇ ಇರಬೇಕಾದ ಕೆಲಸವನ್ನು ನಾಳೆಗೆ ಮುಂದೂಡಿದರೆ ಏನೂ ಅಡ್ಡಿ ಇಲ್ಲ.

✍ ಆ್ಯಮ್ ಲುಕಿಂಗ್ ಫಾರ್ ಎ ಬ್ಲೆಸಿಂಗ್ ದಟ್ ಈಸ್ ನಾಟ್ ಇನ್ ಡಿಸ್‌ಗೈಸ್.

✍ ಡಯಟಿಂಗ್‌ನ ಅತ್ಯಂತ ಕಠಿಣ ಭಾಗ ಯಾವುದು? ನಾವು ತಿನ್ನುವುದನ್ನು ಗಮನಿಸುವುದಲ್ಲ ನಮ್ಮ ಸ್ನೇಹಿತರು ತಿನ್ನುವುದನ್ನು ಗಮನಿಸುವುದು.

✍ ಬಾಕ್ಸರ್‌ನನ್ನು ಪ್ರೀತಿಸಿದ ಹುಡುಗಿ ಏನೆಂದಳು? ಇಟ್ ವಾಸ್ ಲವ್ ಅಟ್ ಫಸ್ಟ್ ಫೈಟ್ ಕಣೆ.

✍ ಬಡತನದಿಂದ ಸಿರಿತನಕ್ಕೆ ಹೋಗುವುದು ಕಠಿಣ ಪಯಣ ನಿಜ. ಆದರೆ ವಾಪಸ್ ಹೋಗುವುದು ಸುಲಭ.




✍ ಈ ವಿಶ್ವದಲ್ಲಿ ಏನು ಬೇಕಾದರೂ ಆಗಬಹುದು, ಆದುದರಿಂದ ಬಿ ಕೈಂಡ್.

✍ ವೈದ್ಯರು ತಮ್ಮ ಶ್ರೀಶ್ರೀ ಪೇಷಂಟ್‌ಗೆ: ಎಲ್ಲಿ, 'ಓಂ..' ಅನ್ನಿ...

✍ ಬೋನ್ಸಾಯ್: ಮೋಲ್ ಹಿಲ್ ಔಟ್ ಆಫ್ ಎ ಮೌಂಟನ್!

✍ ಹಣವೇ ಎಲ್ಲವೂ ಅಲ್ಲ ಎನ್ನುತ್ತಾರೆ ಉಳ್ಳವರು. ■

# ಆ ಹದಿನೈದು ದಿನಗಳು

**– ಡಿ.ವಿ.ಗುರುಪ್ರಸಾದ್**

2020ರ ಮಾರ್ಚ್ ಎರಡನೆಯ ವಾರ. ಕರ್ನಾಟಕಕ್ಕಾಗಲೇ ಕರೋನಾ ಹೆಮ್ಮಾರಿ ಕಾಲಿಟ್ಟಿದ್ದರೂ ಲಾಕ್‌ಡೌನ್ ಘೋಷಣೆಯಾಗಿರಲಿಲ್ಲ. ಪ್ರತಿದಿನವೂ ಮಾಧ್ಯಮಗಳಲ್ಲಿ ಈ ಭಯಂಕರ ಕಾಯಿಲೆ ಎಲ್ಲೆಲ್ಲಿ ಹರಡುತ್ತಿದೆ ಎಂದು ನಾವು ಗಮನಿಸುತ್ತಲೇ ಇದ್ದೆವು. ಇಟಲಿಯಲ್ಲಿ ರಸ್ತೆಯಲ್ಲಿಯೇ ಜನರು ಸಾಯುತ್ತಿದ್ದದ್ದು, ಲಂಡನ್ ಆಸ್ಪತ್ರೆಗಳಲ್ಲಿ ಬೆಡ್ ಸಿಗದೇ ರೋಗಿಗಳು ಪರದಾಡುತ್ತಿದ್ದದ್ದು, ಅಮೇರಿಕಾದಲ್ಲಿ ಪ್ರತಿದಿನವೂ ಸಾವಿರಾರು ಜನರು ಸೋಂಕಿಗೀಡಾಗುತ್ತಿದ್ದುದನ್ನು ಕಂಡು ನಮ್ಮ ದೇಶದಲ್ಲೇನಾಗುತ್ತದೋ ಎನ್ನುವ ಆತಂಕದಲ್ಲಿಯೇ ನಾವಿದ್ದೆವು.

ಏತನ್ಮಧ್ಯೆ ನನ್ನ ವೈದ್ಯಮಿತ್ರನೊಬ್ಬ ಈಗಾಗಲೇ ಈ ರೋಗ ಬೆಂಗಳೂರಿಗೂ ಬಂದಿದೆ, ಇದು ಹಿರಿಯರಿಗೇ ಮೊದಲು ಅಟ್ಯಾಕ್ ಮಾಡುವುದು, ನಿಮ್ಮ ಮನೆಯಲ್ಲಿ ನೀವು ನಾಲ್ಕು ಜನ ಹಿರಿಯ ನಾಗರೀಕರಿದ್ದೀರಿ, ನೀವು ಕಟ್ಟೆಚ್ಚರದಿಂದ ಇರಬೇಕಾದದ್ದು ಅತಿ ಅವಶ್ಯ ಎಂದು ಎಚ್ಚರಿಕೆ ನೀಡಿದ್ದ. ಅವನ ಮಾತುಗಳನ್ನು ಕೇಳಿದ ನನ್ನ ಮಗ ಅಂದೇ ಅಮೆಜಾನ್‌ನಲ್ಲಿ ಆರ್ಡರ್ ಮಾಡಿ ಒಂದು ಆಕ್ಸಿಮೀಟರ್ ಮತ್ತು ಹಣೆಗಿಡುವ ಥರ್ಮಾಮೀಟರ್ ತರಿಸಿ ದಿನಕ್ಕೆ ಮೂರು ಬಾರಿ ನಮ್ಮನ್ನು ಚೆಕ್ ಮಾಡತೊಡಗಿದ. ಹೋಲ್‌ಸೇಲ್‌ನಲ್ಲಿ ಎನ್–95 ಮಾಸ್ಕ್‌ಗಳನ್ನೂ ಎರಡು ಲೀಟರ್ ಸ್ಯಾನಿಟೈಜರ್ ಬಾಟಲಿಗಳನ್ನು ತಂದ. ನೀವು ಮನೆಬಿಟ್ಟು ಎಲ್ಲಿಗೂ ಹೋಗಬಾರದು, ಹೊರಗಿನಿಂದ ಯಾರೇ ಬಂದರೂ ಟೆಂಪರೇಚರ್ ಚೆಕ್ ಮಾಡಿ ಅವರ ಕೈಗಳ ಸ್ಯಾನಿಟೈಸ್ ಮಾಡಿ, ಮಾಸ್ಕ್ ಧರಿಸಿದ್ದರೆ ಮಾತ್ರ ಒಳಗೆ ಸೇರಿಸಬೇಕು ಎಂದು ಕಟ್ಟಪ್ಪಣೆ ಮಾಡಿದ.

ಅಷ್ಟರಲ್ಲಿ ನಮಗೊಂದು ಸಮಸ್ಯೆ ಎದುರಾಯಿತು. ನಾವು ಏಳೆಂಟು ಹಿರಿಯ ನಾಗರೀಕರು ಕಳೆದ ಹಲವಾರು ವರ್ಷಗಳಿಂದ ಪ್ರತಿ ತಿಂಗಳೂ ಒಬ್ಬೊಬ್ಬರ ಮನೆಯಲ್ಲಿ ಊಟಕ್ಕೆ ಸೇರುವ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಅದರಂತೆ ಮಾರ್ಚ್ ತಿಂಗಳ ಸರದಿ ನಮ್ಮದಾಗಿತ್ತು. ನಾವು ಈ ಕಾರ್ಯಕ್ರಮವನ್ನು ನಡೆಸಬೇಕೋ ಬೇಡವೋ ಎಂದು ಸಮಾಲೋಚಿಸಿದಾಗ ಬಹುತೇಕ ಸದಸ್ಯರು ನಡೆಸಲು ಸೂಚಿಸಿದರು. ಇದು ನಮ್ಮ ಮಗನ ಅರಿವಿಗೆ ಬಂದಿರಲಿಲ್ಲ. ನಿಗದಿತ ದಿನದಂದು ಅವನಿಗೆ ವಿಷಯ ತಿಳಿದಾಗ ಬಹಳ ಹಾರಾಡಿದ. ಇಂತಹ ಹುಚ್ಚು ಕೆಲಸವನ್ನು ಏಕೆ ಮಾಡಿದಿರಿ ಎಂದು ಬೈಯ್ದ. ಮೀಟಿಂಗ್ ಕ್ಯಾನ್ಸಲ್ ಮಾಡಲು ಈಗ ಕಾಲ ಮಿಂಚಿದೆ ಎಂದಾಗ ಅನಿವಾರ್ಯವಾಗಿ ಸುಮ್ಮನಾದ. ಮನೆಗೆ ಎಲ್ಲರೂ ಬಂದಾಗ ಆತ ತನ್ನ ಕೋಣೆಯಿಂದಲೇ ಹೊರಬರಲಿಲ್ಲ.

ಎಲ್ಲರೂ ಬಂದು ಮಾತು ಆರಂಭವಾದಾಗ, ಜಯನಗರದ ಕುಟುಂಬದವರು ತಮ್ಮ ಸೊಸೆ ನಾಲ್ಕು ದಿನಗಳ ಹಿಂದೆಯಷ್ಟೇ ಅಮೇರಿಕಾದಿಂದ ಮರಳಿ ಬಂದಿದ್ದಾಗಿ ತಿಳಿಸಿದರು. ಇದನ್ನು ಕೇಳಿದ ಕೂಡಲೇ ನನ್ನ ಎದೆ ಝಲ್ಲೆಂದಿತು. ಸೊಸೆ ಕ್ವಾರಂಟೈನ್‌ನಲ್ಲಿದ್ದಾರೆಯೇ ಎಂದು ಕೇಳಿದೆ. ಇಲ್ಲ ಅವಳು ಅಮೇರಿಕಾದಿಂದ ಬರುವಾಗಲೇ ಕರೋನಾ ಟೆಸ್ಟ್ ಮಾಡಿಸಿಕೊಂಡೇ ಬಂದಿದ್ದಾಳೆ ಎಂದರು. ನಿಮಗೆಲ್ಲಾ ಕೊಡಿ ಎಂದು ಒಳ್ಳೆಯ ಪಕೋಡಾ ಮಾಡಿ ಕೊಟ್ಟಿದ್ದಾಳೆ, ಟೇಸ್ಟ್ ನೋಡಿ ಎಂದು ಎಲ್ಲರಿಗೂ ಕೊಟ್ಟರು. ಬಹಳ ರುಚಿಯಾಗಿದ್ದರಿಂದ ಐದಾರು ಪಕೋಡಾ ನಾನೊಬ್ಬನೇ ತಿಂದೆ. ಊಟದ ಸಮಯಕ್ಕೆ ಡೈನಿಂಗ್ ಹಾಲ್‌ಗೆ ಬಂದ ಮಗ ಯಾರೂ ಮಾಸ್ಕ್



ತರದೇ ಇದ್ದುದನ್ನು ಗಮನಿಸಿ ಗಾಬರಿಯಾದರೂ ಮೌನದಿಂದಿದ್ದ. ಊಟವಾದ ನಂತರ ಜಯನಗರದ ಕುಟುಂಬ ರಾಜಾಜಿನಗರದ ಕುಟುಂಬದ ಜತೆ ಅವರ ಕಾರಿನಲ್ಲಿಯೇ ಮನೆಗೆ ತೆರಳಿದರು.

ಅವರೆಲ್ಲರೂ ಮನೆಯಿಂದ ಹೋದ ಕೂಡಲೇ ನನಗೆ ಮಗನ ತರಾಟೆ ಪ್ರಾರಂಭವಾಯಿತು. 65ಕ್ಕಿಂತ ಹೆಚ್ಚು ವಯಸ್ಸಾಗಿರುವ ಹದಿನೈದು ಜನರು ಏಕೆ ಒಟ್ಟಿಗೆ ಸೇರಿದ್ದರೂ ಎಲ್ಲರೂ ಮಾಸ್ಕ್ ಏಕೆ ಧರಿಸಲಿಲ್ಲ? ಸಾಮಾಜಿಕ ಅಂತರವನ್ನು ಏಕೆ ಪಾಲಿಸಲಿಲ್ಲ? ಏಕೆ ಎಲ್ಲರಿಗೂ ಸ್ಯಾನಿಟೈಜರ್ ಕೊಡಲಿಲ್ಲ? ಅಮೇರಿಕಾದಿಂದ ಬಂದವರ ಮನೆಯವರನ್ನು ಹೇಗೆ ಕರೆದಿರಿ ? ಅವರಿಂದ ನಮ್ಮ ಮನೆಗೆ ಕರೋನಾ ಹರಡಿದರೆ ಏನು ಮಾಡುವುದು? ಎಂದ. ನನಗೆ ಗಾಬರಿಯಾಯಿತು. ಏನೂ ಆಗುವುದಿಲ್ಲವೆಂದು ಅವನಿಗೆ ಸಮಜಾಯಿಶಿ ನೀಡಿದರೂ ನನ್ನ ಮನದಲ್ಲಿಯೇ ಅಳುಕು ಶುರುವಾಯಿತು.

ಮಾರನೆಯ ದಿನ ಮತ್ತೆ ಅದೇ ಮಾತುಗಳು ಆರಂಭವಾದಾಗ ಜಯನಗರದ ಕುಟುಂಬದ ಯಜಮಾನರಿಗೆ ಕರೆ ಮಾಡಿ, ನಿಮ್ಮ ಸೊಸೆ ಅಮೇರಿಕಾದಿಂದ ಬೆಂಗಳೂರಿಗೆ ಯಾವ ದೇಶದ ಮೂಲಕ ಬಂದಳು ಎಂದು ಕೇಳಿದೆ. ಅದಕ್ಕವರು ಪ್ಯಾರಿಸ್ ಮೂಲಕ ಎಂದರು. ಅದೇ ದೇಶದಲ್ಲಿಯೇ ಕಳೆದ ಒಂದು ವಾರದಿಂದ ಕರೋನಾ ರುದ್ರನರ್ತನ ಮಾಡುತ್ತಿದೆಯಲ್ಲಾ ಎಂದಾಗ, ಆಕೆ ಆ ಏರ್ ಪೋರ್ಟಿನಲ್ಲಿ ನಾಲ್ಕು ಗಂಟೆ ಮಾತ್ರ ಕಳೆದಳು ಎಂದರು. ಇದನ್ನು ನನ್ನ ಮಗನಿಗೆ ತಿಳಿಸಿದಾಗ, ಅಪ್ಪ ಅತಿ ಹೆಚ್ಚು ಸೋಂಕು ಹರಡಿರುವುದು ಪ್ಯಾರಿಸ್ ವಿಮಾನ ನಿಲ್ದಾಣದಿಂದಲೇ ಎಂದು ನಿನ್ನೆ ತಾನೇ ಬಿಬಿಸಿ ವರದಿ ಮಾಡಿ ಅಲ್ಲಿಯ ವಿಮಾನ ನಿಲ್ದಾಣವನ್ನು ಮುಚ್ಚುತ್ತಿದ್ದಾರೆ ಎಂದು ತಿಳಿಸಿದ. ಅಮೇರಿಕಾದಲ್ಲಿ ನೆಗೆಟಿವ್ ಆಗಿದ್ದರೂ, ಪ್ಯಾರಿಸ್‌ನಲ್ಲಿ ಸೋಂಕಿತರಾಗಿದ್ದರೆ ಹೇಗೆ ಗೊತ್ತಾಗುತ್ತದೆ? ಅವರ ಸೊಸೆಗೆ ಇನ್ನೊಂದು ಬಾರಿ ಇಲ್ಲಿ ಟೆಸ್ಟ್ ಮಾಡಿಸಿಕೊಳ್ಳಲು ಹೇಳಿ ಎಂದ.

ಅವರಿಗೆ ನಾನು ಹೇಗೆ ಹೇಳಲಿ? ನನಗೆ ಮುಜುಗರವಾಗುತ್ತದೆ ಎಂದೆ. ಹಾಗಾದರೆ ನಾನೇ ಬಿಬಿಎಂಪಿಗೆ ಕರೆಮಾಡಿ ವಿಷಯ ತಿಳಿಸಲೇ ಎಂದ. ನೀನು ಹಾಗೆ ಮಾಡಿದರೆ ನಮ್ಮಿಬ್ಬರ ಬಾಂಧವ್ಯವು ಮುಗಿದಂತೆಯೇ ಎಂದೆ. ನನಗೆ ಏನು ಮಾಡಲೂ ತೋಚಲಿಲ್ಲ. ಅಷ್ಟರಲ್ಲಿ ನಮ್ಮ ಮನೆಗೆ ಬಂದಿದ್ದ ರಾಜಾಜಿನಗರದ ಕುಟುಂಬದವರು ನನಗೆ ಫೋನ್ ಮಾಡಿದರು. ನಡೆದ ವಿಷಯವನ್ನು ಅವರಿಗೆ ತಿಳಿಸಿದೆ. ಗಾಬರಿಯಾದ ಅವರು, ಅಯ್ಯೋ ಅವತ್ತು ನಿಮ್ಮ ಮನೆಯಿಂದ ಅವರಿಬ್ಬರನ್ನೂ ನನ್ನ ಕಾರಿನಲ್ಲಿಯೇ ಬಿಟ್ಟೆನಲ್ಲಾ ನಮಗೇನಾಗುತ್ತದೆಯೋ ಎಂದರು. ನಿಮ್ಮ ಮನೆಯ ಕಾರ್ಯಕ್ರಮವನ್ನು ನೀವೇಕೆ ರದ್ದು ಮಾಡಲಿಲ್ಲ? ಇಷ್ಟೆಲ್ಲಾ ಹಿರಿಯ ಜೀವಗಳ ರಿಸ್ಕ್ ತೆಗೆದುಕೊಂಡಿರಲ್ಲ ಎಂದು ನನ್ನನ್ನೇ ದೂಷಿಸಿದರು. ಜಯನಗರದ ಸೊಸೆ ಅಮೇರಿಕಾದಿಂದ ಬಂದಿದ್ದಾಳೆಂದು ನನಗೇನು ಗೊತ್ತಿತ್ತು? ಅವರೇ ತಿಳಿದುಕೊಂಡು ಕಾರ್ಯಕ್ರಮಕ್ಕೆ ಬರುವುದಿಲ್ಲ ಎನ್ನಬೇಕಾಗಿತ್ತಲ್ಲವೇ? ಎಂದೆ. ಮುಂದೇನು ಮಾಡುವುದೋ ನೋಡೋಣ ಎಂದು ಅವರು ಸುಮ್ಮನಾದರು. ಅವರಿಂದ ಉಳಿದವರಿಗೆಲ್ಲಾ ಮಾಹಿತಿ ಹೋಗಿ ಎಲ್ಲರೂ ಹೇಗೆ ನೀವು ರಿಸ್ಕ್ ತೆಗೆದುಕೊಂಡಿರಿ ಎಂದು ನನ್ನನ್ನು ಕೇಳತೊಡಗಿದರು. ಪೋಲೀಸ್ ಸೇವೆಯಲ್ಲಿ ನಾವು ಇಂಟರಾಗೇಷನ್‌ಗೆ ಒಳಪಡಿಸುತ್ತಿದ್ದ ಆರೋಪಿಗಳ ಪರಿಸ್ಥಿತಿಯಂತಾಯಿತು ನನ್ನ ಸ್ಥಿತಿ.

ಇಷ್ಟರಲ್ಲಿ ನಮ್ಮ ಮನೆಯ ಕಾರ್ಯಕ್ರಮವು ಮುಗಿದು ಆರು ದಿನಗಳಾಗಿತ್ತು. ನನ್ನ ಮಗನಂತೂ ಪ್ರತಿ ಮೂರು ಗಂಟೆಗಳಿಗೊಮ್ಮೆ ನಮ್ಮೆಲ್ಲರಿಗೂ ಟೆಂಪರೇಚರ್ ಚೆಕ್

ಮಾಡಿ ನಿಮಗೆ ಉಸಿರಾಟದ ತೊಂದರೆಯಿದೆಯೇ? ಕೆಮ್ಮು, ನಿಗಡಿ, ಶೀತ ಬಂದಿದೆಯೇ ಎಂದು ಕೇಳುತ್ತಿದ್ದ. ಕಡೆಗೆ ಅವನ ಕಾಟ ತಾಳಲಾರದೆ ಜಯನಗರದವರ ಮಗ ಹರೀಶನಿಗೇ ಕರೆ ಮಾಡಿ ತಪ್ಪು ತಿಳಿಯಬೇಡಪ್ಪಾ, ಅಮೇರಿಕಾದಿಂದ ವಾಪಸಾದ ನಿನ್ನ ಪತ್ನಿಗೆ ಕರೋನಾ ಲಕ್ಷಣಗಳೇನಾದರೂ ಕಂಡಿತೇ ಎಂದು ಕೇಳಿಯೇ ಬಿಟ್ಟೆ. ಅದಕ್ಕವನು ಇಲ್ಲ ಅವಳು ಹುಷಾರಾಗಿಯೇ ಇದ್ದಾಳೆ ಎಂದ

ಇರಬಹುದು, ಆಕೆ ಪ್ಯಾರಿಸ್ ಮೂಲಕ ಬಂದಳಲ್ಲಾ, ನೀವು ಹುಷಾರಾಗಿರಬೇಕು, ನಿನಗೂ ಇಬ್ಬರು ಪುಟ್ಟ ಮಕ್ಕಳಿದ್ದಾರೆ. ನಿನ್ನ ಮಾತಾಪಿತರೂ ಎಪ್ಪತ್ತು ವರ್ಷಕ್ಕೂ ಮೇಲ್ಪಟ್ಟವರಲ್ಲವೇ? ಯಾವುದಕ್ಕೂ ಒಂದು ಪರೀಕ್ಷೆ ಮಾಡಿಸಿಬಿಡು ಎಂದೆ. ಅವನು ಆಗಲಿ ಎಂದು ಸುಮ್ಮನಾದ.

ಮಾರನೆಯ ದಿನ ಹರೀಶನಿಗೆ ನಾನು ಮತ್ತೆ ಕರೆ ಮಾಡಿ ನಿನ್ನ ಪತ್ನಿಗೆ ಕರೋನಾ ಟೆಸ್ಟ್ ಮಾಡಿಸಿದೆಯಾ ಎಂದು ಕೇಳಿದೆ. ಹೌದು ಆರ್‌ಎಟಿ ಮಾಡಿಸಿದೆ, ನೆಗೆಟಿವ್ ಬಂತು ಎಂದ. ಆ ಪರೀಕ್ಷೆ ಏನೆಂದು ನನಗೆ ಗೊತ್ತಿಲ್ಲದ ಕಾರಣ ನಾನು ವೈದ್ಯ ಮಿತ್ರನಿಗೆ ಕರೆ ಮಾಡಿ ವಿಚಾರಿಸಿದೆ. ಆತ ಆರ್‌ಎಟಿ ನಂಬಿಕಸ್ಥ ಪರೀಕ್ಷೆಯಲ್ಲ. ಅರ್‌ಟಿಪಿಸಿಆರ್ ಮಾಡಿಸಿದರೆ ಮಾತ್ರ ಫಲಿತಾಂಶ ಸರಿಯಾಗಿ ಗೊತ್ತಾಗುತ್ತದೆ. ಆರ್‌ಎಟಿ ಪರೀಕ್ಷೆಯಲ್ಲಿ ಪಾಸಿಟಿವ್ ಇದ್ದರೂ ನೆಗಟಿವ್ ಬರಬಹುದು ಎಂದರು.

ಅದನ್ನು ಕೇಳಿದ ನನಗೆ ಮತ್ತೆ ನಡುಕ ಶುರುವಾಯಿತು. ನಮ್ಮ ಮನೆಗೆ ಬಂದವರೆಲ್ಲರಿಗೂ ಕರೆ ಮಾಡಿ ನಿಮಗೇನಾದರೂ ಕೆಮ್ಮು, ನೆಗಡಿ, ಉಸಿರಾಟದ ತೊಂದರೆಯಿದೆಯೇ ಎಂದು ಪ್ರತಿದಿನವೂ ಕೇಳ ತೊಡಗಿದೆ. ಮೂರನೆಯ ದಿನ ಹೀಗೆಯೇ ಕೇಳಿದಾಗ ಏನ್ರೀ ಬಿಬಿಎಂಪಿ ನಿಮಗೆ ಈ ರೀತಿ ಕೇಳಲು ಗುತ್ತಿಗೆ ಕೊಟ್ಟಿದ್ದಾರೆಯೇ, ಆಪ್ತ ಮಿತ್ರ ಆಪ್ ಹಾಕಿಸಿಕೊಳ್ಳಿ ಎಂದು ಛೇಡಿಸಿದರು.

ಮುಂದಿನ ಸುಮಾರು ಒಂದು ವಾರ ಕಾಲ ಆತಂಕದಲ್ಲಿಯೇ ಕಳೆದೆ. ಒಂದು ರಾತ್ರಿಯೂ ಸರಿಯಾಗಿ ನಿದ್ರೆ ಬರಲಿಲ್ಲ. ಅಷ್ಟರಲ್ಲಿ ಎಪ್ಪತೆಂಟು ವರ್ಷದ ನಮ್ಮ ಸಂಬಂಧೀಕರೊಬ್ಬರು (ನಮ್ಮ ಮನೆಗೆ ಬಂದಿರಲಿಲ್ಲ) ಉಸಿರಾಟದ ತೊಂದರೆಯಿಂದ ಆಸ್ಪತ್ರೆಗೆ ದಾಖಲಾಗಿ ತುರ್ತು ಚಿಕಿತ್ಸಾ ಘಟಕದಲ್ಲಿಯೇ ಮೃತಪಟ್ಟರು. ಅವರಿಗೆ ಕರೋನಾ ದೃಢಪಟ್ಟಿದ್ದರಿಂದ ಬಿಬಿಎಂಪಿಯವರೇ ತೆಗೆದುಕೊಂಡು ಶವಸಂಸ್ಕಾರ ಮಾಡಿದರು ಕುಟುಂಬದವರಿಗೆ ಕೊನೆಯ ದರ್ಶನವೂ ಸಿಗಲಿಲ್ಲ ಎಂಬ ಮಾಹಿತಿ ಬಂದಿತು. ನನ್ನ ಆತಂಕ ಇನ್ನೂ ಹೆಚ್ಚಾಯಿತು. ಮೈ ಬೆವರಿತು. ಉರಿಯುವ ಗಾಯಕ್ಕೆ ಉಪ್ಪು ಹಚ್ಚಿದಂತೆ ನನ್ನ ಮಗ ಪ್ರತಿದಿನವೂ ಬೆಳಗಾದ ಕೂಡಲೇ ನಮ್ಮ ಮನೆಗೆ ಔತಣಕ್ಕೆ ಬಂದಿದ್ದವರೆಲ್ಲರೂ ಹುಷಾರಾಗಿದ್ದಾರೆಯೇ ಎಂದು ಕೇಳುತ್ತಿದ್ದ. ನಾನು ದಿನವೂ ಕ್ಯಾಲೆಂಡರ್ ನೋಡಿ ನಮ್ಮ ಮನೆ ಔತಣ ಮುಗಿದ ನಂತರ ಎಷ್ಟು ದಿನಗಳಾದವೆಂದು ಲೆಕ್ಕ ಹಾಕಲಾರಂಭಿಸಿದೆ. 14 ದಿನಗಳ ಕಾಲ ಏನೂ ಆಗದಿದ್ದರೆ ಭಯವಿಲ್ಲ ಎನ್ನುವುದು ನನ್ನ ತರ್ಕವಾಗಿತ್ತು.

ಹದಿನೈದು ದಿನಗಳಾದ ನಂತರ ನನ್ನ ಮನದಲ್ಲಿ ಸ್ವಲ್ಪ ಭಯ ಕಡಿಮೆಯಾಯಿತು. ಹದಿನಾರನೆಯ ದಿನ ಹರೀಶನ ಪತ್ನಿಯೇ ನನಗೆ ಫೋನ್ ಮಾಡಿ, 'ಅಂಕಲ್, ಯಾವುದಕ್ಕೂ ಇರಲಿ ಎಂದು ನಾನು ಆರ್‌ಟಿಪಿಸಿಆರ್ ಪರೀಕ್ಷೆಯನ್ನೂ ಮಾಡಿಸಿಕೊಂಡೆ, ನೆಗೆಟಿವ್ ಬಂದಿದೆ, ನೀವು ಇನ್ನು ಹೆದರಬೇಕಾದ್ದಿಲ್ಲ' ಎಂದಳು. ಬದುಕಿದೆಯಾ ಬಡಜೀವವೇ ಎಂದುಕೊಂಡು ಗಸಗಸೆ ಪಾಯಸ ಮಾಡಿಸಿಕೊಂಡು ಕುಡಿದೆ. ಅಂದಿನಿಂದ ಇಂದಿನವರೆಗೂ ನಮ್ಮ ಮನೆಗೆ ಯಾರನ್ನೂ ಆಹ್ವಾನಿಸಿಲ್ಲ. ■



# ಮೋಹನಮೂರ್ತಿಯ ಮಹಾಪುರಾಣ

**– ಟಿ.ಎಸ್. ಶ್ರವಣಕುಮಾರಿ**

ಸಾಯಿಮೋಹನ ಮೂರ್ತಿ ನಮ್ಮ ಶಾಖೆಯಲ್ಲಿ ರೆಕಾರ್ಡ್ ಕೀಪರ್ ಆಗಿ ಕೆಲಸ ಮಾಡುತ್ತಿದ್ದ. 'ಮೋಹಕ'ವೆಂದು ಬಣ್ಣಿಸುವಂತಿಲ್ಲದಿದ್ದರೂ ಕುರೂಪಿಯ ಗುಂಪಿಗಂತೂ ಸೇರಿಸುವ ಹಾಗಿರಲಿಲ್ಲ. ಮುಖದಲ್ಲಿ ಸದಾ ಒಂದು ಬಗೆಯ ಆತಂಕ ನೆಲೆಮಾಡಿದ್ದು ಅದು ಪೆದ್ದುಕಳೆಯೊಂದಿಗೂ ಸೇರಿಕೊಂಡು ನೋಡಿದ ತಕ್ಷಣ? ಏನೋ ಸರಿಯಾಗಿಲ್ಲ' ಎನ್ನುವ ಭಾವನೆ ಹುಟ್ಟಿಸುತ್ತಿತ್ತು. ಮಾತನಾಡುವಾಗ ಅವನ ಬಾಯಿಂದ ಮೊದಲು ಹೊರಡುತ್ತಿದ್ದದ್ದು ತೆಲುಗು. ಕನ್ನಡದಲ್ಲಿ ದಬಾಯಿಸಿದರೆ ಮಾತ್ರಾ ಸಂಭಾಷಣೆ ಕನ್ನಡಕ್ಕೆ ತಿರುಗುತ್ತಿತ್ತು.  ಬೆಳಗ್ಗೆ ಬರುವಾಗಲೇ ಹಾಜರಿ ಪುಸ್ತಕ ಆಗಲೇ ಮ್ಯಾನೇಜರ ಟೇಬಲ್ಲಿಗೆ ಹೋಗಿದೆಯೇನೋ ಎನ್ನುವಂತ ಗಡಿಬಿಡಿಯಿಂದ,ಆತಂಕದಿಂದಲೇ ಬರುತ್ತಿದ್ದವನು ಯಾರು ಬೇಕಾದರೂ ಹಾಜರಾತಿ ಪುಸ್ತಕದಲ್ಲಿ ಸಹಿಮಾಡುತ್ತಿರಲಿ, ಅವರನ್ನು "ರೋಂತ ಒತ್ಕೋಮ್ಮ/ ಒತ್ಕೋಪ್ಪ" ಅನ್ನುತ್ತಾ ಎಗ್ಗಿಲ್ಲದೆ ಹೆಂಗಸರನ್ನಾಗಲೀ, ಗಂಡಸರನ್ನಾಗಲೀ ಭುಜ ಮುಟ್ಟಿ ಅಕ್ಷರಶಃ ಪಕ್ಕಕ್ಕೆ ಸರಿಸಿ ಆತುರಾತುರದಿಂದ ಒಂದು ಸಹಿಮಾಡಿ ಏನೋ ಘನಕಾರ್ಯವಿರುವಂತೆ ಸರ್ಕೀಟ್ ಹೊರಡುತ್ತಿದ್ದ. ಹಾಗಾಗಿ ಅವನು ಬರುತ್ತಿರುವ ಸುಳಿವು ಸಿಕ್ಕೊಡನೆ, ಯಾರೇ ಆದರೂ ತಮ್ಮಿಂತಾವೇ ರಾಜಮರ್ಯಾದೆ ಕೊಟ್ಟು ಮಾರುದೂರ ಸರಿದು ನಿಲ್ಲುತ್ತಿದ್ದರು. ಹೀಗೆ ರಾಜಾರೋಷವಾಗಿ ಹೊರಗಿದ್ದ ಹಣ್ಣು, ಹೂವು ತರಕಾರಿಗಳ ಮಾರುಕಟ್ಟೆಗೆ ಇನ್‌ಸ್ಪೆಕ್ಷನ್‌ಗೆ ಹೊರಟು, ಎಲ್ಲರ ಯೋಗಕ್ಷೇಮ, ಕುಶಲವನ್ನು ವಿಚಾರಿಸಿಕೊಂಡು ಎಲ್ಲೆಲ್ಲಿ ಏನೇನು ಹೊಸ ಸರಕುಗಳು ಬಂದಿವೆ ಎನ್ನುವ ಸರ್ವೆ ಮಾಡಿ, ಬ್ಯಾಂಕಿಗೆ ಕಾಫಿ, ಟೀ ಬರುವ ಸಮಯಕ್ಕೆ ಸರಿಯಾಗಿ ವಾಪಸಾಗುತ್ತಿದ್ದ. ಕಾಫಿಯ ಹುಡುಗನೊಂದಿಗೆ ಜಗಳವಾಡಿ ಎರೆಡೆರೆಡು ಲೋಟ ಕಾಫಿಯನ್ನೋ, ಟೀಯನ್ನೋ ಕುಡಿದು ಮಹಡಿಯ ಮೇಲಿದ್ದ ರೆಕಾರ್ಡ್ರೂಮಿನೊಳಗೆ ಹೋಗಿ ಮೇಜಿನ ಮೇಲೆ ಬಿದ್ದಿದ್ದ ವೋಚರುಗಳ ಕಟ್ಟನ್ನು ಸ್ವಲ್ಪ ಹೊತ್ತು ಅತ್ತಿಂದಿತ್ತ, ಇತ್ತಿಂದತ್ತ ಇಡತ್ತಾ ಆಟವಾಡಿ, ಬಿಸಾಡಿದ್ದ ಹಳೆಯ ಸೋಫಾಮೇಲೆ ಪೇಪರುಗಳ ಕಟ್ಟನ್ನು ತಲೆದಿಂಬಾಗಿಟ್ಟುಕೊಂಡು ಥೇಟ್ ಅನಂತಶಯನನ ಭಂಗಿಯಲ್ಲಿ ಒರಗಿ ಸಶಬ್ದವಾಗಿ ಗೊರಕೆ ಹೊಡೆಯುತ್ತಾ ಪವಡಿಸಿರುತ್ತಿದ್ದ. ಕತ್ತಲೆಯ ಗೂಡಾಗಿದ್ದ ಮಹಡಿಯ ಮೇಲೆ ಸಿಸ್ಟಮ್ ರೂಮು, ರೆಕಾರ್ಡ್ ರೂಮು, ಊಟದ ಕೋಣೆ, ಶೌಚಾಲಯ ಬಿಟ್ಟರೆ ಸದಾ ಜನರು ಇರುವಂತ ಯಾವುದೇ ಮುಂಗಟ್ಟೆಗಳಾಗಲೀ, ವಿಭಾಗಗಳಾಗಲೀ ಇಲ್ಲದೆ, ಅವನನ್ನು ಗಮನಿಸುವವರು ಯಾರೂ ಇಲ್ಲದಿದ್ದದ್ದು ಅವನ ಈ ಶಯನ ಮಹೋತ್ಸವಕ್ಕೆ ಹೇಳಿಮಾಡಿಸಿದಂತಿತ್ತು.

ಬೆಳಗ್ಗೆ ಪಟ್ಟಾಗಿ ಬಾರಿಸಿ ಬಂದಿದ್ದ ತಿಂಡಿ ಅರಗಿ ಹೊಟ್ಟೆ ಮತ್ತೆ ಕೂಗುವಾಗ ಎಚ್ಚರಾಗುತ್ತಿತ್ತೇನೋ, ಎದ್ದವನಿಗೆ ತಾನೆಲ್ಲಿದ್ದೇನೆ, ಕನಸೋ, ನಿಜವೋ ಎಂದು ಇಹಕ್ಕೆ ಬರಲು ಒಂದಷ್ಟು ಸಮಯವಾಗುತ್ತಿತ್ತು. ಸರಿ, ಎದ್ದವನೇ ಮುಖ ತೊಳೆದುಕೊಳ್ಳಲು ವಾಶ್ ಬೇಸಿನ್ನಿಗೆ ಹೋದನೆಂದರೆ ಇಡೀ ಶಾಖೆಗೆ ಅವನು ನಿದ್ರಾ ಪರ್ವದಿಂದ ಈಚೆಗೆ ಬಂದಿದ್ದಾನೆಂದು ಅರಿವಾಗುತ್ತಿತ್ತು. ಜೋರಾಗಿ ನಲ್ಲಿಯನ್ನು ತಿರುಗಿಸಿಕೊಂಡು ಸೀನುತ್ತಾ, ಕ್ಯಾಕರಿಸುತ್ತಾ, ಉಗಿಯುತ್ತಾ ಚಿತ್ರವಿಚಿತ್ರ ಸದ್ದುಗಳನ್ನು ಮಾಡುತ್ತಾ, ಲೈಫ್ಬಾಯ್ ಸೋಪನ್ನು ಹತ್ತಾರು ಬಾರಿ ಮುಖಕ್ಕೆ, ಕೈಗೆ, ಕಾಲಿಗೆ ಹಚ್ಚಿ ತೊಳೆದು, ಹಚ್ಚಿ ತೊಳೆದು, ಕಡಿಮೆಯೆಂದರೆ



ಹದಿನೈದು ನಿಮಿಷಗಳಾದರೂ ಅವನ ಈ ಮಾರ್ಜನ ಕಾರ್ಯಕ್ರಮ ಜರಗುತ್ತಿತ್ತು. ಆ ಭಯಂಕರ ಶಬ್ದಳಿಂದಲೇ ಎಲ್ಲರೂ ಅದೆಷ್ಟು ಭಯಭೀತರಾಗಿರುತ್ತಿದ್ದರೆಂದರೆ ಹೋಗಿ ಪ್ರತ್ಯಕ್ಷ ದರ್ಶನ ಮಾಡುವ ಧೈರ್ಯ ಯಾರಿಗೂ ಇರಲಿಲ್ಲ. ಕೆಳಗಿನಿಂದ ಯಾರಾದರೂ "ಟ್ಯಾಂಕಿನಲ್ಲಿ ಸ್ವಲ್ಪ ನೀರು ಉಳಿದಿರಲಿ" ಎಂದೋ, "ಸ್ನಾನ ಮಾಡ್ಬೇಡ, ಬರೀ ಮುಖ ತೊಳ್ಕೊಂಡು ಬಾ ಸಾಕು" ಎಂತಲೋ ಒಂದು ಆವಾಜ್ ಹಾಕುವ ತನಕ ನಿರಾತಂಕವಾಗಿ ತನ್ನ ಅಭಿಷೇಕದ ಕಾರ್ಯಕ್ರಮವನ್ನು ಮುಂದುವರೆಸಿಕೊಂಡಿರುತ್ತಿದ್ದ. ಸುತ್ತಲೂ ನೀರು ಚೆಲ್ಲಿ, ಕೊಚ್ಚೆಯಾಗಿ, ಅದೆಷ್ಟು ರಂಪ ರಾದ್ಧಾಂತವಾಗಿರುತ್ತಿತ್ತೆಂದರೆ, ಅವನ ಮಹಾಮಜ್ಜನವಾದ ನಂತರ ಶಾಖೆಯ ಇನ್ಯಾರೂ ಆ ವಾಶ್ ಬೇಸಿನ್ನಲ್ಲಿ ಕೈ, ಮುಖ ತೊಳೆಯುವುದಾಗಲೀ, ಲೈಫ್ಬಾಯ್ ಸೋಪನ್ನು ಸೋಕುವ ಧೈರ್ಯವನ್ನಾಗಲೀ, ಸಾಹಸವನ್ನಾಗಲೀ ಮಾಡುತ್ತಿರಲಿಲ್ಲ. ಅಲಿಖಿತವಾಗಿ ಅದರ ಪೂರ್ತಿ ಹಕ್ಕು ಸ್ವಾಮ್ಯ ನಮ್ಮ ಮೋಹನಮೂರ್ತಿಯದೇ ಆಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಜಲಕ್ರೀಡೆಯ ನಂತರ ಒಂದಷ್ಟು ಹೊತ್ತು ಮತ್ತೆ ವೋಚರುಗಳ ಬಂಡಲನ್ನು ಅತ್ತ ಇತ್ತ ಮಾಡುತ್ತಿರುವಾಗ ದಿನವೂ ಅವನಣ್ಣ ಬಂದು ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದ. ಊಟದ ನಂತರ ಮತ್ತೆ ಬಿಟ್ಟು ಹೋಗುತ್ತಿದ್ದ. ಬೆಳಗ್ಗೆ ಸಂಜೆ ಬ್ಯಾಂಕಿಗೆ ಬರುವುದೂ, ಹೋಗುವುದೂ ಪ್ರಾಯಶಃ ಅವನ ಎಸ್ಕಾರ್ಟಿನಲ್ಲೇ ನಡೆಯುತ್ತಿತ್ತೇನೋ. ಬೆಂಗಳೂರಿನ ನಟ್ಟನಡುವಿನಲ್ಲಿ ಈಗಿಪ್ಪತ್ತೈದು ವರ್ಷಗಳ ಹಿಂದೆಯೇ ಕೋಟಿಗಟ್ಟಲೇ ಬೆಲೆಬಾಳುವ ಅವರ ಕುಟುಂಬದ ದೊಡ್ಡ ಆಸ್ತಿಯೊಂದಿದೆಯೆಂಬ ಸುದ್ದಿಯಿತ್ತು. ಅದು ಏನೇನೋ ತಕರಾರುಗಳಿಂದ ಕೋರ್ಟಿನ ಮೆಟ್ಟಿಲು ಹತ್ತಿದ್ದಕ್ಕೇ ಇವನಿಗೆ ಈ ರೀತಿ ಒಂದೆರಡು ಸುತ್ತು ಹಾಗೆಹೀಗೆ ಆಗಿದೆಯೆಂಬ ಸುದ್ದಿಯೂ ಇತ್ತು. ಹಾಗಾಗಿ ಆಸ್ತಿ ವಿಲೇವಾರಿ ಆಗುವ ತನಕ ಅಣ್ಣಂದಿರು ಇವನ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬೇಕಾದ್ದು ಅವಶ್ಯಕವಾಗಿತ್ತು. ಪ್ರಾಯಶಃ ಈ ಆಸ್ತಿಯ ಆಕರ್ಷಣೆಗೇ ಇರಬೇಕು, ತಡವಾಗಿಯಾದರೂ ಅವನಿಗೆ ಮದುವೆಯಾಗಿತ್ತು; ಒಬ್ಬ ಮಗನೂ ಇದ್ದ. ಬ್ಯಾಂಕಿನ ಒಂದೆರಡು ಕಾರ್ಯಕ್ರಮಗಳಿಗೆ ಅವರಿಬ್ಬರನ್ನೂ ಕರೆದುಕೊಂಡು ಬಂದಿದ್ದ, ಆಕೆ ಬುದ್ಧಿವಂತಳಂತೆಯೇ ಕಾಣುತ್ತಿದ್ದಳು; ಮಗನೂ ಮುದ್ದಾಗಿದ್ದ.

ಮಧ್ಯಾಹ್ನದ ಊಟದ ನಂತರ ಮತ್ತೊಂದು ವರಸೆ ನಿದ್ರೆ, ಮತ್ತೊಂದು ಜಲಕ್ರೀಡೆಯ ನಂತರ ಒಂದು ಚೀಲದೊಂದಿಗೆ ಮಾರುಕಟ್ಟೆಯ ಕಡೆಗೆ ಎರಡನೆಯ ಸರ್ಕೀಟ್ ಹೊರಡುತ್ತಿತ್ತು. ಬೆಳಗ್ಗೆ ನೋಡಿಕೊಂಡು ಬಂದಿದ್ದ ಹಣ್ಣು, ತರಕಾರಿ, ಹೂವುಗಳನ್ನು ಸ್ಯಾಂಪಲಿಗೆಂಬಂತೆ ಒಂದೆರಡು, ಒಂದು ಮುಷ್ಟಿ, ಒಂದು ಬೊಗಸೆ ಎಂಬಂತೆ ತನ್ನ ಚೀಲದಲ್ಲಿ ತುಂಬಿಕೊಳ್ಳುತ್ತಿದ್ದ. ಎಂದೂ ಅದಕ್ಕೆ ದುಡ್ಡು ಕೊಟ್ಟಿದ್ದಂತೂ ಇಲ್ಲ. ಪುಣ್ಯವೆಂದರೆ ದಿನವೂ ಒಬ್ಬರ ಬುಟ್ಟಿಗೇ ಕೈಹಾಕುತ್ತಿರಲಿಲ್ಲ; ಒಂದೊಂದು ದಿನ ಒಬ್ಬೊಬ್ಬರ ಸರಕು. "ಏಮಣ್ಣಾ ಎಪ್ಪುಡೂ ಇಲಾ ತೀಸ್ಕೊನೆಳ್ತಾವು, ಒಕ ನಾಡೂ ಡಬ್ಬಿಚ್ಚಿಲ್ಲೆ" ಎಂದು ಯಾರಾದರೂ ಗೊಣಗಿದರೆ, "ನಾಲ್ಗು ಉಲೂಕಾಯಿ ತೀಸ್ಕೊಂಟೆ ಎಂತೀವಲ್ಲ, ರೆಂಡು ವಂಕಾಯಿಕೂ ಡಬ್ಬೀವಲ್ಲಾ, ಬಿಡ್ಡ ತಿನ್ನೇಕು ಒಕ ಪಂಡು ಎತ್ಕೊನ್ನಾನು, ನಾಲ್ಗು ಪೂಲು ದೇವಡ ಮೀದು ಪೆಟ್ಟಾನು, ನೀಕೇ ಪುಣ್ಯಮು" ಎಂದು ದಬಾಯಿಸಿಕೊಂಡು ಅಂತೂ ಮರುದಿನಕ್ಕೆ ಮನೆಗೆ ಬೇಕಾಗುವಷ್ಟು ಗ್ರಾಸವನ್ನು ಪಟಾಯಿಸಿಕೊಂಡು ಬರುತ್ತಿದ್ದ. ಹೀಗೆ ಬಿಟ್ಟಿಯಾಗಿ ತೆಗೆದುಕೊಂಡು ಬರುತ್ತಿದ್ದುದಕ್ಕೆ ಪ್ರತಿಯಾಗಿ ಪ್ರತಿ ಜನವರಿಯೂ ಎಲ್ಲ ಮುಂಗಟ್ಟೆಗಳಲ್ಲೂ ಎರಡು, ನಾಲ್ಕು ಕ್ಯಾಲೆಂಡರುಗಳನ್ನು ಲಪಟಾಯಿಸಿಕೊಂಡು



ಅವರೆಲ್ಲರಿಗೂ ಬ್ಯಾಂಕಿನ ಕ್ಯಾಲೆಂಡರುಗಳನ್ನು ಕೊಟ್ಟು ಬರುತ್ತಿದ್ದ. ಬ್ಯಾಂಕಿನ ಯಾವುದೇ ಕಾರ್ಯಕ್ರಮಗಳಿಗೆ ತರಿಸಿದ ತಿಂಡಿ ಬಟವಾಡೆಯಾದ ತಕ್ಷಣ ಮಿಕ್ಕಿದ್ದಷ್ಟನ್ನೂ ಯಾರನ್ನೂ ಕೇಳದೆ ತುಂಬಿಕೊಂಡು ಹೋಗಿ ಅವರಿಗೆಲ್ಲಾ ಹಂಚಿಬರುತ್ತಿದ್ದ. ಎಷ್ಟರ ಮಟ್ಟಿಗೆಂದರೆ ಯಾರಾದರೂ ತಿಂಡಿಯನ್ನಿಟ್ಟು ಏನೋ ಕೆಲಸಕ್ಕೆಂದು ಎದ್ದು ಹೋಗಿದ್ದರೆ ಬರುವಷ್ಟರಲ್ಲಿ ಅದು ಮಾಯವಾಗಿರುತ್ತಿತ್ತು. ಕಳ್ಳ ಯಾರೆಂದು ಗೊತ್ತಿದ್ದರೂ ಹಾಳಾಗಿ ಹೋಗಲಿ ಎಂದು ಸುಮ್ಮನಾಗುತ್ತಿದ್ದದ್ದೇ ಹೆಚ್ಚು. ಕೇಳಿದರೆ ತಾನೇ ಒಪ್ಪಿಕೊಳ್ಳುತ್ತಿದ್ದನೇ, "ನಾಕೇಮಿ ತೆಲೀದು, ನೇ ತೀಸ್ಕೋಲೇದು" ಎಂದು ಅಮಾಯಕನಂತೆ ಮುಖ ಮಾಡಿದರೆ ಇನ್ನೇನು ಮಾಡಲಾದೀತು.

ಪ್ರತಿ ಶುಕ್ರವಾರ ಬ್ಯಾಂಕಿನಲ್ಲಿ ನಡೆಯುತ್ತಿದ್ದ ಶುಕ್ರವಾರದ ಪೂಜೆಯ ಪ್ರಸಾದಕ್ಕೆ ಕೇಟರಿಂಗ್ ನಡೆಸುತ್ತಿದ್ದ ಗ್ರಾಹಕರೊಬ್ಬರು ಪ್ರಸಾದವನ್ನು ಕಳಿಸುವಂತೆ ಏರ್ಪಾಡಾಗಿತ್ತು. ಅಂದಿನ ಕೇಟರಿಂಗ್ಗಾಗಿ ಮಾಡಿದ್ದ ಸಿಹಿಯನ್ನೇ ಎಲ್ಲರಿಗೂ ಹಂಚಿ ಒಂದೆರಡು ಮಿಗುವಷ್ಟನ್ನು ಕಳಿಸುತ್ತಿದ್ದರು. ಮಿಕ್ಕದ್ದೆಲ್ಲವೂ ತನ್ನ ಪಾಲೆಂದೇ ತೀರ್ಮಾನ ಮಾಡಿಕೊಂಡಿರುತ್ತಿದ್ದ ಮೋಹನಮೂರ್ತಿ ಟ್ರೇ ವಾಪಸ್ಸು ಬರುವುದೇ ತಡ, ಉಳಿದವನ್ನೆಲ್ಲಾ ಕವರಿಗೆ ಸುರಿದುಕೊಂಡು ತಕ್ಷಣವೇ ಜಾಗ ಖಾಲಿಮಾಡುತ್ತಿದ್ದ. ಕೆಲವು ಬಾರಿ ಮಿಕ್ಕ ಅಟೆಂಡರುಗಳೊಂದಿಗೆ ಇದರ ಸಲುವಾಗಿ ಜಗಳವಾದರೂ ತನ್ನ ಅಭ್ಯಾಸವನ್ನು ಗಟ್ಟಿಯಾಗಿ ಹಿಡಿದುಕೊಂಡು ಮಿಕ್ಕವರಿಗೆ ಕ್ಯಾರೇ ಎನ್ನದೆ ಸುಖವಾಗಿದ್ದ. ಎಲ್ಲದಕ್ಕೂ ಎಂದೋ, ಹೇಗೋ, ಒಂದು ಕೊನೆ ಬರುವ ಹಾಗೆ ಹೊಸ ಮ್ಯಾನೇಜರ್ ಆಗಮನದಿಂದ ಮೋಹನಮೂರ್ತಿಯ ಈ ಘನವಾದ ಅಭ್ಯಾಸಕ್ಕೆ ಕಡಿವಾಣ ಬಿತ್ತು. ತಿಕ್ಕಲುತನದಲ್ಲಿ ಇಬ್ಬರೂ ಪೋಟಿಗಿಳಿಯುವಂತಿದ್ದರು. ವ್ಯತ್ಯಾಸವೆಂದರೆ ಅವರು ಓದಿಕೊಂಡಿದ್ದರು, ಅಧಿಕಾರ ಕೈಯ್ಯಲ್ಲಿತ್ತು. ಇವನು ಎಸ್ಸೆಸ್ಸೆಲ್ಸಿ ಅದು ಹೇಗೆ ಪಾಸಾಗಿದ್ದನೋ, ಮೈಯೆಲ್ಲಾ ಹುಂಬತನವಿತ್ತು. ತೂಕಕ್ಕೆ ಹಾಕಿದರೆ ಮುಳ್ಳು ಆಚೆಈಚೆಯಿಲ್ಲ ಖಂಡಿತವಾಗಿ ಮಧ್ಯಕ್ಕೇ. ಇವನು ಮಿಕ್ಕ ತಿಂಡಿಗೆ ಮಾತ್ರಾ ಕೈಹಾಕಿದರೆ, ಅವರು ಪೂಜೆಗೆ ಒಡೆದ ಕಾಯಿ, ಬಾಳೆಹಣ್ಣಿಗೆ ಕೂಡಾ ತಾವೇ ವಾರಸುದಾರರೆಂಬಂತೆ ತಮ್ಮ ಟೇಬಲ್ಲಿಗೆ ತಂದಿಡಬೇಕೆಂದು ಕಟ್ಟಪ್ಪಣೆ ಮಾಡಿದ್ದರು. ಮಧುಮೇಹಿಯಾಗಿದ್ದರೂ ಮೋಹನಮೂರ್ತಿಗೆ ಭಯವಿರಲಿಲ್ಲ, ಅವರಿಗೊಂದಿಷ್ಟು ಕಾಳಜಿಯಿತ್ತಷ್ಟೇ. ಹಾಗಾಗಿ ಪ್ರತಿವಾರವೂ ಬರುವ ಸಿಹಿತಿಂಡಿಗಳ ಬದಲಾಗಿ ಕೋಸಂಬರಿ, ಕಾಳುಗಳ ಗುಗ್ಗುರಿ, ಆಂಬೊಡೆ ಇಂತವನ್ನು ಪ್ರಸಾದಕ್ಕೆ ತರಿಸಬೇಕೆಂದು ಆಜ್ಞೆ ಹೊರಡಿಸಿದ್ದಲ್ಲದೆ ತಾವೇ ಶುಕ್ರವಾರ ಬೆಳಗ್ಗೆ ಖುದ್ದಾಗಿ ಕೇಟರರ್ ಬಳಿಗೆ ಹೋಗಿ ಅಂದಿನ ಮೆನು ಫಿಕ್ಸ್ಮಾಡಿಕೊಂಡು ಬರುತ್ತಿದ್ದರು. ತಾವು ತರುತ್ತಿದ್ದ ಮೂರುಬಟ್ಟಲಿನ ಊಟದ ಡಬ್ಬಿಯನ್ನು ತೊಳೆಸಿಟ್ಟುಕೊಂಡಿದ್ದು ಮಿಕ್ಕಿದ್ದೆಲ್ಲವನ್ನೂ ತುಂಬಿಕೊಂಡು ಹೋಗಲು ಆರಂಭವಾದಾಗ ಮೋಹನಮೂರ್ತಿಗೆ ತಡೆಯಲಾಗದ ದುಃಖವಾಯಿತು.

ಮೋಹನಮೂರ್ತಿಯ ದುಃಖದ ಪರ್ವ ಹೀಗೇ ನಡೆಯುತ್ತಿರುವಾಗ ಬ್ಯಾಂಕಿನಲ್ಲಿ ಗೋಲ್ಡನ್ ಶೇಕ್ ಹ್ಯಾಂಡ್ ಬಂದು ಯಾರೋ ಅವನ ತಲೆಯಲ್ಲಿ ಹುಳಬಿಟ್ಟರು. ಅವನು ಪ್ರತಿಯೊಬ್ಬರಲ್ಲೂ ತಾನು ತೆಗೆದುಕೊಂಡರೆ ಒಳ್ಳೆಯದೇ?' ಎಂದು ಕೇಳಲು ಶುರುಮಾಡಿದ. ಬಂದ ಕೆಲ ಉತ್ತರಗಳು ಹೀಗಿದ್ದವು "ನೀನೀಗ ಕೆಲ್ಸ ಎಲ್ಮಾಡ್ತಿದ್ದೆ, ಏನೂ ವ್ಯತ್ಯಾಸ ಆಗಲ್ಲ ಬಿಡು" "ರಿಟೈರ್ ಆದ್ರೆ ಮನೇಲಿ ನಿದ್ರೆ ಮಾಡಕ್ಕೆ ಹೆಂಡತಿ ಬಿಡ್ತಾಳಾ?" "ರಿಟೈರ್ ಆದ್ಮೇಲೆ ತಿಂಗಳಿಗೆ ನಾಲ್ಕು ಲೈಫ್ಬಾಯ್ ಸೋಪು ನೀನೇ ಕೊಂಡ್ಕೋಬೇಕು. ಮನೆ ನೀರಿನ ಬಿಲ್ಲು ಜಾಸ್ತಿಯಾಗತ್ತೆ" "ತರಕಾರಿಗೆ ದುಡ್ಡುಕೊಟ್ಟು



ತೊಗೋಬೇಕಾಗತ್ತೆ; ಯೋಚ್ನೆ ಮಾಡು" ನಮ್ಮ ಕಾರ್ಮಿಕ ಸಂಘದ ಸೆಕ್ರೆಟರಿ ಮುಂಜಾಗ್ರತಾ ಕ್ರಮವಾಗಿ "ನಿನ್ನ ಹೆಂಡ್ತೀನ ಕಕೋರ್ಂಡ್ಬಾಪ್ಪ. ನಿಮ್ಮಿಬ್ರನ್ನೂ ಕೂರಿಸ್ಕೊಂಡು ಹೇಳ್ತೀನಿ. ಅವರೊಪ್ಪಿದ್ರೆ ತೊಗೊಳೋವಂತೆ. ಇಲ್ದಿದ್ರೆ ನಾಳೆ ನಮ್ಮ ತಲೇಗೆ ತರ್ತೀಯ". ನೂರಾರು ಜನರನ್ನು ಕೇಳಿ, ಹೆಂಡತಿ ಮತ್ತು ಅಣ್ಣನ ಅಪ್ಪಣೆಯನ್ನು ಪಡೆದು ಅಂತೂ ಬ್ಯಾಂಕಿಗೆ ಗೋಲ್ಡನ್ ಶೇಕ್‌ಹ್ಯಾಂಡ್ ಕೊಟ್ಟ. ನಿವೃತ್ತಿಯ ದಿನ ಮಾತಾಡಿದ ಕಾರ್ಮಿಕ ಸಂಘದ ಕಾರ್ಯದರ್ಶಿ "ನಮ್ಮ ಬ್ಯಾಂಕಿನಂತಹ ಘನತೆವೆತ್ತ ಉದಾತ್ತವಾದ ಸಂಸ್ಥೆ ಇನ್ನೊಂದಿಲ್ಲ. ಮೋಹನಮೂರ್ತಿಯಂತವರನ್ನೂ ಮೂವತ್ತು ವರ್ಷಗಳ ಕಾಲ ಸಂಬಳ ಕೊಟ್ಟು ಸಾಕಿದೆ. ನಿವೃತ್ತಿಯಿಂದ ಶ್ರೀಯುತರಿಗೆ ಅನುಕೂಲವಾಗುವುದೋ, ಸಂತೋಷವಾಗುವುದೋ ಗೊತ್ತಿಲ್ಲ. ಆದರೆ ಬ್ಯಾಂಕಿಗೆ ನಿರಂತರವಾಗಿ ಆಗುತ್ತಿರುವ ನಷ್ಟದ ಒಂದು ಭಾಗ ಇನ್ನು ಮುಂದಾದರೂ ನಿಲ್ಲುತ್ತದೆ. ದೇವರು ಇಂಥ ಸದ್ಬುದ್ಧಿಯನ್ನು ಅವರಿಗೆ ಕೊಟ್ಟಿದ್ದಕ್ಕೆ ಅನಂತಾನಂತ ಧನ್ಯವಾದಗಳು. ದೇವರು ಅವರನ್ನೂ, ಅವರ ಮನೆಯವರನ್ನೂ ಕಾಪಾಡಲಿ" ಎಂದು ಹಾರೈಸಿದರು ಎನ್ನುವಲ್ಲಿಗೆ ನಮ್ಮ ಮೋಹನಮೂರ್ತಿಯ ಮಹಾಪುರಾಣಕ್ಕೆ ಮಂಗಳವನ್ನು ಹಾಡೋಣ.

■

---



# ಮನೆಯಿಂದಲೇ ಕೆಲಸ – ಲೇಟಪ್ಪನ ಕಾರ್ಯವೈಖರಿ

**– ಜಿ.ವಿ. ಅರುಣ**

ಕಚೇರಿಗೆ ಪ್ರತಿದಿನ, ಅವನು ಸೇರಿದ ದಿನದಿಂದ, ಕಡೆಯ ಪಕ್ಷ ಅರ್ಧ ಗಂಟೆಯಷ್ಟು ತಡವಾಗಿ ಬಂದು 'ಲೇಟಪ್ಪ' ಎಂಬ ಅನ್ವರ್ಥನಾಮವನ್ನು ಪಡೆದಿದ್ದು ನಿಮಗೆಲ್ಲರಿಗೂ ಗೊತ್ತಿದೆ. ಈಗ 'ಮನೆಯಿಂದಲೇ ಕೆಲಸ'ದ ಸಮಯದಲ್ಲಿ, ಅವನು ಹೇಗೆ ಕೆಲಸ ಮಾಡುತ್ತಿದ್ದಾನೆ? ಎಂಬ ಕುತೂಹಲವೂ ಅನೇಕರಿಗೆ ಇರುವುದು ಸಹಜ. ಈ ರೋಚಕ ವಿಚಾರವನ್ನು ಎರಡು ವಾಕ್ಯದಲ್ಲಿ ಹೇಳಿ ಮುಗಿಸಲು ಆಗುವುದಿಲ್ಲ. ಆದ್ದರಿಂದ ಅದನ್ನು ಬರೆದಿಟ್ಟುಕೊಂಡೆ. ಇದನ್ನು ನಿಮಗೆ ಮಾತ್ರ ತಿಳಿಸುತ್ತಿದ್ದೇನೆ. ದಯಮಾಡಿ ನಮ್ಮ ಲೇಟಪ್ಪನಿಗೋ ನಿಮ್ಮ ಪರಿಚಯದ ಇತರ ಲೇಟಪ್ಪಗಳಿಗೋ ಇದನ್ನು ತಿಳಿಸಬೇಡಿ. ಅವರು ಸಂತೋಷದಿಂದ ಉಬ್ಬಿ, ಇನ್ನೇನಾದರೂ ಅನಾಹುತ ಮಾಡಿಯಾರು!

ನಮ್ಮದು ಐಟಿ ಕಂಪನಿ ಅಲ್ಲ. ಆದರೆ ಸಾಕಷ್ಟು ಕೆಲಸಗಳನ್ನು ಕಂಪ್ಯೂಟರ್ನಲ್ಲಿ ಮಾಡುತ್ತೇವೆ. ಅದಕ್ಕೆ ತಕ್ಕ ತರಬೇತಿಗಳು ಎಲ್ಲರಿಗೂ ಬೇರೆ ಬೇರೆ ಕಡೆ ಆಗಿದೆ. ಲಾಕ್‌ಡೌನ್ ಆದ ಅನಂತರ ಎಲ್ಲರೂ ಮನೆಯಲ್ಲೇ ಕುಳಿತು ಪರಸ್ಪರ ಹೊಂದಾಣಿಕೆಯಿಂದ ಎಲ್ಲ ಕೆಲಸವನ್ನು ಕಂಪ್ಯೂಟರ್‌ನಲ್ಲಿ ಮಾಡುವ ಸಂದರ್ಭ ಒದಗಿಬಂದಿದೆ. ಆದರೇನು, ಮೂರು ದಿನಗಳಾದರೂ ಲೇಟಪ್ಪನ ಪತ್ತೆ ಇಲ್ಲ. ಅವನು ಮಾಡಬೇಕಾದ ಕೆಲಸವನ್ನು ಇತರರು ಹಂಚಿಕೊಂಡು ಹೆಚ್ಚಿನ ಕೆಲಸ ಮಾಡಬೇಕಾದ ಒತ್ತಡವೂ ಪ್ರಾರಂಭವಾಯಿತು.

ಮಾನವ ಸಂಪನ್ಮೂಲ ಇಲಾಖೆಯಿಂದ (ಮಾಸಂ) ಲೇಟಪ್ಪನಿಗೆ ಸೂಚನಾ ಪತ್ರ ಹೋಯಿತು – ಆನ್ ಲೈನ್ ಕೆಲಸಕ್ಕೆ ತಕ್ಷಣ ಹಾಜರಾಗಿ. ಕಳೆದ ಮೂರು ದಿನಗಳಿಂದ ಬರದಿರುವುದಕ್ಕೆ ಸೂಕ್ತ ವಿವರಣೆ ನೀಡಿ.

ಮಾಸಂ ಇಲಾಖೆಯ ಇ–ಮೇಲ್ ಬಂದಿರುವುದು ಲೇಟಪ್ಪನಿಗೆ ತಿಳಿಯಲಿಲ್ಲ. ಆದ್ದರಿಂದ ಉತ್ತರಿಸಲಿಲ್ಲ. ಅಲ್ಲಿಂದ ಒಬ್ಬರು ಲೇಟಪ್ಪನ ಮೊಬೈಲ್‌ಗೆ ಕರೆ ಮಾಡಿ ವಿಚಾರವನ್ನು ತಿಳಿಸಿ ತಕ್ಷಣವೇ ಉತ್ತರಿಸಲು ಸೂಚಿಸಿದರು.

ಲೇಟಪ್ಪನ ಉತ್ತರ: ನನ್ನ ಈ ಕ್ರಮದಿಂದಾಗಿ ಇತರರು ಹೆಚ್ಚಿನ ಕಾರ್ಯಕ್ಷಮತೆ ಹೊಂದಿರುವುದು ಈಚೆಗೆ ಬಂದಿದೆ. ಅದನ್ನು ಸಂಸ್ಥೆಯು ಲಾಭದಾಯಕವಾಗಿ ಬಳಸಿ ಕೊಳ್ಳಬಹುದು. ಇದನ್ನು ತೋರಿಸಿಕೊಟ್ಟ ನನಗೆ ಬೋನಸ್ ನೀಡಬೇಕೆಂದು ಕೋರುತ್ತೇನೆ.

ಮಾಸಂ: ಪ್ರತಿಯೊಬ್ಬರಿಗೆ ಎಷ್ಟು ಕೆಲಸ ಕೊಡಬೇಕು ಎಂಬುದರ ಅರಿವು ನಮಗಿದೆ. ನಿಮ್ಮ ಕ್ರಮದಿಂದ ಅವರ ಕಾರ್ಯಕ್ಷಮತೆಯ ಜೊತೆಗೆ ನೀವಿಲ್ಲದಿದ್ದರೂ ಕಚೇರಿಯ ಕೆಲಸಗಳು ನಡೆಯುತ್ತವೆ ಎಂಬುದು ನಿಮಗೆ ಮನವರಿಕೆಯಾಗಿರಬೇಕು. ಆದ್ದರಿಂದ ಇವುಗಳ ವಿಶ್ಲೇಷಣೆಯಲ್ಲಿ ತೊಡಗದೆ ನಮ್ಮ ಹಿಂದಿನ ಇ–ಮೇಲ್‌ಗೆ ಉತ್ತರಿಸಿ ಆನ್ಲೈನ್ ಕೆಲಸವನ್ನು ಪ್ರಾರಂಭಿಸುವುದು.

ಲೇಟಪ್ಪನ ಉತ್ತರ: ನನ್ನ ಬಳಿ ಲ್ಯಾಪ್‌ಟಾಪ್ ಇಲ್ಲ. ಆದ್ದರಿಂದ ಮನೆಯಿಂದ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ದಯಮಾಡಿ ಲ್ಯಾಪ್‌ಟಾಪ್ ಒದಗಿಸಿ.



ಮಾಸಂ: ಸದ್ಯದ ಪರಿಸ್ಥಿತಿಯಲ್ಲಿ ತಕ್ಷಣ ಲ್ಯಾಪ್‌ಟಾಪ್ ಅನ್ನು ಒದಗಿಸಲು ಸಾಧ್ಯವಿಲ್ಲ. ಬೇಕಿದ್ದರೆ ಆಫೀಸಿನಲ್ಲಿ ನಿಮ್ಮ ಮೇಜಿನ ಮೇಲಿರುವ ಕಂಪ್ಯೂಟರನ್ನು ಒಯ್ಯಬಹುದು. ಅದಕ್ಕೆ ನಾವು ಅನುಮತಿಯನ್ನು ಒದಗಿಸುತ್ತೇವೆ. ಕಚೇರಿಗೆ ಬಂದು ಅದನ್ನು

ಕೊಂಡೊಯ್ಯುವುದು ನಿಮ್ಮ ಹೊಣೆಗಾರಿಕೆ. ನಮಗೆ ಅದನ್ನು ನಿಮ್ಮ ಮನೆಗೆ ತಂದು ಕೊಡಲಾಗುವುದಿಲ್ಲ.

ಮತ್ತೊಂದು ವಿಚಾರ, ನೀವು ಲ್ಯಾಪ್‌ಟಾಪ್ ಕೊಳ್ಳಲು ಸಂಸ್ಥೆಯಿಂದ ಬಡ್ಡಿರಹಿತ ಸಾಲ ಪಡೆದಿದ್ದು ಅದರ ಕಂತುಗಳು ಇನ್ನೂ ಬಾಕಿ ಇದೆ. ಆ ಲ್ಯಾಪ್‌ಟಾಪ್ ನಿಮ್ಮ ಬಳಿ ಇರಬೇಕಲ್ಲವೇ? ಅದನ್ನು  ಉಪಯೋಗಿಸಲು ನಿಮ್ಮನ್ನು ಕೋರುತ್ತೇವೆ. ಉಳಿದವರು ಹೀಗೇ ಮಾಡುತ್ತಿದ್ದಾರೆ. ಆ ಲ್ಯಾಪ್‌ಟಾಪನ್ನು ನೀವೇನಾದರೂ ಮಾರಿಬಿಟ್ಟಿದ್ದರೆ ತಕ್ಷಣವೇ ಆ ಹಣವನ್ನು ನಿಮ್ಮ ಸಾಲಕ್ಕೆ ತುಂಬ ಬೇಕಾಗಿತ್ತು. ಇಲ್ಲದಿದ್ದರೆ ಹಣಕಾಸಿನ ದುರುಪಯೋಗ ನಿಮ್ಮ ಮೇಲೆ ಬರುತ್ತದೆ.  ಇದಕ್ಕೆ ತಕ್ಷಣ ಉತ್ತರಿಸುವುದು.

ಮತ್ತೊಂದು ವಿಚಾರ, ಈ ಸಂದರ್ಭದಲ್ಲಿ ನಿಮ್ಮ ಕೋರಿಕೆಯಂತೆ ಕಂಪ್ಯೂಟರ್ ತರಬೇತಿಗೆ ಮೂರು ದಿನಗಳು ನಿಮ್ಮನ್ನು ತಿರುಪತಿಗೆ ಕಳುಹಿಸಿದ್ದನ್ನು ನಿಮ್ಮ ನೆನಪಿಗೆ ತರಲು ಇಚ್ಛಿಸುತ್ತೇವೆ.

ಲೇಟಪ್ಪ:  ನೀವು ಕಚೇರಿಯಿಂದ ನನ್ನ ಕಂಪ್ಯೂಟರನ್ನು ಮನೆಗೆ ತೆಗೆದುಕೊಂಡು ಹೋಗಲು ಅನುಮತಿಸುವುದನ್ನು ತಿಳಿದು ಬಹಳ ಸಂತೋಷವಾಯಿತು. ಅದರ ಜೊತೆಗೆ, ಕೆಲಸ ಮಾಡಲು ನನ್ನ ಮೇಜು ಮತ್ತು ಕುರ್ಚಿಗಳನ್ನೂ ತರಬೇಕಾಗುತ್ತದೆ. ಅವನ್ನೆಲ್ಲಾ ತಂದರೆ, ಮನೆಯಿಂದ ನಾವು ಮಲಗುವ ಮಂಚವನ್ನು ಹೊರಗೆ ಹಾಕಬೇಕಾಗುತ್ತದೆ. ಆದ್ದರಿಂದ ಅದು ಕಾರ್ಯಸಾಧುವಲ್ಲ ಎಂದು ವಿನಮ್ರವಾಗಿ ನಿಮ್ಮ ಗಮನಕ್ಕೆ ತರುತ್ತೇನೆ.

ಇನ್ನೂ ಲ್ಯಾಪ್ಟಾಪ್ ವಿಚಾರ. ಅದನ್ನು ಪಡೆಯಲು ಸಂಸ್ಥೆಯು ಬಡ್ಡಿರಹಿತ ಸಾಲವನ್ನು ನೀಡಿರುವುದನ್ನು ನಾನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅದು ನನ್ನ ಬಳಿಯೇ ಇದೆ. ಹಾಗಾಗಿ ಹಣಕಾಸಿನ ದುರುಪಯೋಗದ ಪ್ರಶ್ನೆ ಏಳುವುದಿಲ್ಲ. ಸದ್ಯಕ್ಕೆ ಅದನ್ನು ನನ್ನ ಮಗ ಆನ್ಲೈನ್ ತರಗತಿಗಾಗಿ ಉಪಯೋಗಿಸುತ್ತಿದ್ದಾನೆ. ಯುವಜನಾಂಗಕ್ಕೆ ವಿದ್ಯಾಭ್ಯಾಸ ಕೊಡಿಸಿ ದೇಶವನ್ನು ಮುಂದೆ ತರಬೇಕಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂಬುದನ್ನು ನೀವು ಅರಿತಿದ್ದೀರಿ ಎಂದು ನಾನು ಭಾವಿಸುತ್ತೇನೆ.

ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ನಿಮ್ಮ ಗಮನಕ್ಕೆ ತರಲು ನನಗೆ ಅತ್ಯಂತ ಸಂತೋಷವಾಗುತ್ತಿದೆ. ನನ್ನ ಮಗನ ಆನ್ಲೈನ್ ತರಗತಿಗಳಿಗೆ ನಾನೂ ಹಾಜರಾಗುತ್ತಿದ್ದೇನೆ. ಅವನ ಉಪಾಧ್ಯಾಯಿನಿಯನ್ನು ಪರದೆಯ ಮೇಲೆ ನೋಡುವುದೇ ಒಂದು ಚೆಂದ. ಅವರು ಪಾಠ ಮಾಡುವುದನ್ನು ಕೇಳಲು ಇನ್ನೂ ಚೆಂದ. ಅದರಿಂದ ಅನೇಕ ಹೊಸ ವಿಚಾರಗಳು ನನ್ನ ಗಮನಕ್ಕೆ ಬರುತ್ತಿವೆ. ಅವನ್ನೆಲ್ಲ ಚಿಕ್ಕವನಿದ್ದಾಗ ನಾನು ಏಕೆ ಕಲಿಯಲಿಲ್ಲ ಎನ್ನಿಸುತ್ತಿದೆ. ಈ ತರಗತಿಗಳಿಗೆ ನಾನು ಹಾಜರಾಗುತ್ತಾ ಇರುವುದರಿಂದ, ಅವುಗಳ ಲಾಭ ನನ್ನಿಂದ ಮುಂದೊಂದು ದಿನ ಸಂಸ್ಥೆಗೆ  ಆಗುವುದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ ಇವನ್ನು 'ವಿಶೇಷ ತರಬೇತಿ' ಎಂದು ಪರಿಗಣಿಸಿ, ಆಫೀಸ್ ಕೆಲಸದಿಂದ ವಿನಾಯತಿ ನೀಡಬೇಕಾಗಿ ವಿನಂತಿಸುತ್ತೇನೆ. ಈ ತರಬೇತಿಗೆ ಕಚೇರಿಯಿಂದ ಯಾವುದೇ ಹಣಕಾಸಿನ ನೆರವನ್ನು ಕೇಳುವುದಿಲ್ಲ ಎಂಬ ಭರವಸೆಯನ್ನು ನಾನು ನಿಮಗೆ ನೀಡುತ್ತೇನೆ.

ಇನ್ನು ತಿರುಪತಿಯಲ್ಲಿ ನಾನು ಪಡೆದ ಕಂಪ್ಯೂಟರ್ ತರಬೇತಿಯ ವಿಚಾರ. ಅಲ್ಲಿಗೆ ತರಬೇತಿಗೆ ಹೋದ ಮೊದಲನೆಯ ದಿನ ತಿರುಮಲೆಯಲ್ಲಿ ಅಂದು ನೂಕುನುಗ್ಗಲು ಇಲ್ಲ, ಬಹಳ ಬೇಗ ಸ್ವಾಮಿಯ ದರ್ಶನವಾಗುತ್ತಿದೆ ಎಂದು ತಿಳಿದು ಬಂತು. ನಾನು ತಕ್ಷಣವೇ ಬೆಟ್ಟದ ಮೇಲಕ್ಕೆ ಬಸ್ಸಿನಲ್ಲಿ ಹೋದೆ. ಆದರೆ ಸರತಿಯಲ್ಲಿ ನಿಂತು ದರ್ಶನವನ್ನು



ಮುಗಿಸಿ, ಪ್ರಸಾದವನ್ನು ಸರತಿಯಲ್ಲಿ ನಿಂತು ಕೊಂಡು, ಹಿಂದಿರುಗುವ ವೇಳೆಗೆ ಕೊನೆಯ ಅರ್ಧ ಗಂಟೆ ಮಾತ್ರ ತರಬೇತಿಗೆ ಹಾಜರಾಗುವಂತಾಯಿತು. ಹಾಗಾಗಿ ಮುಂದಿನ ಎರಡು ದಿನಗಳ ತರಬೇತಿಯಲ್ಲಿ ನನಗೆ ತಲೆಬುಡ ಅರ್ಥವಾಗಿರಲಿಲ್ಲ. ನಾನು ಹಿಂದಿರುಗಿದ ಮೇಲೆ, ಕಚೇರಿಯ ಎಲ್ಲರಿಗೂ – ನಿಮ್ಮ ವಿಭಾಗವನ್ನು ಸೇರಿಸಿ, ಪ್ರಸಾದವನ್ನು ಹಂಚಿದ್ದೆ. ಅದು ನಿಮಗೆ ನೆನಪಿರಬಹುದು.

ಆಗ ನಾನು ತರಬೇತಿ ಪಡೆಯದಿದ್ದರೂ ಈಗ ನನ್ನ ಮಗನ ಸಹಾಯ ಪಡೆದು ಕಂಪ್ಯೂಟರ್ ಮೂಲಕ ನಿಮಗೆ ಉತ್ತರಗಳನ್ನು ಕಳುಹಿಸುತ್ತಿದ್ದೇನೆ. ಅವನು ಬಹಳ ಚೂಟಿ ಆಗಿರುವುದರಿಂದ ನನ್ನ ಕೆಲಸದ ಕೆಲವು ಭಾಗವನ್ನು ಅವನ ಸಹಾಯದಿಂದ ಬೇಗ ಮಾಡುವುದು ನನಗೆ ಸಾಧ್ಯವಾಗುತ್ತದೆ.

ಮಾಸಂ: ನಿಮ್ಮ ಉತ್ತರವನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಈ ಕೆಳಗಿನ ಸೂಚನೆಗಳನ್ನು ನೀವು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ನಿಮಗೆ ನಿರ್ದೇಶಿಸಲು ನಾನು ಆದೇಶಿತನಾಗಿದ್ದೇನೆ.

1) ಸಂಸ್ಥೆಯ ಕೆಲಸ ಕಾರ್ಯಗಳನ್ನು ನೀವು ಮಾಡಬೇಕೆ ಹೊರತು, ಬೇರೆಯವರೊಂದಿಗೆ (ಮನೆಯಲ್ಲಿರುವವರು ಸೇರಿದಂತೆ) ಅದರ ಬಗ್ಗೆ ಮಾತನಾಡುವುದಾಗಲಿ ಅವರ ಸಹಾಯ ಪಡೆಯುವುದಾಗಲಿ ಮಾಡಬಾರದು.

2) ನಮ್ಮ ಸಂಸ್ಥೆಯು 'ಬಾಲಕಾರ್ಮಿಕ ವಿರೋಧಿ ನೀತಿ'ಯನ್ನು ಬಹಳ ಬಲವಾಗಿ ಸಮರ್ಥಿಸುತ್ತದೆ. ಹಾಗಾಗಿ ಕಚೇರಿಯ ಕೆಲಸಗಳನ್ನು ಬಾಲಕರಿಂದ ಮಾಡಿಸುವುದು ಅಕ್ಷಮ್ಯ ಅಪರಾಧವಾಗುತ್ತದೆ. ಹಾಗೆ ಮಾಡಲು ಯೋಜಿಸಿದ್ದರೆ ಅದನ್ನು ತಕ್ಷಣವೇ ಕೈಬಿಡತಕ್ಕದ್ದು. ಅದರ ಬಗ್ಗೆ ಒಂದು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು.

3) ಪದವೀಧರರಾದ ನೀವು ಮಾಧ್ಯಮಿಕ / ಪ್ರೌಢ ಶಾಲೆಯ ಪಾಠಗಳನ್ನು ಕೇಳುವುದನ್ನು ತರಬೇತಿ ಎಂದು ಪರಿಗಣಿಸಲಾಗುವುದಿಲ್ಲ. ನಿಮ್ಮ ಬಿಡುವಿನ ವೇಳೆಯಲ್ಲಿ ನೀವು ಏನು ಮಾಡುವಿರೆಂಬುದು ನಮಗೆಸಂಬಂಧಪಟ್ಟದ್ದಲ್ಲ. ಆದರೆ ಕಚೇರಿಯ ಕೆಲಸದ ವೇಳೆಯಲ್ಲಿ (ಅದು ಶಾಲೆಯ ಸಮಯಕ್ಕೆ ಸರಿಹೊಂದುತ್ತದೆ) ಆ ರೀತಿಯ ಪಾಠಗಳನ್ನು ಕೇಳುವ ಅವಶ್ಯಕತೆ ಇರುವುದಿಲ್ಲ. ಆ ಸಮಯದಲ್ಲಿ ನೀವು ಕಚೇರಿಯ ಕೆಲಸದಲ್ಲಿ ನಿರತರಾಗಿದ್ದೀರಿ ಎಂಬುದನ್ನು ನೀವೇ ನಿರೂಪಿಸಬೇಕಾಗುತ್ತದೆ.

4) ನೀವು ತಿರುಪತಿಯಲ್ಲಿ ಪಡೆದ ತರಬೇತಿಯ ಹಾಜರಾತಿಗೆ ಸಂಬಂಧಿಸಿದಂತೆ ನಿಮ್ಮ ಹೇಳಿಕೆಯನ್ನು ಗಮನಿಸಿದ್ದೇವೆ. ಕಚೇರಿಯಲ್ಲೇ ಕೆಲಸಗಳು ಸಂಪೂರ್ಣವಾಗಿ ಪ್ರಾರಂಭವಾದ ಮೇಲೆ, ಅದರ ಬಗ್ಗೆ ಸೂಕ್ತ ವಿಚಾರಣೆ ನಡೆಸಿ, ನಿಮ್ಮಿಂದ ಆ ತರಬೇತಿಗೆ ಆಗಿರುವ ಖರ್ಚುವೆಚ್ಚಗಳನ್ನು ಹಿಂದೆ ಪಡೆಯಲು ಯೋಚಿಸಲಾಗುವುದು.

5) ಈ ಪತ್ರ ತಲುಪಿದ 24 ಗಂಟೆಯೊಳಗಾಗಿ ನೀವು ಮನೆಯಿಂದಲೇ ಆನ್ಲೈನ್ ಕೆಲಸವನ್ನು ಪ್ರಾರಂಭಿಸದಿದ್ದರೆ ನೀವು ಕೆಲಸ ಮಾಡದ ದಿನಗಳನ್ನು 'ವೇತನರಹಿತ ರಜೆ'ಯನ್ನಾಗಿ ಪರಿವರ್ತಿಸುವ ಅಧಿಕಾರವನ್ನು ಕಾದಿರಿಸಲಾಗಿದೆ ಎಂಬುದನ್ನು ಈ ಮೂಲಕ ಸೂಚಿಸಬಯಸುತ್ತೇವೆ.



ಈ ಇ–ಮೇಲ್ ತಲುಪಿದ ಅನಂತರ, ನಿನ್ನೆ ಸಂಜೆ ಮತ್ತು ರಾತ್ರಿ ನಾಲ್ಕೈದು ಬಾರಿ ಲೇಟಪ್ಪ ಆತಂಕದಿಂದ ದೂರವಾಣಿ ಕರೆ ಮಾಡಿ, ಮನೆಯಿಂದ ಆನ್ಲೈನ್ ಕೆಲಸ ಹೇಗೆ ಮಾಡುವುದು ಎಂದು ನನ್ನೊಂದಿಗೆ ಸಮಾಲೋಚಿಸಿದ.

ನಾಳೆ ಏನಾಗುವುದೋ ಕಾದು ನೋಡಬೇಕು! ■

# ಹೆಚ್ಚೆಚ್ಚು ಮೊಮ್ಮಕ್ಕಳು ಬರಲಿ.....

**– ಎಚ್.ಗೋಪಾಲಕೃಷ್ಣ**

"ಅದೇನಾಯಿತು ಅಂತ ಅಂದ್ರೆ; ನಿಮಗೆ ಗೊತ್ತಲ್ಲ.... ನನಗೆ ಮೂರು ಜನ ಮೊಮ್ಮಕ್ಕಳು. ಮೊದಲ ಮಗನಿಗೆ ಒಂದು. ಅದಕ್ಕೆ ಈಗ ಮೂರು ವರ್ಷ. ಆಮೇಲೆ ಮಗಳಿಗೆ ಅವಳಿ ಮಕ್ಕಳು ಆದವು. ಅವಕ್ಕೆ ಎರಡು ವರ್ಷ.

ಅವಾಗಾವಾಗ ಇಲ್ ಬಂದು ಅಜ್ಜಿ-ತಾತನ ಅಜ್ಜಿ ತಾತನ ಮನೆಗೆ ಬರ್ತಾ ಇದ್ದವು. ಇಲ್ಲೇ ಊಟ, ಇಲ್ಲೇ ನಿದ್ರೆ ಆಟಪಾಟ ಎಲ್ಲಾ ಇಲ್ಲೇ.

ಕೋವಿಡ್ ಬಂತಲ್ಲ, ಆಗ ಎಲ್ಲಾ ಕೂಸು ಇಲ್ಲೇ ಇದ್ದವು.

ಅಜ್ಜಿ ಪ್ರೀತಿಯಿಂದ ಮೊಮ್ಮಕ್ಕಳಿಗೆ ಅಂತ ಅನ್ನ ಕಲಸುವುದು, ಅನ್ನ ಕಲಸಿ ಅದರ ಮೇಲೆ ಮೇಲೆ ಮೂರು ಚಮಚ ತುಪ್ಪ ಸುರಿಯೋದು, ಚೆನ್ನಾಗಿ ಮೆತ್ಮೆತ್ತಗೆ ಅದನ್ನ ಕಲಸೋದು, ಅದರ ಮೇಲ್ಗಡೆ ಉಪ್ಪು ಉದುರಿಸಿ ಕಲಸಿ ಕಲಸಿ ಅದನ್ನ ಮಕ್ಕಳಿಗೆ ತಿನ್ನಿಸಲು ಶುರು ಮಾಡೋದು.

ಮೊಮ್ಮಕ್ಕಳು ತುಂಬಾ ಹಟಮಾರಿಗಳು. ತಿನ್ನೋದಿಕ್ಕೆ ಕೇತೆ ತೆಗೆಯುವ ಜಾಯಮಾನಕ್ಕೆ ಸೇರಿದವು.... ತುತ್ತು ಇಟ್ಟುಕೊಳ್ಳಲ್ಲ..

ಅದಕ್ಕೆ ಅಜ್ಜಿ ಅದೇನ್ ಉಪಾಯ ಮಾಡ್ತಾ ಇದ್ಲು ಅಂದರೆ 'ತಾತಾ ಬಾಯ್ ಬಾಯ್ ಬಾಯ್ ತೆಗಿ.... ನಿಂಗೊಂದು ತುತ್ತು; ಪುಟ್ಟಣ್ಣ ಪುಟ್ಟಣ್ಣನಿಗೆ ಒಂದು ತುತ್ತು' ಅಂತ ರಾಗವಾಗಿ ರಮಿಸುತ್ತ ಇದ್ದಳು. ಆದರೂ ಮೊಮ್ಮಕ್ಕಳು ಬಾಯಿ ತೆರೀದೆ ಇದ್ದರೆ ಅದು ಅಜ್ಜನ ಪಾಲಿಗೆ ಬರೋದು. ಇದು ಉಪ್ಪು ತುಪ್ಪದ ಕಥೆ ಆಯ್ತಾ .....

ಮುಂದಿನ ಕಥೆಗೆ ಬನ್ನಿ....

... ಮೊದಲು ಬೆಳಗಿನ ತಿಂಡಿಗೆ ಬನ್ನಿ. ತಿಂಡಿ ಏನೇ ಮಾಡಿದರು ಮೊದಲು ತಾತಾ ರುಚಿ ನೋಡಿ ಅಂತ ಕೊಡ್ತಾರೆ. ರುಚಿ ನೋಡಕ್ಕೆ ಅಂತ ಇಸ್ಕೊತೀನಿ. ಅದು ರುಚಿ ಅಂತ ಹೊಟ್ಟೆ ತುಂಬಾ ತುಂಬ್ಕೋತಿನ...ಇದು ಬೆಳಗ್ಗೆ ತಿಂಡಿ ಕಥೆ .....

"ಅದಕ್ಕೂ ಮೊದಲು ಹಾಲು ಕುಡಿಯೋದು .....ಮಕ್ಕಳು ಹಾಲು ಕುಡಿಯುತ್ತಾರೆ ಅಂತಾ ಗೊತ್ತಲ್ಲ, ಸರಿ ಹಾಲಿನ ಫುಡ್ ಅಂತ ಮಕ್ಕಳ ಫುಡ್ ತಯಾರು ಮಾಡ್ತಾರೆ ನೋಡಿ .... ಅದು ಏನೇನೋ ಫಾರಿನ್ ಕಂಪನಿಗಳಪ್ಪ.

ಎಲ್ಲಾ ಫಾರಿನ್ ಕಂಪನಿಗಳ ಹಾಲಿನ ಪುಡಿ ತಂದು ಮನೆಯಲ್ಲಿ ಅಡುಗೆಮನೆಯಲ್ಲಿ ಜೋಡಿಸಿವೆ ಅವುಗಳ ಅಪ್ಪ ಅಮ್ಮ. ಒಂದೊಂದ್ಸಲ ಒಂದೊಂದು ಡಾಕ್ಟರ ಬಳಿ ಹೋದಾಗಲೂ, ಅವರು ಬೇರೆ ಬೇರೆ ಕಂಪನಿ ಹಾಲಿನ ಪುಡಿ ಬರ್‌ಕೊಡ್ತಾರೆ. ಹೀಗಾಗಿ ಮನೆಯಲ್ಲಿ ಅಷ್ಟೊಂದು ಕಂಪನಿಗಳ ಹಾಲಿನ ಪುಡಿ ಡಬ್ಬಗಳು....

ಹಾಲಿನ ಪುಡಿ ತಂದು ಬಿಡ್ತೀವಿ ಆಮೇಲೆ ಖರ್ಚಾಗಲಿಲ್ಲ ಅಂದರೆ ಏನು ಮಾಡುತ್ತೀರಿ? ಅದಕ್ಕೆ ಮನೆಯಲ್ಲಿ ಏನ್ ಮಾಡ್ತಾರೆ ಅಂದ್ರೆ, 'ತಾತ ನೀನ್ ಇದಿಯಲ್ಲ ಒಂದು ಕೆಲಸ ಮಾಡಬಾರದ? ಅದನ್ನ ಕುಡೀಬಾರದ? ಎಷ್ಟೊಂದು ದುಡ್ಡು ತೆತ್ತು ತಂದಿದ್ದೀವಿ, ನೋಡಿದಿಯಾ' ಅಂತ ತಾತನ್ ಮೇಲೆ ಪ್ರೀತಿ ತೋರಿಸುತ್ತಾರೆ. ಆ ಪ್ರೀತಿನಾ ಹೇಗೆ ಇಗ್ನೋರ್ ಮಾಡಕ್ಕಾಗುತ್ತೆ ...?



ಆಗೋಲ್ಲ ಆಗೋಲ್ಲ ಅಂತ ನಿಮಗೆ ಗೊತ್ತು.

ಅದಕ್ಕೆ ಏನ್ ಮಾಡ್ತೀನಿ ಪ್ರತಿದಿನ ಬೆಳಿಗ್ಗೆ ಬೆಳಿಗ್ಗೆ ಎದ್ದಕೂಡಲೇ ಅಡುಗೆ ಮನೆಗೆ ಹೋಗ್ತೀನಿ ಅಲ್ಲಿರೋ ಹಾಲ್ ಡಬ್ಬ ನೋಡ್ತೀನಿ, ಯಾವ್ದ್ ಹಳೇದು ಅಂತ ಹುಡುಕ್ತೀನಿ. ಅಲ್ಲಿಂದ 3 ಚಮಚ ಅಥವಾ ನಾಲ್ಕು ಸ್ಪೂನು ಪುಡಿ ತಗೋತೀನಿ. ಲೋಟಕ್ಕೆ ಹಾಕುತ್ತೀನಿ. ಬಿಸಿ ಬಿಸಿ ಹಾಲು ಹಾಕ್ತೀನಿ ಅದರ ಮೇಲೆ. ಆಮೇಲೆ ಗಟಗಟ ಅಂತ ಗಂಟಲಿಗೆ ಸುರ್ಕೋತೀನಿ.......

"ಈಗ ತಿಂಡಿ ವಿಷಯ ನೋಡಿದ್ರಾ, ಹಾಲಿನ್ ವಿಷಯ ನೋಡಿದ್ರಾ, ಮಧ್ಯಾಹ್ನದ ಊಟದ ಕಥೆ ಕೇಳಿದ್ರಾ.....

ಕಥೆ ಇನ್ನು ಪೂರ್ತಿ ಮುಗಿದಿಲ್ಲ ......

ಉಪ್ಪು ತುಪ್ಪ. ಕಥೆ ಹೇಳಿದೆ. ಮೂರು ಜನ ಮೊಮ್ಮಕ್ಕಳಿಗೆ ಊಟ ಕಲಸುತ್ತಾರೆ ಅದನ್ನ ರುಚಿ ನೋಡುವಂತೆ ತಾತನಿಗೆ ಕೊಡುತ್ತಾರೆ. ತಾತ ರುಚಿ ನೋಡ್ತಾನೆ. ಇಷ್ಟ ಆಗುತ್ತೆ. ಮೂರು ಜನ ಮೊಮ್ಮಕ್ಕಳಿಗೆ ಕೊಟ್ಟಿರೋ ಅಷ್ಟೂ ತುಪ್ಪ ಅನ್ನ ತಿನ್ನುತ್ತಾನೆ.......

"ಆಮೇಲೆ ಏನಾಗುತ್ತೆ ಆದರೆ ಸಾರನ್ನ ಕಲಸುತ್ತಾರೆ. ತೊವ್ವೆ ಅನ್ನ ಕಲಸುತ್ತಾರೆ ಅದನ್ನ ತಾತಂಗೆ ಕೊಡ್ತಾರೆ. ತಾತ ರುಚಿ ಇದೇಂತ ಪೂರ್ತಿ ಮೂರು ಜನ ಮೊಮ್ಮಕ್ಕಳಿಗೆ ಅಂತ ಮಾಡಿದ ಮಾಡಿದ್ದು ಮುಕ್ಕಿಡುತ್ತೆ, ಆಯ್ತಾ....

"ಆಮೇಲೆ ಮೂರನೇದು ಗಟ್ಟಿಮೊಸರು ಅದಕ್ಕೆ ಆರು ಸೌಟು ಅನ್ನ ಹಾಕಿ ಚೆನ್ನಾಗಿ ಕಿವುಚಿ ಕಲ್ಸಿ ಕಲ್ಸಿ ಇನ್ನೊಂದ್ಸಲ ಕಲ್ಸಿ ಚೆನ್ನಾಗಿ ಮುದ್ದೆ ತರ ಮಾಡಿದ್ದಾರೆ.

ಅದಂದರೆ ತಾತಂಗೆ ಬಾರಿ ಇಷ್ಟ.

ತಾತ ಅದನ್ನು ಮುಕ್ಕುತ್ತೆ...

ತಾತಂಗೆ ಕೊಟ್ಟು ಮೊಮ್ಮಕ್ಕಳಿಗೆ ತಿನ್ಸಿದ ಮೇಲೆ ಅಜ್ಜಿ ಏನ್ ಮಾಡುತ್ತೆ ನೀವು ಬಂದು ಊಟಕ್ಕೆ ಕುತ್ಕೋ ಬಾರದಾ... ಅಂತ ಕೂಗತ್ತೆ.

ತಾತ ಆಗ ಊಟಕ್ಕೆ ಕೂತ್ಕೊಳ್ಳೋಕೆ ಹೋಗುತ್ತೆ.

ಈ ತನಕ ತಿಂದಿದ್ದು ಮರೆತುಬಿಡುತ್ತದೆ.....

"ಮತ್ತೆ ಮೊದಲಿಂದ ಅನ್ನ ಸಾರು, ಅನ್ನ ಹುಳಿ, ಅನ್ನ ಮೊಸರು, ಅನ್ನ ಉಪ್ಪಿನಕಾಯಿ ಅನ್ನ ತೊವ್ವೆ ಎಲ್ಲಾ ಒಂದಾದ ಮೇಲೆ ಇನ್ನೊಂದರಂತೆ ತಿನ್ನುತ್ತದೆ......

"ಆಯ್ತಾ? ಸಾಯಂಕಾಲ ಏನು ಅಂದ್ರೆ ಮೊಮ್ಮಕ್ಕಳಿಗೆ ತಿಂಡಿ ಕೊಡುವ ಸಮಯ.....

ಮೊಮ್ಮಕ್ಕಳಿಗೆ ಹೆಚ್ಚು ಶಕ್ತಿ ಬರಲಿ ಅಂತ ದ್ರಾಕ್ಷಿ ಗೋಡಂಬಿ ವಾಲ್ನಟ್ ಇದೆಲ್ಲ ದಂಡಿಯಾಗಿ ಮನೆಯಲ್ಲಿ ತುಂಬಿ ತುಂಬಿ ಇಟ್ಟಿದ್ದಾರೆ.

ಅವನಲ್ಲ ಒಟ್ಟಿಗೆ ಬೆರೆಸಿ ಪುಡಿಮಾಡಿ ಹಾಲಿಗೆ ಹಾಕಿ ಕಲಕಿ ಮಕ್ಕಳಿಗೆ ಕುಡಿಯಲು ಕೊಡುವುದು ಅಜ್ಜಿ ಅಭ್ಯಾಸ.



ತಾತ ಅಲ್ಲೇ ಠಳಾಯಿಸುತ್ತಾ ಇರುತ್ತೆ.

ಹಾಗಿರಬೇಕಾದರೆ ತಾತನ್ನ ಬಿಟ್ಟು ಮೊಮ್ಮಕ್ಕಳಿಗೆ ಕೊಡಕ್ಕಾಗಲ್ಲ.

" ಅದರಿಂದ ಅಜ್ಜಿ ಏನ್ ಮಾಡುತ್ತೆ ಅಂದ್ರೆ ತಾತಂಗೆ ಒಂದು ದೊಡ್ಡ ಸೇರು ಲೋಟದಲ್ಲಿ ಈ ಡ್ರೈಫ್ರೂಟ್ಸ್ ಹಾಕಿ ಹಾಕಿ ಹಾಲು ಸುರಿದು ಕೊಡುತ್ತದೆ.

ತಾತ ಅದನ್ನು ಗಟಗಟ ಗಟಗಟ ಅಂತ ಕುಡೀತಾನೆ....

"ಆಮೇಲೆ ತಾತನ ಪಾಲಿನ ಕಾಫಿ ಸಹ ಹೋಗಿ ಹೊಟ್ಟೆ ಸೇರುತ್ತೆ.....

"ಆಯ್ತಾ? ರಾತ್ರಿ ಮಧ್ಯಾಹ್ನ ಊಟ ಏನಾಗಿತ್ತೋ ಅದೇ ರಿಪೀಟ್ ಆಗುತ್ತೆ.....

***

ಕಳೆದ ವರ್ಷ ಹೆಮ್ಮಾರಿ ಬಂದು ಎಲ್ರೂ ಮನೇಲಿ ಬಾಗಲು ಬಡದು ಒಳಗೆ ಸೇರಿ ಕೊಂಡು ಬಿಟ್ಟಿದ್ದೆವು.

ನೆನಪಿದೆ ತಾನೆ..,

ನಮ್ಮ ಪಾಪಣ್ಣನ ನೋಡಿ ಹೆಚ್ಚುಕಡಿಮೆ ಒಂದು ವರ್ಷ ಆಗಿತ್ತು.

ಒಂದು ವರ್ಷದ ನಂತರ ಮೊನ್ನೆ ಆತ ಸಿಕ್ಕಿದ.

ಮೊದಲು ಗಾಳಿಗೆ ಹಾರ್ತಾ ಇದ್ದವನು ಈಗ ಮೈಕೈ ಎಲ್ಲಾ, ಎಲ್ಲಾ ಕಡೆ ತುಂಬಿಕೊಂಡು ಆರು ಅಕ್ಕಿ ಮೂಟೆ ಪೇರಿಸಿ ಇಟ್ಟ ಹಾಗೆ ಆಗಿದ್ದ.

ಇಡೀ ಪ್ರಪಂಚ ಸಣ್ಣಗಾಗಿ ಕಡ್ಡಿ ತರ ಇದ್ದರೆ ಇವನು ಮಾತ್ರ ಅದು ಹೇಗೆ ಹೀಗೆ ಸರ್ವತೋಮುಖ ಅಭಿವೃದ್ಧಿ ಸಾಧಿಸಿದ ಎಂದು ನನಗೆ ಆಶ್ಚರ್ಯವಾಯಿತು.

ಅದೇ ಆಶ್ಚರ್ಯದಲ್ಲಿ 'ಪಾಪಣ್ಣ ವಾಟ್ ಇಸ್ ದಿ ಸೀಕ್ರೆಟ್ ಆಫ್ ಯುವರ್ ಆಲ್ರೌಂಡ್ ಗ್ರೋತ್?' ಅಂತ ಕೇಳಿದೆ. ದೇವರೇ ಯಾಕಪ್ಪ ಹೀಗೆ ಆಯಿತು ಅಂತ ಕನಿಕರ ತೋರಿದೆ.

ಮೇಲೆ ವಿವರಿಸಿದ ಸಂಗತಿ ಇದೆ ನೋಡಿ, ಅದು ನಮ್ ಪಾಪಣ್ಣ ಹೇಳಿದ ಕಥೆ, ನಾನು ಕನಿಕರ ತೋರಿಸಿದ ನಂತರ....

ಮನೇಲಿ ಮೊಮ್ಮಕ್ಕಳಿದ್ದಾರೆ ಅಂದರೆ ಶುಭ, ತುಂಬಾ ಚೆನ್ನಾಗಿ ಸಮಯ ಹೋಗುತ್ತೆ ಅಂತಾರೆ.

ಸಮಯ ಹೋಗೋದು ಒಂದೇ ಅಲ್ಲ ಇಡೀ ಮನೆಯಲ್ಲಿ ಇರುವ ಹಿರಿಯರು ಒಂದು ರೀತಿಯಲ್ಲಿ ಸರ್ವತೋಮುಖ ಬೆಳವಣಿಗೆಯನ್ನು ಸಾಧಿಸುತ್ತಾರೆ ಎಂದು ನಮ್ಮ ಪಾಪಣ್ಣ ತನ್ನ ಫುಟ್ಬಾಲ್ ತರಹದ ಮುಖವನ್ನು ಡಬಲ್ ಫುಟ್ಬಾಲ್ ಮಾಡಿಕೊಂಡು ಕಿವಿ ಇಂದ ಕಿವಿ ತನಕ ಬಾಯಿಯನ್ನು ಅಗಲಿಸಿ ನಕ್ಕು ತನ್ನ ಮೇಲಿನ ಕಥೆ ಹೇಳಿದ.

ಕಥೆ ಕೇಳಿ ನನಗಂತೂ ಬಾರಿ ಖುಷಿಯಾಯಿತು ಅದರಿಂದ ಆ ಕಥೆ ತಮ್ಮ ಸಂಗಡ ಹಂಚಿಕೊಂಡು ನಾನು ಸಹ ಸಂತೋಷಪಡುತ್ತಿದ್ದೇನೆ.

ಎಲ್ಲರ ಮನೆಯಲ್ಲೂ ಹೆಚ್ಚೆಚ್ಚು ಮೊಮ್ಮಕ್ಕಳು ಬರಲಿ ಮತ್ತು ತಾತಂದಿರು ಹೆಚ್ಚೆಚ್ಚು ಸರ್ವತೋಮುಖ ಅಭಿವೃದ್ಧಿಯನ್ನು ಕಾಣಲಿ....!



■

# ಅಪ್ಪ ಎಂಬ ಮಗು

**– ಬೇಲೂರು ರಾಮಮೂರ್ತಿ**

ಆಗಿಬಿಡು ಆಗಿಬಿಡು ಮಗುವಾಗಿಬಿಡು ನೀ ಚಿಂತೆ ಬೆಳೆದಂತೆ ಎನ್ನುವ ಒಂದು ಹಾಡಿದೆ. ಹೌದು ಮಗುವಾಗಿಬಿಟ್ಟರೆ ಏನೂ ಚಿಂತೆಯಿಲ್ಲ. ಆದರೆ ಮಗುವಾಗುವುದು ಹೇಗೆ. ಒಂದು ಸಾರಿ ಮಗುವಾಗಿ, ವಯಸ್ಕರಾಗಿ, ದೊಡ್ಡವರಾಗಿ, ವಯಸ್ಸಾದವರಾಗಿ ಮುನ್ನಡೆಯುತ್ತಿರುವಾಗ ಮತ್ತೆ ಮಗುವಾಗುವುದು ಹೇಗೆ ಎಂದರೆ ನಾವು ಮಗುವಾಗಬೇಕಾಗಿಲ್ಲ, ನಮ್ಮ ನಡವಳಿಕೆ, ಸ್ವಭಾವ, ಎಲ್ಲವೂ ನಮ್ಮನ್ನು ಮಗುವಾಗಿಸುತ್ತದೆ. ತುಂಬಾ ವಯಸ್ಸಾದ ಮೇಲೆ ಏಳುವುದು, ಕೂರುವುದು, ಮಲಗುವುದು, ನಡೆಯುವುದು, ತಿನ್ನುವುದು, ಕುಡಿಯುವುದು, ಮಾತಾಡುವುದು, ಇತರರು ಮಾತಾಡಿದ್ದನ್ನು ಅರ್ಥ ಮಾಡಿಕೊಳ್ಳುವುದು, ಪ್ರತಿಕ್ರಿಯೆ ನೀಡುವುದು ಎಲ್ಲವೂ ಮಕ್ಕಳಂತೆ ನಿಧಾನವಾಗಿ. ಮಾಡುವ ಎಲ್ಲ ಕೆಲಸಗಳಲ್ಲೂ ಗಮನ ಇದ್ದೇ ಇರಬೇಕು. ಅಪರೂಪಕ್ಕೊಮ್ಮೆ ಪರಿಚಯದವರು ಮನೆಗೆ ಬಂದರೆ ಅವರನ್ನು ಗುರುತು ಹಿಡಿಯುವುದೂ ನಿಧಾನವಾಗಿ. ರಾಮಸ್ವಾಮಿಯವರ ಸ್ಥಿತಿಯೂ ಹೀಗೇ ಆಗಿದೆ. ನಿಮ್ಮ ಸ್ನೇಹಿತರಂತೆ, ಮೂಡಿಗೆರೆಯಲ್ಲಿ ನಿಮ್ಮ ಜೊತೆ ಕೆಲಸ ಮಾಡ್ತಿದ್ರಂತಲ್ಲ ಪಾಂಡುರಂಗ ಅಂತ ಅವರು ಅಂತ ಮಗನೋ ಸೊಸೆಯೋ ಹೇಳಿದರೆ ನಂತರ ಗುರುತು ಸಿಗೋದು. ಗುರುತು ಸಿಕ್ಕಿತೆಂದರೆ ನಂತರ ನಕ್ಕು ಓ ಚನ್ನಾಗಿದೀರ. ನೀವು ಬಂದಿದ್ದು ಸಂತೋಷ. ಎಷ್ಟು ಸಮಯವಾಗಿತ್ತು ನಿಮ್ಮನ್ನು ನೋಡಿ ಅಂತಾರೆ. ಅವರ ಜೊತೆ ಈ ಹಿಂದೆ ಕಳೆದ ದಿನಗಳ ಮರುಕಳಿಕೆ ಸಂತಸ ಕೊಡುತ್ತದೆ. ಅಲ್ಲೇ ಆಟವಾಡುತ್ತಿರುವ ಮೊಮ್ಮಗನನ್ನು ಕರೆದು ನಿಮ್ಮಜ್ಜಿಗೆ ಹೇಳು ಅಂಕಲ್ ಬಂದಿದಾರೆ ಅವರಿಗೆ ಕಾಫಿ ಕೊಡಬೇಕಂತೆ ಅಂತ ಹೇಳಿಕಳಿಸುತ್ತಾರೆ. ಅವರ ಮಾತು ಮನೆಯ ಇತರರಿಗೆ ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು ಎನ್ನುವಂತಾಗಿರುತ್ತೆ. ಬಂದವರು ಹೊರಟುಹೋದ ಮೇಲೂ ಮನೆಯವರ ಜೊತೆ ಅವರ ಬಗೆಗಿನ ಮಾತೇ. ರಾತ್ರಿ ಮಲಗುವ ಮುನ್ನ ಹೆಂಡತಿಯ ಜೊತೆ ಮಾತಾಡುತ್ತಾ ಗೌರೀ ನಿನಗೆ ಗೊತ್ತಾ ಪಾಂಡುರಂಗನ ಹೆಂಡತಿ ಹೋಗಿ ಹತ್ತು ವರ್ಷ ಆಯ್ತಂತೆ ಎಂಥಾ ಪುಣ್ಯವಂತ ಅಲ್ವಾ ಅನ್ನುತ್ತಾರೆ. ಗೌರಿ ಗಂಡನ ಮುಖ ನೋಡುತ್ತಾ ವಯಸ್ಸಾಗ್ತಾ ಬಂದ್ರೂ ನಿಮ್ಮ ಚೇಷ್ಟೆ ಬುದ್ಧಿ ಬಿಟ್ಟಿಲ್ವಲ್ಲಾ ಅಂತಾರೆ. ಅದಕ್ಕೆ ರಾಮಸ್ವಾಮಿ ಲೇ ನಿನ್ನನ್ನಲ್ಲದೇ ಇನ್ಯಾರನ್ನೇ ನಾನು ಚೇಷ್ಟೆ ಮಾಡಲಿ ಅಂತಾರೆ.

ಒಂದೊಂದು ದಿನ ಬೆಳಗಾಗೆದ್ದು ಇವತ್ತಿನ ಪೇಪರು ಎಲ್ಲಿ ಹೋಯ್ತು. ಒಂದು ಕಡೆ ಇಡಿ ಅಂದ್ರೆ ಯಾರೂ ನನ್ನ ಮಾತು ಕೇಳಲ್ಲ ಅಂತಿರುವಾಗ ಸೊಸೆ ಬಂದು ಮಾವ ಇವತ್ತಿನ ಪೇಪರು ನಿಮ್ಮ ಮುಂದೇನೇ ಇದೆಯಲ್ಲ ಅಂತಾಳೆ. ಪೇಪರ್ ನೋಡಿ ಅಯ್ಯೋ ಹೌದಲ್ವ. ಈಚೆಗೆ ನನಗೆ ಏನೋ ಆಗಿದೆ ಅಂದ್ಕೊತಾರೆ. ಹೆಂಡತಿ ತಿಂಡಿ ತಂದು ಕೊಟ್ಟಾಗ ಏನು ತಿಂಡಿ ಅಂತ ಕೇಳ್ತಾರೆ. ಉಪ್ಪಿಟ್ಟು ಅಂದರೆ ಹೌದಾ, ನೆನ್ನೆನೂ ಉಪ್ಪಿಟ್ಟು ಮಾಡಿತ್ತಲ್ವ ಅಂತಾರೆ. ಅದು ನೆನ್ನೆ ಅಲ್ಲ ಹೋದ ವಾರ. ನೋಡಿ ನಿಮಗೆ ಬೆಳಗ್ಗೆ ಹೊತ್ತು ಏನು ತಿಂಡಿ ಕೊಟ್ರೂ ತಿನ್ನೋದನ್ನು ಅಭ್ಯಾಸ ಮಾಡ್ಕೊಳಿ. ಅಂತಾರೆ. ಲೇ ನಲವತ್ತೈದು ವರ್ಷಗಳಿಂದ ಸಂಸಾರ ಮಾಡ್ತಿದೀವಿ. ನಾನು ಯಾವತ್ತಾದರೂ ತಿಂಡಿಗಾಗಲೀ, ಊಟಕ್ಕಾಗಲೀ ಮೂತಿ ಸಿಂಡರಿಸಿದ್ದೀನಾ. ತಿಂಡಿ ಏನು ಅಂತ ಕೇಳಿದೆ ಅಷ್ಟೆ. ನನಗೇನು ದಿನಾ ಉಪ್ಪಿಟ್ಟು ಕೊಟ್ಟರೂ ತಿನ್ತೀನಿ ಅಂತಾರೆ. ಹೆಂಡತಿ ಅಭಿಮಾನದಿಂದ



ನನಗೊತ್ತಿಲ್ವಾ ನಿಮಗೆ ಅಡಿಗೆ ತಿಂಡಿ ಮಾಡಿ ಹಾಕೋದು ಇಷ್ಟು ವರ್ಷಗಳಲ್ಲಿ ನನಗೆ ಯಾವತ್ತೂ ಕಷ್ಟ ಅನಿಸಿಲ್ಲ. ನೀವು ಯಾವತ್ತೂ ಉಪ್ಪು ಜಾಸ್ತಿ, ಖಾರ ಕಡಿಮೆ, ಅನ್ನ ಬೆಂದಿಲ್ಲ ಅಂತೆಲ್ಲ ದೂರು ಕೊಟ್ಟೇ ಇಲ್ಲ ಅಂದರೆ ರಾಮಸ್ವಾಮಿ " ಹೌದು ಕೊಟ್ಟಿಲ್ಲ ಯಾಕೇಂದ್ರೆ ನನಗೆ ಮದುವೆಯಾದಾಗ ನಮ್ಮಪ್ಪ ನೀನು ಯಾವತ್ತೂ ಹೆಂಡತಿಗೆ ಎದುರುತ್ತರ ಕೊಡಬೇಡ ಅಂತ ಹೇಳಿದ್ರು" ಅಂತ ಹುಸಿನಗೆ ನಗ್ತಾರೆ. ಅದಕ್ಕೆ ಹೆಂಡತಿ " ನೀವು ನಿಮ್ಮಪ್ಪನ ಮಾತು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಅವರು ಹೇಳಿದ್ದು ಎದುರು ಉತ್ತರ ಕೊಡಬೇಡ ಅಂತ. ನೀವು ಪಕ್ಕದಲ್ಲಿ ನಿಂತು ಉತ್ತರ ಕೊಡಬಹುದಿತ್ತು" ಅಂತಾರೆ. ಅಲ್ಲಿಗೆ ಇಬ್ಬರ ಮುಖದಲ್ಲೂ ನಗು.

ವಯಸ್ಸಾದ ಮೇಲೆ ನಿದ್ದೆ ಕಡಿಮೆ. ಸೂರು ನೋಡುತ್ತಾ ಮಲಗುತ್ತಾರೆ. ಮಲಗಿದಾಗ ಓದಿದ್ದು, ಕೆಲಸಕ್ಕೆ ಸೇರಿದ್ದು, ಆಗಾಗ ಕೆಲಸಗಳನ್ನು ಬದಲಾಯಿಸಿದ್ದು, ದುಡ್ಡು ಉಳಿಸಿದ್ದು, ಮದುವೆ ಮಾಡಿಕೊಂಡಿದ್ದು, ಅಪ್ಪನ ಸಾವು, ಅಮ್ಮನ ಅಗಲಿಕೆ, ಮಕ್ಕಳು ಹುಟ್ಟಿದ್ದು, ಬಾಡಿಗೆ ಮನೆಯ ಪರದಾಟಗಳು, ಪ್ರವಾಸ ಹೋಗಿದ್ದು, ಮನೆ ಕಟ್ಟಿದ್ದು, ಮೋಸ ಹೋದದ್ದು ಎಲ್ಲವೂ ಸಿನಿಮಾ ರೀಲಿನಂತೆ ಒಂದರ ಹಿಂದೆ ಇನ್ನೊಂದು ಬರುತ್ತದೆ. ನಾನು ಎಲ್ಲಿ ಏನು ತಪ್ಪು ಮಾಡಿದೆ ಅಂತ ಯೋಚನೆಯೂ ಆಗುತ್ತೆ. ಮಗ್ಗಲು ಬದಲಾಯಿಸುತ್ತಾರೆ. ಪಕ್ಕದಲ್ಲಿ ಹೆಂಡತಿ ಮಗುವಿನಂತೆ ನಿದ್ದೆ ಮಾಡುತ್ತಿರುತ್ತಾಳೆ. ಅಯ್ಯೋ ಪಾಪದ ಹೆಣ್ಣು ನನ್ನ ಕೈ ಹಿಡಿದು ಏನೇನು ಕಷ್ಟ ಪಟ್ಟಳೋ ಏನೇನು ಸುಖ ಪಟ್ಟಳೋ ಅವಳಿಗೇ ಗೊತ್ತು. ಯಾವುದಕ್ಕೂ ಬೇಜಾರು ಮಾಡಿಕೊಳ್ಳದ ಹೆಣ್ಣು. ಬಂಗಾದರಂಥ ಹೆಣ್ಣು. ಆದರೆ ಅವಳಿಗೆ ಮದುವೆಯಲ್ಲಿ ಬಂಗಾರವನ್ನೇ ಹಾಕಿರಲಿಲ್ಲ. ಮದುವೆಗೆಂದು ಮಾಡಿಸಿಟ್ಟಿದ್ದ ಒಡವೆಗಳು ಕಳ್ಳತನ ಆಯಿತು ಅಂತ ಯಾರಲ್ಲಿಯೂ ಹೇಳಿಕೊಳ್ಳದೇ, ಥೂ ಏನ್ರೀ ಗಂಡಿನ ಮನೆಯವರು ಹುಡುಗಿಗೆ ಏನು ಒಡವೆ ಹಾಕಿಲ್ಲ ಅನಿಸಿಕೊಂಡಿದ್ದಾಗಿತ್ತು. ಮೊದಲ ರಾತ್ರಿ ಹೆಂಡತಿಯ ಮುಖದಲ್ಲಿ ನಗು ಬದಲಿಗೆ ಬೇಜಾರು ತುಂಬಿಕೊಂಡಿತ್ತು.

ಪ್ರತಿದಿನ ಮಗ ಆಫೀಸಿಗೆ ಹೋಗುವಾಗ ಬಂದು ಅಪ್ಪಾ ನಾನು ಹೋಗಿಬರ್ತೀನಿ ಅಂತ ಹೇಳಿಹೋಗಬೇಕು. ಇಲ್ಲದಿದ್ದರೆ ಅವತ್ತೆಲ್ಲಾ ರಾಮಸ್ವಾಮಿಗೆ ಮನಸ್ಸು ಸರಿ ಇರೋದಿಲ್ಲ. ಒಂದು ದಿನ ಅವರು ಮಗನ ಕೈ ಹಿಡಿದು " ನೋಡು ನಾನು ಅದು ಬೇಕು ಇದು ಬೇಕು ಅಂತ ನಿನ್ನನ್ನು ಯಾವತ್ತೂ ಏನೂ ಕೇಳೋದಿಲ್ಲ. ನೀನು ಏನು ತಂದುಕೊಟ್ಟರೂ ಬೇಡ ಅನ್ನೋದಿಲ್ಲ. ಆದರೆ ನೀನು ಪ್ರತೀದಿನ ನನ್ನ ಜೊತೆ ಒಂದು ಐದು ನಿಮಿಷವಾದರೂ ಮಾತಾಡಲೇ ಬೇಕು. ನನ್ನೊಂದಿಗೆ ಮಾತು ಬಿಡಬೇಡ, ನಾನು ಸಾಯೋತನಕ ಇಷ್ಟು ಮಾತ್ರ ನಡೆಸಿಕೊಡು" ಅಂತ ಚಿಕ್ಕ ಮಗುವನ್ನು ತಬ್ಬುವಂತೆ ಮಗನನ್ನು ತಬ್ಬಿದ್ದರು. ಅಪ್ಪನ ಮನೋಭಾವ ಅರಿತ ಮಗ ಈಗ ಅದೆಷ್ಟೇ ತುರ್ತು ಕೆಲಸ ಇದ್ದರೂ, ಫೋನ್ ಕರೆಗಳು ಬರುತ್ತಿದ್ದರೂ ಅಪ್ಪನ ಬಳಿ ಬಂದು "ಅಪ್ಪಾ ತಿಂಡಿ ತಿಂದ್ರಾ, ಆರಾಮವಾಗಿರಿ ನಾನು ಆಫೀಸಿಗೆ ಹೋಗಿ ಬರ್ತೀನಿ" ಅಂತಾನೆ. ಆಗ ಅಪ್ಪ " ನಿನ್ದು ತಿಂಡಿ ಆಯ್ತಾ, ಡಬ್ಬಿ ತಗೊಂಡಿದೀಯಾ. ಆದಷ್ಟೂ ಹೊರಗಡೆದು ತಿನ್ನಬೇಡ. ಹುಷಾರಾಗಿ ಹೋಗಿ ಹುಷಾರಾಗಿ ಬಾ" ಅಂತಾರೆ. ಬೇಡ ಬೇಡ ಅಂದರೂ ಗೇಟಿನ ಬಳಿಗೆ ನಡೆದುಕೊಂಡು ಬಂದು ಮಗನ ಕಾರು ಸ್ಟಾರ್ಟ್ ಆಗಿ ಹೊರಡುವ ತನಕ ನಿಂತಿದ್ದು ಮಗನಿಗೆ ಕೈ ಬೀಸಿ ಒಳಗೆ ಬರ್ತಾರೆ. ಅಂಥಾ ದಿನಗಳಲ್ಲಿ ಹೆಂಡ್ತಿ " ರಘು ಏನ್ ಮಗೂನೇ, ನೀವು ಎಳೇ ಮಗು ಹಾಗೆ ಟಾಟಾ ಮಾಡ್ತೀರಲ್ಲ" ಅಂತ ರೇಗಿಸಿದರೆ " ಲೇ, ಹೆಂಡ್ತಿಗೆ ಎಷ್ಟೇ



ವಯಸ್ಸಾದರೂ ಗಂಡನ ಕಣ್ಣಿಗೆ ಸುಂದರಿಯಾಗೇ ಕಾಣ್ತಾಳೆ, ಕಾಣಬೇಕು, ಆದೇ ಜೀವನ ಕಣೆ, ಹಾಗೇ ಮಗ ಎಷ್ಟೇ ದೊಡ್ಡವನಾದರೂ ನಮಗೆ ಇನ್ನೂ ಮಗೂನೇ, ನನಗೆ ಅವನನ್ನು ಎಲ್.ಕೆ.ಜಿ. ಗೆ ವ್ಯಾನಿನಲ್ಲಿ ಕಳಿಸಿದ್ದು ನೆನಪಾಗುತ್ತೆ" ಅಂತಾರೆ. ಹಾಗೆ ಸಂಜೆಗೋ ರಾತ್ರಿಗೋ ಮಗ ಮನೆಗೆ ಬರುವವರೆಗೂ ಆತಂಕ. ಒಂದು ಹತ್ತು ಸಾರಿಯಾದರೂ ರಘು ಬಂದ್ನೆ ಬಂದ್ನೆ ಅಂತ ಕೇಳ್ತಾ ಇರ್ತಾರೆ. ರಾತ್ರಿ ಮಗ ಮಲಗುವ ಮೊದಲು ರಘು ಅಪ್ಪನ ಬಳಿ ಒಂದೆರಡಾದರೂ ಮಾತಾಡಬೇಕು. ಹಾಗೊಂದು ದಿನ ರಾಮಸ್ವಾಮಿ ಮಗನಿಗೆ " ನೋಡು ತುಂಬಾ ವಯಸ್ಸಾದ ತಾಯಿ ತಂದೆಯರಿಗೆ ಮಕ್ಕಳು ಅವರ ಜೊತೆ ಒಂದಿಷ್ಟು ಹೊತ್ತು ಮಾತಾಡುವುದೇ ದಿವ್ಯೌಷಧ. ಇದನ್ನು ಮಾತ್ರ ನೀನು ನಾವಿರುವ ತನಕ ಕೊಡಬೇಕು. ಅದು ಬಿಟ್ಟು ಇನ್ಯಾವುದೂ ಔಷಧಿ ನಮಗೆ ಬೇಕಿಲ್ಲ" ಅಂದಿದ್ದರು.

ಇತ್ತೀಚೆಗೆ ಒಂದು ದಿನ ಅವರಿಗೆ ಅದೇನೋ ಭಯ ಆಗಿ ಯಾರೊಂದಿಗೂ ಮಾತಾಡ್ತಾ ಇರಲಿಲ್ಲ, ಮನೆಗೆ ಯಾರಾದರೂ ಬಂದರೆ ಹೆದರಿಕೊಂಡು ಬಿಡೋರು. ಊಟ ತಿಂಡೀನೂ ಅಷ್ಟಕ್ಕಷ್ಟೆ. ಹೆಂಡತಿ ವಿಚಾರಿಸಿದರೂ ಮಾತಿಲ್ಲ, ಸೊಸೆ ಮೊಮ್ಮಕ್ಕಳು ಕೇಳಿಕೊಂಡರೂ ಏನೂ ಹೇಳಲಿಲ್ಲ. ಅವತ್ತು ಮಗ ಬೇಗ ಮನೆಗೆ ಬಂದ. ಪುರುಸೊತ್ತು ಇತ್ತು ಅಂತ ಅಪ್ಪನ ಬಳಿ ಕೂತು ತನ್ನ ಮೊಬೈಲ್ ತೋರಿಸಿ " ಅಪ್ಪಾ ಇತ್ತೀಚೆಗೆ ಕೇದಾರನಾಥ್ ಹೇಗೆ ಬದಲಾಗಿದೆ ನೋಡಿ, ನೀವು ಹೋಗಿ ಬಂದು ಹತ್ತು ಹದಿನೈದು ವರ್ಷ ಆಯ್ತಲ್ವಾ" ಅಂದ. ಅವರಿಗೆ ಮೊಬೈಲ್ ನೋಡೋ ಇಷ್ಟ ಇರಲಿಲ್ಲ. ಮಗನ ಕೈ ಹಿಡಿದು ಏನೋ ಮಾತಾಡೋ ಮುನ್ನವೇ ಕಣ್ಣೀರು ಬಂತು. ರಘು ಅಪ್ಪನ ಕಣ್ಣೀರು ಒರೆಸಿ "ಯಾಕಪ್ಪಾ ಏನಾಯ್ತು. ಒಂದೆರಡು ದಿನದಿಂದ ನೀವು ಯಾಕೋ ಸರಿಯಾಗಿಲ್ವಂತೆ. ಯಾಕೆ, ಏನು ಆತಂಕ" ಅಂತ ಕೇಳಿದ. ಅವರು ಮಗನ ಕೈ ಹಿಡಿದು "ನೀನು ನನ್ನ ಒಂದು ಮಾತನ್ನು ನಡೆಸಿಕೊಡಬೇಕು" ಅಂದರು. ರಘು "ಇದೇನಪ್ಪ ಇದು. ಇಂಥಾದ್ದು ಮಾಡು ಅಂದ್ರೆ ಮಾಡ್ತೀನಿ, ನಾನು ಯಾವತ್ತಾದರೂ ನಿಮಗೆ ವಿರೋಧವಾಗಿ ನಡ್ಕೊಂಡಿದೀನಾ" ಅಂದ. ರಾಮಸ್ವಾಮಿ "ಅದು ಹಾಗಲ್ಲ, ನೀನು ನನಗೆ ಒಂದು ಮಾತು ಕೊಡಬೇಕು" ಅಂದು ಕೈ ನೀಡಿದರು. ರಘು ತನ್ನ ಕೈ ನೀಡಿ "ಆಯ್ತು ಹೇಳಿಪ್ಪ" ಅಂದ. ಮಾತಾಡುವ ಮುನ್ನ ಗಂಟಲು ಒಣಗಿತು. ಅಲ್ಲೇ ಇದ್ದ ನೀರು ಕುಡಿದರು. "ರಘು ನಾನೂ ನಿಮ್ಮಮ್ಮ ಇಬ್ಬರೂ ಬದುಕಿರುವ ತನಕ ಹೇಗಾದರೂ ಮಾಡಿ ನಮ್ಮಿಬ್ಬರನ್ನು ಸಹಿಸಿಕೊಂಡಿರು. ಆದರೆ ಯಾವುದೇ ಕಾರಣಕ್ಕೂ ನಮ್ಮನ್ನು ವೃದ್ಧಾಶ್ರಮಕ್ಕೆ, ಅದು ಎಷ್ಟೇ ಚನ್ನಾಗಿದೆ ಅಂದರೂ, ನಮ್ಮನ್ನು ನೂಕಬೇಡ" ಅಂದು ಚಿಕ್ಕ ಮಗುವಿನಂತೆ ಮಗನನ್ನು ತಬ್ಬಿ ಅತ್ತುಬಿಟ್ಟರು. ರಘುಗೂ ಕಣ್ಣೀರು ಬಂತು. ಅಪ್ಪನ ಕೈ ಮೇಲೆ ತನ್ನ ಕೈ ಇಟ್ಟು "ನೀವೇ ಕಳಿಸು ಅಂದ್ರೂ ನಾನು ಕಳಿಸಲ್ಲ ಆಯ್ತಾ, ಈಗ ನೆಮ್ಮದಿಯಾಗಿರಿ" ಅಂದ. ಅಪ್ಪನಲ್ಲಿ ಈ ಭಾವನೆ ಏಕೆ ಬಂತು ಅಂತ ರಘೂಗೆ ಅರ್ಥವಾಗಲಿಲ್ಲ.

ಭಾನುವಾರ ಎಂದರೆ ರಘು ತಂದೆಯನ್ನು ಪಾರ್ಕಿಗೆ ಕರೆದುಕೊಂಡು ಹೋಗಬೇಕು. ಮನೆ ಹತ್ತಿರದಲ್ಲಿರುವ ಪಾರ್ಕಿಗೆ ಹೋದರೆ ಅಲ್ಲಿ ರಾಮಸ್ವಾಮಿಯವರ ಅನೇಕ ಸ್ನೇಹಿತರು ಸಿಗುತ್ತಾರೆ. ರಘು ತಂದೆಯನ್ನು ಸ್ನೇಹಿತರ ಜೊತೆ ಬಿಟ್ಟು ತಾನು ಪ್ರತ್ಯೇಕವಾಗಿ ವಾಕ್ ಮಾಡಿ ಬೇರೊಂದು ಬೆಂಚಿನಲ್ಲಿ ಕೂತ್ಕೊತಾನೆ. ಅವರ ಮಾತುಕತೆ ಮುಗಿದ ಮೇಲೆ ಮನೆಗೆ ಕರೆದುಕೊಂಡು ಬರುತ್ತಾನೆ. ದಾರೀಲಿ ಅಂಗಡಿ ತೋರಿಸಿ ರಘು "ಯಾಕೋ



ಇವತ್ತು ಒಂದು ಚಾಕೋಲೇಟ್ ತಿನ್ನಬೇಕೆನಿಸಿದೆ ಕೊಡಿಸ್ತೀಯಾ" ಅಂತ ಕೇಳ್ತಾರೆ. ರಘು ನಕ್ಕು "ದೇವರ ದಯೆ ಇದುವರೆವಿಗೂ ನಿಮ್ಮನ್ನು ಸಕ್ಕರೆ ಕಾಯಿಲೆ ಹುಡುಕ್ಕೊಂಡು ಬಂದಿಲ್ಲ. ಒಂದಲ್ಲ ಎರಡು ಚಾಕೊಲೇಟ್ ತಿನ್ನಿ" ಅಂದು ತಂದುಕೊಡ್ತಾನೆ. ಮಗ ಚಿಕ್ಕವನಾಗಿರುವಾಗ ಚಾಕೊಲೇಟ್‌ಗೆ ಹಠ ಮಾಡಿದ್ದು ತಾವು ಕೊಡಿಸದೇ ಹೋದದ್ದು ಹೆಂಡತಿ ಗದರಿದ್ದು ನಂತರ ಕೊಡಿಸಿದ್ದು ಎಲ್ಲ ನೆನಪಾಗಿ ಕಣ್ಣಂಚಿನಲ್ಲಿ ನೀರು ಬರುತ್ತದೆ. ನಾವು ಬಾಡಿಗೆ ಮನೇಲಿ ಇದ್ವಲ್ಲ ಶ್ರೀಪತಿ ಅಂತ ಅವರತ್ರ ಮಾತಾಡೋಣ ಅನಿಸಿದೆ. ಕನಕ್ಟ್ ಮಾಡಿ ಕೊಡು ಅಂತಾರೆ. ರಾಮಸ್ವಾಮಿಗಳಿಗೆ ಐವತ್ತು ವರ್ಷಗಳ ಸ್ನೇಹಿತರು ಇದ್ದಾರೆ ಅಂದರೆ ನಂಬೋಕಾಗಲ್ಲ. ಇವತ್ತೂ ಅವರೆಲ್ಲರ ಹತ್ತಿರ ಗಂಟೆಗಟ್ಟಲೆ ಹರಟುವ ಹುಮ್ಮಸ್ಸಿದೆ.

ಅವರ ಸ್ನೇಹಿತರೊಬ್ಬರು ಬಂದು ಜೀವನದ ಜಿಗುಪ್ಸೆಗಳನ್ನು ಹೇಳಿಕೊಳ್ಳುತ್ತಿದ್ದಾಗ ರಾಮಸ್ವಾಮಿಗಳೂ "ಏನೇ ಆದರೂ ಜೀವನೋತ್ಸಾಹ ಕಳ್ಕೋಬಾರದು ಕಣ್ರೀ. ನೂರು ತಾಪತ್ರಯ ಬರುತ್ತೆ ನೂರು ಹೋಗುತ್ತೆ" ಅಂತ ಜೋರಾಗಿ ಹೇಳಿ ನಂತರ ಮೆತ್ತಗೆ "ಅಲ್ಲಾರೀ ಹೆಂಡ್ತಿಗಿಂತ ದೊಡ್ಡ ತಾಪತ್ರಯ ಬೇಕೇನ್ರೀ" ಅಂದು ನಗುತ್ತಾ "ಸುಮ್ನೆ ತಮಾಷೆಗೆ ಹೇಳಿದೇಪ್ಪ" ಅಂತಾರೆ. ಒಂದೊಂದು ದಿನ ಗೌರೀ ನಿದ್ದೆ ಬರ್ತಾ ಇಲ್ಲ. ಸ್ವಲ್ಪ ತಟ್ಟೀಯಾ ಅಂದರು. ಗೌರಿ ಗಂಡನ ಭುಜ ಬೆನ್ನ ಮೇಲೆ ಸಣ್ಣಗೆ ತಟ್ಟಿದರು. ರಾಮಸ್ವಾಮಿ "ಅಯ್ಯೋ ಅದೇನೇ ತಟ್ಟು ಅಂದ್ರೆ ಸುಮ್ನೆ ತಟ್ತಾ ಇದೀಯ ಹಾಗೇ ಬಾಯಲ್ಲಿ ಯಾವುದಾದರೂ ಪದ ಬಿಡು" ಅಂದರು. ಹೆಂಡತಿ ಹುಸಿಮುನಿಸು ತೋರಿಸಿ "ಯಾಕೋ ಬರ್ತಾ ಬರ್ತಾ ನೀವು ಮಗು ಆಗ್ತಾ ಇದೀರ. ತಟ್ಟು, ಹಾಡು ಜೊತೆಗೆ ಇನ್ನು ಊಟ ನೀನೇ ತಿನ್ಸು, ಸ್ನಾನ ಮಾಡ್ಸು ಬಟ್ಟೆ ಬದಲಾಯಿಸು" ಅಂತಾನೂ ಷುರು ಮಾಡಿ ಅಂದು ರೇಗುತ್ತಾರೆ. ಹೆಂಡತಿ ಕಡೆ ತಿರುಗಿ "ಅಲ್ಲಾ ಕಣೆ ಹೆಂಡ್ತಿ ಗಂಡನಿಗೆ ಸ್ನಾನ ಮಾಡಿಸಿ ಬಟ್ಟೆ ಬದಲಾಯಿಸ್ತೀನಿ ಅಂದ್ರೆ ಯಾವ ಮುಠ್ಠಾಳ ಗಂಡ ಬೇಡ ಅನ್ತಾನ್ಯೇ" ಅಂದು ನಗುತ್ತಾರೆ. ಇನ್ನು ಕೆಲವೊಂದು ದಿನ ಹೆಂಡತಿಯೊಂದಿಗೆ ಮಾತಾಡುತ್ತಾ "ಗೌರೀ ನಾನು ನೀನೂ ಸಂಸಾರ ಷುರುಮಾಡಿದ ದಿನಗಳ ನೆನಪು ಹೇಳ್ತಾ ನಿನ್ನನ್ನು ತಟ್ತಾ ಇರ್ತೀನಿ ನಿದ್ದೆ ಮಾಡು" ಅಂದು ಮಾತಾಡುತ್ತಾ ಹೆಂಡತಿ ಬೆನ್ನು ತಟ್ಟುತ್ತಿರುತ್ತಾರೆ. ಹೆಂಡತಿ ಅವರ ಮುಂದೆ ಕೈ ನೋವು ಕಾಲು ನೋವು ಅನ್ನಲೇ ಬಾರದು. ಬಾಯಿಲ್ಲಿ ಅಂತ ಕೂರಿಸಿಕೊಂಡು ಎಲ್ಲಿ ನೋವು ಹೇಳು ಅಂದು ಮುಲಾಮು ತಿಕ್ಕುತ್ತಾರೆ. ಹೆಂಡತಿ ಅಯ್ಯೋ ಅಷ್ಟು ಜೋರಗಿ ತಿಕ್ಕಬೇಡಿ ಆಮೇಲೆ ನಿಮ್ಮ ಕೈ ನೋವಿಗೆ ನಾನು ಮುಲಾಮು ತಿಕ್ಕಬೇಕಾಗುತ್ತೆ ಅಂತಾರೆ. ಅದಕ್ಕೇನು ತಿಕ್ಕು. ವಯಸ್ಸಾದ ಮೇಲೆ ನನ್ನ ನೋವು ನಿನ್ನದು ನಿನ್ನ ನೋವು ನನ್ನದು, ನಿನಗೆ ನಿನ್ನ ನಲಿವು ನನಗೆ ನಿನ್ನ ನಲಿವು ನಿನಗೆ. ಎಷ್ಟೇ ಆದರೂ ಅರ್ಧಾಂಗಿ ಅಲ್ವೇನೇ ಅಂದು ನಗುತ್ತಾರೆ.

ಅನೇಕ ದಿನ ರಾಮಸ್ವಾಮಿಗಳು ಮಗನನ್ನು ಕರೆದು ಇವತ್ತಿನ ಪೇಪರಿನಲ್ಲಿ ಏನು ಬಂದಿದೆ ಓದಿ ಹೇಳು ಅನ್ನುತ್ತಾರೆ. ಈಚೆಗೆ ಅವರಿಗೆ ಪೇಪರು ಓದೋದರಲ್ಲಿ ಟಿವಿ ನೋಡೋದರಲ್ಲಿ ಉತ್ಸಾಹವಿಲ್ಲ. ಮನೆಗೆ ನಿಯತಕಾಲಿಕೆಗಳನ್ನು ಮಕ್ಕಳ ಪುಸ್ತಕಗಳನ್ನು ತರುತ್ತಿದ್ದಾಗ ತಾವು ಹೀಗೇ ಕೂತು ಮಗನಿಗೆ ಕಥೆ ಹೇಳುತ್ತಿದ್ದುದು ಅವರಿಗೆ ನೆನಪಾಗುತ್ತದೆ. ಅಪ್ಪಾ ಇವತ್ತು ನಿಮ್ಮ ಸೊಸೆ ಜಲಜ ನಿಮಗೆ ಇಷ್ಟವಾದ ಕಾಯಿ ಹೋಳಿಗೆ ಮಾಡಿದ್ದಾಳೆ ಅಂದು ತಂದುಕೊಟ್ಟು ಒಂದು ಚೂರು ಮುರಿದು ಅವನೇ ತಿನ್ನಿಸುತ್ತಾನೆ. ಸೊಸೆ ಕೋಣೆಯೊಳಗೆ ಬಂದು ಹೇಗಿದೆ ಮಾವಾ ಅಂತ ಕೇಳ್ತಾಳೆ. "ನನಗೆ ದೇವರು ಕೊಟ್ಟ




ಭಾಗ್ಯಗಳ ಪೈಕಿ ಮುಖ್ಯವಾದುದು ಎಂದರೆ ಒಂದು ಅನ್ನಪೂರ್ಣೆಯಂತಹ ಹೆಂಡತಿ ಇನ್ನೊಂದು ಅನ್ನಪೂರ್ಣೆಯಂತಹ ಸೊಸೆ" ಅಂದು ಸೊಸೆ ತಲೆಮೇಲೆ ಕೈ ಇಡುತ್ತಾರೆ.

ಇತ್ತೀಚೆಗೆ ಸಣ್ಣ ಸಣ್ಣ ಸಂಗತಿಗಳನ್ನೂ ಹೆಚ್ಚು ಹೆಚ್ಚು ಆಸಕ್ತಿಯಿಂದ ಕಣ್ಣರಳಿಸಿ ವಿವರಿಸುತ್ತಾರೆ. ಅವತ್ತು ಮೊಬೈಲ್‌ನಲ್ಲಿ ಈಶ್ವರ್ ಸತ್ಯ ಹೈ, ಸತ್ಯ ಹೀ ಸುಂದರ್ ಹೈ ಅನ್ನೋ ಹಾಡು ಬರ್ತಿತ್ತು. ಹೆಂಡತಿಯನ್ನು ಕರೆದು ಈ ಹಾಡು ಕೇಳು ಅಂದರು. ಹೆಂಡತಿಯೂ ಹಾಡು ಕೇಳಿ ಏನಿವಾಗ ಅನ್ನುವಂತೆ ಗಂಡನನ್ನು ನೋಡಿದರು. ಅಲ್ಲಾ ಕಣೆ ಈ ಹಾಡು ಕೇಳಿದರೆ ಚೂರುಪಾರು ಬಟ್ಟೆ ತೊಟ್ಕೊಂಡು ಹಾಡ್ತಾ ಇದ್ದ ಆಗಿನ ಸುಂದರಿ ಜೀನತ್ ಅಮಾನ್ ನೆನಪಾಗೋದಿಲ್ವೇನೇ ಅಂದಿದ್ದಕ್ಕೆ ಹೆಂಡತಿ ಅವಳು ಈಗ ಮುದುಕಿಯಾಗಿದ್ದಾಳೆ. ಬೋಡಿ ತುರುಬು ನೆನೆಸಿಕೊಂಡ ಹಾಗಾಗುತ್ತೆ ನಿಮ್ಮ ನೆನಪು ಅಂದು ಎದ್ದುಹೋದರು. ರಾಮಸ್ವಾಮಿ ಚನ್ನಾಗಿ ನಕ್ಕರು.

ಈಗೀಗ ರಾಮಸ್ವಾಮಿಗಳಿಗೆ ಮರೆವು ಷುರುವಾಗಿದೆ. ಯಾರು ಏನು ಎತ್ತ ಅಂತ ಗೊತ್ತಾಗೋದಿಲ್ಲ. ಊಟ ತಿಂಡಿ ಯಾರಾದರೂ ಮಾಡಿಸಬೇಕು. ಸರತಿಯ ಪ್ರಕಾರ ಸೊಸೆ, ಹೆಂಡತಿ, ಮಗ ದಿನಾಗಲೂ ಊಟ, ತಿಂಡಿ ಮಾಡಿಸುತ್ತಾರೆ. ತುತ್ತು ಬಾಯಿಯ ಬಳಿ ತಗೊಂಡು ಹೋದಾಗಲೂ ಬಾಯಿ ಬಿಡಬೇಕು ಅಂತ ಗೊತ್ತಾಗೋಲ್ಲ. ಬಾಯಲ್ಲಿ ಬಿದ್ದದ್ದನ್ನು ಅಗಿದು ನುಂಗಬೇಕು ಅಂತಲೂ ಗೊತ್ತಾಗೋಲ್ಲ. ಸಾರನ್ನ ನೋಡಿ ಬೇಡ ಅಂತ ತಲೆ ಆಡಿಸುತ್ತಾರೆ, ಪಲ್ಯ ನೋಡಿ ಹೆದರುತ್ತಾರೆ, ಮೊಸರನ್ನ ಆದರೆ ಮೊದಲೆರಡು ತುತ್ತು ಹೋಗುತ್ತದೆ ನಂತರ ಇಲ್ಲ. ಈಗೀಗ ಅವರಿಗೆ ಊಟ ಮಾಡಿಸುವುದೇ ಒಂದು ದೊಡ್ಡ ತಲೆನೋವಾಗಿದೆ. ಅದಕ್ಕೆ ಈಗ ಅವರನ್ನು ದಿನದ 24 ಗಂಟೆಯೂ ನೋಡಿಕೊಳ್ಳಲು ಒಬ್ಬರನ್ನು ನೇಮಿಸಿದ್ದಾಗಿದೆ. ರಾಮಸ್ವಾಮಿ ಈಗ ಮತ್ತೆ ಮಗುವಾಗಿದ್ದಾರೆ. ಎಲ್ಲರೂ ಅವರನ್ನು ಮಗುವಿನಂತೆಯೇ ನೋಡಿಕೊಳ್ಳುತ್ತಿದ್ದಾರೆ. ಆದರೆ ರಾಮಸ್ವಾಮಿಗೆ ಮಾತ್ರ ತಾವು ಈಗ ಮಗುವಾಗಿದ್ದಾರೋ, ಪ್ರೌಢರಾಗಿದ್ದಾರೋ, ವಯಸ್ಕರಾಗಿದ್ದಾರೋ, ವಯಸ್ಸಾದವರಾಗಿದ್ದಾರೋ ಒಂದೂ ಗೊತ್ತಿಲ್ಲ. ನಮ್ಮ ಸಮಾಜದಲ್ಲಿ ಇಂಥಾ ಎಷ್ಟು ಮಕ್ಕಳಿವೆಯೋ ಗೊತ್ತಿಲ್ಲ. ಆದರೆ ಮಕ್ಕಳನ್ನು ನೋಡಿಕೊಳ್ಳುವಂತೆಯೇ ಅಪ್ಪ ಎಂಬ ಮಗುವನ್ನೂ ನೋಡಿಕೊಳ್ಳುವುದು ಪ್ರತಿಯೊಬ್ಬರ ಪರಮ ಕರ್ತವ್ಯ ಎನ್ನುವುದು ಮಾತ್ರ ನಿತ್ಯಸತ್ಯವಾಗಬೇಕು.

■



# ಹರಕೆ

– 'ಗೌತಮ'

ದೇವರಿಗೆ ಕೊಡುವ, ಅಲ್ಲ ಅಲ್ಲ ಕೊಡ್ತೀನಿ ಅಂತ ಆ ದೇವರಿಗೇ ಆಸೆ ತೋರಿಸುವ ಲಂಚವನ್ನೇ 'ಹರಕೆ' ಅಂತ ಕರೀತಾರೆ. 'ಕಾರ್ಯವಾಸಿ ಕತ್ತೆ ಕಾಲು ಕಟ್ಟು' ಅನ್ನೋದು ಸ್ವಲ್ಪ ಒಡ್ಡೊಡ್ಡು ಮಾತಾದರೆ, 'ಹರಕೆ ಹೊತ್ತು ಹರನ ಕಾಲು ಕಟ್ಟು' ಅನ್ನೋದು ಅದರ ಪರಿಷ್ಕೃತ ಅವತಾರ ಅಷ್ಟೇ. 'ಕೆರೆ ದಾಟಿದ ಮೇಲೆ ಅಂಬಿಗ . . . ' ಅಂತೇನೋ ಗಾದೆ ಇದೆಯಲ್ಲ ಹಾಗೆ. ಕೆಲಸ ಆದ ಮೇಲೆ, ಅದನ್ನು ನೆರವೇರಿಸಿಕೊಟ್ಟವರನ್ನು ನೆನೆಯುವವರು ಈ ಕಾಲದಲ್ಲಿ ಅದೆಷ್ಟು ಮಂದಿ ಇದ್ದಾರು ನೀವೇ ಹೇಳಿ. ಈ ಹರಕೆ ಅನ್ನೋದು ದೇವರಿಗೆ ಕೊಟ್ಟ ಮಾತೋ ಅಥವಾ ತನಗೆ ತಾನೇ ಕೊಟ್ಟುಕೊಂಡ ವಚನವೋ ಆ ಹರಕೆ ಹೊತ್ತುಕೊಂಡವನಿಗೇ ಗೊತ್ತು. ಹರಕೆ ಹೊತ್ತುಕೊಂಡವನಿಗೆ ಹೊತ್ತುಕೊಂಡಾದ ಮೇಲೇನೇ ತಿಳಿಯುವುದು ಅದನ್ನು ತೀರಿಸುವುದು ಅದನ್ನು ಹೊತ್ತುಕೊಂಡಷ್ಟು ಸುಲಭ ಅಲ್ಲ ಅನ್ನೋದು. ಹಾಗಾಗಲು ನಾನಾ ಕಾರಣಗಳಿದ್ದರೂ, ಅದಕ್ಕೆ ನಾನೇ ಕಾರಣ ಎನ್ನುವುದು ಗೊತ್ತಿದ್ದರೂ, ಇಲ್ಲಸಲ್ಲದ ನೆಪಗಳನ್ನೊಡ್ಡಿ ಹರಕೆಯ ನಿಯಮಗಳಿಗೆ ತಿದ್ದುಪಡಿಯನ್ನೂ ತಂದುಕೊಂಡುಬಿಟ್ಟ. ಆ ತಿದ್ದುಪಡಿಯ ಪರಿಣಾಮವೇ ಹರಕೆ ತೀರಿಸುವ ಕಾಲಾವಕಾಶವನ್ನು ಹನ್ನೆರಡು ವರ್ಷಗಳಿಗೆ ಏರಿಸಿಕೊಂಡಿದ್ದು. 'ಹಾವಿನ ದ್ವೇಷ ಹನ್ನೆರಡು ವರುಷ'ದೊಂದಿಗೆ 'ಹರಕೆಗೆ ಹನ್ನೆರಡು ವರುಷ'ವನ್ನು ಸಮೀಕರಿಸಿಕೊಂಡೂಬಿಟ್ಟ.

ಜಗತ್–ಕಿಲಾಡಿಯೊಬ್ಬ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ 'ಮುಂದಿನ ವರ್ಷ ಹರಕೆ ತೀರಿಸ್ತೀನಿ' ಅಂತ ಹರಕೆ ಹೊತ್ತು ತನ್ನ ಡೌವನ್ನ ಲೌ ಮಾಡಿ ಲೈಫ್ ಪಾರ್ಟ್‌ನರ್ ಮಾಡಿಕೊಂಡು ರಾಜಾರೋಷವಾಗಿ ತಿರುಗಾಡಿಕೊಂಡಿದ್ದಾನೆ. ಯಾವ ದೇವರ ಭಯವು ಇಲ್ಲ. ಹರಕೆ ತೀರಿಸೋದು 'ಮುಂದಿನ ವರ್ಷ' ತಾನೇ? ನೋ ವರೀ.

ಪದ್ದಿಯ ಬದ್ಧ ವೈರಿ(ಒಳಗೆ), ಪರಮಾಪ್ತ ಗೆಳತಿ(ಹೊರಗೆ) ಎದುರುಮನೆ ಮೀನಾಕ್ಷಿ, ನಮ್ಮ ಮನೆಯೊಳಗೆ ಬಲಗಾಲಿಟ್ಟು ಬಂದಳು. ಪದ್ದಿ ಅಡುಗೆಯ ಮನೆಯಲ್ಲಿದ್ದಳು. 'ಓಹೊಹೊಹೋ ಬನ್ನಿ ಬನ್ನಿ' ಅಂತ ನಾನು ಸ್ವಾಗತ ಕೋರುತ್ತಿದ್ದ ಹಾಗೇ ನನಗಾಗುತ್ತಿದ್ದ ಖುಷಿಯ(ಪರಮಾನಂದದ) ಪ್ರಮಾಣವನ್ನು ತತ್ ಕ್ಷಣವೇ ಗ್ರಹಿಸಿ, ಮಿಂಚಿನ ವೇಗದಲ್ಲಿ ಆಚೆಗೆ ಬಂದ ಪದ್ದಿ, 'ಬನ್ನಿ ಬನ್ನಿ' ಅಂತ ನಾಯೀನ್ನ ಎಳಕೊಂಡು ಹೋಗೋಹಾಗೆ, ನನ್ನ ಕಣ್ಣಿಗೆ ಬೀಳದಂತೆ ಮೀನಾಕ್ಷಿಯನ್ನು ಅಡುಗೆ ಮನೇಗೆ ಎಳಕೊಂಡುಹೋಗಿಬಿಟ್ಟಳು. 'ಮೆತ್ತಗೇ ಪದ್ದೀ, ಸತ್ತುಗಿತ್ತು ಹೋದಾಳೂ' ಅಂತ ಕಿರಿಚಬೇಕೆಂದಿದ್ದವನನ್ನು ನನ್ನ ಹಿರೀಕರು ಮಾಡಿದ ಪುಣ್ಯ ಕಾಪಾಡಿತು. ಆ ಮಾತುಗಳು ನಾಲಗೆಯ ತುದೀಲೇ ಉಳಕೊಳ್ತು. ಆದರೆ ನಾನು ಪೆಚ್ಚಾಗಿದ್ದಂತೂ ನಿಜ ಅಂತ ಒಪ್ಪಿಕೊಳ್ತೀನಿ. ನನಗೂ ಮೀನಾಕ್ಷಿಗೂ ಎಷ್ಟೋ ಜನ್ಮಗಳಿಂದ ಎಂಥದ್ದೋ ಸಂಬಂಧ ಇದೆ ಅನ್ನೋದು ಪದ್ದಿಯ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯಾಗಿ ನಿಂತಿರುವ ಸಂಶಯಪಿಶಾಚಿ. ನಮ್ಮಿಬ್ಬರಲ್ಲೂ ಯಾವುದೇ ನಂಟಿಲ್ಲದಿದ್ದರೂ, ನಮ್ಮಿಬ್ಬರ ನಡುವೆ ನಂಟಿನ ಗಂಟನ್ನು ಹಾಕಿ, ಅದನ್ನು ಗಂಟಲಲ್ಲೇ ಇಟ್ಟುಕೊಂಡು ಸಮಯ ಸಿಕ್ಕಾಗಲೆಲ್ಲಾ ನನ್ನ ಮೇಲೆ ಗಂಟಲು ದೊಡ್ಡದು ಮಾಡ್ತಾಳೆ.



ಮಾತು ಎಲ್ಲಿಂದ ಎಲ್ಲಿಗೋ ಹೊರಟುಹೋಯಿತು. ಕ್ಷಮಿಸಿ.

ಮೀನಾಕ್ಷಿ ಬಂದ್ಲಾ? ಅವಳನ್ನ ಅಡುಗೆ ಮನೆಯಲ್ಲೇ ಉಳಿಸಿ ಹೊರಗೆ ಬಂದ ಪದ್ದಿ ನನ್ನ ಪಕ್ಕ ಬಂದು ನಿಂತ್ಲಾ. 'ರೀ, ಒಂದು ನೂರು ರುಪಾಯಿ ಇದ್ದರೆ ಕೊಡಿ. ಚಿಲ್ಲರೆ ಇಲ್ಲ ನನ್ನ ಹತ್ತಿರ' ಅಂದ್ಲಾ. ಕೊಟ್ಟು 'ಯಾಕೆ?' ಅಂತ ಕೇಳಿದೆ. 'ಆಮೇಲೆ ಹೇಳ್ತೀನಿ' ಅಂತ ಹೇಳಿ ಅಡುಗೆ ಮನೆಗೆ ಹೋಗಿ ಪದ್ದಿಯ ಜೊತೆ ಆಚೆ ಬಂದಳು. ನನ್ನ ಕಣ್ಣಿಗೆ ಮೀನಾಕ್ಷಿ ಕಾಣದಂತೆ (ಗ್ರಹಣವನ್ನ ನೆನಪಿಸಿಕೊಳ್ಳಿ, ಸರಿಯಾಗಿ ಅರ್ಥ ಆಗತ್ತೆ) ಮುಂಬಾಗಿಲಿನವರೆಗೂ ನಡೆದು ಬೀಳ್ಕೊಟ್ಟು ಬಂದಳು. ನಾನು ಕೇಳಿಕೊಂಡುಬಂದಿದ್ದು ಇಷ್ಟೇ ಅಂತ ನನಗೆ ನಾನೇ ವೇದಾಂತದ ಮಾತುಗಳನ್ನಾಡಿಕೊಂಡು ಸಮಾಧಾನ ಪಡಿಸಿಕೊಂಡೆ. ನನ್ನ ಹತ್ತಿರ ಬರೋಷ್ಟರಲ್ಲಾಗಲೇ ಮುಖ(ಪದ್ದಿಯ) ಗಡಿಗೆಯಾಗಿತ್ತು. ಆಗೆಲ್ಲಾ 'ಮೌನಂ ಶರಣಾಗತಿ ಲಕ್ಷಣಂ' ಅನ್ನೇ ನಾನು ಅನುಸರಿಸೋದು.

'ನೋಡ್ರೀ ಇವಳಿಗೇನು ಬಂದಿದೆ?'

'ನನಗೇನು ಗೊತ್ತು ಪದ್ದೀ?'

'ಅವರ ಮನೆದೇವರಿಗೆ ಹೋಗಬೇಕಂತೇರಿ'

'ಹೋಗಲಿ ಬಿಡು. ಅದಕ್ಯಾಕೆ ಏನಾದರೂ ಬರಬೇಕು, ಪಾಪಾ'

'ಅದಲ್ಲಾರೀ, ಅದು ಬೆಟ್ಟದ ಮೇಲಿರೋ ದೇವರಂತೆ. 'ಚಂದ ಎತ್ತು, ಬೆಟ್ಟ ಅಂತ ಹತ್ತು' ಅವರ ಕಡೆ ಒಂದು ಗಾದೆ ಮಾತಿದೆಯಂತೆ. ಅದಕ್ಕೆ ಅವಳು ಹರಸಿಕೊಂಡಿದ್ದಾಳಂತೆ'

'ಏನಂತಾ?'

'ಚಂದ ಎತ್ತಿ ಬೆಟ್ಟ ಹತ್ತಿ ನಿನ್ನ ದರ್ಶನ ಪಡೀತೀನಪ್ಪಾ ಅಂತ ಮನೆಮನೆಗೆ ಹೋಗಿ ಚಂದಾ ಎತ್ತತಾ ಇದ್ದಾಳೆ. ಇವಳಿಗೇನು ಬಂದಿದೇರೀ? ನಾಚಿಕೆ ಆಗಲ್ಲವಾ?'

'ಅದೆಲ್ಲ ಇರಲೀ. ನೀನು ಯಾಕೆ ನೂರು ರುಪಾಯಿ ಕೊಡೋಕೆ ಹೋದೇ? ಕೊಡಲ್ಲ ಅನ್ನಬೇಕಾಗಿತ್ತೂ'

'ಹಾಗನ್ನೋಕಾಗತ್ತಾ? ನಿಮ್ಮ ಮರ್ಯಾದೆ ಹೋಗಲ್ಲವಾ? ಅಷ್ಟಕ್ಕೂ ನನ್ನ ಕೈಯಿಂದ ಏನು ಹೋಗಲಿಲ್ಲವಲ್ಲಾ. ನಿಮಗೂ ಪುಣ್ಯ ಸಿಗತ್ತೆ ಬಿಡಿ' ಅಂದಳು.

ಹೀಗೂ ಉಂಟೇ?

ಇನ್ನೊಂದು ಘಟನೆ ಹೇಳಿ ಹರಕೆಯ ಕುರಿಗಳ ವಿಷಯಕ್ಕೆ ಮಂಗಳ ಹಾಡ್ತೀನಿ.

ಶಾಮ ರಾಮ ಇಬ್ಬರೂ ಗೀತಾನ್ನ ಪ್ರೀತಿಸಿದರು. ಲೌ ಟ್ರಯಾಂಗಲ್ಲು. ಆದರೆ ಅವಳು ಯಾರನ್ನು ಪ್ರೀತಿಸ್ತಾ ಇದ್ದಳು ಅನ್ನೋದು ಇಬ್ಬರಿಗೂ ಗೊತ್ತಿಲ್ಲ. ಅದೊಂದು ದಿನ ಆಂಜನೇಯನ ಮುಂದೆ ಅಚಾನಕ್ಕಾಗಿ ಇಬ್ಬರೂ ಭೇಟಿಯಾದರು. ಇಬ್ಬರು ಗೀತಾಳನ್ನು ಪ್ರೀತಿಸ್ತಿರೋ ವಿಷಯ ಇಬ್ಬರಿಗೂ ಗೊತ್ತಿತ್ತು. ರಾಮನಿಗೆ ಕೇಳಿಸೊ ಹಾಗೆ ಶಾಮ ತನ್ನ ಮೀಸೆಯ ಬಲತುದಿಯನ್ನು ಹೊಸೆಯುತ್ತಾ ಹರಕೆ ಹೊತ್ತ 'ಗೀತಾ ನನಗೆ ಹೆಂಡತಿಯಾಗಿ ಬಂದರೆ ನಿನಗೆ ಇಪ್ಪತ್ತೊಂದು ತೆಂಗಿನಕಾಯಿ ಒಡೀತೀನಿ' ಅಂತ. ಅದನ್ನ ಕೇಳಿದ ರಾಮ ತನ್ನ ಮೀಸೆಯ ಎಡಗಡೆಯ ತುದಿಯನ್ನು ತಿರುವುತ್ತಾ 'ಗೀತಾ ನನಗೆ ಹೆಂಡತಿಯಾಗಿ ಬಂದರೆ ಐವತ್ತನಾಲ್ಕು ತೆಂಗಿನಕಾಯಿ ಒಡೀತೀನಿ' ಅಂತ ಶಾಮನ ಕಡೆ ನೋಡುತ್ತಾ ಹರಕೆ ಹೊತ್ತ. ಶಾಮ ಬಿಟ್ಟಾನೆಯೇ 'ನಾನು ನೂರೊಂದು ತೆಂಗಿನಕಾಯಿ ಒಡೀತೀನಿ' ಅಂದ. ರಾಮ 'ಐನೂರೊಂದು' ಅಂದ. ಶಾಮ 'ಸಾವಿರದೊಂದು' ಅಂದ. ಆಮೇಲೆ



ಒಂದೊಂದೇ ಏರತೊಡಗಿತು, ಸಾವರದೊಂದು, ಸಾವಿರದೆರಡು, ಸಾವಿರದ ಮೂರು ಹೀಗೆ. ಇದೇನು ಕಟ್ಟುಕಥೆ ಅಂದುಕೋಬೇಡಿ. ಇಂಥ ಕಥೆಗಳೇ ಮುಂದೆ ಪುರಾಣದ ಪುಟಗಲ್ಲಿ ಸೇರಿಕೊಳ್ಳೋದು. ರಾಮ ಶಾಮರು ಅಮರರಾಗೋದು, ದೇವರುಗಳಾಗೋದು, ಅವರಿಗಾಗಿ ದೇವಸ್ಥಾನ ಕಟ್ಟೋ ಹಾಗಾಗೋದು.

ಇವರ ಹರಕಾಟಗಳನ್ನು ಕೇಳುತ್ತ ಕೇಳುತ್ತ ಮಾರುತಿ ಕಂಗಾಲಾದ. ಕೈ ಕೈ ಹಿಸುಕಿಕೊಂಡ ಗೀತಾಳನ್ನು ಯಾರಿಗೆ ಕೊಡಲಪ್ಪಾ ಅಂತ ತಿಳೀದೆ.

ಹೀಗೇ ಅದೆಷ್ಟು ಕಾಲ ಮುಂದುವರೀತೋ. ಶಾಮನ ಬಲಮೀಸೆ ರಾಮನ ಎಡಮೀಸೆ ಸವೆದು ಬೋಳಾದವು. ಪೋಟಾಪೋಟಿ ನಡೆಯುತ್ತಿದ್ದಂತೆ ಗೀತಾ ಎಂಟ್ರಿ ಕೊಟ್ಟಳು. ಇಬ್ಬರ ಬಳಿಯೂ ಸಾರಿ ಇಬ್ಬರಿಗೂ ಒಂದೊಂದು ಕೊಟ್ಟಳು. ಅವಳ ಮದುವೆಯ ಮಮತೆಯ ಕರೆಯೋಲೆಯನ್ನ! ಹರಕೆಯ ಕಥೆ ಹರೋಹರ!!

ತನ್ನನ್ನು ಬಚಾವ್ ಮಾಡಿದ್ದಕ್ಕೆ ಗೀತಾಳಿಗೆ ಹನುಮಂತ 'ಥ್ಯಾಂಕ್ಸ್ ತಾಯಿ' ಅಂತಂದು ಧನ್ಯವಾದಗಳನ್ನು ಅರ್ಪಿಸಿದ.

'ಲಾಟರೀಲಿ ಒಂದು ಕೋಟಿ ಬಂದರೆ, ನಿನಗೊಂದು ಚಿನ್ನದ ಟೋಪಿ, ಅಲ್ಲ ಅಲ್ಲ ಕಿರೀಟ ಹಾಕ್ತೀನಿ' ಅಂತ ಹರಸಿಕೊಂಡ ಒಬ್ಬ ಭಕ್ತ. ಬಂತು ಒಂದು ಕೋಟಿ. ಕೋಟಿ ಕೈ ಸೇರಿತು. ಇವನ ಭಕ್ತಿ ಹೆಚ್ಚಾಯಿತು. ದೇವರೊಂದಿಗೆ ಮಾತಿಗೆ ಷುರು ಮಾಡಿದ. 'ಅಯ್ಯೋ ಭಗವಂತಾ, ನಾನೆಂಥಾ ಮೂಢ. ನಿನಗೆ ಕಿರೀಟ ತೊಡಿಸುವುದೇ? ನಾನು ಯಾರು ನಿನಗೆ ಕಿರೀಟ ಹಾಕೋಕೆ. ನೀನೇನು ಸೆಲ್ಫೀ ತೊಗೊಂಡು ಪೇಪರಿನಲ್ಲಿ ಫೋಟೋ ಹಾಕಿಸಿಕೊಳ್ಳಬೇಕೇ? ಬೇಡ ಬೇಡ. ಅದರ ಬದಲು ದುಡ್ಡನ್ನೇ ಕೊಟ್ಟುಬಿಡ್ತೀನಿ. ಆದರ ಹೇಗೆ ಕೊಡಲಿ? ಚೆಕ್ಕು ಪ್ರಯೋಜನವಿಲ್ಲ. ನಗದೇ ಸರಿ. ಆನೆ ಮೇಲೆ ನಿಂತು ಕವಡೆಯನ್ನು ಮೇಲಕ್ಕೆ ಚಿಮ್ಮಿ ಅದು ಎಷ್ಟು ಎತ್ತರಕ್ಕೆ ಹೋಗುತ್ತೋ ಅಷ್ಟು ಎತ್ತರದ ಐಶ್ವರ್ಯದ ರಾಶಿಯನ್ನು ಕೊಡೋಕೆ ಹರಿಶ್ಚಂದ್ರ ಒಪ್ಪಿಕೋತಾನಲ್ಲಾ ಹಾಗೆ, ಪ್ರಪಂಚದ ಅತ್ಯಂತ ಎತ್ತರದ ಬಿಲ್ಡಿಂಗ್ ಮೇಲೆ ನಿಂತು, ಆಗ ನೀನು ನನಗೆ ತುಂಬಾ ಹತ್ತಿರ ಆಗ್ತೀಯ, ದುಡ್ಡನ್ನ ಮೇಲಕ್ಕೆಸೀತಾ ಹೋಗ್ತೀನಿ. ನೀನು ಎಲ್ಲವನ್ನೂ ಕ್ಯಾಚ್ ಹಿಡೀತಾ ಹೋಗು. ನನ್ನಲ್ಲಿ ಉಳಿಯೋ ಕೊನೇ ರುಪಾಯನ್ನೂ ನಿನ್ನ ಕಡೇಗೇ ಎಸೀತೀನಿ. ಎಲ್ಲವೂ ನಿನ್ನದೇನಪ್ಪಾ. ನನ್ನದೇನಿಲ್ಲ ತಂದೇ' ಅಂತ ದೀರ್ಘದಂಡ ನಮಸ್ಕಾರ ಮಾಡಿದ. ಹೇಗಿದೆ ಹರಕೆಯ ತೀರ್ರೈಕೇ!?

ಕೊನೆಯದಾಗಿ, 'ನಮ್ಮ ವಂಶದಲ್ಲಿ ಯಾರೂ ಬಾಲ್ಡಿಗಳಿರಲಿಲ್ಲ. ನನ್ನ ಮಗನಿಗೆ ಇಪ್ಪತ್ತು ವರ್ಷಕ್ಕೆಲ್ಲಾ ಕೂದಲು ಉದುರಿಸ್ತಾ ಇದ್ದೀಯಲ್ಲಪ್ಪಾ. ದಯಮಾಡಿ ಅವನನ್ನ ಬಾಲ್ಡಿ ಮಾಡಬೇಡಪ್ಪಾ. ತಲೆ ತುಂಬಾ ಕೂದಲನ್ನು ತುಂಬಪ್ಪ. ನಾನು ನಿನಗೆ ಮಂಡೆ ಕೊಡ್ತೀನಿ' ಅಂತ ಹರಕೆ ಹೊತ್ತ ಕುಮಾರಪಿತನೊಬ್ಬ ಹನ್ನೆರಡು ವರ್ಷದ ಎಕ್ಸ್‌ಟೆನ್ಶನ್ನೂ ಸೇರಿ ಹರಕೆ ತೀರಿಸಲು ಮನಸ್ಸು ಮಾಡಿದಾಗ ಪಾಪ, ಒಂದಾದರೂ ಕೇಶ ಆ ಬೋಳು ತಲೆಯ ಮೇಲಿರಬೇಡವೇ? ಆದರೂ ಹರಕೆ ತೀರಿಸಲೋಸುಗ ಬೋಳು ಮಂಡೆ ಮೇಲೆ ಕತ್ತಿಯನ್ನು ಆಡಿಸಿಸಿಕೊಂಡ!!!

ನಿಮ್ಮ ಮಂಡೆ ಬಿಸಿ ಆಗೋಕೆ ಮುಂಚೆ ನಾನು ನಿಲ್ಲಿಸಿದರೆ ನನ್ನ ಮಂಡೆ ಸೇಫು ಅಂತ ನಂಗೆ ಗೊತ್ತು.



■

# ಲೈಫ್ ಸರ್ಟಿಫಿಕೇಟ್

– ಡಾ. ಶ್ಯಾಮಲಾ ರವಿಶಂಕರ್

ಮೊನ್ನೆ ಸ್ನೇಹಿತರೊಬ್ಬರು ಇಬರನ ಕಥೆ ಬಗ್ಗೆ ಮಾತಾಡ್ತಾ ಇದ್ದರು. ನಾನು ಸಿನಿಮಾ ಚಾಲೆಂಜೆಡ್. ನೋಡೋದಿರಲಿ, ಅವುಗಳ ವಿಷಯಾಸಕ್ತಿಯೂ ಇಲ್ಲದವಳು. ಆತ ನಾಲ್ಕು ಮಾತುಗಳಲ್ಲಿ ಆ ಕಥೆಯನ್ನ ಹೇಳಿದರು, ಅಯ್ಯೋ ಅನ್ನಿಸ್ತು. ಇನ್ನೊಂದು ಥರ ಕಷ್ಟದಲ್ಲಿ ನಾನೇ ಸಿಕ್ಕಿ ಹಾಕ್ಕೊಂಡೆ ಎರಡೇ ದಿನಗಳಲ್ಲಿ ನವೆಂಬರ್ ಬಂತು ಅಂದ್ರೆ ಸರ್ಟಿಫಿಕೇಟ್ಗಾಗಿ ಓಡಾಡೋದು ತಪ್ಪಿದ್ದಲ್ಲ ಈಚೀಚೆಗಂತೂ ಎಲ್ಲರೂ ಸಲಹೆಗಳನ್ನ ಕೊಟ್ಟಿದ್ದೂ ಕೊಟ್ಟಿದ್ದೆ. ಆನ್‌ಲೈನ್ ಮಾಡಿ. ಅಯ್ಯೋ ಪಾಪ. ಬರೊಲ್ವಾ? ನಾನು ಬರ್ಲಾ? ಆಫ್ ಕೋರ್ಸ್ ಇನ್ನೂ ಬರ್ತಲೇ ಇದ್ದಾರೆ. ಅದು ಬೇರೆ ಮಾತು. ನಾನು ಹೇಳಿಕೊಡ್ತೀನಿ.. ಇಂಥ ಸೈಟ್‌ಗೆ ಹೋಗಿ ರೈಟ್ ಕ್ಲಿಕ್ ಮಾಡಿ ಸ್ಕ್ರೋಲ್ ಡೌನ್ ಮಾಡಿ ಕರ್ಸರ್‌ನ ಸ್ವಲ್ಪ ಎಳದು. ಅಂತ ಏನೇನೋ ಹೇಳಿ ಇದ್ದ ಒಂದಿಷ್ಟು ತಲೇನ ಕೂಡ ಕೆಡಿಸಿಬಿಟ್ರು. ನಿಮ್ಮಂಥವರಿಗೆ ಅಂತಾನೆ ಬ್ಯಾಂಕುಗಳು ವ್ಯವಸ್ಥೆ ಮಾಡಿದ್ದಾರಲ್ಲ ಮನೆಗೆ ಬಂದು ಸಹಾಯ ಮಾಡೋಕೆ, ಅಬ್ಬಾ. ಒಂದಾ ಎರಡಾ? ಸಾಕು ಸಾಕಾಯ್ತು ಮಧ್ಯೆ ಮಧ್ಯೆ ನೀವು ಸೀನಿಯರ್ ಸಿಟಿಸನ್ಸ್ ಅಲ್ವಾ. (ಇಲ್ಲದಿದ್ರೆ ಈ ಫಜೀತಿನೇ ಯಾಕಿರ್ತಿತ್ತು?) ಅಂತ ಸದುಪಾಯ ಸೂಚನೆಗಳು ಬೇರೆ!

ನಾನು ರಿಟೈರ್ ಆಗಿದ್ದು ಒಂದು ವಿಶ್ವವಿದ್ಯಾಲಯದಿಂದ. ಅವ್ರದ್ದೇ ಬೇರೆ ಫಾರಮ್ಮು. ಮಹಾಕಷ್ಟಕರವಾದದ್ದೇನು ಅಲ್ಲ ಅದನ್ನ ತುಂಬಿಸೋದು. ಆ ವೆಬ್ ಸೈಟ್‌ಗೆ ಹೋಗಿ ಅದು ಓಪನ್ ಆದ್ರೆ(?) ಮುಂದೆ ಒಂದಿಪ್ಪತ್ತೋ ಇಪ್ಪತ್ತೈದೋ ಕ್ಲಿಕ್ಕಗಳನ್ನ ಮಾಡಿದ್ರೆ ಪ್ರಿಂಟ್ ಔಟ್ ತಗೊಳ್ಳೋಕೆ ಪರದಾಡಿ ತೊಗೊಂಡು ಫಿಲ್ ಮಾಡೋದು. ಲಾಸ್ಟ್ ಐಟಮ್ ಬಹಳ ಸುಲಭ. ಯಾಕೇಂದ್ರೆ ಹೆಚ್ಚಿನ ಕಡೆ ನಾಟ್ ಅಪ್ಲಿಕಬ್ಲ್‌ಗಳೇ ಹೇಗೆಂದ್ರೆ, ಮರು ಮದುವೆ ಮಾಡ್ಕೊಂಡಿದ್ದೀಯ (ಸ್ವಾಮಿ ಹಾಗೂ ಹೀಗೂ ಒಂದನ್ನ ನಿಭಾಯಿಸ್ತಿದ್ದೀನಾ, ಅದನ್ನ ಮೆಚ್ಚಿಕೊಳ್ದೇ...), ಬೇರೆ ಎಲ್ಲಾದ್ರೂ ಪುನಃ ಕೆಲಸಕ್ಕೆ ಸೇರಿದ್ದೀನ (ಎಷ್ಟೋ ಜನ ಕೆಲಸಾನೇ ಮಾಡೊಲ್ಲಾ, ಅಂತದ್ರಲ್ಲಿ ರಿಟೈರ್ ಆಗೋವರ್ಗೂ ಹಲ್ಲು ಕಚ್ಚಿಕೊಂಡು ಕೆಲಸ ಮಾಡಿದ್ರೆ ಇನ್ನೇನು ತರಲೆ) ಹೀಗೆ ಅಸಂಬದ್ಧ ಪ್ರಲಾಪನೆ ಜಾಸ್ತಿ. ಫಿಲ್ ಮಾಡಿದ ಮೇಲೆ ಫೋಟೋ ಅಂಟಿಸಬೇಕು. ಅಷ್ಟರಲ್ಲಿ ಹೈದರಾಬಾದಿನಿಂದ ನನ್ನ ಹಿತೈಷಿಗಳಿಂದ ಫೋನು! ಫಾರ್ಮ್ ಚೇಂಜ್ ಆಗಿದೆ ಸ್ವಲ್ಪ ಇರು, ಹೊಸದನ್ನ ಇನ್ನೂ ಅಪ್ ಲೋಡ್ ಮಾಡಿಲ್ಲವಂತೆ ಅಂತ. ಎರಡು ದಿನದ್ಮೇಲೆ ಫೋನಾಯಿಸಿದ್ರೆ ಹಳೇ ಫಾರ್ಮ್‌ನಲ್ಲೇ ಕಳಿಸಬೇಕು ಅಂದ್ರು. ಬದುಕಿತು ಬಡ ಜೀವ ಅಂತ ನಡೆದೆ ಬ್ಯಾಂಕ್‌ಗೆ. ಮ್ಯಾನೇಜರ್ ತನ್ನ ಮುಂದಿದ್ದ ಕಂಪ್ಯೂಟರ್ ಸ್ಕ್ರೀನಿಂದ ಮುಖ ಎತ್ತದೆ ಯಾವ ಊರು ಒರಿಜಿನಲ್ಲೂ, ಎಲ್ಲಿ ಕೆಲಸ ಎಂತೆಲ್ಲ ವಿಚಾರಿಸಿ "ಪಾಪಂ, ಎಂದುಕು ಇಕ್ಕಡ ವಾಚ್ಚರು, ಅಕ್ಕಡೆ ಎಂದುಕು ಉಂಡಲೆದು" ಕೇಳಿ ಬೇರೆ ಕೆಲಸ ನಮ್ಮಲಿ ಇದ್ದರೆ ಮಾಡ್ಕೊಂಡು ಬನ್ನಿ ಸೈನ್ ಮಾಡಿ ಇಟ್ಟಿರ್ತೀನಿ ಅಂದ ಭೂಪ. ಬೇರೆ ಇಲ್ಲದ ಕೆಲಸ ಮಾಡ್ಕೊಂಡು ಹೋದೆ, ಬೇರೊಬ್ಬರಿಗೆ ನನ್ನನ್ನ ರವಾನೆ ಮಾಡಿ ಕೈ ತೊಳೆದುಕೊಂಡ. ಆ ಹುಡುಗಿ ನನ್ನ ಆಧಾರ್ ಕಾರ್ಡ್ ಕೇಳಿದ್ಲು. "ಲಿಂಕ್ಮಾಡಿ ಆಯ್ತಲ್ಲ ನಂಬರ್ ಕೂಡ ಬರೆದಿದ್ದೀನಿ. ಇಷ್ಟಕ್ಕೂ ನೀವು ನಾನು ಬದುಕಿದ್ದೀನಿ ಅಂತ ಸಹಿ ಹಾಕಿದ್ರೆ ಆಯಿತು. ನನ್ನನ್ನ



ತಿಂಗಳಲ್ಲಿ ನಾಲ್ಕಾರು ಬಾರಿ ಆದ್ರೂ ನೋಡಿದ್ದೀಯಲ್ಲ. ಇನ್ನೇನು ನಿನ್ನ ತಾಪತ್ರಯ? "ಬಾಸ್ ಹೇಳಿದ ಹಾಗೆ ಕೇಳಬೇಕು ನಾನು" ಅಂದ್ಲು ಬಹಳ ವಿಧೇಯತೆಯಿಂದ. ಯಾಕೋ ಅವಳಿಗೆ ನಾನು ಬದುಕಿರೋದು ಒಂದು ಡೌಟು. ರುಜು ಹಾಕೋಷ್ಟು ಧೈರ್ಯ ಬರಲಿಲ್ಲ ಅವಳಿಗೆ. ಅಷ್ಟರಲ್ಲಿ ಅವಳ ಸಹೋದ್ಯೋಗಿಯೊಬ್ಬಳು ಬಂದು "ತಪ್ಪು ತಿಳ್ಕೋಬೇಡಿ, ಮೇಡಂ. ಈ ವರ್ಷ ಬಹಳ ಸ್ಟ್ರಿಕ್ಟ್ ಆಗೋಗಿದೆ. ನಮಗೆ ಕೂತ್ಕೊಳ್ಳಿ ಅನ್ನೋದರಲ್ಲಿ ನಾನು ಮ್ಯೂಸಿಕಲ್ ಚೇರ್‌ನಲ್ಲಿ ಯಾವಾಗ್ಲೂ ಫರ್ಸ್ಟ್ ಬರ್ತಿದ್ದವಳು ಎಂದು ಹೇಳೋಕ್ಕೆ ಸ್ವಲ್ಪ ಸಂಕೋಚ ಆಗ್ತಿದೆ. ಅದು ಹಾಗಿರಲಿ. ಅಂದೂ ಕೂತು ಬಿಟ್ಟಿದ್ದೆ. ಈಗ ಇವಳ ಸರದಿ ಕಂಪ್ಯೂಟರ್ ಮುಖ ನೋಡ್ಕೋಕೆ.

ಎಷ್ಟೋ ಹೊತ್ತು ಕಳೀತು, ನಾನು ತೊಗೊಂಡು ಹೋಗಿದ್ದ ರೀಡಿಂಗ್ ಮೆಟೀರಿಯಲ್ ಎಲ್ಲ ಮುಗೀತು, ಇವಳು ಮಾತ್ರ ನನ್ನನ್ನ ಕ್ಯಾರೆ ಅನ್ನಲಿಲ್ಲ. "ಏನಮ್ಮ, ನಾನು ಬದುಕಿದ್ದೀನಿ ಅಂತ ಇನ್ನ ಗೊತ್ತಾಗಲಿಲ್ಲವಾ ನಿನಗೆ, ಇನ್ನೂ ಎಷ್ಟು ಹೊತ್ತು ಹೀಗೆ ನಿನ್ನ ಮುಂದೆ ಕೂತಿರಲಿ. ಯಾವುದಾದ್ರೂ ಸರ್ಜನ್ ಅಥವಾ ಫಿಸಿಷಿಯನ್ ಹತ್ತಿರ ಹೋಗಿ ನಾನು ಬದುಕಿದ್ದೀನಿ ಅಂತ ಬರಸಿಕೊಂಡು ಬರಬೇಕಾ. ಅವ್ರಗಳು ಡೆತ್ ಸರ್ಟಿಫಿಕೇಟು ಮಾತ್ರ ಕೊಡ್ತೀವಿ ಅಂದ್ರೆ...? ಅಥವಾ ಕಾರ್ಪೋರೇಷನ್ನಿಗೆ ಹೋಗಿ ವೀ ರಿಗ್ರೆಟ್ಟು ಇನ್‌ಫಾರ್ಮ್ ದಟ್ ಸೊ ಅಂಡ್ ಸೊ ಈಸ್ ಅಲೈವ್ ಅಂತ ನೋಟಿಫಿಕೇಶನ್ ಹೊರಡಿಸಬೇಕಾ" ಅಂದೆ. ಅದಕ್ಕೆ ಒಂದು ಸರಿ ಗುರ್ರ್ ಎಂದು, ಮ್ಯಾನೇಜರ್ ರೂಮಿಗೆ ಓಡಿದ್ಲು. ಅಲ್ಲಿ ಬಹುಶಃ ನಾನು ಬದುಕಿದ್ದೀನಾ ಇಲ್ಲವಾ ಅಂತ ನಿರ್ಣಯ ತೆಗೆದುಕೊಂಡು ಓಡಿ ಬಂದು ರಿಸಿವಿಂಗ್ ಆಫೀಸರ್ ಸೈನ್ ಮಾಡೋ ಕಡೆ ಸೈನ್ ಕುಕ್ಕಿ ಆ ಭಾಗ ಚೀಟಿ ತರ ಹರಿಯೋಕೆ ರೆಡೀ ಆಗ್ತಿದ್ದಂಗೆ ನಾನು ತಡೆದೆ. ಫಾರ್‌ಮು ಸಿಗೋದು ಕಷ್ಟ ಹರಿಬೇಡಮ್ಮ ಅಂದೆ. ಆಗ ಅವಳು ಸೈನ್ ಮಾಡಿರೋದು ತಪ್ಪು ಜಾಗದಲ್ಲಿ ಅಂತ ಗೊತ್ತಾಯಿತು. ತಪ್ಪು ತೋರಿಸಬಹುದಾ? ಅದಕ್ಕೆ ಇನ್ನಷ್ಟು ಸೇಡು ತೀರಿಸಿಕೊಂಡು, ಮುಂಚೆ ಯಾಕೆ ಹೇಳಲಿಲ್ಲ ಅಂದ್ಲು. ಓದಿ ಸೈನ್ ಮಾಡ್ತೀಯಾ ಅಂದ್ಕೊಂಡಿದ್ದೆ ಅಂದೆ. ಇನ್ನೊಂದು ಫಾರ್ಮ್ ಇಲ್ವಾ ಅಂದ್ಲು. ಇಲ್ಲ ಮನೆಗೆ ಹೋಗೋಕೆ ತುಂಬಾ ಟೈಮ್ ಹಿಡ್‌ಸತ್ತೆ, ಅಂದೆ. ನನ್ನ ರಾಗಾಲಾಪನೆ ಅಪ್ಪಿಗೆ ಚಿಟ್ಟು ಹಿಡಿಸಿರಬೇಕು. ಅಲ್ಲಿದ್ದ ಗಾರ್ಡ್‌ನ ಕರೆದು ರೋಪ್ ಹಾಕಿ ಸ್ಕ್ಯಾನ್ ಮಾಡಿ ಸರಿಯಾದ ಕಡೆ ಸೈನ್ ಮಾಡಿ ನನ್ನ ಮುಖಕ್ಕೆ ಎಸೆದಳು. ಸಂಪ್ರದಾಯಕ್ಕೆ ಥ್ಯಾಂಕ್ಸ್ ಹೇಳೋಕೆ ಮ್ಯಾನೇಜರ್ ಹತ್ತಿರ ಹೋದೆ. ಆತ "ನಿಮ್ಮ ಫಾರಂ ವಿಚಿತ್ರವಾಗಿದೆ," ಅಂತ ತಮ್ಮ ಶಾರ್ಟ್ ಕಮಿಂಗ್ಸ್‌ನ ಸಮರ್ಥಿಸಿಕೊಂಡ್ರು. ನನ್ನ ಸೇಡು ತೀರಿಸಿಕೊಳ್ಳೋಕೆ ಅವ್ರ ಗೋಂದನ್ನೇ ಪಡೆದು ಕವರ್ ಮಾಡಿ ಕೊರಿಯರ್ ಕಡೆಗೆ ನಡೆದೆ.


ಕೊರಿಯರ್ ಅಂಗಡಿ ಆಕೆ ನನ್ನ ಮುಖ ನೋಡೋಕೆ ಸ್ವಲ್ಪ ಟೈಮ್ ತೊಗೊಂಡ್ಲು, ಕಂಪ್ಯೂಟರ್‌ನಿಂದ ಕಣ್ಣು ಎತ್ತ ಬೇಕಲ್ಲ. ಹಾಗೆ ಹೀಗೆ ನೋಡಿ "ಇದು ಕಳಿಸೋಕೆ ಆಗೋಲ್ಲ" ಅಂದ್ಲು. ಯಾಕೆ ಅಂದ್ರೆ ವಿಳಾಸ ಸರಿಯಿಲ್ಲ ಅಂತಂದ್ಲು. ಅದು ಅಫಿಶಿಯಲ್ ವಿಳಾಸ. ದಿನಕ್ಕೆ ಎಷ್ಟೋ ಕಾಗದಗಳು ಬರತ್ವೆ ಅಲ್ಲಿಗೆ, ಏನು ಈ ತಕರಾರು ಅಂದೆ. "ಡೆಲಿವರೀ ನಾಟ್ ಪಾಸಿಬಲ್" ಅಂದ್ಲು. "ಇಂಡ್ಯೊಸೋ ಅಥವಾ ಸೀ–ಸೆಕ್ಷನ್ನೋ ಮಾಡಾಕಾಗೊಲ್ಲವೇ?" ಸದ್ಯ ಅವಳಿಗೆ ಕೇಳಿಸಲಿಲ್ಲ.



"ಒಂದು ಕೆಲಸ ಮಾಡಿ, ರೀಸೀವರ್‌ನ ಬಂದು ಪಿಕ್ ಮಾಡೋಕೆ ಹೇಳಿ ನಮ್ಮ ಡೆಲಿವರೀ ಆಫೀಸ್‌ನಿಂದ." ಅಂಥಾ ಸಮಯದಲ್ಲೂ ಬಿದ್ದು ಬಿದ್ದು ನಕ್ಕೆ.. ಕಣ್ಣೂ ಮೂಗು ಒರೆಸಿಕೊಂಡು "ತಾಯಿ, ನನಗೆ ಪೆನ್ಶನ್ ಕೊಡೋದು ಅಲ್ಲದೆ ನಮ್ಮ ರೆಜಿಸ್ಟ್ರಾರ್ ಈ ತರ ಕೆಲಸ ಎಲ್ಲ ಮಾಡೋಕಾಗತ್ಯೆ. ಅವ್ರು ದೊಡ್ಡ ಹುದ್ದೆಯಲ್ಲಿರಿರುವವರು. ಅವ್ರ್ಯಾಕೆ ಹೋಗ್ತಾರೆ ನಿಮ್ಮ ಆಫೀಸಿಗೆ. "ಅದು ಆಫೀಸಾ? ಮತ್ತೆ ಹೈದರಾಬಾದ್ ಮುಂದೆ ಏನೇನೋ ಹಾಕಿದ್ದೀರಾ, ಅದನ್ನೆಲ್ಲ ತೆಗೆದು ಬಿಡಿ" ತೆಲಂಗಾಣ ಅಂತ ಬರೆಯದೆ ಇದ್ದರೆ ಅದು ಹೈದರಾಬಾದ್ ಸಿಂಧ್‌ಗೆ ನೀನು ಕಳಿಸಿ ಬಿಡ್ತೀಯ. ಅದು ಈಗ ತೆಲಂಗಾಣ ರಾಜ್ಯಕ್ಕೆ ಸೇರಿದೆ" ಎಂದು ಅವಳ ಜಿ.ಕೆ. ನ ಹೆಚ್ಚಿಸಿದೆ. ನನಗೆ ಮಹದುಪಕಾರಗೈದವಳಂತೆ ಕಡೆಗೂ ಎಂಭತ್ತು ರೂಪಾಯಿ ಕಸಿದು ನನ್ನನ್ನ ಹೊರಗೆ ಅಟ್ಟಿದಳು.

ಕೆಕ್ಕರಿಸಿ ಕಣ್ಣು ಬಿಡುತ್ತಿದ್ದ ಆಟೋದವನಿಗೆ ಇನ್ನೊಂದು ಹತ್ತಿಪ್ಪತ್ತು ತೆತ್ತು ಮನೆ ಮುಂದೆ ಇಳಿಯುತ್ತಿದ್ದಂತೆ "ಯಾಕಿಷ್ಟು ಹೊತ್ತೂ" ಅಂತ ಪತಿ ದೇವರು ಅಂದಾಗ ಎಲ್ಲರ ಮೇಲಿನ ಕೋಪ ಅವರ ಮೇಲೆ ತೀರಿಸುವ ಉದ್ವೇಗಾನ ಬಹಳ ನಿಗ್ರಹದಿಂದ ತಡೆದುಕೊಂಡೆ, ಎಲ್ಲರೂ ಕಲಿಸಿದ್ದರಲ್ಲ, ಆ ಪಾಠಾನ ಜ್ಞಾಪಿಸ್ಕೊಂಡು. ಇಷ್ಟರಲ್ಲಿ ನನ್ನ ಲೈಫ್ ಸರ್ಟಿಫಿಕೇಟು ಲೇಟ್ ಸರ್ಟಿಫಿಕೇಟು ಆಗದೆ ಅಥವಾ ನಾನೇ ಲೇಟ್ ಆಗ್ಲಿಲ್ಲ. ಅಷ್ಟೇ ಲಭ್ಯ! ■

---



# ವ್ಯಂಗ್ಯಚಿತ್ರಾವಳಿ

– ರಘುಪತಿ ಶೃಂಗೇರಿ

ಮದ್ಯಪಾನಿಗಳಿಗೆ ಸಿಹಿ ಸುದ್ದಿ–
ಸುಂಕದಲ್ಲಿ ಯಾವುದೆ ಬದಲಾವಣೆಯಿಲ್ಲ
– ಸುದ್ದಿ



ಸುದ್ದಿ ಕೇಳಿದ್ಮೇಲೆ ಒಳ್ಳೇ 'ಕಿಕ್' ಹೊಡೀತಿದೆ..!




ಏನ್ ಗುರೂ ಇದು...ಬರ್ತಿರೋ ಸ್ಪರ್ಧಿಗಳೆಲ್ಲಾ
'ಪಿಪಿಇ ಕಿಟ್' ಹಾಕ್ಕೊಂಡೇ ಬರ್ತವ್ರೆ...!

ಹಿಟ್ಲರ್ ಬಳಸಿದ್ದ 65 ವರ್ಷದ ಹಳೆಯ
ಟಾಯ್ಲೆಟ್ ಸೀಟು 13 ಲಕ್ಷಕ್ಕೆ ಹರಾಜು




ಹಂಗಾದ್ರೆ ನಾನು 70 ವರ್ಷದಿಂದ ಬಳಸಿರೋ
ಈ 'ಚೊಂಬಿ'ಗೆ ಎಷ್ಟ್ ಬರ್ಬೋದಾ?

ಇನ್ಮೇಲೆ ಮದುವೆಗೆ ಮಾರ್ಷಲ್‌ಗಳ ನೇಮಕ – ಸುದ್ದಿ
500 ಕ್ಕಿಂತ ಹೆಚ್ಚು ಜನರು ಸೇರುವಂತಿಲ್ಲ



ಭಟ್ರೇ...ನಮ್ ಕಡೆಯೋವ್ರು 500 ಜನ...ಗೌರ್ಮೆಂಟ್ ಕಡೆಯೋವ್ರು ಒಬ್ರು...!

ಮಕ್ಕಳ ಬಜೆಟ್‌ಗಾಗಿ ಸಿಎಂಗೆ ಮನವಿ – ಸುದ್ದಿ




ಮಾಸ್ಕ್ ಸರಿಯಾಗಿ ಧರಿಸದಿದ್ದಲ್ಲಿ ವಿಮಾನದಿಂದ ಇಳಿಸಲಾಗುವುದು – ಸುದ್ದಿ



# ನಾನು ನಾನೇನೇ?

– ಸಿ.ಆರ್.ಸತ್ಯ

ನನ್ನ ಸೋದರಮಾವ ಕೋದಂಡುವಿನ  ಹೆಂಡತಿ ನನಗೆ ಫೋನ್ ಮಾಡಿ, ಅಂಕಲ್, ಸ್ವಲ್ಪ ಮನೆಗೆ ಬಂದು, ಇವರನ್ನು ನೋಡಿಕೊಂಡು ಹೋಗ್ತೀರಾ? ಯಾಕೋ ಒಂದು ತರಹ ಮಂಕು ಬಡಿದವರ ಹಾಗೆ ಕೂತಿದ್ದಾರೆ ಅಂತ ಹೇಳಿದಳು. ನಾನು ಗಾಬರಿಯಿಂದ ಅವನ ಮನೆಗೆ ಹೋದೆ. ಪೆಚ್ಚಾಗಿ ದಿವಾನ್ ಮೇಲೆ ಒರಗಿಕೊಂಡಿದ್ದ. ಏನಾಯ್ತು ಕೋದಂಡೂ? ಹುಷಾರಾಗಿದೀ ತಾನೆ? ಯಾಕೆ ಹೀಗಿದೀಯಾ? ಅಂತ ಕೇಳಿದೆ. ಆಗ ಅವನು ಹೇಳಿದ್ದು:

ಯಾಕೋ ಮನಸ್ಸಿಗೆ ತುಂಬಾ ಬೇಜಾರಾಗಿದೆ ಭಾವ. ಮೊನ್ನೆ ನಮ್ಮ ರೋಡಿಗೆ ಹೊಸದಾಗಿ ಬಂದಿರೋ ಒಬ್ಬ ಚಿಂತಕರನ್ನು ಭೇಟಿ ಮಾಡಿದೆ. 'ಏನಾದರೂ ಕೇಳಬೇಕೂ ಅಂದ್ರೆ ಕೇಳಿ, ನನಗೆ ತಿಳಿದಷ್ಟು ಹೇಳ್ತೀನಿ ಅಂತ ಅಂದ್ರು.' 'ಹಾಗಾದರೆ ಹೇಳಿ. ನಾನು ನಾನೇನೇ?' ಅಂತ ಕೇಳಿದೆ. ಅವರು ಇಲ್ಲಾ ಅಂದರು. ನನಗೆ ಗಾಬರಿ ಆಯ್ತು. ಸ್ವಲ್ಪ ವಿವರಿಸಿ ಹೇಳ್ತೀರಾ? ಅಂತ ಕೇಳಿದೆ. ನೀನು ಹುಟ್ಟಿದಾಗ ನೀನು ನೀನೇ ಆಗಿದ್ದೆ. ಆದ್ರೆ ಈಗ ನಿನ್ನ ವಯಸ್ಸಿನಲ್ಲಿ 'ನೀನು ನೀನಲ್ಲ' ಅಂದರು. ಹಾಗಾದರೆ ನಾನು ಯಾರು? ಅಂತ ಕೇಳಿದೆ. ಚಿಕ್ಕ ವಯಸ್ಸಿನಲ್ಲಿ ನೀನು ನೀನಾಗಿದ್ದೆ. ಆದರೆ ಈಗ ನೀನು ಬೇರೆ ಮನುಷ್ಯ ಆಗಿದ್ದೀಯ. ಸೋಡ ಗ್ಲಾಸ್ ಇರೋ ಕನ್ನಡಕ ಹಾಕಿದ್ದೀಯ. ಹಾಗಾಗಿ ನಿನ್ನ ಕಣ್ಣುಗಳು ಒರಿಜಿನಲ್ ಅಲ್ಲ. ಯಾವನೋ ಪುಣ್ಯಾತ್ಮ ತಯಾರಿಸಿದ ಲೆನ್ಸ್‌ಗಳು ಈಗ ನಿನ್ನ ಕಣ್ಣುಗಳಾಗಿವೆ.

ತಲೆಗೆ ಟೋಪನ್ ಹಾಕಿಕೊಂಡ ಹಾಗಿದೆ, ಹೌದಾ? ಅಂತ ಕೇಳಿದರು. ನಾನು ಹೌದು ಎಂದೆ. ಹಾಗಾದರೆ ನಿನ್ನ ತಲೆ ಕೂದಲು ನಿನ್ನದಲ್ಲ. ಯಾರದೋ ತಿರುಪತಿ ತಿಮ್ಮಪ್ಪನ ಭಕ್ತರ ಕೂದಲು ಅದು. ನಾನು ಕಣ್ಣುಗಳನ್ನು ಪಿಳ ಪಿಳ ಅಂತ ಬಿಟ್ಟೆ. ತಲೆ ಕೂದಲನ್ನು ಸವರಿಕೊಂಡೆ. ನಿನ್ನ ಹಲ್ಲುಗಳನ್ನ ತೋರಿಸು ಎಂದರು. ತೋರಿಸ್ದೆ. ಪೂರ್ತಿ ಹಲ್ಲು ಕಟ್ಟಿಸ್ಕೊಂಡಿದ್ದೀಯ. ಸ್ಯಾಂಪಲ್‌ಗೆ ಅಂತ ಒಂದು ವಿಸ್ಡಮ್ ಹಲ್ಲೂ ಇಲ್ಲ. ಯಾವುದೋ ಡೆಂಟಿಸ್ಟ್ ಕೃತಕ ಹಲ್ಲುಗಳನ್ನು ತಯಾರು ಮಾಡಿ ನಿನ್ನ ಬಾಯಿ ತುಂಬಿಸಿದ್ದಾನೆ ಅಷ್ಟೆ. ಮೊಣಕಾಲು ಹೇಗಿದೆ? ಅಂತ ಕೇಳಿದರು. ನಾನು ಆರ್ತರೈಟಿಸ್ ನೋವು ತಡೀಲಾರದೆ ಎರಡು ಜಾಯಿಂಟ್‌ಗಳನ್ನೂ ಬದಲಾಯಿಸಿಕೊಂಡೆ ಅಂದೆ. ಅಂದರೆ ಅವು ಈಗ ಟೈಟಾನಿಯಮ್ ಲೋಹಗಳದ್ದುಅಂತ ಆಯಿತು. ನಿನ್ನ ಒರಿಜಿನಲ್ ಜಾಯಿಂಟ್ಸ್ ಅಂತೂ ಅಲ್ಲ ಅಂತ ಹೇಳಿದರು. ಅರ್ಥವಾಯಿತು ಅಂದೆ. ನೋಡಿದರೆ, ನಿಮ್ಮ ಕಿವಿಗಳೂ ಒರಿಜಿನಲ್ ಅಲ್ಲ. ಹಿಯರಿಂಗ್ ಏಡ್ಸ್ ಹಾಕಿಕೊಂಡಿದ್ದೀರಾ ಅಂತ ಕೇಳಿದ್ರು.

ಹೌದು ಅಂದೆ.

ಅಂದ ಹಾಗೆ ನಿನ್ನ ಹಳೆಯ ಫೋಟೋ ಯಾವುದಾದರೆ ಇದ್ದರೆ ತೋರಿಸು ಎಂದರು. ನನ್ನ ಪರ್ಸ್ ನಲ್ಲಿ ಇದ್ದಒಂದು ಮದುವೆಗೆ ಮುಂಚೆ ತೆಗೆದ ಫೋಟೊನ ಅವರಿಗೆ ತೋರಿಸಿದೆ. ಅವರು ಅದನ್ನು ಸೂಕ್ಷ್ಮವಾಗಿ ನೋಡಿ, ಮದುವೆಗೆ ಮುಂಚೆ



ನಿಮ್ಮ ಮೂಗಿನ ತುದಿ ಭೂಮಿ ಕಡೆ ನೋಡ್ತಾ ಇತ್ತು. ಈಗ ಸ್ವಲ್ಪ ಅಕಾಶದ ಕಡೆ ತಿರುಗಿದೆ, ಯಾಕೆ? ಅಂತ ಕೇಳಿದರು. ನನ್ನ ಭಾವೀ ಮಾವನವರು ಒಳ್ಳೇ ಪ್ಲಾಸ್ಟಿಕ್ ಸರ್ಜನ್. ಅದಕ್ಕೆ ನನ್ನ ಮದುವೆಗೆ ಒಪ್ಪಿಕೊಂಡ ನನ್ನ ಭಾವಿ ಪತ್ನಿ ನಿಮ್ಮನ್ನ ಎಲ್ಲಾ ವಿಧದಲ್ಲೂ ನಾನು ಇಷ್ಟ ಪಟ್ಟಿದ್ದೀನಿ. ಆದರೆ ನಿಮ್ಮ ಮೂಗಿನ ರೂಪ ನನಗೆ ಹಿಡಿಸ್ತಿಲ್ಲ. ನಮ್ಮಪ್ಪ ನಿಮಗೆ ಬಿಟ್ಟಿ ಸರ್ಜರಿ ಮಾಡಿ ನಿಮ್ಮ ಮೂಗನ್ನುಸರಿ ಮಾಡ್ತಾರೆ. ಮಾಡಿಸ್ಕೊಂಡು ಬಿಡಿ ಪ್ಲೀಸ್ ಅಂತ ಕೇಳಿಕೊಂಡಳು. ಆಗ ನಾನು ಲೌವ್ ಬ್ಲೈಂಡ್ ಆಗಿಲ್ಲದಿದ್ದರೂ, ಆಗಲಿ ಅಂತ ಒಪ್ಪಿಕೊಂಡೆ.

ಮಾವನವರು ಮದುವೆಗೆ ಮುಂಚೆ ನನ್ನ ಮೂಗನ್ನು ಮೇಲಕ್ಕೆ ತಿರುಗಿಸಿದರು ಅಂದೆ. ಹಾಗಾದರೆ ನಿನ್ನ ಮೂಗೂ ನಿನ್ನದಲ್ಲ ಅಂತ ಅಂದರು. ಈ ಸಮಯಕ್ಕೆ ನನ್ನ ತಲೆ ಕೆಡೊಕ್ಕೆ ಶುರುವಾಯಿತು. ಇನ್ನು ಮುಂದಕ್ಕೆ ಬೇರೇ ಏನೂ ಬದಲಾವಣೆ ಆಗೋದಿಲ್ಲ ಅಂತ ಅಂದುಕೊಂಡಿದ್ದೀನಿ, ಆಗೋದೆಲ್ಲ ಆಗಿದೆಯಲ್ಲಾ? ಅಂತ ಹೇಳಿದೆ.

ಅದಕ್ಕೆ ಅವರು, ಇನ್ನೂ ಬಹಳ ಆಗೋದಿದೆ. ನೋಡು, ಈಗ ವೈದ್ಯಕೀಯ ತಂತ್ರಜ್ಞಾನ ಸಿಕ್ಕಾ ಪಟ್ಟೆ ಮುಂದುವರೆದಿದೆ. ನೀನು ಇನ್ನೊಂದು ಹತ್ತು ಹದಿನೈದು ವರುಷಗಳ ಕಾಲ ಬದುಕಿದ್ದರೆ, ಕಸಿ ವಿಜ್ಞಾನದಿಂದ ನಿನ್ನ ಕರುಳು, ನಿನ್ನ ಹಾರ್ಟು, ನಿನ್ನ ಲಿವರ್, ನಿನ್ನ ಶ್ವಾಸ ಕೋಶಗಳು–ಇವೆಲ್ಲಾ ಬದಲಾಗಿ ಹೋಗುತ್ವೆ. ನಿನ್ನಂತಹ ಮಂದ ಬುದ್ಧಿಯವರಿಗೆ, ಒಂದು ದಿನ ನಿನ್ನ ಮೆದುಳನ್ನೂ ವೈದ್ಯರು ಬದಲಾಯಿಸ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಯೋಚನೆ ಮಾಡು: ನೀನು ನೀನೇನೇ? ಅಂತ ಕೇಳಿದರು. ನಾನು ಬಹಳ ಯೋಚನೆ ಮಾಡಿ, ಅಲ್ಲ ಅಂದೆ. ಸತ್ಯದ ಅರಿವು ಆಯ್ತು. "ಹುಟ್ಟಿದಾಗಿನಿಂದ 'ನಾನು ನಾನೇನೇ' ಅಂತ ಅಂದುಕೊಂಡಿದ್ದ ನಾನು ಸಾಯೋ ವೇಳೆಗೆ ಇನ್ಯಾರಾಗೋ ಆಗ್ತೀನಲ್ಲಾ ಅಂತ ಯೋಚನೆಯಲ್ಲಿದ್ದೀನಿ ಭಾವ " ಅಂತ ಅಂದ. ಅವನ ಹೆಂಡತಿ ತಲೆ ಚಚ್ಚಿಕೊಳ್ಳೋದು ಕಾಣಿಸ್ತು.

ಬಹಳ ಯೋಚನೆ ಮಾಡಿ ನಾನು ಅವನಿಗೆ ಸ್ವಾಂತನ ನೀಡಿದೆ. "ನೋಡು ಕೋದಂಡು. ಇದು ಎಲ್ಲರಿಗೂ ಆಗೋದೇನೆ. ಒಂದಂತೂ ನಿಜ. ನೀನು ಇನ್ಯಾರೋ ಆದಾಗ, ನಿನ್ನ ಹೆಂಡತೀನೂ ಇನ್ಯಾರೋ ಆಗ್ತಾಳೆ. ಆಗ ನಿಮ್ಮಿಬ್ಬರ ಜೋಡೀನ ನೋಡಿ, ಜನರು ಆಹಾ! ಎಂತಹ ಅಜ್ಜ ಅಜ್ಜಿ ಜೋಡಿ! ಅಂತ ನಿಮ್ಮನ್ನೂ ಹೊಗಳುತ್ತಾರೆ. ಮದುವೆಗೆ ಮುಂಚೆ ನಿಮ್ಮನ್ನು ಆಹಾ! ಎಂತಹ ವಧು ವರ ಜೋಡಿ ಅಂತ ಹೊಗಳುತ್ತಾ ಇರಲಿಲ್ವೆ? ಹಾಗೆ!. ಏನೂ ವರಿ ಮಾಡ್ಕೋಬೇಡ. ನೀನಾಗೇ ಪೆದ್ದು ಪೆದ್ದಾಗಿ ನಿನ್ನ ಮಾವನ ಹತ್ತಿರ ಮತ್ತೆ ಪ್ಲಾಸ್ಟಿಕ್ ಸರ್ಜರಿಗೆ ಅಂತ ಹೋಗಬೇಡ. ಪೆದ್ದು ಪೆದ್ದಾಗಿ ಆ ಚಿಂತಕರ ಹತ್ತಿರಾನೂ ಸುಳಿ ಬೇಡ. ನಾನು ಬರ್ತೀನಿ" ಅಂತ ಎದ್ದೆ. "ಅಯ್ಯೋ, ಭಾವ, ನನ್ನ ಮನಸ್ಸನ್ನು ಇಷ್ಟು ಬೇಗ ಹಗುರ ಮಾಡಿ, ಊಟ ಮಾಡದೇ ಹೋಗ್ತೀರಾ? ಊಟ ಮಾಡ್ಕೊಂಡು ಹೋಗಿ" ಅಂತ ಹೇಳಿದ. ಹಾಗೇ ಮಾಡಿದೆ.



ಯಾಕೋ ಹೊರಡೋಕ್ಕೆ ಮುಂಚೆ ಅವನ ಹೆಂಡತಿ ಕಡೆ ನೋಡಿದೆ. ಅವಳು ಕನ್ನಡಿ ಮುಂದೆ ನಿಂತುಕೊಂಡು ಸಪ್ಪೆ ಮುಖ ಹಾಕಿಕೊಂಡಿದ್ಲು.

■

# ಒಂಟೇ ಹೋಯ್ತು

**– ಕೃಷ್ಣ ಸುಬ್ಬರಾವ್**

ಕರೋನಾ ವೈರಾಣು ಬಂದಾಗಿನಿಂದ ಪಾದರಸದಂತೆ ಓಡಾಡುತ್ತಿದ್ದ ಅನಿಲ್ ದಿನೆದಿನೆ ಸಪ್ಪಾಗುತ್ತಿದ್ದನ್ನು ಅವನಮ್ಮ ಗಮನಿಸುತ್ತಿದ್ದರು. ಆನ್‌ಲೈನ್ ಕ್ಲಾಸ್‌ಗೆ ತಪ್ಪದೆ ಹಾಜರಾಗುತ್ತಿದ್ದ ಅಲ್ಲಿ ಕೊಡುವ ಟೆಸ್ಟ್‌ಗಳಲ್ಲಿ ಚೆನ್ನಾಗಿಯೆ ಮಾರ್ಕ್ಸ್ ತೆಗೆದುಕೊಳ್ಳುತ್ತಿದ್ದ ಅವನ ಜೊತೆಯವರು ಸೈಕಲ್‌ನಲ್ಲಿ ರೌಂಡ್ ಹೊಡೆಯುತ್ತಿದ್ದರೆ ಇವನು ಮಾತ್ರ ಸೈಕಲ್ ತೆಗೆಯುತ್ತಿರಲಿಲ್ಲ. ಇತ್ತೀಚೆಗೆ ಮೊಬೈಲ್‌ನಲ್ಲಿ ಗೇಮ್ಸ್ ಆಡುವುದನ್ನು ಕಮ್ಮಿ ಮಾಡಿದ್ದ. ಅಮ್ಮನಿಗೆ ಸ್ವಲ್ಪ ಗಾಬರಿಯಾಯ್ತು. ಮನಶಾಸ್ತ್ರ ಓದಿದ್ದ ಗೆಳತಿ ಕಮಲಾಳನ್ನು ಕರೆದು ಅನಿಲ್ ಜೊತೆ ಮಾತನಾಡುವಂತೆ ಕೇಳಿದಳು.

ಒಂದು ದಿನ ಕಮಲಾ ಆಂಟಿ ಬೆಳಿಗ್ಗೇನೆ ಬಂದು ಅನಿಲ್‌ನನ್ನು ಕೂರಿಸಿಕೊಂಡು ಉಪಾಯದಿಂದ ಮಾತಿಗೆ ಎಳೆದಳು.

"ಈ ತಿಂಗಳು ನಿನ್ನ ಹುಟ್ಟಿದ ಹಬ್ಬ ಅಲ್ವಾ? ನಿನಗೆ ಏನ್ ಗಿಫ್ಟ್ ಬೇಕು?" ಎಂದಾಗ

"ಒಂಟೆ ಬೇಕು" ಎಂದು ಛಟ್ಟನೆ ಹೇಳಿದ. ಆಶ್ಚರ್ಯವಾಯ್ತು ಪ್ರತಿ ಬಾರಿಯೂ ಒಂದೊಂದು ರಿಮೋಟ್ ಕಾರನ್ನು ಕೇಳಿ ಪಡೆಯುತ್ತಿದ್ದವನು ಈ ವರ್ಷ ಒಂಟೆ ಕೇಳುತ್ತಿದ್ದಾನೆ. ಆಟದ ಒಂಟೆ ಕೇಳುವ ವಯಸ್ಸನ್ನು ಮೀರಿದ್ದಾನೆ. ಏನೊ ಬಲವಾದ ಕಾರಣವಿರಬೇಕೆಂದು "ಒಂಟೆ ಯಾಕೆ?" ಎಂದು ಕಾರಣ ಕೇಳಿದಾಗ ಅನಿಲ್ ಒಂದು ವರ್ಷದ ಹಿಂದಿನ ಘಟನೆಗಳ ಫ್ಲಾಶ್ ಬ್ಯಾಕ್‌ಗೆ ಹೋದ.

"... ಅಮ್ಮ, ಟ್ಯೂಷನ್ ಫೀಸು ಕೊಡಬೇಕಮ್ಮ ಸುನೀತ ಮೇಡಂಗೆ, ಎಲ್ಲ ಹುಡುಗರು ಕೊಟ್ಟು ಬಿಟ್ಟಾದ್ದಾರೆ ನಾನೊಬ್ಬನೇ ಬಾಕಿ"

"ನಿಮ್ಮಪ್ಪನಿಗೆ ಈ ಸಾರಿ ಸಂಬಳ ಲೇಟಾಗಿ ಬಂತು. ನಿನ್ನೆ ಬಂದಿದೆ. ಇವತ್ತು ಕೊಡ್ತೀನಿ. ಮರೆಯದೆ ತೆಗೆದುಕೊಂಡು ಹೋಗು" ಎಂದರು.

"ಅಮ್ಮ ಟ್ಯೂಷನ್ ಫೀಸು ಕೊಡುವಾಗ ಹತ್ತು ರೂಪಾಯಿ ಸೇರಿಸಿ ಕೊಡು"

"ಯಾಕೊ? ಲೇಟಾಗಿ ಕೊಟ್ಟಿದ್ದಕ್ಕೆ ಹತ್ತು ರೂಪಾಯಿ ದಂಡ ಕಟ್ಟಬೇಕಾ?"

"ಇಲ್ಲಮ್ಮ ಮಿಸ್ ತುಂಬಾ ಒಳ್ಳೆಯವರಮ್ಮ ಲೇಟಾಗಿದ್ದಕ್ಕೆ ದಂಡಗಿಂಡ ವಸೂಲಿ ಮಾಡಲ್ಲಮ್ಮ. ಪಾಠದ ಹುಡುಗರನ್ನೆಲ್ಲ ಅವರ ಮನೆಯವರ ತರಹನೇ ನೋಡಿಕೊಳ್ತಾರೆ ಕಣಮ್ಮ..."

"ಹಾಗಾದರೆ ಯಾರದ್ರಾದು ಹುಟ್ಟಿದ ಹಬ್ಬನಾ, ಅಥವಾ ಮಕ್ಕಳ ದಿನಾಚರಣೆ ಮಾಡ್ತಾರಾ?..."

"ಅದೆಲ್ಲ ಏನಿಲ್ಲಮ್ಮ, ನಿನ್ನೆ ಪಾಠಕ್ಕೆ ಅವರ ಮನೆಗೆ ಹೋದ್ನಾ ಆಗ ಅವರ ಮನೆ ಬೀದಿಲಿ ಒಂದು ಒಂಟೆ ಬಂದಿತ್ತು. ಅದರ ಮೇಲೆ ಪ್ರತಿಯೊಬ್ಬ ಹುಡುಗರನ್ನ ಕೂಡಿಸಿಕೊಂಡು ಸವಾರಿ ಮಾಡಿಸಿದರು ಎಲ್ಲರಿಗೂ ಹತ್ತು ರೂಪಾಯಿ ಪ್ರಜ್ವಲ್‌ನ್ನ ಬಿಟ್ಟು.



"ಯಾವ ಪ್ರಜ್ವಲ್?? ಇಬ್ಬರು ಪ್ರಜ್ವಲ್ ಇದ್ದಾರಲ್ಲ" ಅದೇ ಅಮ್ಮ ಡುಮ್ಮ ಪ್ರಜ್ವಲ್. ಅವನಿಗೆ ಒಂಟೆ ಯಜಮಾನ ಇಪ್ಪತ್ತು ರೂಪಾಯಿ ಕೇಳಿದ. ನಮ್ಮ ಮಿಸ್ ಆಗ ಪ್ರಜ್ವಲ್ ದಪ್ಪಗಿದ್ದಾನೆ ಅಂತ ಡಬಲ್ ಚಾರ್ಜ್ ಮಾಡಿದರೆ ಸಣ್ಣಗಿರುವ ಅನಿಲ್‌ನಿಗೆ ಐದು ರೂಪಾಯಿ ಚಾರ್ಜ್ ಮಾಡಬೇಕೆಂದು ನನ್ನನ್ನು ತೋರಿಸಿ ಚೌಕಾಸಿ ಕೂಡ ಮಾಡಿದರಮ್ಮ..." ಎಂದು ಅನಿಲ್ ನಕ್ಕ.

ಎಲ್ಲ ಹುಡುಗರಿಗೂ ತಾವೇ ದುಡ್ಡುಕೊಟ್ಟರು ಮಿಸ್, ಅವರಿಗೆ ಇವತ್ತು ವಾಪಸ್ಸು ಕೊಡಬೇಕಲ್ವಾ? ಅನಿಲ್ ಕೇಳಿದ.

"ಸರಿಯಪ್ಪ, ದುಡ್ಡು ಕೊಡ್ತೀನಿ ಜೋಪಾನವಾಗಿ ಜಾಮಿಟ್ರಿ ಬಾಕ್ಸ್‌ನಲ್ಲಿಟ್ಟುಕೊಂಡು ಹೋಗು ಹೋದ ತಕ್ಷಣ ಟ್ಯೂಷನ್ ಫೀಸು, ಒಂಟೆ ಫೀಸು ಕೊಟ್ಟಬಿಡು ಮೇಡಂಗೆ. ಮರೆತು ಆಟ ಆಡಕ್ಕೆ ಶುರುಮಾಡಬೇಡ" ಎಂದು ಹೇಳಿ ಕಳುಹಿಸಿದರು.

ಗೆಳೆಯರೊಂದಿಗೆ ಅನಿಲ್ ಸುನೀತ ಮೇಡಂ ಮನೆ ಬೀದಿಗೆ ಬಂದ ಬೀದಿ ತುದಿಯಲ್ಲೇ ಒಂಟೆ ಕಾಣಿಸಿತು ಆಗಲೆ ಅದರ ಮೇಲೆ ಅಶ್ವಿನ್ ಕುಳಿತಿದ್ದ. ಅವನಿಗೇನು ಕಮ್ಮಿ ದುಡ್ಡಿಗೆ. ಪ್ರತಿದಿನ ಬೇಕಾದರೆ ಎಷ್ಟು ರೌಂಡ್ ಹೊಡೆದರೂ ಅವರಪ್ಪ ಅಮ್ಮ ಅವನಿಗೆ ದುಡ್ಡು ಕೊಡ್ತಾರೆ ಅಂದುಕೊಳ್ಳುವಷ್ಟರಲ್ಲೇ ಒಂಟೆಯಿಂದ ಇಳಿದು ಪಾಪ ದುಡ್ಡು ತಂದಿಲ್ಲದ ರವಿಯನ್ನು ಕೂರಿಸಿ ತಾನೇ ದುಡ್ಡುಕೊಟ್ಟು ಸವಾರಿ ಮಾಡಿಸಿದ. ಎಲ್ಲ ಹುಡುಗರು ಜೋರಾಗಿ ಚಪ್ಪಾಳೆ ಹೊಡೆದರು.

'ಟ್ಯೂಷನ್‌ಗೆ ಟೈಂ ಆಯ್ತು' ಅಂತ ಸುನೀತ ಮೇಡಂ ಜೋರಾಗಿ ಕೂಗಿದಾಗ ಎಲ್ಲರೂ ಮನೆಯೊಳಗೆ ಓಡಿದರು. ಸ್ವಲ್ಪ ಹೊತ್ತಿನಲ್ಲೇ ಯಾವುದೊ ಒಂದು ಹುಡುಗಿ "ಕ್ಯಾಮಲ್ ಮೇಲೆ ಕೋತಿ ನೋಡಿ" ಎಂದು ಕೂಗಿದಾಗ, ಒಳಗಿದ್ದವರೆಲ್ಲ ಹೊರಬಂದರು. ಅವರ ಹಿಂದೆ ಮಿಸ್ ಬಂದರು. ಒಂಟೆಯ ಮೇಲೆ ಕೋತಿಮರಿ ಕುಳಿತಿರುವುದನ್ನು ನೋಡಿ ಎಲ್ಲರಿಗೂ ಆಶ್ಚರ್ಯ.

ಒಂಟೆ ಯಜಮಾನ ಮಿಸ್‌ಗೆ "ಈ ಕೋತಿಗೂ ನೀವೆ', ಹತ್ತು ರೂಪಾಯಿ ಕೊಡಬೇಕು" ಎಂದಾಗ ಎಲ್ಲರೂ ನಕ್ಕರು.

"ನಾನು ನಿನ್ನೆ ಈ ಪುಟಾಣಿ ಕಪಿಗಳಿಗೆಲ್ಲ ದುಡ್ಡುಕೊಟ್ಟಿದ್ದೇನೊ ನಿಜ ಆದರೆ ನಿಜವಾದ ಕೋತಿಮರಿಗೆ ಕೊಡೊಲ್ಲ" ಎಂದರು. ಅದಕ್ಕೆ ಆ ಒಂಟೆ ಮಾಲಿಕ "ನೀವೇ ಕೊಡಬೇಕು ನಿಮ್ಮ ಮನೆ ಬಾಲ್ಕನಿಯಿಂದಲೇ ನಮ್ಮ ಒಂಟೆ ಮೇಲೆ ಹಾರಿದ್ದು, ನೀವೆ ಸವಾರಿಗೆ ಸರ್ವಿಸ್ ಚಾರ್ಜ್ ಕೊಡಬೇಕು" ಎಂದ ನಗುತ್ತಾ.

"ನೀನು ಬೇಕಾದರೆ ಒಂಟೆ ಜೊತೆ ಕೋತಿನೂ ಸಾಕಿಕೊಂಡು ಆ ಪ್ರಾಣಿಯಿಂದಲೂ ದುಡ್ಡು ಸಂಪಾದಿಸ್ಕೊ ಯಾರ ಬೇಡಾಂದ್ರು ಎಂದು ಹುಡುಗರನ್ನೆಲ್ಲ ಅಟ್ಟಿಸಿಕೊಂಡು ಮನೆಯೊಳಗೆ ಕೂಡಿ ಹಾಕಿಕೊಂಡರು.



ಪ್ರತಿನಿತ್ಯ ಲೇಟಾಗಿ ಬರುವ ಲಾವಣ್ಯ ಇಂದು ಲೇಟಾಗಿ ಬಂದಾಗ ಎಲ್ಲಾ ಹುಡುಗರು "ಇವತ್ತೂ ಲೇಟಾಗಿ ಬಂದ್ಲಲ್ಲ, ಆ ಕೋತಿನ ಮಿಸ್..." ಅನ್ನುತ್ತಿದ್ದಂತೆ

"ಯಾರೊ ಅದು, ಮಿಸ್‌ನ ಕೋತಿ ಅನ್ನೊಂದು" ಎಂದು ಮೇಡಂ ಹೇಳಿದಾಗ 'ಹಾಗಲ್ಲ, ಮಿಸ್, ನಾವು ಹೇಳಿದ್ದು ಲಾವಣ್ಯ, ಕ್ಯಾಮಲ್ ಮೇಲೆ ಕೂತಿದ್ದ ಕೋತಿನಾ

ನೋಡೊದನ್ನ ಮಿಸ್ ಮಾಡೊಂಡಳು ಅಂತ ಅಷ್ಟೆ ಮಿಸ್" ನಗುತ್ತಾ ಹೇಳಿದ ಅನಿಲ್.

ಅನಿಲ್ ಫ್ಲಾಶ್‌ಬ್ಯಾಕ್‌ನಲ್ಲಿ ಮಾತ್ರ ನಗದೆ. ಅದನ್ನು ನೆನಪಿಸಿಕೊಳ್ಳುವಾಗಲೂ ನಗುತ್ತಿದ್ದುದು ಅವನಮ್ಮ ಹಾಗೂ ಆಂಟಿ ಕಮಲಾಗೂ ಖುಷಿ ಹಾಗು ನೆಮ್ಮದಿ ತಂದಿತು.

ಒಂದು ಸಣ್ಣ ವೈರಾಣು ದೊಡ್ಡ ಗಾತ್ರದ ಒಂಟೆಯನ್ನು ನಾಪತ್ತೆ ಮಾಡುವಷ್ಟು ಶಕ್ತಿಯುತವಾಗಿದೆ ಎಂದರೆ ನಂಬುವುದಕ್ಕೆ ಆಗದಿದ್ದರೂ ಅದು ನಿಜವಾಗಿರೋದು ನಮ್ಮ ದುರಾದೃಷ್ಟ.

"ಒಂಟೆ ಹೋಯ್ತಾ?" ಎಂದು ಬೇಸರದಿಂದ ಕೇಳಿದ ಲಾವಣ್ಯಳಿಗೆ ವಿವರಣೆ ಕೊಡಲು ಅವಳ ಸಹಪಾಠಿಗಳು ಉತ್ಸಾಹದಲ್ಲಿದ್ದಾಗ ಹೋಂ-ವರ್ಕ್ ಕೇಳಿದಾಗ ನಿಶಬ್ದವಾಯಿತು ಇಡೀ ಮನೆಪಾಠದ ಕ್ಲಾಸು.

■

---

## ಜಾನಪದ ಹಾಡು

ಮಡದಿ ಗಟ್ಟಿಗಳಾಗಿ ಮೈ ಬಂದು ಮೆರೆವಾಗ
ಕೈ ಹಿಡಿದ ಗಂಡನೆ ಅದೃಷ್ಟಶಾಲಿ

ಹಸ್ತಬಲದಿಂದಾಕೆ ಬಂಡಿಯನು ಎಳೆವಾಗ
ಎಮ್ಮೆಗಳು ಬೇಕೆ ಹೇಳಿ

ಮಡದಿಯೆ ಸೂರಿನೆತ್ತರ ಬೆಳೆದು ನಿಂತಿರಲು
ಕಂಬಗಳು ಬೇಕೆ ಮನೆಗೆ

ಕಣ್ತೆರೆಯಲಾಕೆ ಮಿಂಚಿನ ಕಿರಣ ಬರುತಿರಲು
ಮನೆಗೆ ಆ ದೀಪವೇ ಸಾಕು ಕೊನೆಗೆ

ಚೆಲುವು ಮುದಗೆಟ್ಟು ಉರಿಸಿಂಗಿಯಾಗಲವಳು
ಆಹಾ ಇನ್ನೇನು ಬೇಕು ನಿನಗೆ

( ಮದ್ಯಪ್ರದೇಶದ ಮೈಕಾಲ ಬೆಟ್ಟದ ಜಾನಪದ ಹಾಡು )

ಸಂಗ್ರಹ : **ಪ್ರಭಣ್ಣ**



# ಜೀವ್ಸ್ ಕೆಲಸಕ್ಕೆ ಸೇರಿದ

**– ಪಾಲಹಳ್ಳಿ ವಿಶ್ವನಾಥ್**

ನೀವು ಆಗಲೆ ನನ್ನ ಕೆಲವು ಜೀವ್ಸ್ ಕಥೆಗಳನ್ನು ಓದಿದೀರ ಅಲ್ಲವೆ. ಆದರೆ ಜೀವ್ಸ್ ನನ್ನ ಜೀವನದಲ್ಲಿ ಹೇಗೆ ಸೇರಿಕೊಂಡ ಅಂತ ನಿಮಗೆ ಸರಿಯಾಗಿ ಹೇಳಿಲ್ಲ. ಈಗ ಹೇಳ್ತೀನಿ ಕೇಳಿ!

ನನ್ನ ದೊಡ್ಡಮ್ಮ ದುರ್ಗಾದೇವಿಯವರಿಗೆ ನನಗೆ ಹೇಗಾದರೂ ಮದುವೆ ಮಾಡಿಬಿಡಬೇಕೆಂಬ ಹಠ. ದುರ್ಗಾದೇವಿ? ನೆನಪಾಗುತ್ತಿಲ್ಲವೆ? ಅಗಾಥಾ ದೊಡ್ಡಮ್ಮ! ಅವರು ಅಗಾಥಾ ಕ್ರಿಸ್ಟಿ ಬಹಳ ಓದುತ್ತಿದ್ದರಿಂದ ಅವರ ತಂಗಿ, ನನ್ನ ಚಿಕ್ಕಮ್ಮ ದಮಯಂತಿ, ಅವರನ್ನು ಅಗಾಥಾ ಎಂದು ಕರೆಯಲು ಶುರುಮಾಡಿದ್ದು ಅದೇ ಹೆಸರು ಅಂಟುಕೊಂಡಿತು. ಹೌದು, ಲವಕುಶರ ತಾಯಿ ! ಕುಹಕ ಬೇಡ! ಅವರನ್ನು ಸೀತಾದೇವಿ ಎಂದು ಹೊಸದಾಗಿ ಹೆಸರಿಸುವ ಅಗತ್ಯವಿಲ್ಲ. ನನ್ನ ತಾಯಿ ಈಗ ಇಲ್ಲವಾದ್ದರಿಂದ ಅಗಾಥಾ ದೊಡ್ಡಮ್ಮನಿಗೆ ತಾನೊಬ್ಬಳೇ ನನ್ನ ಹಿತೈಷಿ ಎಂದೆನಿಸಿಬಿಟ್ಟಿದೆ. ನಾನು ವ್ಯಥಾ ಕಾಲಹರಣ ಮಾಡುತ್ತಿದ್ದೇನೆಂದೂ ನನ್ನ ಜೀವನಕ್ಕೆ ಯಾವ ಗುರಿಯೂ ಇಲ್ಲವೆಂದು ನನಗೆ ಭಾಷಣ ಕೊಡುತ್ತಲೇ ಇರುತ್ತಾರೆ. ಅಷ್ಟೇ ಇದ್ದರೆ ಪರವಾಗಿರುತ್ತಿರಲಿಲ್ಲ. ಅವರಿಗೆ ಗೊತ್ತಿರುವವರಲ್ಲಿ ಯಾವುದಾದರೂ ಮದುವೆಯಾಗದ ಯುವತಿಯರು ಕಾಣಬಂದರೆ ಅವರಿಗೆ ತಕ್ಷಣ ನನ್ನ ನೆನಪು ಬಂದು ಹೇಗಾದರೂ ನಮ್ಮನ್ನು ಕೂಡಿಸಲು ನೋಡುತ್ತಾರೆ. ನನಗೆ ಇರದ ಗುಣಗಳನ್ನೆಲ್ಲಾ ನನ್ನ ಮೇಲೆ ಹೇರಿ ಹುಡುಗಿಯವರಿಗೆ ನನ್ನ ಪರಿಚಯ ಮಾಡಿಸುತ್ತಾರೆ. ನನ್ನ ಅದೃಷ್ಟ ! ಇದುವರೆವಿಗೆ ಯಾವುದೂ ಕೂಡಿ ಬಂದಿಲ್ಲ. ಆದರೆ ಈಗ?

ಆರತಿಯ ಬಗ್ಗೆ ಹೆಚ್ಚು ತಕರಾರು ಮಾಡುವುದೂ ಕಷ್ಟ. ವಿದ್ಯೆ,ರೂಪ ಎಲ್ಲ ಇರುವ ಯುವತಿ. ಮಂತ್ರಿ ಮನೋಹರಯ್ಯನವರ ಮಗಳು ಬೇರೆ ! ಆದರೆ ಅವಳು ಬಹಳ 'ಸೀರಿಯಸ್' ಹುಡುಗಿ. ಸ್ವಲ್ಪವೂ ಹಾಸ್ಯ ಪ್ರಜ್ಞೆ ಇಲ್ಲ. ನಾನೋ, ನಿಮಗೇ ಗೊತ್ತು! ಚಿಕ್ಕಂದಿನಲ್ಲಿ ಸೀರಿಯಸ್ ಅಂದರೆ ಯಾರೋ ರೋಮಿನ ಅಥವಾ ಗ್ರೀಸಿನ ಹೀರೋ ಅಂದುಕೊಂಡಿದ್ದೆ. ಗಹನವಾದ ವಿಷಯಗಳು ತಲೆಯ ಒಳಗೇ ಪ್ರವೇಶಿಸುವುದೇ ಇಲ್ಲ. ಅದಕ್ಕೇ ಏನೋ ಆರತಿ ನನ್ನನ್ನು 'ಬಹಳ ಚೆಲ್ಲು' ಅಂತಾಳೆ. ಯಾವಾಗಲು ಏನಾದರೂ ಓದುತ್ತಿರುತ್ತಾಳೆ. ಅದೂ ಧರ್ಮ, ತತ್ವಶಾಸ್ತ್ರ (ಅಂದರೆ ಫಿಲಾಸಫಿ ಅಂತ ನನಗೆ ಆಮೇಲೆ ತಿಳೀತು) ಇತ್ಯಾದಿ. ಅದೆಲ್ಲಾ ಈ ವಯಸ್ಸಿನಲ್ಲಿ ಯಾಕೆ ಅಲ್ವಾ? ಒಂದು ಪುಸ್ತಕ ಕೊಟ್ಟಿದಾಳೆ. ಪ್ರಶ್ನೆನೂ ಕೇಳ್ತೀನಿ ಅಂತ ಹೆದರಿಸಿದ್ದಾಳೆ. ಯಾವುದೋ ಉಪನಿಶತ್ ಅಂತೆ . ಕಠೋಪನಿಶತ್ ಅಂತೆ ಹೆಸರು. ನನಗೆ ಬರೆ 'ಪನಿಶ್' ಕೇಳಿಸಿತು

ಆರತಿ ಈ ಪುಸ್ತಕ ಕೊಟ್ಟು ಎರಡು ದಿವಸ ಆಯಿತು. ಶುರುಮಾಡೋಣ ಅಂತ ಎರಡು ಮೂರು ಸತಿ ಪ್ರಯತ್ನ ಮಾಡಿದೆ. ಆಗಲೇ ಇಲ್ಲ . ಸರಿ, ಮೂರನೇ ದಿನ . ಆ ಪುಸ್ತಕ ಇಟ್ಟುಕೊಂಡು ವರಾಂಡಾದಲ್ಲಿ ಕುಳಿತಿದ್ದೆ . ಯಾರೋ ಒಳಗೆ ಬಂದು ' 'ನಮಸ್ಕಾರ ಸಾರ್, ಏಜೆನ್ಸಿಯವರು ಕಳಿಸಿದಾರೆ. ಹೆಸರು ಜೀವ್ರಾಜ್ ' ಎಂದರು. ಹೌದು, ನನಗ ಕೆಲಸದವರೊಬ್ಬರು ಬೇಕಿತ್ತು. ಬರೇ ಕೆಲಸದವರಲ್ಲ. ಒಂದು ತರಹ ಕಾರ್ಯದರ್ಶಿ. ಒಳಗೆ, ಹೊರಗೆ ಕೆಲಸಮಾಡಬೇಕು. ಬಂದವನು ನಾನು ಓದಲು



ಇಟ್ಟುಕೊಂಡಿದ್ದ ಪುಸ್ತಕ ನೋಡಿದ "ಕಠೋಪನಿಶತ್ ಓದ್ತಿದೀರಾ?' ಎಂದ. 'ಶುರು ಮಾಡಿದೀನಿ' ಎಂದೆ. "ಓದಿ ಸಾರ್ ! ಆ ನಚಿಕೇತ ಎಂತಹ ಪ್ರಶ್ನೆಗಳನ್ನು ಕೇಳ್ತಾನೆ ಅಂತ. ಬಿಡಿ, ಸರ್‌ಪ್ರೈಸ್ ನಾನು ಕೆಡಸೋಲ್ಲ 'ಮಾತು ಸ್ವಲ್ಪ ಹೆಚ್ಚೇ ಆಯಿತು ಎಂದುಕೊಂಡೆ. 'ಎಲ್ಲಿ , ಒಳಗೆ ಹೊಗಿ, ಕಾಫಿ ಮಾಡಿಕೊಂಡು ಬಾ' ಎಂದೆ. ಹತ್ತೇ ನಿಮಿಷಗಳಲ್ಲಿ ಬಿಸಿ ಬಿಸಿ ಕಾಫಿ ತಂದುಕೊಟ್ಟ. ಬಹಳ ಚೆನ್ನಾಗಿತ್ತು. ಹಾಗೇ ಮಾತಾಡಿಸ್ತಾ ಹೋದೆ. ಕಡೇಲಿ ಒಂದು ಗಣಿತದ ಪ್ರಶ್ನೆ ಕೆಳಿದೆ : 18+48= . ನಾನು ಮುಗಿಸೋದರಲ್ಲೆ 66 ಅಂದು ಬಿಟ್ಟ. ಪಾಪ! ಸ್ವಲ್ಪ ಸಮಯ ತೊಗೊಬಹುದಿತ್ತು. ಒಂದು ತಪ್ಪು ತಾನೇ ! ಅದು ಅವನೂ ಮನುಷ್ಯ ಅಂತ ತೋರಿಸುತ್ತೆ. ಒಟ್ಟಿನಲ್ಲಿ ಅವನು ನನಗೆ ಸರಿಯಾಗಿದ್ದಾನೆ. ಕೆಲಸ ಮಾಡ್ತೀನಿ ಅಂತ ಒಪ್ಪಿಕೊಂಡ. 'ಜೀವ್ಸ್ ಅಂತ ಕರೀಲಾ' ಅಂತ ಕೇಳಿದೆ. 'ಸರಿ, ಸಾರ್' ಎಂದ.

ಅದರೆ ಆರತಿಗೆ ಜೀವ್ಸ್ ಇಷ್ಟವೇ ಆಗಲಿಲ್ಲ. ಎರಡು ಮೂರು ಸತಿ ಅವನು ಅವಳನ್ನು ತಿದ್ದಿದ. ಯಾವುದೊ ಮಿಲಿಂದ ಪ್ರಶ್ನೆ ಅಂತ ನನಗೆ ಬೋರ್ ಮಾಡ್ತಾ ಇದ್ದಳು. ಯಾರೋ ನಾಗಾರ್ಜುನ ಅಂತೆ. ಅದನ್ನು ಕೇಳಿ ಜೀವ್ಸ್' ಮೇಡಮ್, ಅದು ನಾಗಸೇನ, ನಾಗಾರ್ಜುನ ಅಲ್ಲ' ಎಂದ. ಆಗ ನೀವು ಅವಳ ಕೋಪ ನೋಡಬೇಕಿತ್ತು. ಇನ್ನೊಂದು ಸತಿ ಯಾವುದೋ ಸಿನೆಮಾದಲ್ಲಿ ದಿಲೀಪ ಕುಮಾರ್ ಅಂತ ಶುರುಮಾಡಿದಳು. ಹತ್ತಿರವೇ ಇದ್ದ ಜೀವ್ಸ್ 'ಮೇಡಮ್, ಅದು ದಿಲೀಪ ಸಾಬ್ ಅಲ್ಲ, ದೇವ್ ಸಾಬ್' ಎಂದ. ಅಂತೂ ಏನಾದರೂ ಅವರಿಬ್ಬರಿಗೂ ಚಕಮಕಿ ನಡೆಯುತ್ತಿರುತ್ತದೆ. ಹಾಗಾಗಿ ನಮ್ಮ ಮದುವೆಯಾದ ಮುಂದಿನ ದಿನವೇ ಅವನನ್ನು ಬಿಡಿಸಿಬಿಡಿ ಎಂದೂ ಆಗಾಗ್ಗೆ ಹೇಳುತ್ತಿರುತ್ತಾಳೆ. ಮುಂದಿನ ಸತಿ ನೀವು ನನ್ನ ನೋಡಿದಾಗ ಮಿಲಿಂದ ಯಾವ ಸಿನೆಮಾದಲ್ಲಿ ಮಾಡ್ತಾ ಇದ್ದ ಅಂತ ಕೇಳಬೇಡಿ. ಒಟ್ಟಿನಲ್ಲಿ ಮುಖ್ಯವಾಗಿ ನನಗೆ ಮದುವೆಯಾಗುವ ಯಾವ ಇಚ್ಛೆಯೂ ಇರಲಿಲ್ಲ..ಏನೋ ದೊಡ್ಡಮ್ಮನ ಬಲವಂತಕ್ಕೆ ಆಗಾಗ್ಗೆ ಆರತಿಯನ್ನು ಹೋಗಿ ನೋಡ್ತಾ ಇದ್ದೆ.

ಹೀಗೇ ನಡೆಯುತ್ತಿದ್ದಾಗ ನನ್ನ ಚಿಕ್ಕಪ್ಪ ಚಾಚಾ ಚಂದ್ರು ತಮ್ಮ ಜೀವನಚರಿತ್ರೆಯನ್ನು ಬರೆದಿಟ್ಟರು. ಪೂರ್ತಿ ಏನಲ್ಲ. ಮೊದಲ 20–25 ವರ್ಷಗಳ ಬಗ್ಗೆ, ಅವರ ಯೌವನದ ಬಗ್ಗೆ. ನೀವು ಅವರ ಬಗ್ಗೆ ನಾನು ಮಾತನಾಡಿರುವುದನ್ನು ಕೇಳಿದ್ದೀರಾ ಅಲ್ಲವೇ? ಅವರಿಗೆ ಈಗ 70 + ಆದರೆ ಆಡುವುದು ಇನ್ನೂ 20+ರ ತರಹ. ಹಾಗಿದ್ದರೆ ಅವರು ನಿಜವಾಗಿಯೂ 20+ ಇದ್ದಾಗ ಹೇಗಿದ್ದರು ಎಂದು ಊಹಿಸಬಹುದಲ್ಲವೇ. ಈ ಮಾಹಿತಿ ಏತಕ್ಕೆ ಮುಖ್ಯ ಅಗುತ್ತೆ ಅಂದರೆ ಆರತಿಯ ತಂದೆ ಮನೋಹರಯ್ಯನವರು ನಮ್ಮ ಚಾಚಾ ಬಹಳ ಸ್ನೇಹಿತರು. ಒಟ್ಟಿಗೆ ಇರ್ತಾ ಇದ್ದರು; ಒಟ್ಟಿಗೆ ತರಲೆ ಕೆಲಸಗಳನ್ನೂ ಮಾಡುತ್ತಿದ್ದರು.

ಆದ್ದರಿಂದ ಆರತಿಗೆ ಚಾಚಾರ ಜೀವನ ಚರಿತ್ರೆಯ ಬಗ್ಗೆ ಬಹಳ ಯೋಚನೆ ಶುರುವಾಯಿತು ಅದು ಪ್ರಕಟವಾದರೆ ಮನೋಹರಯ್ಯನವರ ಮಾನ ಉಳಿಯುವುದಿಲ್ಲ ಎಂದು ಅವಳಿಗೆ ಭಯವಾಗತೊಡಗಿತು. ಮನೋಹರಯ್ಯನವರು ಈ ಬಾರಿಯೂ ಚುನಾವಣೆಗೆ ನಿಲ್ಲುವವರಿದ್ದರು. ಅವರ ಯೌವನದ ಲೀಲೆಗಳನ್ನು ಜನ ಕೇಳಿದರೆ ಅವರು ಸೋಲುವುದು ಖಂಡಿತ ಎನಿಸಿತು ಅವಳಿಗೆ. ಚಾಚಾರವರ ಮಾನದ ಬಗ್ಗೆಯೂ ಯಾರೂ ಏಕೆ ಯೋಚಿಸುತ್ತಿಲ್ಲ ಎಂದು ನೀವು ಕೇಳಬಹುದಲ್ಲವೇ? ಅವರಿಗೆ ತಮ್ಮ



ಮಾನಕಳೆದುಕೊಳ್ಳುವ ಬಗ್ಗೆ ಯಾವ ಭಯವೂ ಇರಲಿಲ್ಲ. ಏಕೆಂದರೆ ಅವರೇ ಆಗಾಗ್ಗೆ ಹೇಳುವಂತೆ 'ನನಗೆ ಮಾನವೂ ಇಲ್ಲ, ಗೀನವೂ ಇಲ್ಲ'. ಆರತಿ ನನ್ನ ಹತ್ತಿರ ಅವರಿಗೆ ಪ್ರಕಟಿಸೋದು ಬೇಡ ಅಂತ ಹೇಳು ಅಂದಳು. ಬಹಳ ಬಲವಂತ ಮಾಡಿದಮೇಲೆ ಚಾಚಾಗೆ ಹೇಳಿದೆ. ಅವರು ಜೋರಾಗಿ ನಕ್ಕು ಬಿಟ್ಟು 'ಏನೂ ಆಗೋಲ್ಲ' ಅಂದರು. ಹಾಗೇ ಕರಡು ಪ್ರತಿಯನ್ನು ನನಗೆ ಕಳಿಸುತ್ತಾರೆಂದೂ , ಅವರ ಹತ್ತಿರ ಒಂದೇ ಪ್ರತಿ ಇದೆಯೆಂದೂ ಮತ್ತು ಜಾಗರೂಕತೆಯಿಂದ ಇರಬೇಕೆಂದೂ ಹೇಳಿದರು. ಅದು ಬಂದ ಮೇಲೆ ನಾನೇ ಬೆಂಗಳೂರಿನಲ್ಲಿರುವ ಅವರ ಪ್ರಕಾಶಕರ ಆಫೀಸಿಗೆ ತಗೆದುಕೊಂಡು ಹೋಗಿಕೊಡಬೇಕು ಎಂದರು.

ಇದನ್ನು ನಾನು ಆರತಿಗೆ ಹೇಳಿದೆ. ಸರಿ ಎಂದಳು. ಬೆಳಿಗ್ಗೆ ಚಾಚಾಯಿಂದ ಪಾರ್ಸೆಲ್ ಬಂತು. ವರಾಂಡದಲ್ಲೆ ಮೇಜಿನ ಮೇಲೆ ಇಡಲು ಹೇಳಿದೆ. ಅಷ್ಟರಲ್ಲಿ ಆರತಿಯ ಮನೆಯಿಂದ ಅವಳ ಸಹಾಯಕಿ ಸುಶೀಲ ಬಂದಳು ' ಅಮ್ಮಾವ್ರು ಪುಸ್ತಕ ಕಳಿಸಿದಾರೆ ಸಾರ್ ನಾನು ಹೋಗ್ತೀನಿ, ಜಾಸ್ತಿಕೆಲಸ ಇದೆ ' ಎಂದು ಹೊರಟು ಹೋದಳು.ನಾನು ವರಾಂಡಾ ಗೆ ಬಂದು ನೋಡಿದರೆ ಚಾಚಾ ಪಾರ್ಸಲ್ ಮಾಯ! ಸುಶೀಲಾನೇ ತೆಗೆದುಕೊಂಡುಹೋಗಿರಬೇಕು ಎಂದ ಜೀವ್ಸ್. ಸ್ವಲ್ಪ ಹೊತ್ತಾದ ಮೇಲೆ ಆರತಿಯಿಂದ ಫೋನ್ ಬಂತು . ನಾನು ಪಾರ್ಸಲ್ ವಾಪಸ್ಸು ಕಳಿಸು ಎಂದು ಕೇಳಿದಾಗ ಅವಳು ನಗುತ್ತಾ 'ಸುಶೀಲ ಸುಟ್ಟುಹಾಕಿ ಬಿಟ್ಟಳು' ಎಂದಳು. ನನಗೆ ಗಾಬರಿಯೂ ಆಯಿತು, ಕೋಪವೂ ಬಂತು 'ಪುಸ್ತಕಾನ ಸುಟ್ಟುಹಾಕ್ತಾರಾ? ಏನು ಸಂಸ್ಕೃತಿ ನಿನ್ನದು? ಇನ್ನು ನಿನ್ನ ನಾನು ನೋಡೋಲ್ಲ' ಎಂದು ಫೋನ್ ಇಟ್ಟುಬಿಟ್ಟೆ. ಅಂತೂ ಒಳ್ಳೆ ಕಾರಣಾನೇ ಸಿಕ್ತು ಅವಳಿಂದ ಬಿಡಿಸಿಕೊಳ್ಳೋಕೆ! ಆದರೂ ನನಗೆ ಬಹಳ ಬೇಜಾರಾಯತು. ಚಾಚಾಗೆ ಈಗ ಏನು ಹೇಳೋದು?

ನನ್ನ ವ್ಯಥೆಯನ್ನು ಜೀವ್ಸ್ ಗಮನಿಸಿದ. 'ಯೋಚನೆಮಾಡಬೇಡಿ ಸಾರ್, ನಾನು ಆಗಲೇ ಚಾಚಾ ಚಂದ್ರು ಅವರಿಗೆ ಫೋನ್ ಮಾಡಿದ್ದೆ. ಇನ್ನೊಂದು ಪ್ರತೀನಾ ಯಾರೋ ಹಿತೈಷಿಗಳ ಹತ್ತಿರ ಕೊಟ್ಟಿದಾರಂತೆ ಕಳಿಸ್ತಾರಂತೆ. ಬಹಳ ಜೋಪಾನ ಅಂದರು. .. ನಾನು ಒಂದು ಹೇಳಬಹುದೆ ಸಾರ್?

'ಏನದು?'

'ನೀವು ಒಳ್ಳೇದೇ ಮಾಡಿದಿರಿ.ನಿಮಗೆ ಆರತಿ ಮೇಡಮ್ ಸರಿಹೋಗೋಲ್ಲ ಸಾರ್! ಅವರು ಬೆಳಿಗ್ಗೆ ಕಳಿಸಿದ ಪುಸ್ತಕ ನೋಡಿದಿರಾ?.. ನಿಮಗಲ್ಲ ಸಾರ್ ಅಂಥ ಪುಸ್ತಕ. ಹೆಸರಾ? ಮಾಂಡ್ಯೂಕೋಪನಿಶದ್' '

ಹೆಸರು ಕೇಳೇ ಎದೆ ನಡುಗಿತು. ಸದ್ಯ ತಪ್ಪಿಸಿಕೊಂಡೆನಲ್ಲ ಅನ್ನಿಸಿತು.

'ನಾನು ಓದಿ ಕೊಡಲಾ ಸಾರ್' ಎಂದು ಕೇಳಿದ ಜೀವ್ಸ್

"ಧಾರಾಳವಾಗಿ ! ವಾಪಸ್ಸು ಕೊಡಬೇಡ. ನೀನೆ ಇಟ್ಕೊ" ಅಂದೆ

ಅಂದಿನಿಂದ ಜೀವ್ಸ್ ನನಗೆ ಖಾಯಂ ಕಾರ್ಯದರ್ಶಿ !

(ಸ್ಫೂರ್ತಿ: ಪಿ.ಜಿ.ವುಡ್ ಹೌಸ್)

■



# ಕಲ್ಲು ಹುಚ್ಚಿನ ಕಲ್ಲೂ!

**– ಚಿತ್ರಾ ರಾಮಚಂದ್ರನ್**

"ಬಂದ್ಯೇನೆ ಕಲ್ಯಾಣಿ! ನಿನಗಾಗಿಯೇ ಇಷ್ಟೊತ್ತು ಕಾಯ್ತಿದ್ವಿ! ಎಲ್ಲಿಗ್ಹೋಗಿದ್ಯೇ?"

ಧಡಬಡಿಸಿ ಮನೆಯೊಳಗೆ ಪ್ರವೇಶಿಸಿದ ಕಲ್ಯಾಣಿಯನ್ನು ಸಲುಗೆಯಿಂದ ಸ್ವಾಗತಿಸಿದರು ವಿಶಾಲಿ ಅತ್ತೆ.

"ಸಾರೀ ಅತ್ತೆ! ಸ್ಮಶಾನಕ್ಕೆ ಹೋಗಿದ್ದೆ! ಒಂದೈದು ನಿಮಿಷ ಇರಿ, ಸ್ನಾನ ಮಾಡ್ಕೊಂಡು ಬಂದ್ಬಿಡ್ತೀನಿ!"

"ಹಾಂ!" ಹಾವು ಮೆಟ್ಟಿದವರಂತೆ ಹೌಹಾರಿ ಸೋಫಾದಿಂದ ಜಿಗಿದೆದ್ದ ಅತ್ತೆಯ ಮುಖ ಭಾವವನ್ನು ಒಳಗೆ ಓಡಿ ಹೋಗುತ್ತಿದ್ದ ಕಲ್ಯಾಣಿ ಗಮನಿಸಲೇ ಇಲ್ಲ!

ಇತ್ತೀಚಿಗೆ ಪ್ರಾರಂಭವಾಗಿದ್ದ 'ಬೆಂಗಳೂರು ಶಿಲಾ ಶಾಸನಗಳು' ಎಂಬ ವೇದಿಕೆಯ ಸದಸ್ಯಳಾಗಿದ್ದಳು ಕಲ್ಯಾಣಿ. ಕಲ್ಲುಗಳನ್ನು ನೋಡಲು ವೇದಿಕೆಯ ಸದಸ್ಯರೆಲ್ಲ ಆಗಿಂದಾಗ್ಗೆ ಹೋಗಿ ಬರುವುದು ವಾಡಿಕೆ. ಸಮಯ ಕೂಡಿ ಬಂದಾಗಲೆಲ್ಲ ಆ ತಂಡದವರೊಂದಿಗೆ ಅವಳೂ ಹೋಗಿ ಬರುತ್ತಿದ್ದಳು.

ಒಂದು ಕಲ್ಲನ್ನು ನೋಡಿ ಬಂದಳೆಂದರೆ ವಾರದವರೆಗೂ ಅದೇ ಗುಂಗಿನಲ್ಲಿರುತ್ತಿದ್ದಳು ಕಲ್ಯಾಣಿ. ರಾಜ ಮಹಾರಾಜರ ಪರಾಕ್ರಮ, ದಾನಗುಣ, ಭಕ್ತಿ ಮತ್ತು ಜನ ಸಾಮಾನ್ಯರ ಶೌರ್ಯ, ತ್ಯಾಗ ಮುಂತಾದ ಗುಣ ವಿಶೇಷಗಳಿಗೆ ಸಾಕ್ಷಿಯಾಗಿ ಅವರುಗಳು ಬಿಟ್ಟು ಹೋಗಿದ್ದ ಶಾಸನಗಳನ್ನೂ ವೀರಗಲ್ಲುಗಳನ್ನೂ ಕಂಡಾಗ, ಕನಸುಗಾರ್ತಿ ಕಲ್ಯಾಣಿಯ ಮನಃಪಟಲದಲ್ಲಿ ಅದ್ದೂರಿಯ ಐತಿಹಾಸಿಕ ಚಲನಚಿತ್ರಗಳೇ ನಿರ್ಮಾಣವಾಗುತ್ತಿದ್ದವು!

ಈಗಲೂ ಒಂದು ಶಾಸನವನ್ನು ನೋಡಲೆಂದೇ ತನ್ನ ತಂಡದವರೊಂದಿಗೆ ಹೋಗಿ ಬಂದಿದ್ದಳು. ದೂರದ ಸಂಬಂಧಿಕರಾದ ವಿಶಾಲಿ ಅತ್ತೆ ಬರುವುದಾಗಿ ಮೊದಲೇ ತಿಳಿಸಿದ್ದರೆ ಅವಳು ಮನೆಯಲ್ಲೇ ಇರುತ್ತಿದ್ದಳೇನೋ! ಇರಲಿ! ಅನಂತ ಹೇಗೂ ಅತ್ತೆಗೂ ಮಾವನಿಗೂ ಕಾಫಿ ಉಪಚಾರ ಮಾಡಿರುತ್ತಾರೆ. ತಾನು ಹೋಗಿ ವಿನಯದಿಂದ ಉಪಚರಿಸಿ ಎರಡು ಮಾತನ್ನಾಡಿಸಿ ಬಿಟ್ಟರೆ ಆಯಿತು! ಲಘು ಬಗೆಯಿಂದ ಸ್ನಾನ ಮುಗಿಸಿಕೊಂಡು ಅವಳು ಬರುವ ಹೊತ್ತಿಗೆ ವಿಶಾಲಿ ಅತ್ತೆ ವೆಂಕಿ ಮಾಮನೊಂದಿಗೆ ಕಾಲು ಕಿತ್ತಿದ್ದರು!

"ಅಯ್ಯೋ! ಹೊರಟೇ ಹೋದ್ರಾ?"

"ನೀನು ಸ್ಮಶಾನಕ್ಕೆ ಹೋಗಿ ಬಂದೆ ಅಂದ್ರೆ ಇನ್ನೇನು ಮಾಡ್ತಾರ್ಯೇ ಮಾರಾಯಿತಿ?" ಸಹನೆಯಿಂದ ನುಡಿಯುತ್ತ ಹೊಟೇಲಿನಿಂದ ತರಿಸಿದ್ದ ಊಟವನ್ನು ಮೇಜಿನ ಮೇಲೆ ಎತ್ತಿಟ್ಟ ಅನಂತ.

"ನಾನೇನು ಯಾರದ್ದೋ ಅಂತ್ಯಸಂಸ್ಕಾರಕ್ಕೆ ಹೋಗಿದ್ನೇ? ಕಲ್ಲು ನೋಡಕ್ಕೆ ಹೋಗಿದ್ದೆ ಅಂತ ನೀವು ಹೇಳ್ಬೇಕಿತ್ತು!"

"ಕೇಳೋಕ್ಕೆ ನಿಂತ್ರೆ ಅಲ್ವೇ ಹೇಳೋದು!" ನಗುತ್ತಲೇ ತಟ್ಟೆಯಲ್ಲಿ ಅವಳಿಗಾಗಿ ಊಟವನ್ನು ಬಡಿಸಿದ ಅನಂತ.

"ಅಯ್ಯೋ! ಯೋಚ್ನೆ ಮಾಡ್ದೆ ಇದ್ದದ್ದು ಇದ್ದ ಹಾಗೆ ಥಟ್ಟಂತ ಹೇಳ್ಬಿಟ್ಟೆ ಕಣ್ರೀ!



ಆ ಮೇಲೆ ಫೋನ್ಮಾಡ್ತೀನಿ! ಅದಿರ್ಲಿ ಬಿಡಿ! ಟ್ರಿಪ್ ಎಷ್ಟ್ ಚೆನ್ನಾಗಿತ್ತು ಗೊತ್ತಾ? ಸಾವಿರ ವರುಷಗಳ ಹಿಂದೆ ಮಹಾರಾಜನೊಬ್ಬ ಕಟ್ಟಿಸಿದ ದೊಡ್ಡ ಕೆರೆಯ ಬಗ್ಗೆಗಿನ ಶಾಸನ ಅದು! ಈಗ ಆ ಕೆರೆಯೇ ಇಲ್ಲ! ಶಾಸನದ ಕಲ್ಲೋ ಹೇಳೋರು ಕೇಳೋರು ಇಲ್ದೆ ಸಮಾಧಿಗಳ ನಡುವೆ ಸ್ಮಶಾನದಲ್ಲಿ ನಿಂತಿದೆ! ಅಷ್ಟು ಪುರಾತನ ಕಲ್ಲನ್ನ ಮುಟ್ಟಿದಾಗ ಮೈಯೆಲ್ಲ ಹೇಗೆ ಝುಂಮಂತು ಗೊತ್ತಾ?" ತಾನು ಅಂದು ನೋಡಿ ಬಂದ ಕಲ್ಲಿನ ಬಗ್ಗೆ ವಟವಟ ಮಾತನಾಡುತ್ತ ಊಟ ಮಾಡಿದಳು ಕಲ್ಯಾಣಿ.

'ಮಸಣದ ಕಲ್ಲು!' ಆ ಹೆಸರೇ ಅದೆಷ್ಟು ರೊಮ್ಯಾಂಟಿಕ್ಕಾಗಿದೆ! ಸಮುದ್ರದಂತೆ ಅಲೆಯಾಡುವ ಬ್ರಹ್ಮಾಂಡವಾದ ಕೆರೆಯ ತೀರದಲ್ಲಿ ಚಿನ್ನದ ಕಿರೀಟ ಧರಿಸಿದ ಆಜಾನು ಬಾಹು ಮಹಾರಾಜನೊಬ್ಬ ಆನೆಯಂತಹ ಗಂಭೀರ ನಡಿಗೆಯಲ್ಲಿ ಆಗಮಿಸಿ, ಸುಂದರವಾದ ಅಕ್ಷರಗಳನ್ನೊಳಗೊಂಡ ಆರಡಿ ಎತ್ತರವಿದ್ದ ಶಾಸನ ಕಲ್ಲನ್ನು ಸ್ಥಾಪಿಸುತ್ತಿರುವಂತಹ ದೃಶ್ಯವನ್ನು ಕಲ್ಪಿಸಿಕೊಂಡಾಗ ಎಂತಹದ್ದೋ ಪುಳಕ! ಉಲ್ಲಾಸದಿಂದಲೇ ಕೆಲಸಗಳನ್ನೆಲ್ಲ ಮುಗಿಸಿಕೊಂಡು ವಿಶಾಲಿ ಅತ್ತೆಗೆ ಫೋನ್ಮಾಡಿದಳು ಕಲ್ಯಾಣಿ. ತಾನು ಸ್ಮಶಾನಕ್ಕೆ ಹೋಗಿ ಬಂದ ಕಾರಣವನ್ನು ಹೇಳಿದಳು. ಶಾಸನಗಳ ಮಹತ್ವವನ್ನೂ ಅವುಗಳನ್ನು ಸಂರಕ್ಷಿಸಬೇಕಾದ ಅವಶ್ಯಕತೆಯನ್ನೂ ವಿವರಿಸಿ ಒಂದು ಭಾಷಣವನ್ನೇ ಬಿಗಿದು ಬಿಟ್ಟಳು!

"ಏನೇ ಹೇಳು, ಹೆಂಗಸ್ರು ಸ್ಮಶಾಣಕ್ಕೆಲ್ಲ ಹೋಗ್ತಾರೇಯೇ? ಏನೋ ಅಮ್ಮ! ಚಂದ್ರಾಳಿಗೆ ಮೂವತ್ತಾಗ್ತಾ ಬಂತು. ಇನ್ನೂ ಯಾವ ವರವೂ ಕುದುರಿಲ್ಲ! ಅತ್ತೆಯಾಗೋಳು ಹೀಗೆ 'ಕಲ್ಲು, ಸ್ಮಶಾಣ' ಅಂತ ತಿರುಗ್ತಿದ್ರೆ ಯಾವ ವರ ತಾನೇ ಒಪ್ತಾನೆ ಹೇಳು?"

ಆವರೆಗೂ ಮನದಲ್ಲಿ ಉಕ್ಕುತ್ತಿದ್ದ ಸುಂದರ ಭಾವನೆಗಳೆಲ್ಲ ಅತ್ತೆ ಆಡಿದ ಮಾತಿನಿಂದ ಥಟ್ ಎಂದು ತಣಿಯಿತು! ಹೇಗೋ ಮಾತು ಮುಗಿಸಿ ಫೋನು ಕುಕ್ಕಿದವಳ ಆವೇಶ ಸುನಾಮಿಯಾಗಿ ಹೊರಹೊಮ್ಮಿತು!

"ನಾನೇನು ಬೇಜವಾಬ್ದಾರಿ ತಾಯಿಯೇ? ಮನೆ ಮಠ ನೋಡ್ಕೊಂಡು ಮಕ್ಳನ್ನ ಚೆನ್ನಾಗಿ ಸಾಕಿಲ್ವೇ? ತಾರಾಳಿಗೆ ಮದುವೆ ಮಾಡಿ, ಹೋದ ವರ್ಷತಾನೆ ಹೆರಿಗೇನೂ ಮಾಡಿ ಕಳಿಸಿಲ್ವೇ? ಬಂಧು ಬಳಗದವರ ಜೊತೆ ಸೌಜನ್ಯದಿಂದಿಲ್ವೇ? ಚಂದ್ರಾಳಿಗೆ ಇನ್ನೂ ಮದುವೆಯಾಗದೆ ಇರೋದು ನಾನು ಕಲ್ಲು ನೋಡಕ್ಕೆ ಹೋಗೋದ್ರಿಂದ್ಲೇ ಅನ್ನೋ ಹಾಗೆ ಮಾತಾಡ್ತಾರಲ್ಲಾ! ನಮ್ಮ ಮನೆ ವಿಷ್ಯದಲ್ಲಿ ನಮಗಿಲ್ದೆ ಇರೋ ಕಾಳಜಿ ಇವ್ರಿಗೇಕೆ? ನೀವೇ ಹೇಳಿ, ನಾನು ಯಾರಿಗೆ ಏನು ಕಡಿಮೆ ಮಾಡಿದ್ದೀನಿ? ನಾನು ಕಲ್ಲು ನೋಡಕ್ಕೆ ಹೋದ್ರೆ ನೀವೇ ಹೊಟೇಲಿಂದ ಊಟ ತರಿಸ್ತೀರಿ! ಇನ್ಮುಂದೆ ನಾನೇ ಬೇಕಾದ್ರೆ ಬೇಗ ಎದ್ದು ಅಡಿಗೆ ಮಾಡಿಟ್ಟು ಹೋಗ್ತೀನಿ!" ಧಾರೆ ಧಾರೆಯಾಗಿ ಕಣ್ಣೀರಿಟ್ಟಳು ಕಲ್ಯಾಣಿ!

"ಕಲ್ಲೂ! ಹುಚ್ಚುಚ್ಚಾಗಿ ಆಡ್ಬೇಡ! ವಯಸ್ಸಾದೋರ ಮಾತಿಗೆಲ್ಲ ತಲೆ ಕೆಡಿಸ್ಕೊತಾರೆಯೇ?" ಎಂದು ಹೆಂಡತಿಯನ್ನ ಸಮಾಧಾನ ಪಡಿಸಲೆತ್ನಿಸಿದ ಅನಂತ.



"ಅನ್ನಿ! ನೀವೊಬ್ರೇ ಬಾಕಿ ಇದ್ರಿ! ನೀವೂ ನನ್ನ ಹುಚ್ಚಿ ಅನ್ನಿ!"

ಅವಳ ಹೊಸತಾದ ಹವ್ಯಾಸಕ್ಕಾಗಿ ಅವಳಿಗೆ ಹುಚ್ಚಿಪಟ್ಟ ಕಟ್ಟಿದವರು ಎಷ್ಟೋ ಮಂದಿ. ಆದರೆ ಆ ಮಾತನ್ನು ಈಗ ಅನಂತನ ಬಾಯಿಂದ ಕೇಳಿದಾಗ ದುಃಖ ಉಮ್ಮಳಿಸಿತು. ಅನಂತನ ಸದುದ್ದೇಶವನ್ನು ಅರಿತೇ ಇದ್ದಳು! ಆದರೂ ಬೇಕೆಂದೇ

ತಿರುಚಿ ಅರ್ಥೈಸಿಕೊಂಡು ಹಲುಬಿದಳು!

ತಾನು ಹುಚ್ಚಿಪಟ್ಟ ಕಟ್ಟಿಸಿಕೊಂಡ ಆಶುಭ ದಿನವನ್ನು ಮರೆಯಲಾದೀತೆ! ಅಂದು ಕಲ್ಯಾಣಿ ತನ್ನ ಸ್ನೇಹಿತಿ ಚಾರುವಿನ ಹೊಸ ಮನೆ ಗೃಹ ಪ್ರವೇಶಕ್ಕೆ ಅನಂತನ ಜೊತೆ ಉತ್ಸಾಹದಿಂದ ಹೊರಟಿದ್ದಳು. ಎಷ್ಟೋ ದಿವಸಗಳ ನಂತರ ತನ್ನ ಕಾಲೇಜು ದಿನಗಳ ಸ್ನೇಹಿತೆಯರನ್ನೆಲ್ಲ ಒಟ್ಟಿಗೆ ಒಂದೇ ಕಡೆ ನೋಡುವ ಅವಕಾಶ ದೊರಕಿತಲ್ಲ ಎಂದು ಖುಷಿ ಖುಷಿಯಾಗಿದ್ದಳು.

ಪೂಜಾ ಕಾರ್ಯಗಳು ನಡೆಯುತ್ತಿದ್ದಾಗ ಚಾರುವಿನ ಮಗ ಉದಯ ಲವಲವಿಕೆಯಿಂದ ಅತಿಥಿಗಳನ್ನು ಸ್ವಾಗತಿಸಿ ಮಾತನಾಡಿಸಿಕೊಳ್ಳುತ್ತಿದ್ದ. ಮಾತು ಮಾತಿನಲ್ಲಿ ಅವನೂ ಶಾಸನಗಳ ಬಗ್ಗೆ ಆಸಕ್ತನಾಗಿರುವುದು ಕಲ್ಯಾಣಿಗೆ ಅರಿವಾಯಿತು. ಅವಳ ಉತ್ಸಾಹಕ್ಕೆ ಕೇಳಬೇಕೆ? ಆ ಶಾಸನ ಈ ಕಲ್ಲು ಎನ್ನುತ್ತಿದ್ದಂತೆ ಹುಲಿ ಬೇಟೆ ವೀರಗಲ್ಲುಗಳ ಬಗ್ಗೆ ಮಾತು ತಿರುಗಿತು.

"ಅಯ್ಯೋ ಆಂಟಿ! ಇಲ್ಲೇ ಸಮೀಪದಲ್ಲಿ ಸುಲಭ ಶೌಚಾಲಯದ ಬಳಿ ಒಂದು ಹುಲಿ ಬೇಟೆ ವೀರಗಲ್ಲಿದೆ! ಕಟ್ಟಡಕ್ಕೆ ಪಾಯ ತೆಗೀತಿದ್ದಾಗ ಪತ್ತೆ ಆಯಿತಂತೆ! ಇಲ್ಲಿಂದ ಹದಿನೈದು ನಿಮಿಷದ ನಡಿಗೆಯಷ್ಟೇ! ಪೂಜೆ ಮುಗಿಯೋಷ್ಟ್ರಲ್ಲಿ ಹೋಗಿ ನೋಡ್ಕೊಂಡು ಬಂದ್ಬಿಡೋಣ ಬನ್ನಿ!" ಎಂದಿದ್ದ ಉದಯ.

ಬೆಂಗಳೂರು ನಗರದಲ್ಲಿ ಕೇವಲ ಮೂರು ಹುಲಿ ಬೇಟೆ ವೀರಗಲ್ಲುಗಳೇ ಉಳಿದದ್ದವು. ಇಷ್ಟು ದೂರ ಬಂದು ಸಮೀಪದಲ್ಲೇ ಇರುವ ಅಪರೂಪದ ಕಲ್ಲನ್ನು ನೋಡದೆ ಹೋಗುವುದಾದರೂ ಹೇಗೆ? ಅನಂತನಿಗೆ ಹೇಳಿ ಉದಯನ ಜೊತೆ ಹೊರಟೇ ಬಿಟ್ಟಳು ಕಲ್ಯಾಣಿ!

ಭಾರಿ ಜರತಾರಿ ಸೀರೆಯುಟ್ಟು, ಚಿನ್ನದ ಕೈಬಳೆಗಳ ತೊಟ್ಟು, ಕುತ್ತಿಗೆಯಲ್ಲಿ ಕಾಸಿನ ಸರ ಮಿನುಗುತ್ತಿರಲು ಮಧ್ಯ ವಯಸ್ಸಿನ ಮಹಿಳೆಯೋರ್ವಳು ಆ ಹೊಸ ಬಡಾವಣೆಯ ಕೊಳಕು ಗಲ್ಲಿಗಳಲ್ಲಿ 'ಝೂಮ್ಝಾಮ್' ಎಂದು ನಡೆದು ಹೋಗುತ್ತಿದ್ದರೆ ಮತ್ತೊಮ್ಮೆ ಅವಳನ್ನು ಹಿಂದಿರುಗಿ ನೋಡದ ಪ್ರಾಣಿಗಳೇ ಇರಲಿಲ್ಲ!

ಗೃಹ ಪ್ರವೇಶದ ಪೂಜೆಯೆಲ್ಲ ಮುಗಿದು ಊಟದ ತಯಾರಿ ನಡೆಯುತ್ತಿತ್ತು. ವೀರಗಲ್ಲನ್ನು ನೋಡಿ ಇಷ್ಟಗಲ ಮುಖವರಳಿಸಿಕೊಂಡು ಹಿಂದಿರುಗಿದ್ದಳು ಕಲ್ಯಾಣಿ. ಮೊಬೈಲಲ್ಲಿ ತೆಗೆದಿದ್ದ ಚಿತ್ರಗಳನ್ನು ಶಿಲಾ ಶಾಸನ ವೇದಿಕೆಯ ಮುಖಪುಟಕ್ಕೇರಿಸಿ ನಂತರ ಸ್ನೇಹಿತೆಯರ ಪಟಾಲಂ ಜೊತೆ ಸೇರಿಕೊಳ್ಳಲು ನಿರ್ಧರಿಸಿದಳು.

ಸ್ವಲ್ಪ ದೂರದಲ್ಲಿ ಸ್ನೇಹಿತಿಯರು ಗುಂಪು ಕಟ್ಟಿಕೊಂಡು ಪರಿಸರದ ಪರಿವೆಯೇ ಇಲ್ಲದೆ ವಟಗುಟ್ಟುತ್ತಿದ್ದ ವಿಷಯಗಳನ್ನು ಆಲಿಸುತ್ತ ಕಾರ್ಯಮಗ್ನಳಾಗಿದ್ದಳು.

"ಅರೆ! ಕಲ್ಯಾಣಿ ಎಲ್ಲೇ ಕಾಣಿಸ್ತಿಲ್ಲಾ?"

"ಇಲ್ಲೇ ಎಲ್ಲೋ ಕಲ್ಲು ನೋಡಕ್ಕೆ ಹೋದ್ಳಂತೆ! ಅನಂತ ಅವ್ರು ಹೇಳಿದ್ರು! ಅದೇನು ಕಲ್ಲು ಅಂತ ಅಲೀತಾಳಪ್ಪ!"

"ಮೊದಲೇ ಕಲ್ಲು ಹುಡುಕ್ಕೊಂಡು ಕಾಡು ಮೇಡು ತಿರುಗ್ತಾನೆ ನನ್ಮಗ ಉದಯ! ಓದೋ ಹುಡುಗನಿಗೆ ಬುದ್ಧಿ ಹೇಳೋದು ಬಿಟ್ಟು, ಈ ವಯಸ್ಸಲ್ಲಿ ಇವಳೂ ಕಲ್ಲು ನೋಡ್ತೀನಿ ಅಂತ ಅವನ ಜೊತೆ ಹೊರಟಿದ್ದಾಳಲ್ಲ! ಅವಳನ್ನ ಏನನ್ನಬೇಕು?" ಚಾರು ಅಲವತ್ತುಕೊಂಡಳು.



"ಅನ್ನೋದೇನು? 'ಕಲ್ಲು ಹುಚ್ಚಿನ ಕಲ್ಲೂ' ಅನ್ನೋದು, ಅಷ್ಟೇ!"

ಸ್ನೇಹಿತೆಯರ ಮಾತಿನಿಂದ ಬೆಚ್ಚಿದ ಕಲ್ಯಾಣಿ ಹಾಗೂ ಹೀಗೂ ಊಟ ಮುಗಿಸಿಕೊಂಡು ತುಟಿ ಬಿಗಿದುಕೊಂಡು ಮನೆಗೆ ಹಿಂದಿರುಗಿದ್ದಳು.

ಆ ಘಟನೆಯನ್ನು ನೆನಪಿಸಿಕೊಂಡಾಗಲೆಲ್ಲ ಇಂದಿಗೂ ಮನಸ್ಸು ಉರಿಯುತ್ತದೆ.

'ವಯಸ್ಸಂತೆ ವಯಸ್ಸು! ಹೊಸ ಹವ್ಯಾಸ ಪ್ರಾರಂಭಿಸಕ್ಕೆ ವಯಸ್ಸಿನ ಮಿತಿ ಇದೆಯೇನು? ಗಾಣದ ಎತ್ತಿನಂತೆ ಅನುದಿನವೂ ಮಾಡಿದ್ದನ್ನೇ ಮಾಡ್ತಿದ್ರೆ ಅವ್ರು ಜಾಣರು! ಹೊಸ ರೀತಿಯ ಹವ್ಯಾಸಗಳಿಗೆ ಕೈ ಹಾಕೋರು ಹುಚ್ಚರು! ಛೆ! ಎಂತಾ ಜ್ಞಾನ ಶೂನ್ಯರಪ್ಪಾ ಈ ಜನ! ವಿಶಾಲಿ ಅತ್ತೆ ಬೇರೆ ಒಂದ್ಕಡೆ ಚಂದ್ರಾಳ ಮದುವೆಯ ಬಗ್ಗೆ ತನಗೆ ಯೋಚನೆಯೇ ಇಲ್ಲವೇನೋ ಅನ್ನೋ ಹಾಗೆ ಮಾತಾಡ್ತಾರೆ......'

ಅನಂತ ಎಷ್ಟೇ ಸಮಾಧಾನ ಮಾಡಲೆತ್ನಿಸಿದರೂ ಬಹಳ ಸಮಯದವರೆಗೆ ಕಲ್ಯಾಣಿ ಹಲುಬುತ್ತಲೇ ಇದ್ದಳು.

ದಿನವೊಂದು ಗಡಿಬಿಡಿ, ವಾರವೊಂದು ಕಲ್ಲು, ತಿಂಗಳಿಗೊಂದು ರಗಳೆ ಎಂದು ದಿನಗಳು ಸರಿಯುತ್ತಲೇ ಇದ್ದವು. ಇದ್ದಕ್ಕಿದ್ದ ಹಾಗೆಯೇ ಒಂದು ದಿನ ಬೆಳಿಗ್ಗೆ ವಿಶಾಲಿ ಅತ್ತೆ ಕರೆ ಮಾಡಿದರು.

"ಏನೇ ಕಲ್ಯಾಣಿ! ಎಲ್ಲ ಚೆನ್ನಾಗಿದ್ದೀರಾ? ಅಂತೂ ಚಂದ್ರಾಳಿಗೆ ವೈಭವದಿಂದ ಮದ್ವೆ ಮಾಡ್ಬಿಟ್ಟೆ! ತುಂಬಾ ಸಂತೋಷ ಕಣೆ!"

"ಎಲ್ಲ ನಿಮ್ಮ ಆಶೀರ್ವಾದ ಅತ್ತೆ! ಮದುವೆಗೆ ನೀವೂ ಬಂದಿದ್ದು ಎರಡು ಅಕ್ಷತೆ ಕಾಳು ಹಾಕಿ ಮದುಮಕ್ಕಳನ್ನ ಹರಸಿದ್ರೆ ಚೆನ್ನಾಗಿರೋದು."

"ಏನೇ ಮಾಡೋದು? ನಮ್ಮನ್ನ ಸಿಂಗಪೂರಿಗೆ ಕರಕೊಂಡು ಹೋಗಿ ಆರು ತಿಂಗಳು ಅಲ್ಲೇ ಕೂರಿಸ್ಕೊಂಡ್ಬಿಟ್ಟ ನನ್ನ ಮಗ! ನಿಮ್ಮನ್ನೆಲ್ಲ ನೋಡ್ಬೇಕು ಅನ್ನಿಸ್ತಿದೆ. ಬರೋ ಭಾನುವಾರ ನಾನೂ ನಿಮ್ಮಾವ ನಿಮ್ಮನೆಗೆ ಬರ್ತೀವಿ. ಹೇಗಿದ್ರೂ ರಜದಿನ. ಚಂದ್ರಾಳನ್ನ ಅವಳ ಗಂಡನ ಜೊತೆ ನಿಮ್ಮಲ್ಲಿಗೇ ಕರೆಸ್ಕೊಂಡು ಬಿಡು! ನಮಗೆ ಅಲೆದಾಟ ತಪ್ಪತ್ತೆ ನೋಡು! ಬಂದು ಆಶೀರ್ವಾದ ಮಾಡಿ ಹೋಗ್ತೀವಿ!" ವಿಶಾಲಿ ಅತ್ತೆ ಒಂದೇ ಉಸಿರಲ್ಲಿ ಪ್ರೋಗ್ರಾಮ್ ಖಚಿತ ಮಾಡಿಬಿಟ್ಟರು!

"ಭಾನುವಾರಾನಾ?"

"ಯಾಕೆ ಎಳೀತಿಯ? 'ಕಲ್ಲು' ಅಂತ ಹೊರಡ್ತಿಯೇನು?"

"ಅತ್ತೆ ಅದು ಬಂದು... ಚಂದ್ರಾ ಅವಳ ತಂದೆ ಜೊತೆ ರಂಗಶಂಕರಕ್ಕೆ ಹೋಗ್ತಾಳೆ! ನಾನು ಅಳಿಯಂದಿರ ಜೊತೆ ಶಾಸನ ನೋಡಕ್ಕೆ ಹೆಬ್ಬಾಳಕ್ಕೆ ಹೋಗ್ತಿದ್ದೀನಿ..."

"ಹಾ? ನಿನ್ನ ಹುಚ್ಚು ಅಳಿಯಂದ್ರಿಗೂ ಹಿಡಿಸ್ಬಿಟ್ಯಾ?"

"ಇಲ್ಲ ಅತ್ತೆ! ಅದು ಅವ್ರಿಗೆ ಮೊದ್ಲೇ ಇದ್ದದ್ದೇ! ಇಷ್ಟಕ್ಕೂ ಅವರು ನನಗೆ ಪರಿಚಯವಾದದ್ದೇ ಶಿಲಾ ಶಾಸನಗಳ ವೇದಿಕೆಯಲ್ಲೇ ಅಲ್ವೇ! ಹಾಲೋ... ಹಾಲೋ! ಅತ್ತೆ ಕೇಳಿಸ್ತಿದೆಯೇ?"

ಅತ್ತ ಕಡೆಯಿಂದ ಯಾವ ಶಬ್ದವೂ ಇಲ್ಲ! ಅತ್ತೆ ಮಾತು ಮರೆತರೋ ಇಲ್ಲ ಮೂರ್ಛೆ ಹೋದರೋ? ಆ ದೇವರೇ ಬಲ್ಲ!

■



# ಕನಸೆಂಬ ಕೌತುಕ ಲೋಕ...

**– ಕೆ.ವಿ. ರಾಜಲಕ್ಷ್ಮಿ**

ಅಕ್ಕ ಕೇಳವ್ವ, ನಾನೊಂದ ಕನಸ ಕಂಡೆ...

ಸಣ್ಣವಳಿದ್ದಾಗ ರೇಡಿಯೋದಲ್ಲಿ ಪಂಡಿತ ಮಲ್ಲಿಕಾರ್ಜುನ ಮನ್ಸೂರರ ದನಿಯಲ್ಲಿ ಕೇಳಿದ್ದ ಈ ವಚನದಲ್ಲಿ ನನ್ನನ್ನು ಸೆಳೆದದ್ದು 'ಕನಸು' ಎಂಬ ಪದ ಮಾತ್ರ. ಕನಸು ಎಂದರೇನು? ಅದು ಹೇಗೆ ಬರುವುದು ಎಂಬ ಗೊಂದಲಗಳಿಲ್ಲದ ಬಾಲ್ಯ. ಕ್ರಮೇಣ ಅವರಿವರ ಮಾತು, ಕಥೆಗಳಲ್ಲಿ ಕನಸಿನ ಬಗ್ಗೆ ಒಂದಷ್ಟು ಮಾಹಿತಿ ಕಿವಿಗೆ ಬೀಳುತಿದ್ದರೂ ಅಷ್ಟೊಂದು ಗಂಭೀರವಾಗಿ ಯೋಚನೆಗೆ ಬಿದ್ದಿರಲಿಲ್ಲ. ಆದರೆ ಸ್ವಲ್ಪ ಬುದ್ಧಿ ಬಂದ ಮೇಲೆ(!) ಇದರ ಬಗ್ಗೆ ಕುತೂಹಲ, ಆಸಕ್ತಿ ಎರಡೂ ಮೂಡ ತೊಡಗಿತ್ತು. ಬಹುಶಃ ನನಗೆ ನೆನಪಿರುವ ಮೊದಲ ಕನಸೆಂದರೆ ಯಾವುದೋ ಹಸು ನನ್ನನ್ನು ಅಟ್ಟಿಸಿಕೊಂಡು ಬಂದಿದ್ದು ನಾನು ಓಡಿಓಡಿ ತಪ್ಪಿಸಿಕೊಂಡದ್ದು, ಎಚ್ಚರವಾದಾಗ ಹೆದರಿ ಬೆವೆತಿದ್ದು.

'ಕನಸು ಎಂದರೆ?' ಎಂಬ ಜಿಜ್ಞಾಸೆಗೆ ಸಾಕಷ್ಟು ಉತ್ತರಗಳು ಸಿಗುತ್ತವೆ. ಮನೋ ವಿಜ್ಞಾನ, ಜ್ಯೋತಿಷ ವಿಜ್ಞಾನ, ಮತ್ತು ಲೋಕಾ ರೂಢಿಯಲ್ಲಿ ಸಾಕಷ್ಟು ವಿವರಣೆಗಳು ಸಿಗುತ್ತವೆ. ಸುಪ್ತಮನಸ್ಸಿನ ಭಾವನೆಗಳು, ಮಲಗಿದ್ದಾಗ ದೃಶ್ಯ ರೂಪಿಕೆಯಾಗಿ ಕಾಣಿಸಿಕೊಳ್ಳುವುದು, ಗಾಢವಾಗಿ ನೆನೆವುದೇ ಕನಸಲ್ಲಿ ಕಾಣುವುದು, ಸಂಬಂಧವೇ ಇಲ್ಲದ ಸಂಗತಿಗಳ ಗೋಚರ, ಇತ್ಯಾದಿ. ಈ ಕನಸುಗಳು ಭವಿಷ್ಯವನ್ನು ಸೂಚಿಸುತ್ತವೆಯೇ ಎಂಬುದಕ್ಕೂ ಸಾಕಷ್ಟು ಪುರಾವೆಗಳು ನಮ್ಮ ಪುರಾಣ, ಇತಿಹಾಸಗಳಲ್ಲಿ ಕಾಣಬಹುದು.

ಕನಸು ಎಂದ ಕೂಡಲೇ ಥಟ್ಟನೆ ಹೊಳೆಯುವುದು ವಾಲ್ಮೀಕಿ ರಾಮಾಯಣದ, ಸುಂದರ ಕಾಂಡದಲ್ಲಿ. (ತ್ರಿಜಟೆಯ ಸ್ವಪ್ನ, 27ನೇ ಸರ್ಗ). ಅಶೋಕ ವನದಲ್ಲಿ ಹೆದರಿ ಹೈರಾಣಾಗಿರುವ ಸೀತೆಗೆ, ಸುತ್ತುವರೆದ ರಾಕ್ಷಸೀ ಬಳಗ ಇನ್ನಷ್ಟು ಬೆದರಿಸುತ್ತಿರುವಾಗ, ನಿದ್ರಿಸುತ್ತಿದ್ದ ವೃದ್ಧ ರಾಕ್ಷಸಿ, ತ್ರಿಜಟೆ ಎಚ್ಚರಗೊಂಡು ತನ್ನ ಸ್ವಪ್ನ ವೃತ್ತಾಂತವನ್ನು ತಿಳಿಸಿ ರಾಕ್ಷಸರ ನಾಶ, ಸೀತೆಯ ಗಂಡನಿಗೆ ವಿಜಯವನ್ನು ಸೂಚಿಸುವುದು.

ಕನಸಿನಲ್ಲಿ ಆನೆ, ಹಸು, ಪರ್ವತ ಶಿಖರ, ವೃಕ್ಷಾರೂ ಹಣ, ಸೂರ್ಯ, ಚಂದ್ರ, ಸಿಂಹ, ಕರಡಿ ಇತ್ಯಾದಿ... ಇವುಗಳ ದರ್ಶನ ಶುಭಕರವೆಂದೂ ಒಂಟೆ, ಕೋಣ, ಕತ್ತೆ, ಮರ್ಕಟ ಇವು ಅಶುಭ ಸೂಚಕವೆಂದೂ ಅಲ್ಲಲ್ಲಿ ಓದಿ, ಕೇಳಿ ತಿಳಿದಿದ್ದೆ. ಜಾಂಬವಂತ ಓಕೆ ಹನುಮಂತ ಅಥವಾ ಸುಗ್ರೀವ ನಾಟ್ ಓಕೆ, ಯಾಕೆ? ಕೆಲವೆಲ್ಲ ತರ್ಕಾತೀತ ಅನ್ನಿಸುವುದೂ ಉಂಟು.

ಎಷ್ಟೋ ಆವಿಷ್ಕಾರಗಳು ಕನಸಿನ ಸಹಾಯ ಪಡೆದು ಆಗಿವೆಯೆಂದೂ, ಸಮಸ್ಯೆಗಳ ಪರಿಹಾರ ಕನಸು ತೋರಿರುವ ಪ್ರಸಂಗಗಳು ಸಾಕಷ್ಟಿವೆ. ನನಗೂ ಸಾಕಷ್ಟು ಕಥೆ, ಅವುಗಳ ಬೆಳವಣಿಗೆ–ಅಂತ್ಯಗಳ ಸುಳಿವು ಕನಸು ದಯಪಾಲಿಸಿದ್ದು ಇದೆ.



ಪುರಾಣವನ್ನು ಬದಿಗೊತ್ತಿದರೆ ನಮ್ಮ ಜೀವನದಲ್ಲೂ ಸಾಕಷ್ಟು ಭವಿಷ್ಯ ಸೂಚಕ ಕನಸುಗಳ ಬಗ್ಗೆ ಬಗೆಬಗೆಯ ಅನುಭವಗಳನ್ನು ಹಲವರಲ್ಲಿ ಕೇಳಿದ್ದೇನೆ. ಹಾಗೆ ನೆನಪಾಗುವುದೆಂದರೆ ನನ್ನ ಅಮ್ಮನಿಗೆ ಮೊದಲ ಮಗುವಾದಾಗ ಅವರಮ್ಮನಿಗೆ ಬಿದ್ದ

ಕನಸು. ಮಗು ಹುಟ್ಟಿದ ಮೂರನೇ ದಿನಕ್ಕೆ ಮಗುವನ್ನು ನೋಡಲು ಬರುತ್ತಿರುವ ಅಳಿಯನನ್ನು ರಸ್ತೆಯಲ್ಲೇ ತಡೆದ (ತೀರಿಕೊಂಡಿದ್ದ) ತಾತನವರು 'ಮಗು ಒಳ್ಳೆಯ ಸಮಯದಲ್ಲೇ ಹುಟ್ಟಿದೆ ಆದರೆ ಸ್ವಲ್ಪ ದೋಷವುಳ್ಳ ನಕ್ಷತ್ರ, ಶಾಂತಿ ಮಾಡಿಸಿ ಆ ಮೇಲೆ ಮಗುವನ್ನು ನೋಡಿ' ಎಂದಂತೆ ಕನಸಾಗಿದೆ. ತಟ್ಟನೆ ಎಚ್ಚರಗೊಂಡ ಅಜ್ಜಿ, ಮಗುವಿನ ನಕ್ಷತ್ರದ ಬಗ್ಗೆ ವಿಚಾರಿಸಿದಾಗ ತಿಳಿದದ್ದು ಮಗು ಅಭುಕ್ತ ಮೂಲದಲ್ಲಿ ಹುಟ್ಟಿ, ಶಾಂತಿಯಾದ ನಂತರವೇ ತಂದೆ ನೋಡಬಹುದಾದ ಅಸಹಾಯಕತೆ! ಹಾಗೆ ನೋಡಿದರೆ ನಮ್ಮ ಹಿರಿಯರ ಅನುಭವಗಳನ್ನು ಕ್ರೋಢೀಕರಿಸುವಾಗ ಶುಭವೋ ಅಶುಭವೋ ಕನಸಿನಲ್ಲಿ ಒಂದು ಇಂಗಿತ ಇದ್ದೇ  ಇರುತ್ತದೆ. ಮತ್ತೊಂದು ಕನಸು, ನನ್ನ ವೈದ್ಯ ಗೆಳತಿಗೆ ಗಂಡು ಮಗುವಾದಂತೆ. ಕೂಡಲೇ ಕರೆ ಮಾಡಿದೆ. 'ನಿಜ ಇಂದು ಬೆಳಿಗ್ಗೆ ಗಂಡು ಮಗು' ಎಂದಾಗ ಸಂತೋಷ ಇಮ್ಮಡಿಯಾಗಲು ಕಾರಣ ನನಗೆ ಆ ಸುದ್ದಿಯನ್ನು ಮೊದಲೇ ಕಾಣಿಸಿದ್ದ ಕನಸು!

ಮನೆಗೆ ಅಂಚೆಯಣ್ಣ ಪತ್ರವನ್ನು ಕೊಟ್ಟನೆಂದರೆ ಸಾವಿನ ಸುದ್ದಿ ಖಚಿತ ಎಂಬ ನಂಬಿಕೆ, ಹಾಗೇ ರೈಲಿನಲ್ಲಿ ಹೋಗುವುದು, ಊಟ ಮಾಡುವುದು, ಉತ್ಸವ ಮೂರ್ತಿಯ ದರ್ಶನ ಶುಭ ಸೂಚಕಗಳಲ್ಲ. ತಮಾಷೆಯೆಂದರೆ ಅಂಚೆಯಣ್ಣನ ವಿಷಯ ನನ್ನನ್ನು ಕೊಂಚ ಚಿಂತಿಸುವಂತೆ ಮಾಡಿದ್ದು, ಕೇವಲ ಪತ್ರ ಮುಖೇನ ವ್ಯವಹಾರಗಳು ನಡೆಯುವ ಕಾಲಘಟ್ಟ– ನಾನು ಚಿಕ್ಕ ಪುಟ್ಟ ಕಥೆ, ಹಾಸ್ಯಗಳನ್ನು ಬರೆಯುತ್ತಿದ್ದೆ, ಒಂದೋ ಪತ್ರಿಕೆಗಳಿಂದಲೇ ಅಥವಾ ಅಭಿಮಾನಿ ಓದುಗ ವರ್ಗದಿಂದ ಲೋಪತ್ರಗಳು ನಿಯಮಿತವಾಗಿ ಬರುತ್ತಲೇ ಇತ್ತು. ನಿರೀಕ್ಷೆಯಿದ್ದಾಗ ಪತ್ರಬಂದಂತೆ ಕನಸು ಬಿದ್ದದ್ದೂ ಇದೆ, ಅಷ್ಟರ ಮಟ್ಟಿಗೆ ಮನಸ್ಸು ಈ ತೆರನಾದ ಕನಸನ್ನು ಸ್ವೀಕರಿಸುವಷ್ಟು ಗಟ್ಟಿಯಾಗಿತ್ತು. ಪಿಯುಸಿ ಓದುವಾಗ ಸಾಕಷ್ಟು ತಯಾರಿ ಮಾಡಿಕೊಂಡು ಪರೀಕ್ಷೆಗೆ ಹೊರಟರೂ ನಿಗದಿತ ಸಮಯಕ್ಕೆ ತಲುಪಲಾಗದೇ ಬಿಕ್ಕಿದ್ದೆ. ಅದು ಕನಸು ಎಂದು ತಿಳಿದಾಗ ನಿರಾಳವಾಗಿದ್ದೆ ಪರೀಕ್ಷೆಗಳು ಕಳೆದು ವಾರದ ಮೇಲೆ ಹೀಗೊಂದು ಹೆದರಿಸಿದ್ದ ಕನಸು!

ಕೆಲವು ಕನಸುಗಳು ಬಿದ್ದರೆ ಧನಲಾಭ ಗ್ಯಾರಂಟಿ ಎಂದು ಓದಿರುವೆ. ಅವುಗಳಲ್ಲಿ ಒಂದೆರಡು ಮಲ, ರಕ್ತಗಳ  ದರ್ಶನವಾದರೆ! ಛೇ, ಹೊಲಸು ಅನ್ನಿಸೀತು– ಆದರೆ ನನ್ನ ಮಟ್ಟಿಗೆ ನೂರಕ್ಕೆ ನೂರು ನಿಜ. ಹಾಗೆ ಕನಸು ಕಂಡ ದಿನಗಳಲ್ಲಿ, ಕನಿಷ್ಠ ಐದೋ ಹತ್ತೋ ರೂಪಾಯಿಯ ಡಿವಿಡೆಂಟ್, ಗೌರವ ಸಂಭಾವನೆಯಾಗಿ ಚೆಕ್, ಸಣ್ಣ ಪ್ರಮಾಣವಾದರೆ ಮನಿಯಾರ್ಡರ್ ಹೀಗೆ ಏನಾದರೊಂದು ಸಿಕ್ಕಿರುತ್ತದೆ. ಹೀಗಾಗಿ ಅಂತಹ ಕನಸುಗಳನ್ನು ಕಾಣುವಾಗ, ಹೇಸಿಗೆಯನ್ನು ಕಂಡು ಅಸಹ್ಯವಾದರೂ, ಎಚ್ಚರವಾದ ಮೇಲೆ ಧನಾ ದೇಶದ ಒಂದು ಕುತೂಹಲ  ಉಳಿಸಿ, ತುಸು ಸಡಗರ ನೀಡುವುದು ನಿಜ. ಮತ್ತೂ ಕೆಲವು ಹಿತವಾದ ಅನುಭೂತಿ ನೀಡುತ್ತಿರುವ ಸಮಯದಲ್ಲೇ, ಮೆಲು ಎಚ್ಚರಗೊಂಡಾಗ, ಇನ್ನಷ್ಟು ಸವಿಯುವ ಮನಸ್ಸಿನಿಂದ ಮತ್ತೆ ಕಣ್ಮುಚ್ಚಿ ಕನಸಿನ ಲೋಕಕ್ಕೆ ತೆರಳುವ ಪ್ರಯತ್ನವನ್ನೂ ಮಾಡಿಸುವುದು.



ಯಾರೋ ಸತ್ತಂತೆ ಕನಸು ಬಿದ್ದಾಗ ಹಾಗೆ ಸತ್ತವರ ಆಯಸ್ಸು ಜಾಸ್ತಿ ಎಂಬ ನಂಬಿಕೆಯೂ ಇದೆ. ಕನಸಿನಲ್ಲಿ ಕೂದಲು ಬೆಳ್ಳಗಾದರೆ ಅಥವಾ ಉದುರಿದರೆ, ಹಲ್ಲುಗಳು ಬಿದ್ದಂತೆ ಅನ್ನಿಸಿದರೆ ಗ್ಯಾರಂಟಿ ಅಶುಭ ವಾರ್ತೆಯನ್ನು ನಿರೀಕ್ಷಿಸಬಹುದು.

ಆದರೆ ಕೂದಲು ಕತ್ತರಿಸಿಕೊಳ್ಳಲು ಪ್ಲಾನ್ಮಾಡಿರುವ ಸುಂದರಿ, ಹಲ್ಲನ್ನು ಕೀಳಿಸಿಕೊಳ್ಳಲು ತಯಾರಿರುವ ಮಂದಿ ಹೀಗೆ ಕನಸು ಕಂಡಾಗ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ ಅಲ್ಲವೇ? ಹಾಗೆಯೇ, ಪರಿಚಿತರು, ಸಂಬಂಧಿಗಳು ಸತ್ತ ಕೆಲವೇ ತಿಂಗಳುಗಳಲ್ಲಿ ಕನಸಲ್ಲಿ ಕಂಡಾಗ ಹೆದರಿ ಬೆವರಿದ್ದೂ ಇದೆ. ಒಂದೆರಡು ಕನಸಿನಲ್ಲಿ ಸತ್ತ ವ್ಯಕ್ತಿಯೊಂದಿಗೆ ಮಾತನಾಡುವಾಗ, 'ಅರೆ ಇವರು ಈಗ ಇಲ್ಲವಲ್ಲ' ಎಂದು ಜಾಗೃತಳಾದ ಪರಿ, ಯೋಚಿಸುವಾಗ ಅಚ್ಚರಿ ಎನ್ನಿಸುತ್ತದೆ. ಅಂದರೆ, ಕನಸು ಕಾಣುವಾಗ ಪೂರ್ತಿ ಆ ಲೋಕಕ್ಕೆ ಜಾರಿದಾಗಲೂ, ಜಾಗೃತ ಮನಸ್ಸು ವಾಸ್ತವವನ್ನು ತಿಳಿಸುವುದು ಅಚ್ಚರಿಯೇ ಸರಿ.

ಸ್ವಲ್ಪ ಗಂಭೀರವಾಗಿ ಯೋಚಿಸಿದರೆ, ಮನುಷ್ಯ ಕನಸು ಕಾಣಬೇಕು, ಕಂಡ ಕನಸು ನನಸಾಗುವಲ್ಲಿ ಪಯಣಿಸಬೇಕು. ನಿದ್ದೆಯಲ್ಲಿ ಕಾಣುವುದು ಕನಸಲ್ಲ. ಯಾವ ಕನಸು ನಮ್ಮನ್ನು ನಿದ್ರಿಸುವುದಕ್ಕೆ ಬಿಡುವುದಿಲ್ಲವೋ ಅದೇ ಕನಸು ಎಂದು ಕನಸಿನ ಮೌಲ್ಯವನ್ನು ಸೂಚಿಸಿದ್ದಾರೆ ಡಾ. ಕಲಾಂ ಸರ್. ಇಲ್ಲಿ ಕನಸು ಒಂದು ಗುರಿಯನ್ನಷ್ಟೇ ಪ್ರತಿಪಾದಿಸುತ್ತದೆ. ಮನೆ, ಉತ್ತಮ ನೌಕರಿ, ಪದೋನ್ನತಿ, ಐಷಾರಾಮಿ, ಒಳ್ಳೆಯ ದಾಂಪತ್ಯ, ಹೀಗೆ ಜೀವನದ ವಿವಿಧ ಘಟ್ಟಗಳಲ್ಲಿ ಕನಸು ಕಾಣುವುದು ಒಂದು ರೀತಿ ಗೋಲ್ ಸೆಟ್‌ನಂತೆ ಆಗುತ್ತದೆ. ನಾನು ಕೆಲಸಕ್ಕೆ ಸೇರಿದ ಹೊಸತು, ಹಾಜರಾತಿಯಲ್ಲಿ ಹಸಿರು ಶಾಯಿಯಲ್ಲಿ ಸಹಿ ಮಾಡುತ್ತಿದ್ದೆ. ಮೂರ್ನಾಲ್ಕು ದಿನಗಳ ನಂತರ ನನ್ನ ವಿಭಾಗದ ಮೇಲ್ವಿಚಾರಕರು 'ಮೇಡಂ, ಹಸಿರು ಶಾಯಿಯನ್ನು ಗೆಜೆಟೆಡ್ ಅಧಿಕಾರಿಗಳು ಮಾತ್ರ ಬಳಸಬಹುದು. ನೀವು ಬಳಸಬಾರದು ಎಂದು ತಿಳಿಹೇಳಿದಾಗ ಒಮ್ಮೆಲೇ ಮನಸ್ಸು ಮುದುರಿತ್ತು. ಆಗ ಶುರುವಾಗಿತ್ತು ಹಸಿರು ಇಂಕ್ ಬಳಸುವ ಕನಸು. ಹದಿನಾಲ್ಕು ವರ್ಷಗಳು ಕಳೆದ ಮೇಲೆ ನನಗೂ ಆ ಭಾಗ್ಯ ಸಿಕ್ಕಿತು. ಹಾಗೊಂದು ಕನಸು ಕಾಣದಿದ್ದರೆ ಗಮ್ಯ ತಲುಪುವ ಪ್ರಮೇಯವೆಲ್ಲಿ ಬರಬೇಕು? ಅಲ್ಲವೇ?

ಕನಸುಗಳ ಕುರಿತಾದ ಆಗಾಗ ನೆನಪಿಗೆ ಬರುವುದೆಂದರೆ 'ಒಂದು ಒಗಟು ಮತ್ತೊಂದು ರಾಜ, ವಿದೂಷಕನ ಕತೆ. ಒಗಟಿನಲ್ಲಿ, ಕಾವಲುಗಾರ, ಆಗಷ್ಟೇ ಪ್ರಯಾಣಕ್ಕೆ ಸಿದ್ಧನಾದ ಮಾಲೀಕನನ್ನು ತಡೆದು' ಇಂದಿನ ಪ್ರಯಾಣ ಅವಘಡದಲ್ಲಿ ಮುಗಿಯುವುದಾಗಿ ಕನಸು ಕಂಡದ್ದರಿಂದ ಹೋಗಬಾರದಾಗಿ ಬಿನ್ನವಿಸಿಕೊಳ್ಳುತ್ತಾನೆ. ಆ ಕನಸಿನಂತೆಯೇ ಮಾಲೀಕ ಹೋಗಬೇಕಾಗಿದ್ದ ವಿಮಾನ ಅವಘಡಕ್ಕೀಡಾಗುತ್ತದೆ ಆದರೂ ಕಾವಲುಗಾರನನ್ನು ಕೆಲಸದಿಂದ ವಜಾ ಮಾಡುತ್ತಾನೆ ಮಾಲೀಕ. ಮೇಲ್ನೋಟಕ್ಕೆ ಒಳ್ಳೆಯದು ಮಾಡಿದ ಕಾವಲುಗಾರನಿಗೆ ಈ ಶಿಕ್ಷೆಯೇ ಅನ್ನಿಸಿದರೂ ನಿಜ ಅರ್ಥದಲ್ಲಿ, ಎಚ್ಚರದಿಂದ ಕಾವಲು ಕಾಯಬೇಕಾದವ ನಿದ್ರಿಸಿದ್ದು ಅಕ್ಷಮ್ಯ! ಇನ್ನು ವಿದೂಷಕ, ರಾಜನ ಕಥೆಯಲ್ಲಿ ರಾಜ, ವಿದೂಷಕನ ಕಾಲೆಳೆಯಲು' ತನ್ನ ಮೈಯೆಲ್ಲಾ ಜೇನು ಲೇಪಿತವಾದಂತೆಯೂ, ವಿದೂಷಕನ ಮೈಯೆಲ್ಲಾ ಹೊಲಸು ಲೇಪಿಸಿದಂತೆಯೂ ಕನಸು ಕಂಡದ್ದಾಗಿ ಹೇಳಿದಾಗ ಕೂಡಲೇ ಆವಿದೂಷಕ, ಅರೆ, ಅದೇ ರೀತಿಯ ಕನಸು ತನಗೂ ಬಿದ್ದುದಾಗಿಯೂ, ಮುಂದುವರೆದು, ರಾಜನ ಮೈ ಗಂಟಿದ ಜೇನು ತಾನು ನೆಕ್ಕಿದ್ದಾಗಿಯೂ ತನ್ನ ಮೈ ಗಂಟಿದ್ದನ್ನು ರಾಜ ನೆಕ್ಕಿದ್ದಾಗಿಯೂ ಕನಸು ಬಿತ್ತೆಂದು' ಹೇಳಿ ತನ್ನ ಜಾಣ್ಮೆಯನ್ನು ಪ್ರದರ್ಶಿಸಿದನೆಂಬ ವಿನೋದದ ತುಣುಕು!



ದೃಶ್ಯ ಮಾಧ್ಯಮದಲ್ಲೂ ಕನಸಿನ ನಯನ ಮನೋಹರ ದೃಶ್ಯಗಳನ್ನು ನಾಯಕ, ನಾಯಕಿಯರ ಕಂಗಳಲ್ಲಿ ಕಾಣಿಸುವುದು ಸೋಜಿಗವೇ! ನಿಜ ಜೀವನದಲ್ಲಿ ಗೆದ್ದು ಕನಸಿನಲ್ಲಿ ಸಾಕಾರಗೊಳ್ಳುವ ಪ್ರಯತ್ನ, ಪ್ರೇಕ್ಷಕನಿಗೆ ರಸದೌತಣ! ಸಣ್ಣವರಿದ್ದಾಗ ಹೊಡೆದಾಟಗಳ ಸಿನೆಮಾ ನೋಡಿ ಅಥವಾ ಕ್ರೀಡೆಗಳನ್ನು ಗಮನಿಸಿ ರಾತ್ರಿ ಪಕ್ಕದಲ್ಲಿ ಮಲಗಿದವರಿಗೆ ಕೈಕಾಲುಗಳಿಂದ ಧಾರಾಳವಾಗಿ ಬೀಸಿರುವ ಪೋರರ ಕನಸಿನ ದೃಷ್ಟಾಂತಗಳು ನಮ್ಮಲ್ಲೇ ಸಿಗುತ್ತವೆ. ಇನ್ನು, ಕಿರುತೆರೆಯ ಧಾರಾವಾಹಿಗಳಲ್ಲಂತೂ ನಿರ್ಣಾಯಕ ಹಂತಕ್ಕೆ ಬಂದು ಏನೋ ತಿರುವು ಕಂಡಿತು ಎಂದು ಪ್ರೇಕ್ಷಕ ನಿಟ್ಟುಸಿರು ಬಿಡುವಷ್ಟರಲ್ಲಿ 'ಅದು ಕನಸು' ಎಂದು ಮೂರ್ಖರನ್ನಾಗಿಸಿ ಮುಂದೆ ಸಾಗುತ್ತದೆ. ಹೀಗಾಗಿ ಧಾರಾವಾಹಿಗಳನ್ನು ನೋಡುವಾಗ, ಕಥೆ ಟ್ರ್ಯಾಕ್ನಲ್ಲಿದೆ ಎಂದಾಗ ಅದು ಖಂಡಿತ ಕನಸಿನ ದೃಶ್ಯವೇ ಇರಲಿಕ್ಕೆ ಸಾಕು ಎಂದು ಬಾಜಿ ಕಟ್ಟಬಹುದು ಇಲ್ಲವಾದರೆ ಅಷ್ಟು ಬೇಗ ಕುತೂಹಲ ತಣಿಸಿ, ಮುಗಿಸಿದರೆ ಮೆಗಾ ಧಾರಾವಾಹಿ ಎಂಬ ಪದವೇ ಅರ್ಥಹೀನವಾಗದೆ?

ನಿದ್ರಿಸುವ ಮೊದಲು ಸಾಂಪ್ರದಾಯಿಕವಾಗಿ, 'ರಾಮ ಸ್ಕಂದಂ ಹನುಮಂತಂ' ಶ್ಲೋಕವನ್ನು ಹೇಳಿಕೊಂಡು ಮಲಗಿದರೆ, ದುಃಸ್ವಪ್ನಗಳು ಇಲ್ಲವಾಗುತ್ತವೆ, ಸುಖ ನಿದ್ರೆಗೆ ಅಡ್ಡಿಯಿಲ್ಲ ಎಂಬ ನಂಬಿಕೆ.

(ಹಾಗೆ ಮಾಡದೇ, ಒಮ್ಮೆ ಕೆಟ್ಟ ಕನಸು ಕಂಡು ಎಚ್ಚರವಾದ ಕೂಡಲೇ ಈ ಶ್ಲೋಕವನ್ನು ನೆನೆದು ಮಗ್ಗುಲು ಬದಲಿಸಿದ್ದೆ), ಏನಾದರಾಗಲಿ ಒಳ್ಳೆಯ ಕನಸು ಕಾಣೋಣ, ಅದಕ್ಕೇನು ಕಾಸು ಕೊಡಬೇಕಿಲ್ಲ, ಒಳ್ಳೆಯ ಕಲ್ಪನೆ, ಚಿಂತನೆ ಇದ್ದರೆ ಸಾಕು, ಅಲ್ಲವೇ!

*****



# ನಾನು ನಾನೇನಾ?

**– ಶ್ರೀಧರ ಬಾಣಾವರ**

ಈ ಪ್ರಶ್ನೆ ಏಕೆ ಉದ್ಭವಿಸಿತು ಎಂಬ ಕುತೂಹಲ ನಿಮಗಿರಬಹುದು, ಇಲ್ಲದಿರಬಹುದು. ಆದರೆ ಇತ್ತೀಚೆಗೆ ನನ್ನ ಅನಾರೋಗ್ಯ, ಹಣಕಾಸಿನ ಸಮಸ್ಯೆಗಳಿಗಿಂತಲೂ ನನ್ನನ್ನು ಹೆಚ್ಚು ಕಾಡುತ್ತಿರುವುದು ಈ ಪ್ರಶ್ನೆ. ಇದರ ಮೂಲ ಹುಡುಕಿಕೊಂಡು ಹೋದರೆ ನನಗೆ ನೆನಪಾಗುವ ಮೊದಲ ಘಟನೆ ರೈಲಿನಲ್ಲಿ ನಡೆದದ್ದು. ಗ್ರಾಮೀಣ ಬ್ಯಾಂಕಿನ ಗ್ರಾಮೀಣ ಶಾಖೆಯಲ್ಲಿ ಸೇವೆ ಸಲ್ಲಿಸಿ ಅದರ ಕೇಂದ್ರ ಕಚೇರಿಗೆ ವರ್ಗವಾಗಿತ್ತು. ಕೇಂದ್ರ ಕಚೇರಿಯಲ್ಲಿ ಕುಳಿತು ಶಾಖೆಗಳ ಮೇಲೆ ದಬ್ಬಾಳಿಕೆ ನಡೆಸಬಹುದೆಂಬ ನಿರೀಕ್ಷಣೆಗೆ ಬದಲಾಗಿ ಶಾಖೆಗಳಲ್ಲಿ ಹೊಂದಾಣಿಕೆಯಾಗದ ಲೆಕ್ಕಗಳ ಸಮಸ್ಯೆಯನ್ನು ಪರಿಹರಿಸಲು ನಾನು ಸೂಕ್ತನೆಂದು ಭಾವಿಸಿದ ನನ್ನ ಮೇಲಧಿಕಾರಿಗಳು ನನ್ನನ್ನು ಒಂದಾದ ಮೇಲೆ ಒಂದರಂತೆ ಬೇರೆ ಬೇರೆ ಶಾಖೆಗಳಿಗೆ ಅಟ್ಟತೊಡಗಿದರು. ಹೀಗಾಗಿ ನಾನು ಹೋಗಬೇಕಾದ ಶಾಖೆಗಳೆಲ್ಲವೂ ಕುಗ್ರಾಮಗಳೇ ಆಗಿದ್ದು, ಅಲ್ಲಿಗೆ ತಲುಪಲು ಹರಸಾಹಸ ಪಡಬೇಕಾಗಿತ್ತು. ಮುಂಚೆ ಸ್ವಲ್ಪ ಹೆಚ್ಚುಕಾಲ ಕೆಲಸ ಮಾಡಿದ್ದ ಶಾಖೆಯೂ ಇದಕ್ಕೆ ಹೊರತಾಗಿರಲಿಲ್ಲ. ರೈಲು, ಬಸ್ಸು,ಲಾರಿ, ಸೈಕಲ್, ಕಾಲ್ನಡಿಗೆ, ಎತ್ತಿನ ಗಾಡಿ ಸದ್ಯ ಯಾರ ಹೆಗಲ ಮೇಲೋ ಕೂಸುಮರಿ ಮಾಡಿಕೊಂಡು ಹೋಗಬೇಕಾದ ಪ್ರಸಂಗವೊಂದು ಬಂದಿರಲಿಲ್ಲ–ಇವು ನನ್ನ ಸಂಚಾರ ಸಾಧನಗಳಾಗಿದ್ದವು. ಇಂತಹ ಪ್ರಸಂಗವೊಂದರಲ್ಲಿ ಕುಗ್ರಾಮವೊಂದಕ್ಕೆ ತಲುಪಲು ಮೈಸೂರಿನಿಂದ ಬೆಳಗಿನ ರೈಲಿನಲ್ಲಿ ಕೆ ಆರ್ ನಗರದ ಕಡೆಗೆ ಪ್ರಯಾಣಿಸಿದ ಸಂದರ್ಭ. ಅಂದು ಮಾರ್ಗದಲ್ಲಿ ಬರುವ ಡೋರನಹಳ್ಳಿಯ ಕ್ರಿಸ್ತಸ್ವಾಮಿಯ ಜಾತ್ರೆಯ ದಿನ. ರೈಲಿನಲ್ಲಿ ಅಸಾಧ್ಯ ನೂಕುನುಗ್ಗಲು. ಹೇಗೋ ಒಂದು ಜಾಗ ಹಿಡಿದು ಪುಸ್ತಕವನ್ನೋ ಪತ್ರಿಕೆಯನ್ನೋ ಓದುತ್ತಾ ಕುಳಿತಿದ್ದೆ. ಎದುರು ಸೀಟಿನಲ್ಲಿ ಕುಳಿತಿದ್ದ ಕುಟುಂಬದ ಹಲವರು ಪರಸ್ಪರ ಗುಸಪಿಸ ಮಾಡುತ್ತಾ ಪದೇಪದೇ ನನ್ನ ಮುಖವನ್ನೇ ನೋಡುವುದು ನಡೆದಿತ್ತು. ನನ್ನ ಮುಖವನ್ನೇ ಅವರೆಲ್ಲಾ ನೋಡುತ್ತಿದ್ದ ಕಾರಣ ನನ್ನ ಗಡ್ಡ ಭರಿತ ಮುಖದ ಮೇಲೆ ಏನೋ ವಿರೂಪ ಕಾಣುತ್ತಿರಬಹುದೆಂದು ಪದೇ ಪದೇ ಒರೆಸಿಕೊಳ್ಳುವುದೂ, ಜೇಬುಬಾಚಣಿಗೆಯಿಂದ ಗಡ್ಡ ಬಾಚಿಕೊಳ್ಳುವುದೂ ಮಾಡಿಕೊಳ್ಳುತ್ತಿದ್ದೆ. ಎದುರಿನವರ ಗುಸುಗುಸು ಪಿಸುಪಿಸು ಹೆಚ್ಚಾಗುತ್ತಿತ್ತು. ಕೆಲ ಸಮಯದ ನಂತರ ನಾನೇ ಸ್ಥಳ ಬದಲಾಯಿಸಿ ಪಕ್ಕದ ಭಾಗಕ್ಕೆ ಹೋಗಿ ಕುಳಿತೆ. ಹಿಂದಿನ ಸೀಟಿನಲ್ಲಿದ್ದ ಗುಂಪಿನ ಒಬ್ಬ ಯುವಕ ಅಲ್ಲಿಗೂ ನನ್ನ ಬಳಿಗೆ ಬಂದು ನನ್ನ ಪೂರ್ವಾಪರ ವಿಚಾರಿಸ ತೊಡಗಿದ. ಹೆಚ್ಚು ವಿವರ ಕೊಡದೇ ಹಾಂ ಹೂಂ ನಲ್ಲೇ ಇದ್ದೆ. ನಂತರ ಅವನು ತಿಳಿಸಿದ ವಿಷಯ ಕೇಳಿ ಶಾಕ್ ಆಯಿತು. ಆ ಕುಟುಂಬದ ಹದಿಹರೆಯದ ಹುಡುಗನೊಬ್ಬ ಹಲವು ವರ್ಷಗಳ ಹಿಂದೆ ಮನೆ ಬಿಟ್ಟು ಓಡಿಹೋಗಿದ್ದನಂತೆ. ಎಷ್ಟು ಹುಡುಕಿದರೂ ಇನ್ನೂ ಸಿಕ್ಕಿಲ್ಲವಂತೆ. ಆ ಹುಡುಗನ ಚಹರೆಗಳು ನನ್ನ ಚಹರೆಗೆ ಹೋಲಿಕೆಯಾಗುತ್ತಿದ್ದವಂತೆ. ಹಾಗಾಗಿ ಓಡಿಹೋಗಿದ್ದ ಆ ಹುಡುಗನೇ ನಾನು ಅಂತ ಅವರೆಲ್ಲ ತೀರ್ಮಾನಿಸಿ ಬಿಟ್ಟಿದ್ದರಂತೆ. ನನ್ನನ್ನು ಕೇಳಲು ಹಿಂಜರಿಕೆಯಾಗಿ ನಾನು ಇಳಿಯುವಾಗ ನನ್ನನ್ನು ಎತ್ತಿಹಾಕಿಕೊಂಡು ಹೋಗುವ ಸ್ಕೆಚ್ ಹಾಕಿದ್ದರಂತೆ. ಈಗ ನನ್ನ ಬಳಿಗೆ ಬಂದ ಯುವಕ ಸ್ವಲ್ಪವಿವೇಚನೆಯಿಂದ ಅವರನ್ನು ತಡೆದು ಹೇಗಾದರಾಗಲಿ ಆ ಅನುಮಾನಿತ ವ್ಯಕ್ತಿ ನಾನೇ ಎಂದು ಖಚಿತಪಡಿಸಿಕೊಳ್ಳಲು ಬಂದಿದ್ದನಂತೆ. ಘಾಬರಿಯಿಂದ ಕಂಗಾಲಾಗಿದ್ದ ನಾನು ಮುಂದಿನ ನಿಲ್ದಾಣದಲ್ಲಿ ರೈಲಿಂದ ಹಾರಿ ಎದುರು ದಿಕ್ಕಿನಲ್ಲಿ ಬಂದ ರೈಲುಗಾಡಿಯಲ್ಲಿ ಮೈಸೂರಿಗೆ ಮರಳಿ



ರೂಮ್ ಸೇರಿಕೊಳ್ಳುವವರೆಗೆ ನಾನು ನಾನಾಗಿರಲಿಲ್ಲ.

ಎಲ್ಲ ಘಟನೆಗಳೂ ಘಾಬರಿ ಹುಟ್ಟಿಸುವಂತೆಯೇ ಇರುತ್ತಿರಲಿಲ್ಲ. ನನ್ನ ಮದುವೆಯಾದ ಸಂದರ್ಭದಲ್ಲಿ ನನ್ನ ಹೆಂಡತಿಯ ಮನೆಯವರು ಅದರಲ್ಲೂ ನನ್ನ ನಾದಿನಿಯರು ನನ್ನನ್ನು ಕೋಕಿಲ ಸಿನಿಮದ ನಾಯಕನಂತೆ ಕಾಣುತ್ತೇನೆಂದು ಹೇಳಿ ಖುಷಿಪಡುತ್ತಿದ್ದರೆ ನಾನೂ ಖುಷಿಪಡುತ್ತಿದ್ದುದು ತಪ್ಪೆನಿಸುತ್ತಿರಲಿಲ್ಲ.

ಎಲ್ಲಕ್ಕೂ ಮುಖ್ಯವಾಗಿ ಇಂದಿನವರೆಗೂ ಬೆನ್ನು ತಟ್ಟಿಕೊಳ್ಳಬಹುದಾದ ನಾನು ನಾನಲ್ಲದ ಪ್ರಸಂಗವೆಂದರೆ, ನನ್ನ ಹಲವು ಸಹೋದ್ಯೋಗಿಗಳು ನನ್ನನ್ನು ಕನ್ನಡದ ಸುಗಮ ಸಂಗೀತ ಸಂಯೋಜಕ, ಗಾಯಕನಂತೆ ಕಾಣುತ್ತೇನೆಂದು ಗುರ್ತಿಸತೊಡಗಿದ್ದುದು. ತಲೆ ಕೂದಲು ಮೀಸೆ ಬೆಳ್ಳಗಾಗಿದ್ದು ಸ್ವಲ್ಪಹೊತ್ತಿಗೆ ಕೆದರಿ ಹೋಗುತ್ತಿದ್ದುದು, ಆಗಾಗ್ಯೆ ಜುಬ್ಬಾಧಾರಿಯಾಗುತ್ತಿದ್ದುದು, ನನ್ನ ನಗುವಿನ ಅಥವಾ ಸೀರಿಯೆಸ್ ಮುಖಭಾವವೂ ಈ ಅಭಿಪ್ರಾಯಕ್ಕೆ ಕಾರಣವಾಗಿದ್ದಿರಬಹುದು. ಇದರ ಕ್ಲೈಮ್ಯಾಕ್ಸ್ ನಡೆದದ್ದು ಈಗ ಮೂರ್ನಾಲ್ಕು ವರ್ಷಗಳ ಹಿಂದೆ.ನಿವೃತ್ತನಾಗಿರುವ ನಾನು ಅಲ್ಲಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಾಜರಿ ಹಾಕುತ್ತಿದ್ದೆ. ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ ಸುಗಮ ಸಂಗೀತ ಸಮ್ಮೇಳನಕ್ಕೆ ಎರಡು ದಿನ ಹಾಜರಿ ಹಾಕಿದ್ದೆ. ಒಂದು ಸಂಜೆ ಆ ಕಾರ್ಯಕ್ರಮದಲ್ಲಿ ಸ್ವಲ್ಪ ಮುಂದಿನ ಆಸನದಲ್ಲಿ ಕುಳಿತಿದ್ದೆ. ನಾನು ಮೇಲೆ ಹೇಳಿದ ಖ್ಯಾತ ಗಾಯಕರಂತೆಯೇ ಕಾಣುತ್ತೇನೆಂದುಕೊಂಡಿದ್ದ ವ್ಯಕ್ತಿಯ ಅತಿ ಮುಖ್ಯ ಶಿಷ್ಯರೊಬ್ಬರು ನನ್ನ ಬಳಿ ಬಂದು ಹೀಗೆಂದರು. " ಸಾರ್, ನೀವು ನಮ್ಮ ಫೇಟ್ ನಮ್ಮ ಗುರುಗಳಂತೆಯೇ ಕಾಣ್ತೀರಿ" ಎಂದು ಹೇಳಿದ್ದೇ ಅಲ್ಲದೇ ಅವರ ಅಧ್ಯಕ್ಷರ ಬಳಿಗೆ ಕರೆದೊಯ್ದು ಅವರಿಗೂ ಪರಿಚಯಿಸಿದರು. ನಂತರ ವೇದಿಕೆಯ ಹಿಂಬದಿಗೆ ಕರೆದೊಯ್ದು ಅಲ್ಲಿದ್ದ ಸಹ ವಾದ್ಯಗಾರರು, ಸಹ ಗಾಯಕರುಗಳಿಗೂ ಇದೇ ರೀತಿ ಪ್ರವರದೊಂದಿಗೆ ಪರಿಚಯಿಸಿದರು. ಇದೆಲ್ಲ ನನಗೆ ಕನಸೋ ಎಂಬಂತೆ ಕಂಡಿತ್ತು. ಇತ್ತೀಚೆಗೆ ನಮ್ಮ ಮನೆಯ ಮಗುವೊಂದು ಅದೇ ಖ್ಯಾತ ಗಾಯಕರನ್ನು ಟಿ ವಿ ಪರದೆಯ ಮೇಲೆ ಕಂಡಾಗ ಅವರಜ್ಜಿಗೆ " ಅಮ್ಮಮ್ಮಾ , ಅಲ್ಲಿ ನೋಡು ಶ್ರೀಧರ ತಾತಾ ಟೀವೀಲಿ ಹಾಡೇಳ್ತಾ ಇದಾರೆ" ಅಂತಂತೆ. ಇಂತಹ ಸಮಯದಲ್ಲೆಲ್ಲಾ ನಾನು ನಾನಲ್ಲವೇನೋ? ಎಂಬ ಪ್ರಶ್ನೆ ಏಳುತ್ತದೆ.

ಇನ್ನು ದಿನವೂ ನಾನು ವಾಯು ವಿಹಾರಕ್ಕೆ ಹೋಗುವ ಉದ್ಯಾನದಲ್ಲೂ ಆಗಾಗ್ಗೆ ಇದೇ ರೀತಿ ನನ್ನನ್ನು ಬೇರೆ ಬೇರೆಯವರಾಗಿ ಗುರುತಿಸಿ ಪ್ರಶ್ನೆ ಕೇಳಿದಾಗಲೆಲ್ಲಾ ನಾನು ನಾನಲ್ಲವೇನೋ? ಎಂಬ ಅನುಮಾನ ಮೂಡುತ್ತದೆ. "ಸಾರ್, ನೀವು ಮಧುಗಿರಿಯಲ್ಲಿ ತಹಶೀಲ್ದಾರ್ ಆಗಿದ್ದಾಗ ನನಗೆ ಯಾವುದೋ ಕೆಲಸ ಮಾಡಿಕೊಟ್ಟಿದ್ದಿರಿ" ಅಂತಲೋ "ನೀವು ಮಡಕೇರಿಯಲ್ಲಿ ತಾಲ್ಲೂಕ್ ಪಂಚಾಯಿತಿ ಸಿ ಇ ಓ ಆಗಿದ್ದ ಗೋಪಾಲ ರೆಡ್ಡಿ ಅಲ್ವಾ ಸಾರ್" ಎಂಬ ಪ್ರಶ್ನೆಯೋ ನನಗೆ ಎದುರಾಗಿದ್ದಿದೆ. ಇನ್ನೊಮ್ಮೆ ಇದೇ ಪಾರ್ಕಿನಲ್ಲಿ ಎದುರಾದ ದಂಪತಿಗಳು, ನಾನು ಟಿ ವಿ ಸೀರಿಯಲ್‌ಗಳಲ್ಲಿ ಲಾಯರ್, ಜಡ್ಜ್ ಪಾತ್ರಗಳಲ್ಲಿ ತುಂಬಾ ಸರ್ತಿ ಕಾಣಿಸಿಕೊಂಡಿದ್ದೇನೆಂದೂ ತುಂಬಾ ಒಳ್ಳೆಯ ನಟನೆಂದೂ ಬಹಳ ಖಾತ್ರಿಯಾಗಿ ಹೇಳತೊಡಗಿದರು. ಆ ರೀತಿಯ ಟಿ ವಿ ನಟ ನಾನಲ್ಲವೆಂದು ಅವರನ್ನು ನಂಬಿಸಲು ನನಗಾಗಲೇ ಇಲ್ಲ. ನನ್ನ ಪುಣ್ಯಕ್ಕೆ , ರೈಲಿನ ಪ್ರಸಂಗವೊಂದನ್ನು ಬಿಟ್ಟು ಬೇರೆ ಎಲ್ಲ ನನ್ನ ಬಹುರೂಪಗಳಲ್ಲೂ ಹೆಚ್ಚು ಕಡಿಮೆ ಗೆಜೆಟೆಡ್ ಹುದ್ದೆಗಳಲ್ಲೋ, ಸೆಲೆಬ್ರಿಟಿಯಾಗೋ ಕಾಣಿಸಿಕೊಂಡಿದ್ದೇನೆ ಎಂಬುದೇ ನನ್ನ ಪುಣ್ಯ. ■



# ವಿಲೇವಾರಿ

**– ವಸುಮತಿ ಉಡುಪ**

"ಅಯ್ಯೋ, ಸುಮ್ನೆ ದಂಡ ಆಗ್ತಿದೆ ಕುಂಬಳಕಾಯಿ. ಅರಳು ಸಂಡಿಗೆ ಮಾಡೇ. ತಿಂದು ಯಾವ ರಾಯನ ಕಾಲ ಆಯ್ತೋ? ನೆನೆಸ್ಕೊಂಡ್ರೆ ಬಾಯಲ್ಲ ನೀರು ಬರ್ತಿದೆ.." ಜೊಲ್ಲು ನೀರನ್ನು ಗುಳುಕ್ಕನೆ ನುಂಗಿಕೊಳ್ಳುತ್ತಾ ಹೇಳಿದ ವಿಘ್ನೇಶ.

"ಸುಮ್ನೆ ಕೂತ್ಗಂಡು ರಾಗ ಬರ್ತಿದೆ ನಿಮ್ಗೆ. ಅರಳು ಸಂಡಿಗೆ ತಿನ್ನೋಕೆ ಮನೇಲಿ ಮಾಡ್ಬೇಕಾ? ದುಡ್ಡು ಬಿಸಾಕಿದ್ರೆ ಅಂಗಡೀಲಿ ಸಿಗುತ್ತೆ.."

"ಅಂಗಡೀಲಿ ಸಿಗೋದಕ್ಕೆ ಮನೇಲಿ ಮಾಡಿದ ರುಚಿ, ಶುಚಿ ಇರುತ್ತೇನೇ? ಜೀರಿಗೆಮೆಣಸಿನ ಖಾರ, ಉಪ್ಪು, ಇಂಗು ಹಾಕಿ ನಮ್ಮಮ್ಮ ಸಂಡಿಗೆ ಮಾಡ್ತಿದ್ರು. ಹೇಳಿದ್ರೆ ನಂಬಲ್ಲ ನೀನು. ಡಬ್ಬಗಟ್ಲೆ ಮಾಡಿ ತುಂಬಿಟ್ಟಿರ್ತಿದ್ರು. ಮಳೆಗಾಲದಲ್ಲಿ ಬೆಳ್ಳುಳ್ಳಿ ಒಗ್ಗರಿಸಿದ ಹುರುಳಿಸಾರಿನ ಜೊತೆ ಸಂಡಿಗೆ ಕರಿದ್ರು ಅಂದ್ರೆ ಮನೇಲಿರೋರಿಗೆ ಎರಡು ಹೊಟ್ಟೆ.."

"ಸಾಕು ಸಾಕು. ಈ ವಯಸ್ಸಲ್ಲಿ ಹೊಟ್ಟೆ ತುಂಬಾ ತಿನ್ಬೇಡಿ, ಲಿಮಿಟ್ಟಲ್ಲಿರಿ ಅಂತಾರೆ ಡಾಕ್ಟ್ರು. ಎರಡಾಳಿನ ಊಟ ಮಾಡಿದ್ರೆ ದೇವ್ರೇ ಗತಿ.."

"ಮಾತು ಮರೆಸ್ಬೇಡ. ಅರಳು ತಂದ್ಕೊಡ್ತೀನಿ ಕಣೇ. ಸಣ್ಣಗೆ ಕುಂಬಳಕಾಯಿ ಹೆಚ್ಚಿ ಹಾಕಿ, ಕಟ್ಟಗೆ ಖಾರ ಹಾಕಿ ಸಂಡಿಗೆ ಮಾಡು. ಮಕ್ಕಳ ಮನೆಗೂ ಒಂದಿಷ್ಟು ಕೊಟ್ಟು ಕಳಿಸೋಕಾಗುತ್ತೆ. ಆಸೆ ಮಾಡ್ಕೊಂಡು ತಿನ್ತಾವೆ"

"ನನ್ಹತ್ರ ಬುದ್ಧಿವಂತಿಕೆ ತೋರ್ಸೋಕೆ ಬರ್ಬೇಡಿ. ನಿಮ್ಮ ಚಪಲಕ್ಕೆ ಮಕ್ಕಳ ಕಡೆ ಬೆಟ್ಟು ಮಾಡ್ತಿರೋದು ನಂಗೊತ್ತಾಗಲ್ಲ ಅಂದ್ಕೊಂಡಿದೀರಾ? ಆಯ್ತಪ್ಪಾ, ಬೆನ್ನುಕೋಲು ಮುರ್ಕೊಂಡು ನಾನು ಸಂಡಿಗೆ ಮಾಡ್ತೀನಿ. ಕಾಗೆ ಕಚ್ಕೊಂಡ್ಹೋಗ್ದಿದ್ದ ಹಾಗೆ ಬಿಸಿಲಲ್ಲಿ ಕೂತು ಕಾವಲು ಕಾಯೋಕೆ ನಿಮ್ಕೈಲಿ ಸಾಧ್ಯಾನಾ?"

"ಓಹೋ, ಅದ್ಯಾವ ದೊಡ್ಡ ವಿಷಯ? ನಾಲ್ಕು ದಿನ ಕಾವಲು ಕಾದ್ರಾಯ್ತಪ್ಪಾ.."

"ನೀವು ಏನೇ ಹೇಳಿ, ಹಪ್ಪಳ, ಸಂಡಿಗೆ ಅಂತ ಅಡುಗೆಮನೇಲಿ ಒದ್ದಾಡ್ತಿರೋಕೆ ನಂಕೈಲಾಗಲ್ಲ. ಇವತ್ತು ಸಂಡಿಗೆ ಅಂತೀರಿ, ನಾಳೆ ಮತ್ತೊಂದೇನೋ ಬಯಕೆ ಶುರುವಾಗುತ್ತೆ. ಮಾಡೋರೊಬ್ರಿದ್ರೆ ನೋಡು ನನ್ನ ಸಿರಿ ಅಂತ ಗಾದೆ ಕೇಳಿದೀರಲ್ವಾ?"

"ನಾನು ಹೇಳಿದ್ದು ಯಾವತ್ತಾದ್ರೂ ಕಿವಿ ಮೇಲೆ ಹಾಕ್ಕೊಂಡಿದೀಯಾ ನೀನು? ಏತಿ ಅಂದ್ರೆ ಪ್ರೇತಿ.."

ಹೀಗೆ ಮಾತಿಗೆ ಮಾತು ಜೋಡಿಸುತ್ತಾ ಮುಂದುವರಿದ ಕದನಕಾಂಡಕ್ಕೆ ಮೂಲಕಾರಣವಾಗಿದ್ದು ಮನೆಯ ಹಿತ್ತಿಲಲ್ಲಿ ಸಮೃದ್ಧವಾಗಿ ಬೆಳೆದ ಕುಂಬಳಕಾಯಿಗಳು ಅನ್ನುವುದನ್ನು ಓದುಗರ ಅವಗಾಹನೆಗೆ ತರುತ್ತಾ ಮುಂದುವರಿಯುತ್ತೇನೆ. ಅದೇನು ಉದ್ದೇಶಪೂರ್ವಕವಾಗಿ ಬೆಳೆಸಿದ ತರಕಾರಿ ಅಲ್ಲ. ಯಾವಾಗಲೋ ಮನೆಗೆ ತಂದಿದ್ದ ಬೂದುಗುಂಬಳವನ್ನು ಹೆಚ್ಚಿ ಸಿಪ್ಪೆ, ಬೀಜಗಳನ್ನು ಕಸದಬುಟ್ಟಿಗೆ ಸುರಿಯುವಾಗ ಒಂದು ಬೀಜ ಆಚೆಯ ಮಣ್ಣಿಗೆ ಬಿದ್ದು ಚಿಗುರಿ, ಬಳ್ಳಿಯಾಗಿ ಹಬ್ಬಿ, ಹೂಮಿಡಿಗಳಿಂದ ನಳನಳಿಸಿ, ಇದೀಗ ಭರ್ಜರಿ ಕಾಯಿಗಳಿಂದ ತುಂಬಿ ತುಳುಕುತ್ತಿದೆ. "ಅರ್ರೇ, ಕುಂಬಳಬಳ್ಳಿ ಕಣೇ" ಅನ್ನುತ್ತಾ ವಿಘ್ನೇಶ ಎಳೆ ಬಳ್ಳಿಗೆ ಕಾಪಿ ಚರಟ, ಟೀ ಚರಟ, ತರಕಾರಿಸಿಪ್ಪೆಗಳ ಗೊಬ್ಬರವನ್ನು



ಯಥೇಚ್ಛವಾಗಿ ಉಣಿಸಿದ್ದರ ಫಲ ಈಗ ಕಣ್ಣೆದುರು ಸಾಕ್ಷಾತ್ಕಾರವಾಗಿದೆ. ಶರಾವತಿ ಕಮ್ಮಿ ಇಲ್ಲ. ಅಕ್ಕಿ ತೊಳೆದ ಕಲಗಚ್ಚು, ಉಳಿದಪಳಿದ ಮೇಲೋಗರಗಳನ್ನು ಬಳ್ಳಿಯ ಬುಡಕ್ಕೆ ಸುರಿದು ಅದನ್ನು ಕೊಬ್ಬಿಸಿಟ್ಟಿದ್ದಳು. ಮನೆಯಲ್ಲಿ ತಾವೇ ಕೈಯಾರೆ ಬೆಳೆದ ತರಕಾರಿ ಎನ್ನುವ ಹೆಮ್ಮೆ, ಸಾರ್ಥಕಭಾವನೆ ದಂಪತಿಯಲ್ಲಿ ಬೇಕಾದಷ್ಟಿದೆ ನಿಜ, ಆದರೆ ಇಬ್ಬರಿರುವ ಮನೆಯಲ್ಲಿ ದಿನಾ ಅದದನ್ನೇ ಹೆಚ್ಚಿ ಬೇಯಿಸಿ ಎಷ್ಟೆಂದು ತಿನ್ನುವುದಕ್ಕಾಗುತ್ತದೆ? ಎಷ್ಟೇ ತಿಂದರೂ ಒಂದು ಕಾಯಿ ಹೆಚ್ಚಿದರೆ ನಾಲ್ಕು ದಿನಗಳ ಮೇಲೋಗರಕ್ಕೆ ಸಾಕೇಸಾಕು. ಕುಂಬಳಕಾಯಿಯಿಂದ ಮಾಡಬಹುದಾದ ಸಕಲೆಂಟು ಮೇಲೋಗರಗಳನ್ನೂ, ಸಿಹಿತಿಂಡಿಗಳನ್ನೂ ಮಾಡಿ ಸವಿದಿದ್ದಾಯ್ತು. "ರೀ, ಬನ್ರೀ ಇಲ್ಲಿ. ಕುಂಬಳಕಾಯಿ ಎರಡು ಭಾಗ ಮಾಡ್ಕೊಡಿ" ಎಂದು ಶರಾವತಿ ದಿನವೂ ವಿಘ್ನೇಶನನ್ನು ಅಡುಗೆಮನೆಗೆ ಆಹ್ವಾನಿಸುವುದು ಮಾಮೂಲು ಎನ್ನುವಂತಾಯ್ತು. ಒಂದು ಹೇಳಿಕೆ ಮಾತಿದೆ. ಬೂದುಗುಂಬಳವನ್ನು ಹೆಂಗಸರು ಹೆಚ್ಚಬಾರದು ಎನ್ನುವ ಮಾತು. ಬೂದುಗುಂಬಳ ಲಿಂಗಾಕೃತಿಯಲ್ಲಿರುವುದರಿಂದ, ಬೂದಿ ಬಳಿದಂತಿರುವುದರಿಂದ, ಅದನ್ನು ಹೆಂಗಸರು ಇಬ್ಭಾಗ ಮಾಡಬಾರದು ಎಂದು ಈ ಕಟ್ಟಳೆ ಎನ್ನುವುದೊಂದು ಊಹೆ. ಗಂಡಸರಿಗೆ ಯಾಕೆ ದೋಷ ಇಲ್ಲವೋ ಗೊತ್ತಿಲ್ಲ. ವಾಕರಿಕೆ ಬರುವಷ್ಟು ಕುಂಬಳಕಾಯಿ ಪದಾರ್ಥಗಳನ್ನು ತಿಂದ ಮೇಲೆ ವಿಘ್ನೇಶನ ತಲೆಗೆ ಸಂಡಿಗೆ ಮಾಡಿ ಕಾಪಿಡುವ ಉಪಾಯ ಹೊಳೆದಿದ್ದು. ಶರಾವತಿಯನ್ನು ಕೆರಳಿಸಿದ್ದು. ಅಡುಗೆಮನೆಯಲ್ಲಿ ಹೆಚ್ಚು ಹೊತ್ತು ಕಾಲ ಹಾಕಬೇಕಾದ ಬಿಗಿ ಕೆಲಸ ಅಂದರೆ ಶರಾವತಿಗೆ ಪಿತ್ಥ ಕೆರಳುತ್ತದೆ. ಮೂರು ಹೊತ್ತೂ ಹೆಂಗಸರನ್ನು ಅಡಿಗೆಮನೆಯಲ್ಲಿ ಕಟ್ಟಿ ಹಾಕಲು ಗಂಡಸರ ಸುಪ್ತ ಮನಸ್ಸು ಹುನ್ನಾರ ನಡೆಸುತ್ತಿರುತ್ತದೆ ಎಂಬುದು ಶರಾವತಿಯ ಯಾವತ್ತಿನ ದೂರು. ಮುಂದೇನು? ತರಕಾರಿ ಅಂಗಡಿಯವರೊಡನೆ ವ್ಯವಹಾರ ಕುದುರಿಸುವ ಸಲಹೆ ವಿಘ್ನೇಶನ ಬಾಯಿಂದ ಉದುರಿತು. ಮೂಗು ಮುರಿದಳು ಶರಾವತಿ.

"ನಾವಾಗಿ ಮೇಲೆ ಬಿದ್ದು ಹೋದ್ರೆ ಹತ್ತು ಪೈಸೆಗೆ ಒಂದರಂತೆ ಕೇಳ್ತಾರೆ. ವ್ರತ ಕೆಟ್ರೂ ಸುಖಪಡ್ಬೇಕು ಅನ್ನೋ ಗಾದೆ ಗೊತ್ತಿಲ್ವಾ ನಿಮಗೆ?"

"ಎಷ್ಟಕ್ಕಾದ್ರೂ ಕೇಳ್ಲಿ ಬಿಡೇ. ನಾವೇನು ಅವನ್ನ ಮಾರಿ ಹೊಟ್ಟೆ ಹೊರೀಬೇಕಾ? ತಿನ್ನೋರು ತಿಂದ್ಕಳ್ಲಿ.."

"ನೀವೊಬ್ರು.." ಸಾರಾಸಗಟಾಗಿ ಗಂಡನ ಸಲಹೆಯನ್ನು ಮೂಲೆಗೆ ತಳ್ಳಿದಳು ಶರಾವತಿ. ಗಂಡಯ್ಯ ಮೂಟೆ ತುಂಬಾ ಕುಂಬಳಕಾಯಿಗಳನ್ನು ತುಂಬಿಸಿಕೊಂಡು ತರಕಾರಿ ಅಂಗಡಿಗೆ ಎಡತಾಕುವ ದೃಶ್ಯ ಅವಳಿಗೆ ಊಹಾತೀತ. ಆಯುಧಪೂಜೆಯ ದಿನ ರಸ್ತೆ ತುಂಬಾ ಸಾವಿರಹೋಳುಗಳಾಗಿ ಇಟ್ಟಾಡುತ್ತಿದ್ದ, ಆ ದಿನದ ಅತ್ಯಗತ್ಯವಾಗಿದ್ದ ಬೂದುಗುಂಬಳ ಗಂಡಹೆಂಡಿರ ಪಾಲಿಗೆ ಬಿಸಿ ತುಪ್ಪವಾಗಿ ಕೂತಿತ್ತು. ಕೊನೆಗೂ ಕುಂಬಳಕಾಯಿಗಳ ವಿಲೇವಾರಿಗೆ ಉಪಾಯ ಹುಡುಕಿದಳು ಶರಾವತಿ. ಮನೆಯ ಆಚೀಚಿನ ನಾಲ್ಕು ಮನೆಗಳು, ಎದುರಿನ ನಾಲ್ಕು ಮನೆಗಳಿಗೆ ಕುಂಬಳಕಾಯಿಗಳನ್ನು ದಾಟಿಸಿ ಕೈ ತೊಳೆದುಕೊಂಡರೆ ಸೈ, ಅವರೂ ಹಲ್ವ ಮಾಡಿಕೊಂಡು ತಿನ್ನಲಿ, ಖುಷಿಪಡಲಿ. ಅವಳ ಆಣತಿಯಂತೆ ವಿಘ್ನೇಶ ಪ್ರತಿ ಮನೆಗೂ ಕುಂಬಳಕಾಯಿ ತಲುಪಿಸಿ ಬಂದ. ಬೇಡವೆನ್ನಲಿಲ್ಲ ಯಾರೂ. ಬಲಿತು ಪೊಗದಸ್ತಾಗಿದ್ದ ಕಾಯಿಗಳನ್ನು ಬೇಡವೆನ್ನಲು ಮನಸ್ಸಾಗಲಿಲ್ಲ ಯಾರಿಗೂ. ಅಲ್ಲಿಂದ ಶುರುವಾಯ್ತು ನೋಡಿ ಲೆಕ್ಕಾಚಾರ. ಕುಂಬಳಕಾಯಿ



ತೆಗೆದುಕೊಂಡವರು ಒಬ್ಬೊಬ್ಬರಾಗಿ ಮನೆಗೆ ಬಂದು ಲೆಕ್ಕ ಚುಕ್ತಾ ಮಾಡಿದರು. ಒಂದು ಅಂದಾಜಿನ ಹಣ ಪಾವತಿಸಿದರು. ದಂಪತಿಗೆ ಅಯೋಮಯ.

"ಇದೇನಿದು? ನಾವು ಪುಗಸಟ್ಟೆ ಕೊಟ್ಟಿದ್ದು. ದುಡ್ಡಿಗಲ್ಲ.." ಗಂಡ, ಹೆಂಡತಿ ಬಾಯೊಣಗಿಸಿಕೊಂಡಿದ್ದೇ ಬಂತು. ಪುಗಸಟ್ಟೆ ತೆಗೆದುಕೊಳ್ಳಲು ಯಾರೂ ತಯಾರಿಲ್ಲ. ಕುಂಬಳಕಾಯಿಗಳನ್ನು ಹಾಗೆ ತೆಗೆದುಕೊಳ್ಳಬಾರದಂತೆ. ಈ ವಿಷಯದಲ್ಲಿ ಅಜ್ಞರಾಗಿದ್ದವರಿಗೂ ಸಂಪ್ರದಾಯಗಳ ಕುರಿತು ತಜ್ಞರೆನಿಸಿಕೊಂಡವರು ಬೋಧನೆ ಮಾಡಿ ತಮ್ಮ ನಂಬಿಕೆಯನ್ನು ಅವರಿಗೆ ದಾಟಿಸಿದ್ದರು.

"ಹೌದು ಕಣ್ರೀ, ಸುಳ್ಳೇನಲ್ಲ. ನಮ್ಮಜ್ಜ ಹೇಳ್ತಿದ್ರು, ಕುಂಬಳಕಾಯಿ ದಾನ ತಗೊಂಡ್ರೆ ಅದೆಷ್ಟೋ ಗಾಯತ್ರಿ ಜಪ ಮಾಡಿ ಪರಿಹಾರ ಮಾಡ್ಕೋಬೇಕಂತೆ. ಇಲ್ದಿದ್ರೆ ಕೊಟ್ಟೋರ ಗ್ರಾಚಾರ ತಗೊಂಡೋರಿಗೆ ಸುತ್ಕೊಳ್ಳುತ್ತಂತೆ" ನೆನಪಿಸಿಕೊಂಡಳು ಶರಾವತಿ.

"ಈಗ ಗಿಣಿ ಹಾಗೆ ಬಾಯ್ಬಿಡ್ತಿದೀಯಲ್ಲ, ಮೊದಲೇ ಹೇಳಿದ್ರೆ ಯಾರ್ಯಾರದೋ ಮನೆ ಬಾಗ್ಲಿಗೆ ಕುಂಬಳಕಾಯಿ ಹೊತ್ಕೊಂಡ್ಹೋಗೋದು ತಪ್ತಿತ್ತಾ?" ಅಂದ ವಿಘ್ನೇಶ.

"ಜನ ಬದಲಾಗೇ ಇಲ್ಲ, ಇನ್ನೂ ಹಳೇ ಕಂದಾಚಾರಾನ ಉಳಿಸ್ಕೊಂಡು ಬಂದಿದಾರೆ ಅಂತ ನಂಗೆಲ್ಲಿ ಗೊತ್ತಿತ್ತು ಮಾರಾಯ್ತಾ, ಅದೂ ಇಷ್ಟು ದೊಡ್ಡ ಸಿಟೀಲಿ.."

ವಿಘ್ನೇಶ ಟೀಪಾಯಿ ಮೇಲಿದ್ದ ದುಡ್ಡನ್ನು ಎಣಿಸಲು ಕೈಗೆತ್ತಿಕೊಂಡರೆ ಶರಾವತಿ ಅಪ್ಪಣೆ ಮಾಡಿದಳು,

"ಎಣಿಸ್ಬೇಡಿ ಅದನ್ನ. ತಗೊಂಡ್ಹೋಗಿ ದೇವರ ಹುಂಡಿಗೆ ಹಾಕ್ಬನ್ನಿ.."

■

---






# ದೇವರ ಅಪ್ಪಣೆ

**– ಸೀತಾತನಯ**

ನಮ್ಮ ಭಾರತ ಹೇಳಿಕೇಳಿ ಸನಾತನಿಗಳ ದೇಶ. ಮೂವತ್ತಮೂರು ಕೋಟಿಗಳಷ್ಟೇ ದೇವತೆಗಳು ನಮ್ಮಲ್ಲಿರುವುದಾಗಿ ಪುರಾಣಗಳು ಹೇಳುತ್ತವೆ!. ಈ ಎಲ್ಲಾ ಮೂವತ್ತಮೂರು ಕೋಟಿ ದೇವತೆಗಳೂ ನಮ್ಮ ಕಪಿಲೆ, ನಂದಿನಿಯರಲ್ಲಿ ಅಡಕವಾಗಿದ್ದಾರೆ ಎಂದೂ ಆದ್ದರಿಂದ ಆ ಪುಣ್ಯಕೋಟಿಯನ್ನು ಸಕಲವನ್ನು ಕರುಣಿಸುವ ಕಾಮಧೇನು ಎಂದು ಕರೆದರು ಎಂಬ ಅಂಬೋಣ!. ಈ ವಿಷಯ ಒತ್ತಟ್ಟಿಗಿರಲಿ. ನಮಗೆ ಹುಟ್ಟಿನಿಂದಲೇ ದೇವರಬಗ್ಗೆ ಹಿರಿಯರು ತಿಳುವಳಿಕೆ ನೀಡುತ್ತಾರೆ. ತಾಯಿ ಮಗುವಿಗೆ ತಪ್ಪು ಮಾಡಿದಾಗ ದೇವರು ಕಣ್ಣು ಕುಕ್ಕಿಬಿಡುತ್ತಾನೆ, ಹೇಳಿದ್ದು ಕೇಳದಿದ್ದರೆ ಶಿಕ್ಷೆ ಕೊಡುತ್ತಾನೆ, ತಪ್ಪುಮಾಡಿದರೆ ಶಾಪ ಕೊಡುತ್ತಾನೆ ಅಂತೆಲ್ಲ ಹೇಳಿ ಹೆದರಿಸಿ ದೇವರ ಬಗ್ಗೆ ಒಂದು ರೀತಿ ಭೀತಿ ಮತ್ತು ಭಕ್ತಿ ಬರುವಂತೆ ಮಾಡುತ್ತಾಳೆ. ಕುಂಕುಮ ಹಣೆಗೆ ಇಟ್ಕೊಂಡು ದೇವರಿಗೆ ನಮಸ್ಕಾರ ಮಾಡು ಒಳ್ಳೆದಾಗುತ್ತೆ, ವಿದ್ಯೆ ಹತ್ತುತ್ತೆ, ಒಳ್ಳೆ ಅಂಕಗಳು ಪರೀಕ್ಷೆಯಲ್ಲಿ ದೊರೆಯುತ್ತದೆ ಮುಂತಾಗಿ ಹೇಳಿ ಸನ್ಮಾರ್ಗದಲ್ಲಿ ನಡೆಯಲು ಪ್ರೇರೇಪಿಸುತ್ತಾಳೆ. ದೇವರು ಇದ್ದಾನೋ ಇಲ್ಲವೋ ಕಂಡವರು ಯಾರೂ ಇಲ್ಲ. ಆದರೆ ಅವನ ಹೆಸರಲ್ಲಿ ಪವಾಡಗಳಾಗುವುದು ಸುಳ್ಳಲ್ಲ.....! ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ದೇವರನ್ನು ನಂಬುವವರೆ. ಅವನ ಮೇಲೆ ತಮ್ಮ ಕಷ್ಟಗಳ ಭಾರವನ್ನು ಹಾಕಿ ನಿಶ್ಚಿಂತರಾಗುವವರೆ.... ಆ ದೇವನಿಗೋ ಭಕ್ತರ ಅಭೀಷ್ಟ ಇಡೇರಿಸುವುದನ್ನು ಬಿಟ್ಟು ಬೇರೆ ಕೆಲಸವಿಲ್ಲವೆಂದು ಮನುಜರು ನಿರ್ಣಯಿಸಿಬಿಟ್ಟಿದ್ದಾರೆ......!

ಈ ದೇವೇಶನಿಗೆ ಅನೇಕರು ವಶೀಕರಣ ಮಾಡಿಕೊಳ್ಳುವುದು ಉಂಟು. ಕೆಲವರು ಅರಿಶಿನದ ಬಟ್ಟೆಯಲ್ಲಿ ಒಂದೂಕಾಲು ರೂಪಾಯಿ ಹರಕೆ ಕಟ್ಟಿಟ್ಟು ಅದರ ಜೊತೆ ಒಂದು ತೆಂಗಿನಕಾಯಿಯನ್ನು ದೇವರ ಬಲಗಡೆ ಇಟ್ಟು, ಮೂವತ್ತು ದಿನದಲ್ಲಿ ತಮ್ಮ ಕೆಲಸ ಇಡೇರಿಸಿದರೆ, ಆ ದೇವರ ಹೆಸರಿನ ಹತ್ತಿರದ ದೇವಸ್ಥಾನಕ್ಕೆ ಹೋಗಿ ಒಂದೂಕಾಲು ರೂಪಾಯಿ ಕಾಣಿಕೆಯನ್ನು ದೇವರ ಹುಂಡಿಗೆ ಹಾಕಿ, ಕಾಯಿ ಒಡೆಸಿಕೊಂಡು

ದೇವಸ್ಥಾನಕ್ಕೆ ಮೂರು ಪ್ರದಕ್ಷಿಣೆ ನಮಸ್ಕಾರ ಹಾಕುವುದಾಗಿ ಆಮಿಷವನ್ನು ಸಹಾ ಒಡ್ಡುತ್ತಾರೆ.....!

ಭಕ್ತರ ಹರಕೆಗಳಾದರೋ ವಿಚಿತ್ರವಾದವು. ಕೆಲವರಿಗೆ ಗಂಡುಮಗು ಬೇಕು. ಕೆಲವರ ಹೆಣ್ಣುಮಕ್ಕಳಿಗೆ ಒಳ್ಳೆ ಸಂಬಂಧ ಬೇಕು. ಕೃಷಿಯಲ್ಲಿ ಪ್ರಗತಿಯಾಗಬೇಕು. ತಂದೆತಾಯಿಗಳ ಆರೋಗ್ಯ ಸುಧಾರಿಸಬೇಕು. ಮಕ್ಕಳು ಬುದ್ಧಿವಂತರಾಗಬೇಕು. ನ್ಯಾಯಾಲಯದ ಖಟ್ಲೆ ಗೆಲ್ಲಬೇಕು, ಒಳ್ಳೆ ಮಳೆ ಬೆಳೆ ಬೇಕು. ಎಲ್ಲವೂ ಬೇಕುಗಳ ಪಟ್ಟಿಯೇ........!

ಇನ್ನು ಆ ದೇವರಿಗೆ ಜಲಾಭಿಷೇಕ, ಕ್ಷೀರಾಭಿಷೇಕ, ದಧಿ ಸ್ನಾನ, ಆಜ್ಯಸ್ನಾನ, ಮಧುಸ್ನಾನ, ಶರ್ಕರಸ್ನಾನ, ಫಲಸ್ನಾನ, ಗಂಧ–ಪರಿಮಳ ಸ್ನಾನ, ಪುಷ್ಪಾಲಂಕಾರ, ವರ್ತಿಯಾಲಾಂಕಾರ, ಗೆಜ್ಜೇವಸ್ತ್ರ,ಆಭರಣ ಸಮರ್ಪಣೆ ಜೊತೆಗೆ ದಕ್ಷಣೆ ಅರ್ಪಣೆ. ಹೆಣ್ಣು ದೇವತೆಯಾದರೆ ಸೀರೇಕುಪ್ಪುಸ ಅರ್ಪಣೆ, ಬಿಚ್ಚೋಲೆ, ಮರದಬಾಗಿನ, ಸೋಬಲಕ್ಕಿ ಸಮರ್ಪಣೆ, ಷೋಡಶ ಅಲಂಕಾರ, ಷೋಡಶ ಪೂಜೆ. ಮಂಗಳಾರತಿ, ಮಹಾಮಂಗಳಾರತಿ, ಹಾಡಿನಸೇವೆ, ಅಷ್ಟಾವಧಾನ ಸೇವೆ, ನೃತ್ಯಸೇವೆ, ಪುರಾಣವಾಚನ ಒಂದೇ ಎರಡೇ, ಎಲ್ಲವೂ ಭಕ್ತಿಪೂರ್ವಕವಾಗಿ ಸಮರ್ಪಿತ. ಉದ್ದೇಶ ಒಂದೇ, ತಮ್ಮ ಬೇಡಿಕೆ ಈಡೇರಿಕೆಗೆ,



ಒಂದು ರೀತಿಯ ವಶೀಕರಣ, ಆ ದೇವನನ್ನೆ ಮುಲಾಜಿಗೆ ಒಡ್ಡುವುದು.......!

ಇನ್ನು ನೈವೇದ್ಯಗಳೊ ಚಿತ್ರವಿಚಿತ್ರವಾದವುಗಳು. ಸರಳ ತೆಂಗಿನಕಾಯಿ ಬಾಳೆಹಣ್ಣು, ವಿವಿಧ ಹೂವು ಹಣ್ಣುಗಳು, ಪಾಯಸ ಪರಮಾನ್ನ, ಕಡುಬು,ಕಾಯಿರಸ, ಅತಿರಸ, ಹೋಳಿಗೆ,ಮೋದಕ, ಮೊಸರನ್ನ, ಕಲಸನ್ನ, ರಸಾಯನ, ಕರುಗಡುಬಿನ ಹಾರ, ವಡೆಮಾಲೆ, ಪಾನಕ–ಕೋಸಂಬರಿ, ಶಕ್ತಿ ದೇವತೆಯಾದರೆ ಕುರಿ,ಕೋಳಿ,ಮೇಕೆ,ಆಡು ಇತ್ಯಾದಿ. ತಮ್ಮ ಇಷ್ಟದ ತಿನಿಸುಗಳನ್ನು ದೇವರಿಗೆ ಅರ್ಪಿಸಿ ಹರ್ಷಿಸುವರು! ಉತ್ತರದ ಕಡೆ ಬಾಂಗುಪೇಯಗಳು–ತಿನಿಸುಗಳು, ರಾಮರಸ,ಭಂಗಿ ಸೇವನೆ. ಕೆಲ ದೇವರಿಗೆ ಮದ್ಯವೂ ಪ್ರಿಯವಂತೆ!! ನಿಜವಾಗಿಯೂ ದೇವರು ತಿಂದರೆ ಅಜೀರ್ಣವಾಗಬೇಕು ಇಲ್ಲ ವಾಂತಿಯಾಗಬೇಕು! ಸದ್ಯ ಭಗವಂತ ಅಣುರೂಪಿ, ಸೂಚ್ಯವಾಗಿ ಭುಂಜಿಸಿ ಉಳಿದದ್ದನ್ನೆಲ್ಲ ಪ್ರಸಾದವೆಂದು ಭಕ್ತರಿಗೆ ಬಿಡುವನು!. ಬಡಜೀವ ಉಳಿಸಿಕೊಳ್ಳುವನು!!.

ಇನ್ನು ಪ್ರಸಿದ್ಧ ದೇವಸ್ಥಾನಗಳ ರಥೋತ್ಸವ ಬಂತೆಂದರೆ ಎಲ್ಲರಿಗೂ ಹರ್ಷ. ಊರೆಲ್ಲ ತಳಿರುತೊರಣಗಳಿಂದ ಅಲಂಕೃತಗೊಳ್ಳುತ್ತದೆ. ರಥಯಾತ್ರೆ ಇದ್ದರೆ ರಥ ಸಿದ್ಧಗೊಳ್ಳುತ್ತದೆ. ವಿವಿಧ ವರ್ಣದ ಧ್ವಜಗಳು, ಬಣ್ಣ ಬಣ್ಣದ ಕಾಗದದ ಅಲಂಕಾರ, ವಸ್ತ್ರಾಲಂಕಾರ, ಪುಷ್ಪಾಲಂಕಾರ ರಥವನ್ನಲಂಕರಿಸುತ್ತೆ. ಉತ್ಸವಮೂರ್ತಿ ಕೂರಿಸಿದ ಮೇಲೆ ರಥದ ಹಗ್ಗಹಿಡಿದು, ರಥ ಎಳೆದು ಪುನೀತರಾಗಲು ನೂಕುನುಗ್ಗಲು! ಉತ್ಸವಮೂರ್ತಿ ಊರೆಲ್ಲ ಸುತ್ತುವುದು, ಸ್ಥಿರ ಮೂರ್ತಿ ಗರ್ಭಗುಡಿಯಲ್ಲಿರುವುದು ಎಂಬುದು ಸಾಮಾನ್ಯವಾದ ಅನಿಸಿಕೆ. ರಥಕ್ಕೆ ಬಾಳೆಹಣ್ಣು ಎಸೆಯುವುದು, ಅದು ಮೂರ್ತಿಗೆ ತಾಕಿದರೆ ತಾವು ಅಂದುಕೊಂಡ ಕೆಲಸವಾಗುವುದೆಂದು ಭಕ್ತರು ಖುಷಿಪಡುವುದು. ಇನ್ನೊಬ್ಬರು ಎಸೆದ ಬಾಳೆಹಣ್ಣು ಕೈಗೆ ಸಿಕ್ಕಾಗ ದೇವರ ಪ್ರಸಾದ ಸಿಕ್ಕಿತೆಂದು ಖುಷಿಪಡುವ ಜನರು ಬಹುಮಂದಿ! ಎಲ್ಲಾರೂ ಒಂದರ್ಥದಲ್ಲಿ ಕೃತಾರ್ಥರೆ! ಇನ್ನು ಬಳೆ ಬಾಚಣಿಗೆ,ಸ್ನೋ ಪೌಡರ್ ಅಂಗಡಿ, ಪೀಪಿ,ಕೊಳಲು,ಡೋಲು,ಪಿಸ್ತೂಲು, ಆಟಿಕೆಗಳ ಅಂಗಡಿ, ಬೆಂಡು ಬತ್ತಾಸು, ಕಡ್ಲೆಕಾಯಿ, ಮಂಡಕ್ಕಿ,ಸಿಹಿತಿನಿಸುಗಳು,ಖಾರಸೇವೆ, ತಂಪು ಪಾನೀಯಗಳು, ಬಣ್ಣಬಣ್ಣದ ಐಸ್ ಕ್ರೀಮ್ಗಳು, ವಿವಿಧಾಕಾರದ ಬಣ್ಣದ ಬೆಲೂನುಗಳು, ತಿರುಗುವ ರಾಟೆಗಳು ಜಾತ್ರೆಗೆ ವಿಶೇಷ ಮೆರುಗು ಕೊಡುತ್ತವೆ!!.

ಇನ್ನು ಹಳ್ಳಿಗಳನ್ನು ಹೆಚ್ಚಾಗಿ ಕಾಯುವವನು ಬಸವ,ಗಣಪ,ಹನುಮ,ವೀರಭದ್ರ ಮತ್ತು ಲಿಂಗರೂಪಿ ಶಿವ. ಉಡುಸಲಮ್ಮ, ಮಾರಮ್ಮ ಎರಡರಲ್ಲಿ ಒಂದು ಗ್ರಾಮದೇವತೆ. ನಿತ್ಯಪೂಜೆ ನಡೆಯುತ್ತೆ. ಪೂಜಾರಿಗೆ ದೇವಸ್ಥಾನದ ಪಕ್ಕದಲ್ಲೇ ಮನೆ. ಸಂಬಳವಿಲ್ಲ. ಊರವರೆಲ್ಲ ವರ್ಷದ ಬೆಳೆಯಲ್ಲಿ ಒಂದು ಭಾಗ ತಪ್ಪದೆ ಕೊಡುತ್ತಾರೆ. ಅದೇ ಜೀವನಾಧಾರ. ದೇವರ ಹೆಸರಲ್ಲಿ ಜಮೀನು ಇದ್ದರೂ ಅನುಭವಿಸುವರು ಬೇರೆ. ಹನುಮಂತರಾಯ ಹಗ್ಗ ತಿನ್ನಬೇಕಾದರೆ ಪೂಜಾರಿ ಶ್ಯಾವಿಗೆ ಬಯಸಲು ಸಾಧ್ಯವೇ?! ಆ ವಿಷಯ ಇಲ್ಲಿ ಅಪ್ರಸ್ತುತ. ಇದ್ದಿದ್ದು ಇದ್ದಂಗೆ ಹೇಳಿದ್ರೆ ಎದ್ದು ಬಂದು ಎದೆಗೆ ಒದ್ರಂತೆ ಅನ್ನುವ ಗಾದೆಯಂತೆ!!.

ಎಲ್ಲಾ ಊರುಗಳಲ್ಲಿ ನವರಾತ್ರಿ ದೀಪಾವಳಿ ಹಬ್ಬದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಊರವರೆಲ್ಲ ಒಂದೆಡೆ ಸೇರುತ್ತಾರೆ. ಸಂಭ್ರಮಾಚರಣೆಗೆ ಕೊರತೆಯಿಲ್ಲ. ಹನಿಹನಿಗೂಡಿದರೆ ಹಳ್ಳ ಅನ್ನುವಂತೆ ಎಲ್ಲರೂ ದೇಣಿಗೆ ಕೊಟ್ಟು ವಿಜೃಂಭಣೆಯಿಂದ ಪೂಜಾ ಕೈಂಕರ್ಯಗಳಲ್ಲಿ ಭಾಗವಹಿಸುತ್ತಾರೆ. ಊರ ಛೇರ್ಮನ್, ಗೌಡರು,ಪಟೇಲರ ಮುಂದಾಳತ್ವ. ತಳವಾರನ ಬೀದಿಬೀದಿ ಪ್ರಚಾರ!!



ನವರಾತ್ರಿಯಲ್ಲಿ ಒಂಬತ್ತು ದಿನ ದೇವಸ್ಥಾನದಲ್ಲಿ ಪೂಜೆ, ಪ್ರಸಾದ ವಿತರಣೆ. ಹಿರಿಯರಿಗೆ ಮಳೆಬೆಳೆ ಚಿಂತೆಯಾದರೆ ಮಕ್ಕಳಿಗೆ ಪ್ರಸಾದದ್ದೆ ಚಿಂತೆ! ಹತ್ತನೇ ದಿನ ಊರ ಹೊರಗಿನ ಗೋಮಾಳದಲ್ಲಿ ಅಂಬು ಹೊಡೆಯುವುದು. ಸಾಮಾನ್ಯವಾಗಿ ಸಂಜೆ ಸಮಯ ಅಂದರೆ ಗೋಧೂಳಿ ಲಗ್ನದಲ್ಲಿ, ಸಂಧ್ಯಾಕಾಲದಲ್ಲಿಯೇ ಮುಹೂರ್ತ!. ಊರದೇವರನ್ನು ಮರದ ಪಲ್ಲಕ್ಕಿಯಲ್ಲಿ ಹೊತ್ತು ಆಂಬು ಹೊಡೆಯುವ ಜಾಗಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ಯುವುದು. ತಳವಾರನ ತಮ್ಮಟೆಯೆ ದೇವರಿಗೆ ಮಾರ್ಗಸೂಚಿ! ಆ ತಳವಾರ ಅಲ್ಲಲ್ಲಿ ಭತ್ತದ ಹುಲ್ಲಿಗೆ ಬೆಂಕಿ ಹಚ್ಚಿ ಹಲಗೆಯನ್ನು ಹೊರಗೆ ಮತ್ತು ಒಳಗೆ ಶಾಖಕ್ಕೆ ಹಿಡಿದು ಡಂಕುಣಕ ಡಂಕುಣಕ ಎಂದು ಬಾರಿಸಲು ಶುರುಮಾಡಿದರೆ ಪಡ್ಡೆಹುಡುಗರು ಪಂಚೆ ಎತ್ತಿಕಟ್ಟಿ ಕುಣಿಯಲಾರಂಭಿಸುತ್ತಾರೆ. ತಳವಾರನಿಗೆ ಮೊದಲೇ ಮೈಮೇಲೆ ಸುರೆಯ ಅಮಲು ಆವರಿಸಿರುತ್ತದೆ!!

ಅಂಬು ಎಂದರೆ ಒಂದು ದೊಡ್ಡ ಬಾಳೆಕಂದನ್ನು ಮೂರು ಕಬ್ಬಿನಜಲ್ಲೆ ಮಧ್ಯೆ ಇಟ್ಟು ಕಟ್ಟುತ್ತಾರೆ. ಬಾಳೆಕಂದಿನ ಮಧ್ಯೆ ತೆಂಗಿನಕಾಯಿ ಇಟ್ಟು ಊರಿನ ಗುರಿಕಾರ ಗೌಡರ ಬಂದೂಕಿನಿಂದ ಗುಂಡು ಹಾರಿಸುತ್ತಾನೆ. ಕಾಯಿ ಚೂರು ಚೂರಾಗುತ್ತದೆ. ಅದು ಶುಭ ಲಕ್ಷಣವೆಂದು ತಿಳಿಯುತ್ತಾರೆ ಊರ ಹಿರಿಯರು. ಗುರಿ ತಪ್ಪಿದರೆ ಎಲ್ಲರ ಮುಖದಲ್ಲಿ ಆತಂಕ. ಊರಿಗೆ ಕೆಟ್ಟ ಪರಿಣಾಮದ ಸೂಚನೆ. ದೇವರಿಗೆ ಶಿರಬಾಗಿ ನಮಿಸುತ್ತಾರೆ, ಪರಿಪರಿಯಾಗಿ ಬೇಡುತ್ತಾರೆ. ನಂತರ ಗುರಿಕಾರ ಹರಿತವಾದ ಕತ್ತಿ ಹಿಡಿದು ಒಂದೇ ಹೊಡೆತಕ್ಕೆ ಬಾಳೆಕಂದನ್ನು ಕತ್ತರಿಸುವ ಪಣ ತೊಡುತ್ತಾನೆ. ದೇವರ ನೆನೆದು ತನ್ನ ಶಕ್ತಿ ಮತ್ತು ಯುಕ್ತಿಯನ್ನು ಉಪಯೋಗಿಸಿ ಬಾಳೆಕಂದನ್ನು ಒಂದೇ ಹೊಡೆತಕ್ಕೆ ತುಂಡರಿಸುತ್ತಾನೆ. ಎಲ್ಲರೂ ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸುತ್ತಾರೆ ಮತ್ತು ಒಳಿತಾದುದಕ್ಕೆ ನಿಟ್ಟುಸಿರು ಬಿಡುತ್ತಾರೆ!!. ಮುಂದಿನ ಕಾರ್ಯ ಬಲು ಮುಖ್ಯವಾದದ್ದು. ಪ್ರಸಾದ ವಿತರಣೆ. ಮಂಡಕ್ಕಿ, ಕಾಯಿಚೂರು ಮತ್ತು ನೆಲಗಡಲೆ. ಜಾತಿ ಬೇಧವಿಲ್ಲದೆ ಎಲ್ಲರಿಗೂ ಸಿಗುತ್ತದೆ. ಖುಷಿಯಿಂದ ಎಲ್ಲರೂ ತಿಂದು ಮನೆಗೆ ಮರಳುತ್ತಾರೆ.

ದೀಪಾವಳಿ, ಕೃಷಿ ಕೆಲಸವೆಲ್ಲ ಮುಗಿದಮೇಲೆ ಬರುವ ಹಬ್ಬ. ಉಳುವ ಎತ್ತುಗಳಿಗೆ ತಿಂದುಂಡು ವಿಶ್ರಾಂತಿ ಪಡೆಯುವ ಸಮಯ. ಮನೆಗಳಿಗೆ ಸುಣ್ಣಬಣ್ಣವನ್ನ ಬಳಿದು, ಎತ್ತುಗಳ ಕೊಂಬಿಗೆ ಬಣ್ಣಹಚ್ಚಿ, ಗಾಡಿಗಳ ಚಕ್ರ ಬೇರ್ಪಡಿಸಿ, ಅವುಗಳಿಗೆಲ್ಲ ವಿವಿಧ ರೀತಿಯ ಬಣ್ಣ ಹಚ್ಚಿ ಓರಣವಾಗಿಟ್ಟು ಪೂಜೆ ನೆರವೇರಿಸುತ್ತಾರೆ. ಬೆಳಿಗ್ಗೆಯೇ ಸಗಣಿಯಿಂದ ಕೆರಕನನ್ನು ಮಾಡಿ ಅದಕ್ಕೆ ಚೆಂಡು ಹೂ, ಕುರೆಸಾಣಿಹೂ ಸಿಕ್ಕಿಸಿ ಬಾಗಿಲ ಎರಡೂಕಡೆ ತುದಿಯಲ್ಲಿ ಹೊಸ್ತಿಲಮೇಲಿಡುತ್ತಾರೆ. ಸಂಜೆ ಊರ ಹೊರಗಿನ ದೊಡ್ಡಿಯಲ್ಲಿ ರಾಸುಗಳನ್ನು, ದನಕರುಗಳನ್ನು ಕೂಡಿ ಹಾಕುತ್ತಾರೆ. ಅವುಗಳ ಕೊಂಬಿಗೆ ಕೋಡುಬಳೆ, ಕೊಬ್ಬರಿ ಬಟ್ಟಲು,ಹಣ ಇತರೆ ವಸ್ತುಗಳನ್ನು ಕಟ್ಟುತ್ತಾರೆ. ದೊಡ್ಡಿ ಬಾಗಿಲಿಗೆ ಪುಳ್ಳೆ ಹಾಕಿ ಕಿಚ್ಚು ಹಚ್ಚುತ್ತಾರೆ. ದೊಡ್ಡಿ ಒಳಕ್ಕೆ ಪಟಾಕಿ ಹಚ್ಚಿ ಬಿಸಾಕುತ್ತಾರೆ. ಬೆದರಿದ ದನಕರುಗಳು ತೆಳುವಾದ ಕಿಚ್ಚನ್ನು ಹೆದರಿ ಹಾರಿ ಹೊರಗೋಡುತ್ತವೆ. ಧೈರ್ಯಶಾಲಿಗಳು ಅವುಗಳನ್ನು ಹಿಂಬಾಲಿಸಿ ಕೊಂಬಿಗೆ, ಕೊರಳಿಗೆ ಕಟ್ಟಿರುವ ವಸ್ತುಗಳನ್ನು ಕೀಳುವ ಪ್ರಯತ್ನ ಮಾಡುತ್ತಾರೆ. ಕೆಲವರಿಗೆ ಸಿಕ್ಕರೆ ಹಲವರಿಗೆ ಸಿಗದು. ಸಿಗದವರು ಬದುಕಿದೆಯಾ ಬಡ ಜೀವವೇ ಎಂದು ಜೋಲುಮುಖ ಹಾಕಿಕೊಂಡು ಮನೆ ಸೇರುತ್ತಾರೆ !! . ಜಾನುವಾರುಗಳು ಯಥಾಪ್ರಕಾರ ಗೋಧೂಳಿ ಲಗ್ನಕ್ಕೆ ಮನೆ ಸೇರುತ್ತವೆ. ಮನೆ ಮುಂದೆ ದೀಪಗಳನ್ನು ಹಚ್ಚಿ ಪಟಾಕಿ ಹಚ್ಚಲು ಆರಂಭಿಸುತ್ತಾರೆ.



ಪಲ್ಲಕ್ಕಿ ಮರದಲ್ಲಿ ಮಾಡಿದ್ದೆ, ಬಣ್ಣಗಳನ್ನು ಹಚ್ಚಿಸಿಕೊಂಡು ಮೆರಗನ್ನು ಹೆಚ್ಚಿಸಿಕೊಳ್ಳುತ್ತಿತ್ತು. ಹದವಾದ ಉದ್ದ ಬೊಂಬನ್ನು ಬೆಂಕಿಯಲ್ಲಿ ಪಲ್ಲಕ್ಕಿ ಜೋಡಿಸುವ ಆಕಾರಕ್ಕೆ ಬಿಲ್ಲಿನಂತೆ ಬಾಗಿಸಿ ಕಬ್ಬಿಣದ ಪಟ್ಟಿಗಳಿಂದ ಬಂದಿಸಿಡುತ್ತಿದ್ದರು. ದೇವರನ್ನು ಪಲ್ಲಕ್ಕಿಯಲ್ಲಿ ಕೂರಿಸಿದ ಮೇಲೆ ಹಿಂದಿಬ್ಬರು ಮುಂದಿಬ್ಬರು ಕಟ್ಟು ಮಸ್ತಾದ ಯುವಕರು ತಮ್ಮ ಭುಜದ ಮೇಲೆ ಹೊರುತ್ತಿದ್ದರು. ಆಗಾಗ ಹೆಗಲು ಬದಲಾಯಿಸಲು ಊರುಗೋಲು ಅವರ ಕೈಯಲ್ಲಿರುತ್ತಿತ್ತು. ಎಲ್ಲ ಬೀದಿಯಲ್ಲಿ ಪಲ್ಲಕ್ಕಿ ಮೆರವಣಿಗೆ ಹೋಗುತ್ತಿತ್ತು. ಎಲ್ಲರೂ ತಮ್ಮ ಮನೆಮುಂದೆ ಸಾರಿಸಿ ರಂಗವಲ್ಲಿನ್ನಿಟ್ಟು ದೇವರ ಬರುವಿಕೆಗೆ ಕಾಯುತ್ತಿದ್ದರು. ಪಲ್ಲಕ್ಕಿ ಬಂದ ತಕ್ಷಣ ಹಣ್ಣು ಕಾಯಿ ನೈವೇದ್ಯ ಮಾಡಿಸಿ ಮಂಗಳಾರತಿ ಮಾಡಿಸಿ ಸಂತೃಪ್ತಿ ಹೊಂದುತ್ತಿದ್ದರು. ಸಾಮಾನ್ಯವಾಗಿ ಎಲ್ಲರೂ ಪಲ್ಲಕ್ಕಿ ಸಂಧಿಯಲ್ಲಿ ಎಡದಿಂದ ಬಲಕ್ಕೆ ನುಸುಳಿಬಂದು ದೇವಸಾಕ್ಷಾತ್ಕಾರವಾದಂತೆ ಆನಂದಿಸುತ್ತಿದ್ದರು. ಕೆಲವರು ತಮ್ಮ ಸಮಸ್ಯೆಗಳನ್ನು ಮನದಲ್ಲೇ ಹೇಳಿಕೊಂಡು ದೇವನ ಅಪ್ಪಣೆ ಪಡೆಯುತ್ತಿದ್ದರು. ಮನದ ಸಮಸ್ಯೆ ಹೇಳಿಕೊಂಡ ನಂತರ, ಪಲ್ಲಕ್ಕಿ ಹೊತ್ತವರು ತಾವು ಮನದಲ್ಲೇ ನಿರ್ಧರಿಸಿದ ಜಾಗವನ್ನು ಮುಟ್ಟಿದಾಗ ಅವರಿಗೆ ಆಗುತ್ತಿದ್ದ ಸಂತೋಷಕ್ಕೆ ಪಾರವೇ ಇರುತ್ತಿರಲಿಲ್ಲ. ದೇವರು ಅಪ್ಪಣೆ ಕೊಡುವುದು ವಿಳಂಬವಾದಾಗ ದೇವನಿಗೆ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಏಕವಚನದ ಸಹಸ್ರನಾಮ ನಡೆದ ಸಂಗತಿಗಳೂ ಉಂಟು. ಮುಕುಟ,ಮುಖವಾಡ, ಪ್ರಸಾದ, ಒಡವೇವಸ್ತ್ರ, ಮುಂತಾದ ಲಂಚದ ಆಮಿಷವನ್ನೂ ಒಡ್ಡುತ್ತಿದ್ದರು. ದೇವರಿಗೆ ಲಂಚಕೊಟ್ಟಿದ್ದು ಎಲ್ಲರೆದುರಿಗೆ ಹೇಳಿ ಆ ದೇವೋತ್ತಮನ ಮಾನ ಹರಾಜು ಹಾಕುತ್ತಿದ್ದರು. ತಮ್ಮ ಕಾರ್ಯ ಸಾಧನೆಗೆ ದೇವರನ್ನು ಒಲಿಸಿಕೊಳ್ಳುವುದರಿಂದ ಹಿಡಿದು ಭಯಪಡಿಸುವುದೂ ಸರ್ವೇಸಾಮಾನ್ಯವಾಗಿತ್ತು!

ಇಲ್ಲಿ ನನ್ನ ಬಾಲ್ಯದಲ್ಲಿ ನಡೆದ ಘಟನೆಯೊಂದನ್ನು ನಿಮಗೆ ಹೇಳಲೇಬೇಕು. ನಮ್ಮೂರು ತುಂಗಾನದಿಯ ದಡದಲ್ಲಿದ್ದ ಒಂದು ಕುಗ್ರಾಮ. ಎಪ್ಪತ್ತು ಎಂಭತ್ತು ಮನೆಗಳಿದ್ದವು. ಎಲ್ಲಾ ವರ್ಗದ ಜನರಿಂದ ತುಂಬಿತ್ತು. ಬಸವಣ್ಣ ಮುಖ್ಯ ದೇವರು. ಬಾಗಿಲಿಲ್ಲದ ಹನುಮಂತನ ಪುಟ್ಟ ಗುಡಿಯೂ ಇತ್ತು. ಕತ್ತಲಾದಮೇಲೆ, ದುಂದಿಯ ಬೆಳಕಿನಲ್ಲಿ, ಒಮ್ಮೆ ದೇವರ ಮೆರವಣಿಗೆ ಪಲ್ಲಕ್ಕಿಯಲ್ಲಿ ಹೊರಟಿತು. ಶ್ರೀಯುತ ಕುಂಕೋವು ಹನುಮಂತಪ್ಪನವರು ಊರ ಪಂಚಾಯಿತಿ ಛೇರ್ಮನ್. ಸರಳ ಸಜ್ಜನ. ಒಂದರ್ಥದಲ್ಲಿ ಅಜಾತಶತ್ರು. ಊರಹಿತ ಬಯಸುವ ಜೀವಿ. ಪಲ್ಲಕ್ಕಿಯ ಕಮಾನು ಕಟ್ಟಿನ ಮುಂಭಾಗಕ್ಕೆ ಸೊಂಡಲು ಸುತ್ತಿರುವ ಆನೆಮುಖದ ಹಿಡಿಕೆಯನ್ನು ಬಿಗಿಯಾಗಿ ಸಿಗಿಸಿದ್ದಾರೆ. ಮೈಕಟ್ಟಿನ ಯುವಕರು ಪಲ್ಲಕ್ಕಿಯ ಹೊತ್ತು ಆ ಕಡೆ ಈ ಕಡೆ ತೂರಾಡುತ್ತಿದ್ದಾರೆ. ಛೇರ್ಮನ್ ಹನುಮಂತಪ್ಪನವರು ಶುಭ್ರ ಶ್ವೇತವರ್ಣದ ಉಡುಗೆ ಉಟ್ಟು, ಹಣೆಗೆ ಮೂರು ವಿಭೂತಿ ಪಟ್ಟೆ ಬಳಿದು, ಪಲ್ಲಕ್ಕಿ ಬಳಿ ಸಾಗಿ, ತಮ್ಮ ಹಣೆಯನ್ನು ಆನೆಸೊಂಡಲಿಗೆ ಮುಟ್ಟಿಸಿ ಮನದಲ್ಲೇ ಊರ ಒಳಿತಿಗಾಗಿ ಹರಕೆ ಹೊತ್ತರು. ಕೈ ಜೋಡಿಸಿ ಮುಗಿದು ಬೇಡಿದರು. ದೇವರು ಅಪ್ಪಣೆ ಕೊಡುತ್ತಿಲ್ಲ, ಇವರು ಬಿಡುತ್ತಿಲ್ಲ! ಪಲ್ಲಕ್ಕಿ ಹೊತ್ತವರು ಆ ಕಡೆ ಈ ಕಡೆ ಹೋಗುತ್ತಾರೆ ಮತ್ತೆ ಸುತ್ತುತ್ತಾರೆ. ಅಪ್ಪಣೆಯಾಗುತ್ತಿಲ್ಲ. ಊರವರ ಆತಂಕ ಹೆಚ್ಚಾಗುತ್ತೆ, ಹಾಗೆಯೇ ಹನುಮಂತಪ್ಪನವರದ್ದೂ ಕೂಡಾ. ಈಗ ದೇವನಿಗೆ ಅಪ್ಪಣೆ ಕೊಡುವ ಉಪಾಯ ಹೇಳಿಕೊಡುತ್ತಾರೆ ಛೇರ್ಮನ್ ಸಾಹೇಬರು!!. ಊರ ಗೌಡರ ಮನೆ ಗೋಡೆಮೇಲೆ ಬರೆದು ತಿಳಿಸುವಂತೆ ಹೇಳುತ್ತಾರೆ. ಸುತಾರಾಂ ದೇವರು ಒಪ್ಪುತ್ತಿಲ್ಲ. ಆ ಕಡೆಗೆ ಹೋಗುತ್ತಲೇ ಇಲ್ಲ. ಅವರು ದೇವರೊಂದಿಗೆ ತಮ್ಮ ವರಸೆ ಬದಲಿಸುತ್ತಾರೆ. ಹಾಲುಅನ್ನ ಉಣ್ಣುವ



ಸಜ್ಜನ ಹಾಲಪ್ಪನವರ ಮನೆ ಗೋಡೆ ಮೇಲಾದರೂ ಬರೆದು ತಿಳಿಸಲು ಹೇಳುತ್ತಾರೆ. ಆ ದೇವನ ಕಿವಿಗೆ ಇವರ ಕೋರಿಕೆ ಕೇಳುತ್ತಿಲ್ಲ. ಅವ ಕೊಡ ಇವ ಬಿಡ ಅನ್ನುವ ಪರಿಸ್ಥಿತಿ! ಕೊನೆ ಪ್ರಯತ್ನವಾಗಿ ಊರ ಮದ್ಯೆ ಇರುವ ಭತ್ತದ ಪಣತದ ಮೇಲಾದರೂ ಬರೆದು ತಿಳಿಸುವಂತೆ ಕೋರುತ್ತಾರೆ. ಪಣತ ಎಂದರೆ ಊರ ಗೌಡರಿಗೆ ಸೇರಿದ್ದ, ಊರು ಮದ್ಯೆ ಇದ್ದ, ಬಿದಿರು ತಡಿಕೆಗೆ ಮಣ್ಣು ಸಗಣಿ ಮೆತ್ತಿದ್ದ, ಉರಿಮಂಜು ಹಚ್ಚಿಸಿಕೊಂಡು ಹುಲ್ಲು ಹೊದಿಕೆಯ ಮೇಲ್ಛಾವಣಿ ಹೊಂದಿದ್ದ ಆಹಾರದ ಉಗ್ರಾಣ. ಗುಂಡಾಕಾರದ ಕುಂಕುಮದ ಭರಣಿ ಆಕಾರದ್ದು. ಅದರಲ್ಲಿ ದವಸಧಾನ್ಯ ಸಂಗ್ರಹ ಮಾಡುತ್ತಿದ್ದರು. ಅಂತಹ ಮೂರು ಪಣತವಿತ್ತು ಅಲ್ಲಿ. ಆ ದೇವರಿಗೆ ಅನುಮಾನ ಯಾವ ಪಣತದ ಮೇಲೆ ಬರೆಯುವುದು!. ಆ ಕಡೆಗೆ ಪಲ್ಲಕ್ಕಿ ಹೋಗಲೇ ಇಲ್ಲ. ಛೇರ್ಮನ್ ಸುಸ್ತಾದರು. ರಾಜಿ ಮನೋಭಾವ ತೋರಿದರು. ದೇವರ ಕಿವಿಯಲ್ಲಿ ಏನೋ ಹೇಳಿದರು. ಪಲ್ಲಕ್ಕಿ ಹೊತ್ತವರು ಗರಗರನೆ ಸುತ್ತಿದರು. ದೇವಸ್ಥಾನವ ಮೂರು ಸುತ್ತು ಸುತ್ತಿ ಬಂದರು. ತಳವಾರನ ತಮ್ಮಟೆ ಶಬ್ಧ ಜೋರಾಗಿತ್ತು. ಛೇರ್ಮನ್ರ ಮುಖದಲ್ಲಿ ಮಂದಹಾಸವಿತ್ತು. ದೇವರೊಂದಿಗೆ ಅವರ ರಾಜಿಸಂಧಾನ ಯಶಸ್ವಿಯಾಗಿತ್ತು. ಊರ ಒಳಿತು ಅದರಲ್ಲಡಗಿತ್ತು. ಅವರು ದೇವರಿಗೆ ದೀರ್ಘದಂಡ ನಮಸ್ಕಾರ ಮಾಡಿದರು. ಅವರು ಊರಿನ ಒಳಿತಿಗೆ ಏನು ವರ ಬೇಡಿದರು ಮತ್ತು ಆ ಭಗವಂತ ಏನು ಅಪ್ಪಣೆ ಕೊಡಿಸಿದ ಅನ್ನುವುದು ಇಂದಿನವರೆಗೂ ನಿಗೂಢವಾಗಿಯೇ ಇದೆ!! ಈಗ ಆ ಛೇರ್ಮನ್ರೂ ಬದುಕಿಲ್ಲ, ನಾನೂ ಆ ಊರು ಬಿಟ್ಟಿದ್ದೇನೆ!!!

ನೀವು ನಿಮ್ಮ ಬಾಲ್ಯಕ್ಕೆ ಮತ್ತು ನೀವು ಬೆಳೆದ ಊರಿಗೆ ಹೋಗಿದ್ದೀರಾ?

ಏಳಿ, ನೀವು ಹರಕೆ ಹೊತ್ತದ್ದು ನೆನೆದು ಮುಸಿ ಮುಸಿ ಮನದಲ್ಲೇ ನಗುತ್ತಿದ್ದೀರಾ? ನಿಮ್ಮ ನಗು ಮಾಸದಿರಲಿ, ನಗು ನಿಮ್ಮ ಮೊಗದಿ ಸದಾಚಿಮ್ಮುತಿರಲಿ!!

■

## ಎರಡು ಸಮಸ್ಯೆಗಳು

ಆ ಕುಗ್ರಾಮಕ್ಕೆ ಮಂತ್ರಿಗಳು ಭೇಟಿ ನೀಡಿದರು. ಅದು ಅವರ ಮೊದಲನೆ ಭೇಟಿ. ಸಮಸ್ಯೆಗಳನ್ನು ಬಗೆಹರಿಸುವ ಉತ್ಸಾಹ. 'ಏನು ನಿಮ್ಮ ಸಮಸ್ಯೆಗಳು?' ಎಂದು ಕೇಳಿದರು.

'ಎರಡು ಇವೆ ಬುದ್ಧಿ', ಎಂದ ಮುಖಂಡ.

'ಮೊದಲನೆಯದು ಹೇಳಿ', ಎಂದರು ಮಂತ್ರಿಗಳು.

'ನೀರಿನ ಸಮಸ್ಯೆ. ಬೋರ್‌ವೆಲ್ ಇಲ್ಲ'.



ತಕ್ಷಣ ಮಂತ್ರಿಗಳು ಕಾರ್ಯೋನ್ಮುಖರಾಗಿ ತಮ್ಮ ಮೊಬೈಲ್‌ನಿಂದ ಪಟ ಪಟ ಎಂದು ಗುಂಡಿಗಳನ್ನು ಒತ್ತಿ ಮಾತನಾಡಲಾರಂಭಿಸಿದರು. 'ರೀ ಇಂಜನಿಯರ್, ಇನ್ನು ಮೂರು ದಿನಗಳಲ್ಲಿ ಇಲ್ಲಿ ಬೋರ್‌ವೆಲ್ ಕೊರೆಸಬೇಕು. ನಾನೇ ಬರ್ತೀನಿ ಉದ್ಘಾಟನೆಗೆ,' ಎಂದು ಹೇಳಿ 'ಈಗ ನಿಮ್ಮ ಎರಡನೆ ಸಮಸ್ಯೆ?' ಎಂದು ಕೇಳಿದರು.

'ಇಲ್ಲಿ ನೆಟ್‌ವರ್ಕ್ ಬಿಲ್‌ಕುಲ್ ಇಲ್ಲ ಬುದ್ಧಿ'.

# ಊಟದ ಆಟ

**– ಶ್ರೀಲಕ್ಷ್ಮಿ**

ಪಂಚೇಂದ್ರಿಯಗಳಲ್ಲಿ 'ನಾಲಿಗೆ'ಯನ್ನು ತೃಪ್ತಿಗೊಳಿಸಲು ಪಾಕಶಾಸ್ತ್ರದಿಂದ ಮಾತ್ರ ಸಾಧ್ಯವಂತೆ. ಮಿಕ್ಕ ನಾಲ್ಕು ಇಂದ್ರಿಯಗಳು ಆ ನಾಲಿಗೆಯ ತೃಪ್ತಿಗೆ ಪೂರಕವಾಗಿ ಕೆಲಸ ಮಾಡುವವು. ನಮಗೆ ಹಸಿವಾದಾಗ, ಯಾರಾದರೋ ಊಟದ ವಿಷಯವಾಗಿ ಬಗೆ ಬಗೆಯಾಗಿ ಬಣ್ಣಿಸುತ್ತಿದ್ದರೆ, 'ಕಿವಿ'ಯ ಮುಖೇನ ಕೇಳಿ, ನಮಗೆ ಹಸಿವು ಹೆಚ್ಚಾದಂತೆ ಭಾಸವಾಗುವುದು. ಆಕರ್ಷಕವಾಗಿ ತಿಂಡಿಯನ್ನು ಅಲಂಕರಿಸಿದ್ದರೆ, 'ಕಣ್ಣಿನ' ಮೂಲಕ ನೋಡಿ, ತಿನ್ನುವ ಆಸೆ ಹೆಚ್ಚುವುದು. ಘಮಘಮಿಸುವ ಆಹಾರದ ಸುವಾಸನೆ 'ಮೂಗಿಗೆ' ತಟ್ಟಿದೊಡನೆ, ಅದು ಏನಿರಬಹುದು ಎಂದೊಮ್ಮೆ ಯೋಚಿಸಿ ತಿನ್ನುವ ಮನಸ್ಸಾಗುವುದು. ಇನ್ನು ಚಳಿಗಾಲದಲ್ಲಿ, ಬಿಸಿ ಬಿಸಿಯಾದ ಆಹಾರದ ಸ್ಪರ್ಶ 'ಚರ್ಮ'ಕ್ಕೆ ಆಗುತ್ತಿದ್ದಹಾಗೆ, ಬೇಗ ಬೇಗ ತಿನ್ನಬೇಕೆನ್ನಿಸುತ್ತದೆ. ಹೀಗೆ ಪಂಚೇಂದ್ರಿಯಗಳು ನಮ್ಮ ಆಹಾರವನ್ನು ಆಸ್ವಾದಿಸಲು ಸಹಾಯ ಮಾಡುವವು.

ರುಚಿಯಾದ ಊಟ–ತಿಂಡಿಯಾಸೆ ಯಾರಿಗಿಲ್ಲ ಹೇಳಿ? ಚಿಕ್ಕಮಕ್ಕಳು ಅತಿಯಾಗಿ ತಿಂದರೆ 'ತಿಂಡಿ ಪೋತ' ಅಂತಾರೆ, ಅದೇ ಬಸರಿ ಹೆಂಗಸು ಆಸೆ ಪಟ್ಟು ತಿಂದರೆ 'ಬಯಕೆ' ಅನ್ನುವರು. ವಯಸ್ಸಾದ ಮೇಲೆ ಊಟದ ವ್ಯಾಮೋಹ ಅತಿಯಾಗಿದ್ದರೆ 'ಬಾಯಿಚಪಲ' ಅನ್ನುವರು. ಏನೇ ಅನ್ನಲಿ, ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ. ಆ ಹೊಟ್ಟೆಗಾಗಿ ಮಾಡೋದನ್ನು ರುಚಿಯಾಗಿ, ಶುಚಿಯಾಗಿ ಮಾಡಿ ತಿಂದರೆ, ದೇಹದಲ್ಲಿನ ಪರಮಾತ್ಮ ತೃಪ್ತನಾಗುವುದರಲ್ಲಿ ಸಂಶಯವೇ ಇಲ್ಲ.

ಅಂದೊಂದಿತ್ತು ಕಾಲ. ಮದುವೆಗಾಗಿ ಹುಡುಗಿಯನ್ನು ನೋಡಲು ಬಂದಾಗ ಹಲವಾರು ಪ್ರಶ್ನೆಗಳ ನಡುವೆ ಅಡುಗೆ ಮಾಡಲು ಬರುತ್ತದೆಯೇ? ಎಂಬುದೊಂದು ಖಂಡಿತ ಇರುತಿತ್ತು. ಅದಕ್ಕೆ ಉತ್ತರವಾಗಿ, ಹೌದು ಈ ಉಪ್ಪಿಟ್ಟು, ಕಾಫಿ ಎಲ್ಲಾ ಅವಳೇ ಮಾಡಿರುವುದು ಎಂಬ ಅವಳಮ್ಮನ ಉತ್ತರ ಹಿಂದಿನಿಂದ. ಕಾಲ ಬದಲಾದಂತೆ ಜನ ಓದು, ಕೆಲಸಕ್ಕಾಗಿ ಬೇರೆ ಬೇರೆ ಊರುಗಳ ತಿರುಗಾಟ ಹೆಚ್ಚಾದ ಕಾರಣ, ಈಗ ಲಿಂಗ ಬೇಧವಿಲ್ಲದೆ ಎಲ್ಲರೂ ಅಡುಗೆ ಮಾಡಲು ಕಲಿಯುತ್ತಿದ್ದಾರೆ. ಅಡುಗೆ ಕೇವಲ ಮನೆಯ ಗೃಹಿಣಿಯ ಕೆಲಸವಾಗಿ ಉಳಿದಿಲ್ಲ. ಮಕ್ಕಳಿಗೆ ಶಾಲೆಗಳಲ್ಲಿ 'ಕುಕ್ಕಿಂಗ್ ವಿದೌಟ್ ಫೈರ್' ಅಂಥ ಚಟುವಟಿಕೆಗಳು ಕೊಟ್ಟರೆ, ದೊಡ್ಡವರಿಗೆ ಹಲವಾರು ಕುಕಿಂಗ್ ಸ್ಪರ್ಧೆಗಳು ನಡೆಯುವವು. ಇನ್ನು ಅಡುಗೆ ಮಾಡೋದನ್ನು 'ಸ್ಟ್ರೆಸ್ ಬಸ್ಟರ್', 'ಪ್ಯಾಶನ್', 'ಹಾಬ್ಬೀ' ಅನ್ಕೊಂಡು ಮಾಡೋವ್ರು ಸ್ವಲ್ಪ ಜನ ಆದ್ರೆ, ಅಡುಗೆಯ ಕೆಲಸವನ್ನೇ ನಂಬಿ ಬದುಕು ನಡೆಸುತ್ತಿರುವವರು ಎಷ್ಟೋ ಮಂದಿ. ಅಡುಗೆ ಭಟ್ಟರು ಸ್ಟಾರ್ ಹೋಟೆಲ್ಗಳಲ್ಲಿ ಚೆಫ್ ಎಂದು ಕರೆಯಲ್ಪಟ್ಟು, ಎಷ್ಟೋ 'ಮಾಸ್ಟರ್ ಚೆಫ್' ಕಾರ್ಯಕ್ರಮಗಳು ಬಹಳ ಜನಪ್ರಿಯವಾದವು.

ಆಹಾರ ತಯಾರಿಸುವ ವಿಧಾನದ ರೆಸಿಪಿಗಳನ್ನು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುವ ಕಾಲ ಹೊರಟುಹೋಯಿತು. ವಿವಿಧ ಟಿವಿ ಚಾನೆಲ್ಗಳಲ್ಲಿ ಅಡುಗೆ ಕಾರ್ಯಕ್ರಮಗಳು ಕಡಿಮೆಯಾದವು. ಈಗೆಲ್ಲಾ ಸಾವಿರಾರು ಯೂಟ್ಯೂಬ್ ಚಾನೆಲ್ಗಳು. ದೇಶ ವಿದೇಶದ ಅಡುಗೆ ಪ್ರಕಾರಗಳು, ಪ್ರಪಂಚದ ಎಲ್ಲಾ ಖಾದ್ಯಗಳ ರೆಸಿಪಿಗಳು ನಮ್ಮ ಬೆರಳ ತುದಿಯಲ್ಲಿ. ಮೊನ್ನೆ ಲಾಕ್ಡೌನ್ ಸಮಯದಲ್ಲಿ ಯಾರ ಮನೆಯಲ್ಲಿ ಕೇಕ್, ಪಿಜ್ಜಾ, ಪಾನಿಪುರಿ ಮಾಡಿಲ್ಲ ಹೇಳಿ?




ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ನಾವು ಕೇಳದೆ, ತಿನ್ನದೇ ಇದ್ದ ಆಹಾರಗಳು ಈಗ ಮನೆ ಮನೆಯಲ್ಲಿ ಮಾಡಲಾಗುತ್ತಿದೆ ಎಂದರೆ ಯೋಚಿಸಬೇಕಾದ ವಿಷಯ. ಜನರಲ್ಲಿ ತಿನ್ನುವ ಆಸೆ ಹೆಚ್ಚಿದೆಯೋ, ತಿನ್ನುವ ಸ್ಥಿತಿ ಒದಗಿ ಬಂದಿದೆಯೋ? ಒಬ್ಬರನ್ನು ನೋಡಿ ಇನ್ನೊಬ್ಬರು ಪೈಪೋಟಿಯಿಂದ ಮಾಡಿ, ತಿನ್ನುತ್ತಿರುವರೋ? ತಿನ್ನುವುದೇ ಟೈಂಪಾಸ್ ಆಗಿದೆಯೋ? ಸಾಮಾಜಿಕ ಜಾಲತಾಣಗಳಲ್ಲಿ ಹಾಕಲು, ಫೋಟೋ ಕ್ಲಿಕ್ಕಿಸಲೆಂದೇ ಮಾಡುತ್ತಿರುವರೋ? ಒಟ್ಟಿನಲ್ಲಿ ರಸ್ತೆಗೆ ಎರಡು ಮೂರು ಹೋಟೆಲ್ಗಳು, ಸಾಲದ್ದಕ್ಕೆ ಬೇಕಾದ ಕಡೆಯಿಂದ ತರಿಸಿ ತಿನ್ನಲು ಝೊಮ್ಯಾಟೊ, ಸ್ವಿಗ್ಗೀಗಳು.

ಒಂದರಿಂದ ಹತ್ತು ಹೀಗಿತ್ತು, ಊಟದ ಆಟವು ಮುಗಿದಿತ್ತು ಎಂದು ಹೇಳುವ ಮೊದಲು, ಊಟವನ್ನು ಪರಬ್ರಹ್ಮ ವಸ್ತುವಾಗಿ ಕಾಣೋಣ. ತಿನ್ನುವ ಆಹಾರವನ್ನು ಅನಾವಶ್ಯಕವಾಗಿ ವ್ಯರ್ಥ ಮಾಡುವುದು ಬೇಡ. ಆಹಾರ ಸೇವನೆ ಹಿತ ಮಿತವಾಗಿದ್ದರೆ ಚಂದ.

■

---




---

## ಶುಭ ಕೋರಿಕೆ

ಯುಗಾದಿ ಹಬ್ಬಕ್ಕೆ ನನಗೆ ಯಾರೂ
ಶುಭ ಕೋರಲಿಲ್ಲ ಎಂದು
ವಿಷಾದಿಸಬೇಡಿ.
ಏಕೆಂದರೆ ನೀವು ಶುಭ
ಕೋರಿದವರೆಲ್ಲ ನಿಮಗೆ
ಶುಭ ಕೋರಿಯೇ ಇರುತ್ತಾರೆ !!

# ಯಜಮಾನರ ಉಗಾದಿಯ ಉಡುಗೊರೆ

**– ಸಹನಾ ಪ್ರಸಾದ್**

"ಅಯ್ಯೊ, ಹಬ್ಬದ ದಿನ ಇವತ್ತು. ಎಚ್ಚರ ಆಗಲೇ ಇಲ್ಲ. ಏನು ಹಾಳು ನಿದ್ದೆ! ಛೇ. ಏನೆಲ್ಲಾ ಪ್ಲಾನ್ ಹಾಕಿದ್ದೆ. ಗಸಗಸೆ ಪಾಯ್ಸ, ಹೆಸರು ಬೇಳೆ ಕೋಸಂಬರಿ, ನಿಂಬೆಹುಳಿ ಚಿತ್ರಾನ್ನ, ಎಲೆಕೋಸು ಮತ್ತು ಹುರುಳಿಕಾಯಿ ಪಲ್ಯಗಳು. ಸಾರು, ಹೀರೆಕಾಯಿ ಬಜ್ಜಿ.. ಎಲ್ಲಕ್ಕೂ ಕಳಶವಿಟ್ಟಂತೆ ಹೋಳಿಗೆ! ಆಹಾ, ಕಾಯಿ ಹೋಳಿಗೆ ಮಾಡುವುದಾ ಅಥವಾ ಬೇಳೆ ಹೋಳಿಗೆ? ಇದರ ಬಗ್ಗೆ ಸಾಕಷ್ಟು ವಾದ, ವಿವಾದ, ಚರ್ಚೆಗಳು ನಡೆದು ಕೊನೆಗೆ ಬೇಳೆ ಹೋಳಿಗೆ ಎಂದು ತೀರ್ಮಾನವಾಗಿತ್ತು. ಅಲ್ಲಾ, ಇವರಾದರೂ ಹಾಗೆ ಮಾತಾಡುವುದೇ? "ನಿನಗೆ ನನ್ನಮ್ಮನ ರೀತಿ ಬೇಳೆ ಹೋಳಿಗೆ ಮಾಡಲು ಬರುವುದಿಲ್ಲ. ಸುಮ್ಮನೆ ಕಾಯಿ ಹೋಳಿಗೆ ಮಾಡು" ಎಂದು ನಿಷ್ಠೂರವಾಗಿ ಹೇಳಿಬಿಡುವುದೇ? ನಾ ಸುಮ್ಮನಿರುವ ಗಿರಾಕಿಯೇ? "ಅಲ್ಲರೀ 60 ಆದರೂ ತಾಯಿಯ ಕೈ ರುಚಿ ನೆನಪಿಸಿಕೊಳ್ಳುತ್ತೀರಲ್ಲ. ನನ್ನ ಕರ್ಮ. ಬೇಡ ಬಿಡಿ. ಈ ಸಲ ಹೋಳಿಗೆ ಮಾಡೋದೇ ಇಲ್ಲ!" ಅಳು, ಕಣ್ಣೀರು, ಜಗಳ, ಮುನಿಸು ಮುಗಿದ ಮೇಲೆ ಇವರು ತೆಪ್ಪಗಾದರು." ಬೇಕಾದರೆ ತಿನ್ನಿ, ಇಲ್ಲ ಅಂದರೆ ನಾ ಒಬ್ಬಳೇ ತಿನ್ನುವೆ!" ಎಂದು ಘೋಷಿಸಿದ ನಂತರ ಕದನ ವಿರಾಮವಾಯಿತು.

ಈಗ, ಇಷ್ಟೊತ್ತಿನ ಮೇಲೆ ಎಚ್ಚರವಾಗಿದೆ. ಇನ್ನು ಹೋಳಿಗೆ ಮಾಡಿ ತಿನ್ನುವುದು ಯಾವಾಗ. ಅಯ್ಯೊ, ಮರೆತೆ, ಹುರುಳಿಕಾಯಿ ಖಾಲಿ. ಹೆಸರು ಬೇಳೆ ಕೂಡ ಕಡಿಮೆಯಿದೆ. ಛೇ, ಬಿಗ್ ಬಾಸ್ಕೆಟ್ ಆರ್ಡರ್ ಮಾಡಬೇಕಾಗಿತ್ತು. ಈಗ ಕೊರೋನಾ ಕಾಲ, ನಾವಿಬ್ಬರೂ ಮನೆ ಬಿಟ್ಟು ಹೋಗಿ ತಿಂಗಳುಗಳೇ ಕಳೆದವು.  ಜೋಡಿ ಹಕ್ಕಿಗಳ ಹಾಗೆ, ಅಲ್ಲಲ್ಲ, ಜೋಡಿ "ಯಾವುದೋ ಹೆಸರು ಹೇಳಲಾಗದ ಪ್ರಾಣಿಗಳ" ರೀತಿ ಜಗಳವಾಡುತ್ತಾ ಇದ್ದು ಈಗ ತಿಂಗಳುಗಳೇ ಕಳೆದು ಹೋಗಿವೆ.

ಹಾ, ವಿಷಯಕ್ಕೆ ಬರುವೆ. ಈಗೇನು ಮಾಡುವುದು? ಗಸಗಸೆ ನೆನೆ ಹಾಕಿಲ್ಲ, ಸುಮಾರು ಸಾಮಾನು ಮನೆಯಲ್ಲಿ ಇಲ್ಲ. ಹಬ್ಬದ ದಿನ ಬೇರೆ. ಕೆಲಸದವಳು ರಜೆ. ಆಗಲೇ ಹೊಟ್ಟೆ ಚುರುಗುಟ್ಟುತ್ತಿದೆ. ಇನ್ನೂ ತಿಂಡಿ ಮಾಡಿ ತಿನ್ನಬೇಕು. ಇವತ್ತು ಈರುಳ್ಳಿ ಉಪ್ಪಿಟ್ಟು ಮಾಡುವುದಾ? ಅಥವಾ ಈರುಳ್ಳಿ ಬೇಡವಾ? ಅವಲಕ್ಕಿ ಒಗ್ಗರಣೆ ಹಾಕಲೇ? ಇವರನ್ನು ಹೊರಗೆ ಕಳಿಸಿ ಸಾಮಾನು ತರಿಸಿಕೊಳ್ಳಲೇ? ಅಯ್ಯೋ, ಬೇಡಾ ಅಲ್ಲಿ ಯಾರಾದರೂ ಸಿಕ್ಕಿ ಮಾತಿಗೆ ಶುರು ಹಚ್ಚಿಕೊಂಡರೆ ಇಲ್ಲಿ ಅಡಿಗೆ ಆದ ಹಾಗೇ!

ಯಾಕೆ ಇವತ್ತು ಎಚ್ಚರಿಕೆ ಆಗಲಿಲ್ಲ? ಒದ್ದಾಡುತ್ತಲೇ ಮಂಡಿ ಹಿಡಿದು ಎದ್ದೆ. ನಡುಮನೆಯಲ್ಲಿ ಇವರು ದೊಡ್ಡ ಸ್ಮೈಲ್ ಬೀರಿ ಕಾಫಿ ತಂದಿತ್ತರು. ಪೇಪರ್ ತಂದಿತ್ತು "ಓದು, ಚೆನ್ನಾಗಿದೆ ಇವತ್ತಿನ ವಿಶೇಷಾಂಕ" ಎಂದರು.

"ಅಯ್ಯೊ, ಸಧ್ಯ. ಎಷ್ಟು ಲೇಟಾಯ್ತು. ಈಗ ಪೇಪರ್ ಓದುತ್ತಾ ಕೂತರೆ ಅಷ್ಟೇ. ನೀವು ಬೇಗ ಬೇಗ ರೆಡಿ ಆಗಿ, ಮಾಸ್ಕ್ ಹಾಕಿಕೊಂಡು ಸ್ವಲ್ಪ ಸಾಮಾನು ತಂದುಕೊಡಿ, ಅಷ್ಟರಲ್ಲಿ ತಿಂಡಿ ರೆಡಿ ಮಾಡಿಬಿಡ್ತೀನಿ" ವಟವಟ ಮಾತಾಡುತ್ತಿದ್ದವಳ ರಟ್ಟೆ ಹಿಡಿದು ಕೂಡಿಸಿದರು. "ಇವತ್ತು ಆರಾಮಾಗಿ ಇರು. ತಿಂಡಿ, ಊಟ ಎಲ್ಲವೂ ವ್ಯವಸ್ಥೆ ಆಗಿದೆ!" ತಬ್ಬಿಬ್ಬಾದೆ ನಾನು. "ಅಲ್ಲ, ಹಬ್ಬ ಇವತ್ತು. ಹೋಟೆಲೂಟ ಬೇಡ" ನಸುನಕ್ಕರು. ಅವರು



"ನನ್ನೆಲ್ಲಾ ಫ್ರೆಂಡ್ಸ್ ಮನೇಲೂ ಈಗ ಮಕ್ಕಳೆಲ್ಲ ದೂರದೇಶ, ಊರುಗಳಿಗೆ ಹೋಗಿ ಬರೀ ಗಂಡ ಹೆಂಡತಿ ಮನೇಲಿ. ಇವತ್ತು ನಾವೆಲ್ಲಾ ಸೇರಿ ಮನೇಲಿ ಮಾಡೊ ಕೇಟರಿಂಗ್ ಅವರಿಂದ ಆರ್ಡರ್ ಮಾಡಿದೀವಿ. ನಮ್ಮ ನಮ್ಮ ಹೆಂಡತಿಯರು ಹಬ್ಬಗಳಲ್ಲಿ ಇಷ್ಟು ವರುಷ ಸಾಕಷ್ಟು ಕಷ್ಟ ಪಟ್ಟಿದಾರೆ. ಇನ್ನು ಮೇಲಾದರೂ ಪೂರ್ತಿ ವಿಶ್ರಾಂತಿ ತೊಗೊಂಡು ಆರಾಮವಾಗಿ ಇರ್ಲಿ ಅಂತ".

ಮನಸ್ಸು ಬಿಸಿ ಎಣ್ಣೆಯಲ್ಲಿ ಹಾಕಿದ ಪೂರಿಯ ತರ ಉಬ್ಬಿತು. ಆಹಾ, ಅಡುಗೆ ಮನೆಯಿಂದ ರಜೆ!! ಹರೆಯದಲ್ಲಿ ರೇಶಿಮೆ ಸೀರೆ ಕೊಡಿಸಿದ ಮನೆಯವರು ಈಗ ಕೇಟರಿಂಗ್ ಹೇಳಿದರೆ ಅಷ್ಟೇ ಸಾಕು!!

■

---

# ಹೆಗ್ಗಣದ ವಾದ

**– ಚಿಂತಾಮಣಿ ಕೊಡ್ಲೆಕೆರೆ**

ಬಯಲಿನಲ್ಲಿ ಕಟ್ಟುತ್ತಾರೆ ಮನೆ
ಹೇಳುತ್ತಾರೆ : 'ರೀ','ಹಲೋ','ಕಣೆ'

ತಿಂಡಿ ತಿಂದು ಕಾಫಿ ಕುಡಿದು ಎದ್ದು
ಮಾಡುತ್ತಾರೆ ನೂರಾಎಂಟು ಸದ್ದು

ಆಫೀಸಿಗೆ ಅಂಗಡಿಗೆ ಗುಡಿಗೆ
ಹೋಗುವರು ಇನ್ನೂ ಎಷ್ಟೋ ಕಡೆಗೆ

ಈ ಬಯಲಿನ ಕೆಳಗೆ ನನ್ನ ಬಿಲ
ಲಾಗಾಯ್ತಿನಿಂದ ವಾಸಸ್ಥಳ

ಅರಸರಾಳುವಾಗಿನಿಂದ ಇದ್ದೆ
ಮನೆ ಕಟ್ಟುವಾಗ ಹೊರಗೆ ಬಿದ್ದೆ

ಇವರ ಮನೆ ಆದ ಮೇಲೆ ಮತ್ತೆ
ನನ್ನ ಬಿಲಕೆ ನಾನು ಬಂದೆ,ತಪ್ಪೆ?

ಎಷ್ಟು ಸೊಕ್ಕಿನವರು ಈ ಜನ
ಕಲ್ಲೆಸೆವರು ನನ್ನ ಕಂಡ ಕ್ಷಣ

ನಾನಿರುವುದು ಅವರಿಗಿಷ್ಟವಿಲ್ಲ
ತಿಳಿದವರಿಗೆ ಇಂಥ ನಡತೆ ಸಲ್ಲ

ಸೈಟ್ ಪತ್ರ ಚರ್ಚೆಗಿಲ್ಲಿ ಬಾರದು
ನೀವೇ ಹೇಳಿ :
ಈ ಜಾಗ ಯಾರದು?

# ಆಚಾರವಿಲ್ಲದ ನಾಲಿಗೆ

**– ಈಶ್ವರಚಂದ್ರ**

ಕೆಲವರ ಮಾತಿನ ವರಸೆಯೇ ಹಾಗಿರುತ್ತದೆ. ಕೇಳಿದವರು ಹಣೆ ಚೆಚ್ಚಿಕೊಳ್ಳಬೇಕು. ಸಾಮಾನ್ಯವಾಗಿ ಬಹಳ ಜನ ಮೊದಲು ಯೋಚನೆ ಮಾಡಿ ಆಮೇಲೆ ಮಾತನಾಡುತ್ತಾರೆ. ಇನ್ನು ಕೆಲವರು ಮೊದಲು ಮಾತಾಡಿ ಬಿಡೋದು. ಆಮೇಲೆ ಅಯ್ಯೋ ಹೀಗಾಯಿತೇ ಎಂದು ಯೋಚನೆ ಮಾಡುವುದು. ನಮ್ಮ ಕಾಶಿ ಮಾವ ಈ ಎರಡನೇ ಕೆಟಗರಿಗೆ ಸೇರಿದವರು. ಬಹಳ ವರ್ಷ ನನಗೆ ಅವರ ಪೂರ್ಣ ಹೆಸರು ಗೊತ್ತಿರಲಿಲ್ಲ. ಎಲ್ಲರೂ ಕರೆದ ಹಾಗೆ ನಾನೂ ಕಾಶಿ ಮಾವ ಎನ್ನುತ್ತಿದ್ದೆ. ಒಂದು ಸಲ ಅವರ ಪೂರ್ಣ ಹೆಸರು ಕಾಶಿ ವಿಶ್ವನಾಥ ಶರ್ಮ ಎಂದು ಗೊತ್ತಾಯಿತು. ಕಾಶಿಗೂ ಇವರಿಗೂ ಏನು ಸಂಬಂಧವೋ ನನಗೆ ಗೊತ್ತಿಲ್ಲ.

ಕಾಶಿ ಮಾವ ಯಾರದಾದರೂ ಮನೆಗೆ ಬಂದರೆ ಅದು ಊಟದ ಸಮಯ ಎನ್ನುವುದು ಸ್ಪಷ್ಟ.

"ಅಪರೂಪಕ್ಕೆ ಬಂದಿದೀರಿ, ಊಟಕ್ಕೆ ಏಳಿ ಕಾಶಿ ಮಾವ!" ಎಂದರೆ,

"ಅಪರೂಪವೇನು ನಿಜರೂಪದಲ್ಲೇ ಬಂದಿದೀನಲ್ಲ!" ಎಂದು ಅಂಗಿ ಕಳಚಿ, ಅಂಗವಸ್ತ್ರ ಹೊದ್ದು, ಕೈಕಾಲು ಮುಖ ತೊಳೆದುಕೊಂಡು ಊಟಕ್ಕೆ ಸಿದ್ಧವಾಗಿಬಿಡುತ್ತಿದ್ದರು. ಅಷ್ಟಾದರೆ ಪರವಾಗಿಲ್ಲ. ಆದರೆ ಅಡುಗೆ ಮನೆ ಬಾಗಿಲಲ್ಲಿ ಇಣುಕಿ,

"ಏನಮ್ಮಾ ಗೌರಿ, ಏನು ವಿಶೇಷ ಮಾಡಿದೀಯ?" ಎಂದು ಕೇಳುತ್ತಿದ್ದರು.

"ಅವರೆಕಾಳು ಹುಳಿ ರಾಗಿ ಮುದ್ದೆ ಮಾವ! ನಿಮಗೆ ತುಂಬ ಇಷ್ಟ ಅಲ್ಲವೆ?"

"ಹೌದಮ್ಮಾ, ಆದ್ರೆ ಹೋದಸಲ ನಿನ್ನ ಮುದ್ದೆಯಲ್ಲಿ ಅದೆಷ್ಟು ಬ್ರಹ್ಮ ಗಂಟುಗಳು! ಈಗಾದ್ರೂ ಚೆನ್ನಾಗಿ ಮುದ್ದೆ ಮಾಡುವುದನ್ನು ಕಲ್ತಿದೀಯಾ?"

ಗೌರಿಯ ಮುಖ ಪೆಚ್ಚಾಗುತ್ತದೆ. ಆದರೂ, "ಈವಾಗ ನೀವೇ ತಿಂದು ನೋಡಿ, ಎರಡು ಮುದ್ದೆ ಆರಾಮವಾಗಿ ಇಳಿಸ್ತೀರ!" ಎಂದು ಬಿಟ್ಟಳು. ಈಗ ಪೆಚ್ಚಾಗುವುದು ಮಾವನ ಸರದಿ.

ಮೊನ್ನೆ ರಾಮುವಿನ ವೈಕುಂಠ ಸಮಾರಾಧನೆಗೆ ಹೋಗಿದ್ದೆನಲ್ಲ, ಅಲ್ಲೂ ಕಾಶಿಮಾವ ಪ್ರತ್ಯಕ್ಷ. ಧಾರ್ಮಿಕ ವಿಧಿಗಳು, ವೇದ ಘೋಷ, ಊಟ ಎಲ್ಲ ಆದಮೇಲೆ ಅದರಲ್ಲಿ ಸಣ್ಣಸಣ್ಣ ಗುಂಪುಗಳಲ್ಲಿ ಕುಳಿತ ಬಂಧುಗಳು ಎಲೆಯಡಿಕೆ ಹಾಕುತ್ತಿದ್ದರು. ಕಾಶಿಮಾವ ಎಲೆಗೆ ಸುಣ್ಣ ಸವರುತ್ತ,

"ಏನಯ್ಯ ಕೃಷ್ಣ, ನಿಮ್ಮ ಮಾವನವರಿಗೆ ನೀವು ಎಷ್ಟು ಜನ ಅಳಿಯಂದಿರು?" ಎಂದು ಕೇಳಿದರು.

"ನಾವು ಐದು ಜನ. ನಾನೇ ಕೊನೆಯವನು. ರಾಮು ನಾಲ್ಕನೆಯ ಅಳಿಯ. ಅವರಿಗೆ ಗಂಡು ಮಕ್ಕಳಿಲ್ಲದ್ದರಿಂದ ನಾನೇ ದಿನ ಕರ್ಮಮಾಡಿದೆ."

"ಹಾಗಾದ್ರೆ ನಿನ್ನ ಸೀನಿಯರ್ಸ್ ನಾಲ್ಕು ಜನ ಪರಲೋಕಕ್ಕೆ ಹೋದರು? ಈಗ ನೀನೊಬ್ಬನೇ ಉಳಿದಿದ್ದೀಯ!"

ಅವರ ಮಾತು ಕೇಳಿ ಸುತ್ತಮುತ್ತ ಕೂತವರು ಅವಕ್ಕಾದರು. ಕೃಷ್ಣ ಚೇತರಿಸಿಕೊಂಡು, "ಏನ್ಮಾಡೋದು ಮಾವ, ಕಾಲನ ಕರೆ ಬರೋವರೆಗೂ ಇರಬೇಕಲ್ಲ? ನೀವು ಯಾವಾಗ ಹೋಗ್ತೀರಿ ಹೇಳಿ, ನಾನೂ ನಿಮ್ಮ ಜೊತೇಲೇ



ಬರ್ತೀನಿ" ಎಂದು ಬಿಡೋದೆ!

ಕಾಶಿ ಮಾವ ಕಳೆದವಾರ ಗೋಪಾಲ್ ಮನೆಗೆ ಹೋಗಿದ್ದರಂತೆ, ಗೋಪಾಲ್ ತಮ್ಮ ನರಹರಿ ಪೇಪರ್ ಓದುತ್ತಾ ಕೂತಿದ್ದವನು ಎದ್ದು,

"ಬನ್ನಿ ಮಾವ, ಕೂತ್ಕೊಳ್ಳಿ" ಎಂದು ಕುರ್ಚಿ ತೋರಿಸಿದ.

"ಏನಯ್ಯ ಏನು ಓದ್ತಾ ಇದೀಯ?" ಮಾವನ ಪ್ರಶ್ನೆ.

"ಪ್ರಜಾವಾಣಿ ಓದ್ತಿದೀನಿ!"

"ಅದಲ್ಲಯ್ಯ, ಸ್ಕೂಲಲ್ಲಿ ಏನು ಓದ್ತಿದೀಯ?"

"ಎಸ್‌ಎಸ್‌ಎಲ್‌ಸಿ."

"ಅರೆ! ಹೋದಸಲ ಬಂದಾಗಲೂ ಅದನ್ನೇ ಹೇಳಿದ್ದೆ. ಹಿಂದಿಸಲ ಬಂದಾಗಲೂ ಅದನ್ನೇ ಹೇಳಿದ್ದೆ?"

"ನಾನು ಹಾಗೇ ಮಾವ ಪದೇ ಪದೇ ಮಾತು ಬದಲಾಯಿಸುವ ಪೈಕಿ ಅಲ್ಲ!"

"ಓಹೋ ಹಾಗಾದ್ರೆ ನೀನು ಎಮ್ ಎಸ್ ಎಮ್ ಪಾರ್ಟಿ ಅನ್ನು. ಮಾರ್ಚ್–ಸೆಪ್ಟೆಂಬರ್–ಮಾರ್ಚ್! ಈ ಸಲನಾದ್ರೂ ಪಾಸ್ ಮಾಡ್ತೀನಿ ಅನ್ನಯ್ಯ."

"ನೀವು ಎಷ್ಟನೇ ಅಟೆಂಪ್ಟ್‌ಗೆ ಎಸ್‌ಎಸ್‌ಎಲ್‌ಸಿ ಪಾಸಾದ್ರಿ ಮಾವ?" ಎಂದು ನರಹರಿ ಕೇಳಿದ.

"ನಮ್ಮ ಕಾಲದಲ್ಲಿ ನಮ್ಮೂರಲ್ಲಿ ಹೈಸ್ಕೂಲ್ ಇರಲಿಲ್ಲಯ್ಯ. ನಮ್ಮದೇನಿದ್ದರೂ ಎಲ್‌ಎಸ್."

"ಅದನ್ನಾದರೂ ಪಾಸ್ ಮಾಡೀದೀರಾ?"

ಮಾವ ಉತ್ತರ ಕೊಡಲಿಲ್ಲ. ಬೇರೆ ಎಲ್ಲೋ ಹೋಗಬೇಕೆಂದು ಹೊರಟೇಬಿಟ್ಟರು.

ದೊಡ್ಡ ಛತ್ರ. ನೂತನ ವಧೂವರರ ಆರತಕ್ಷತೆ ಸಮಾರಂಭ. ಬಹಳ ಜನ ಸೇರಿದ್ದರು. ನವ ವಿವಾಹಿತರಿಗೆ ಕೈಕುಲುಕಿ ಅಭಿನಂದನೆ ಹೇಳಲು ಜನ ದೊಡ್ಡ ಸಾಲಿನಲ್ಲಿ ನಿಂತಿದ್ದರು. ಕಾಶಿಮಾವ ಹೇಗೋ ಮಾಡಿ ವೇದಿಕೆ ಏರಿಯೇ ಬಿಟ್ಟರು. ವರನ ಸಹೋದ್ಯೋಗಿಗಳು ಜೋರಾಗಿ ಶಿಳ್ಳೆ ಹೊಡೆದರು. ಯಾರೋ ಒಬ್ಬ, "ಹೇ ಬುಡ್ಡ ಕ್ಯೂನಲ್ಲಿ ಬನ್ನಿ" ಎಂದು ಕೂಗಿದ. "ಏಯ್ ಹೋಗ್ಲಿ ಬಿಡೋ ಸೀನಿಯರ್ ಸಿಟಿಜನ್," ಎಂದ ಇನ್ನೊಬ್ಬ.

ಮಾವ ವರನ ಬಳಿ ಹೋಗಿ ಕೈಕುಲುಕಿ ಒಂದು ಚಿಕ್ಕ ಕವರನ್ನು ಕೈಗಿತ್ತರು. "ಇವರು ಕಾಶಿ ಮಾವ ಅಂತ" ಎಂದು ವರ ವಧುವಿಗೆ ಪರಿಚಯ ಮಾಡಿಕೊಟ್ಟ. ಅವಳು ತಲೆಯಲುಗಿಸಿ ನಸುನಕ್ಕಳು.

ಕಾಶಿ ಮಾವ ಹೇಳಿದರು, "ನೀನು ಕಾಲೇಜಿನಲ್ಲಿ ಓದುತ್ತಿದ್ದಾಗ ಯಾವುದೋ ಪ್ರೇಮ ವ್ಯವಹಾರದಲ್ಲಿ ಓಡಾಡ್ತಿದ್ಯಲ್ಲ. ಅದೇ ಹುಡುಗೀನಾ ಇವಳು?"

ವಧು ಸಂಶಯದಿಂದ ವರವನ್ನೇ ನೋಡಿದಳು. ಅವನು ಕಾಶಿ ಮಾವನನ್ನು ಮುಂದಕ್ಕೆ ಸಾಗು ಹಾಕಿ, ಮುಂದಿನ ಅತಿಥಿಯನ್ನು ಮಾತಾಡಿಸತೊಡಗಿದನು.



ಹೀಗೆ ಕಾಶಿ ಮಾವನ ಅಧಿಕ ಪ್ರಸಂಗಗಳು ಬಹಳ ಇವೆ. ಮುಂದಿನ ಸಲ ಇನ್ನಷ್ಟು ನೋಡೋಣ.

■

# ಅವನು ನಾನಲ್ಲ... ನಾನು ಅವನಲ್ಲ...

**ವೈ.ಎನ್. ಗುಂಡೂರಾವ್**

ಹೆಸರಿನಲ್ಲಿ ಏನಿದೆ ಮಹಾ! ಎಂದು ಹಾಗೆಲ್ಲ ನೀವು ಕ್ವಚಿತ್ತಾಗಿ ತೆಗೆದುಹಾಕಿ ಬಿಡಲಾಗದು. ಪ್ರತಿಯೊಂದು ಹೆಸರಿಗೂ ಒಂದೊಂದು ಮಹತ್ವವಿದ್ದೇಯಿರುತ್ತದೆ. ಆದರೂ ಪಂಪನು ಹೇಳಿರುವುದು **"ಹೆಸರ್ ನಿನಗೆ ಪೇಳ್ ಮೊಸರ್ ಪೆರರ್ಗೆ"** ಎಂದು. ಹೆಸರು, ಹೆಸರು ಎಂದು ನಾವು ಹೆಮ್ಮೆ ಪಟ್ಟುಕೊಳ್ಳಬಹುದಷ್ಟೆ. ಆದರೆ ಇತರರಿಗೆ ಅದು ಮೊಸರಿಗೆ ಸಮಾನ ಎಂದಿರಬಹುದು. ಆದರೆ ಶೇಕ್ಸ್‌ಪಿಯರ್ ಮಹಾಶಯನಿಗೆ ಮತ್ತೊಂದು ರೀತಿಯೇ ಕಂಡಿರಬಹುದು. "ವಾಟ್ ಈಸ್ ಇನ್ ನೇಮ್? ಎ ರೋಸ್ ಬೈ ಎನಿ ಅದರ್ ನೇಮ್ ವುಡ್ ಸ್ಮೆಲ್ ಆಸ್ ಸ್ವೀಟ್" ಗುಲಾಬಿಯನ್ನು ಮತ್ತಾವುದೋ ಹೆಸರಿನಿಂದ ಕರೆದಾಕ್ಷಣ ಅದರ ಸುವಾಸನೆ ಬೇರೆಯಾಗಿ ಬಿಡುತ್ತದೆಯೇ! ಆದುದರಿಂದಲೇ ಹೆಸರು ಎನ್ನುವುದು ಒಬ್ಬ ವ್ಯಕ್ತಿಯನ್ನು ಗುರುತಿಸಲು ಆಯ್ದುಕೊಂಡಿರುವ ಮಾರ್ಗವಷ್ಟೆ. ಹೀಗೆ ಹೆಸರಿನಿಂದ ಆ ವ್ಯಕ್ತಿಯ ಘನತೆ, ಗೌರವಗಳು ಹೆಚ್ಚಾಗಿರಲೂ ಬಹುದು. ಕೆಲ ವ್ಯಕ್ತಿಗಳಿಗೆ ಈ ರೀತಿಯ ನಾಮದ ಬಲದಿಂದ ಮರ್ಯಾದೆ, ಪ್ರತಿಷ್ಠೆಗಳು ಬಂದಿರಬೇಕಾದರೆ ಇನ್ನು ದೇವರುಗಳಿಗೆ ಬಾರದಿರುತ್ತದೆಯೇ? ಅದಕ್ಕೆ ಅಲ್ಲವೇ ಪುರಂದರದಾಸರು ಹಾಡಿರುವುದು,

**ನೀನ್ಯಾಕೋ ನಿನ ಹಂಗ್ಯಾಕೋ**

**ನಿನ್ನ ನಾಮದ ಬಲವೊಂದಿದ್ದರೆ ಸಾಕೋ!** ಎಂದು.

ಹೀಗೆ ಹೆಸರು ಎಂದಾಕ್ಷಣ ಹೆಸರಿಗೆ ಬಲ ಬಂದಂತೆ, ಶೇಕ್ಸ್‌ಪಿಯರನ ಉವಾಚದಂತೆ ಗಮಗಮ ಎಂದು ಸುವಾಸನೆ ಬೀರಿದಂತೆ ಹೆಸರಿಗೆ ರುಚಿಯೂ ಸೇರಿಕೊಂಡರೆ! ಕೈಲಾಸಂರವರು ಹೇಳುತ್ತಿದ್ದ ಕುಡುಕ ಭಕ್ತನೊಬ್ಬನ ಕಥೆಯನ್ನು ಕೊಂಚ ಜ್ಞಾಪಿಸಿಕೊಳ್ಳಿ.

ಕುಡುಕ ಭಕ್ತನೊಬ್ಬ ದೇವರ ಮುಂದೆ ನಿಂತ. ಕುಡಿಯಲು ಜೇಬಿನಲ್ಲಿ ಮೂರುಕಾಸಿಲ್ಲ, ಆದರೆ ಕುಡಿಯುವ ವಾಂಛೆಯನ್ನು ಹತ್ತಿಕ್ಕಲಾಗುತ್ತಿಲ್ಲ. ಕಲ್ಲು ವಿಗ್ರಹದ ಕಪ್ಪಾನೆ ಕಪ್ಪು ಹಣೆಯ ಮೇಲೆ ಬೆಳ್ಳಿಯ ಮೂರು ನಾಮ ಹೊಳೆಯುತ್ತಿದ್ದುದನ್ನು ಕಂಡ. ಕುಡುಕನ ತಲೆಯಲ್ಲಿ ಮಿಂಚಿನ ಸಂಚಾರವಾಯಿತು. ಬೆಳ್ಳಿಯ ನಾಮವನ್ನು ಕದ್ದು ಹೆಂಡದಂಗಡಿಗೆ ಕೊಟ್ಟು ಚೆನ್ನಾಗಿ ಕುಡಿದು ತೂರಾಡುತ್ತಾ ಬಂದು 'ಭಗವಾನ್ ನೀ ನಾಮಮ್ ಏಮಿ ರುಚಿರಾ?' (ದೇವರೆ ನಿನ್ನ ನಾಮ ಎಷ್ಟೊಂದು ರುಚಿಯಾಗಿದೆ) ಎಂದು ಹಾಡಿದನಂತೆ. ನೋಡಿದಿರಾ ನಾಮದ ಮಹಿಮೆ ಹೇಗಿದೆ.

ಒಬ್ಬನ ಹೆಸರು ಪ್ರಸಿದ್ಧಿಗೆ ಬರುತ್ತಿದ್ದಂತೆ ಆತನ ಹೆಸರಿನ ಹಿಂದೆ ಅವನು ಮಾಡಿದ ಪ್ರಖ್ಯಾತಿ, ಕುಖ್ಯಾತಿಯ ಫಲವಾಗಿ ಅಡ್ಡಹೆಸರುಗಳೂ ತಗುಲಿಕೊಳ್ಳುವುದುಂಟು. ಒಂಟಿ ಸೀನ, ಲಂಬು ರಾಜು, ಕೋಳಿ ಭರಮ.... ಹೀಗೆ ಕರೆದಾಗಲೇ ಅವರುಗಳು ಓ, ಎನ್ನುವುದು. ಬಿಡಿ, ಇವೆಲ್ಲ ಇಟ್ಟ ಹೆಸರಿನ ಹಿಂದೆ ಅಂಟಿಕೊಂಡ ನಕಲಿ ಹೆಸರುಗಳಾದರೆ ಉತ್ತರ ಕರ್ನಾಟಕದ ಕಡೆ ಕರೆಯುವ ನಿಜವಾದ ಹೆಸರುಗಳನ್ನು ನೀವು ಕೇಳಿದಾಗ ಬಿದ್ದೂಬಿದ್ದು ನಗದಿರುವುದು ಸಾಧ್ಯವೇಯಿಲ್ಲ.

"ನಾನು ಪ್ಯಾಟಿಗಿ ಹೋಗಿದ್ನಾ. ಅಲ್ಲಿ ಹುರಗಡ್ಲಿ ಔಣ್ಯಾಗ ಚುರುಮುರಿ ಖರಿದಿ ಮಾಡಿದ್ನಾ. ಅಷ್ಟರಾಗೆ ನಮ್ಮ ಕೋತಂಬರಿ ಕಾಲೇಜಿನ ಮಿತ್ರರಾದ ಅಂಗಡಿ, ಸಕ್ಕರಿ, ಬ್ಯಾಳಿ, ಅಕ್ಕಿ, ಗೋದಿ, ಮೆಣಸಿನ್‌ಕಾಯಿ ಎಲ್ಲಾಸೇರಿ ಹೋಟೆಲ್‌ದಾಗೆ ಮಿರ್ಚಿ ಭಜಿ,



ಖರೀದಿ ಮಾಡಿದ್ವಾ. ಅಷ್ಟರಾಗೆ ಎಲ್ಲಿಂದ್ಲೋ ಬಂದ ವಸ್ತ್ರದ, ಖಾರದ, ಬೆಲ್ಲದ, ಜೋಳದ, ತುಪ್ಪದ ಎಲ್ಲೂ ಸೇರ್‍ಕೊಂಡು ಸುತ್ತಾಡಕ್ ಹೊಂಟ್ವಿ"

"ಹೇಗಿದೆ ನೋಡಿದಿರಾ ಹೆಸರಿನ ಗಮ್ಮತ್ತು!"

ಬಿಡಿ, ಈ ಹೆಸರುಗಳೆಲ್ಲ ಏಕನಾಮ ಪ್ರತ್ಯಯ ರೂಪದ ಹೆಸರುಗಳಾದರೆ ಇಬ್ಬರ ಹೆಸರಿನಲ್ಲೂ ಸಾಮ್ಯತೆ ಕಂಡು ಬಂದಾಗ ಆಗುವಗೊಂದಲ, ಗೋಜಲುಗಳಿಗೆ ಲೆಕ್ಕವೇ ಇರುವುದಿಲ್ಲ. ಒಬ್ಬರ ಹೆಸರು ಪ್ರಸಿದ್ಧಿಗೆ ಬಂದು ಬಿಟ್ಟರೆ ಅದೇ ಹೆಸರಿನ ಮತ್ತೊಬ್ಬ ಅಖ್ಯಾತ (unpopular) ವ್ಯಕ್ತಿಗೂ ಒಂದಷ್ಟು ಗೌರವ ಕೂಡಿ ಬಂದು ಬಿಡುತ್ತದೆ.

ಹಿಂದೆಲ್ಲ ಇಂದಿರಾಗಾಂಧಿಯನ್ನು ಹೆಸರಿಸುವಾಗ ಮಹಾತ್ಮಗಾಂಧಿಯವರ ಮಗಳೋ ಇಲ್ಲವೇ ಸೊಸೆಯೋ ಆಗಿರಬೇಕೆಂಬ ಗೊಂದಲ ಹಲವಾರು ವಿದೇಶಿ ಮಂದಿಯನ್ನು ಕಾಡಿದ್ದುಂಟು. ಹಾಗೆಯೇ ಪಾರ್ಲಿಮೆಂಟರಿ ಮಾಜಿ ಕಾರ್ಯದರ್ಶಿ ಲಕ್ಷ್ಮೀ ಮೆನನ್‌ರವರು ಅಮೆರಿಕಾಗೆ ಭೇಟಿ ಕೊಟ್ಟಾಗ ಹಲವಾರು ಪತ್ರಿಕೆಗಳು ವಿ.ಕೆ. ಕೃಷ್ಣಮೆನನ್‌ರವರ ಪತ್ನಿ ಎಂಬಂತೆ ಬಿಂಬಿಸಿದವಂತೆ.

ಇದೇ ರೀತಿ ಬಹಳ ಕಾಲದವರೆವಿಗೂ ಮತ್ತೊಂದು ಜಿಜ್ಞಾಸೆ ನಡೆಯುತ್ತಿದ್ದುದನ್ನು ನೀವು ಕೇಳಿರಬಹುದು, ಇಲ್ಲವಾ? ಹಾಗಾದರೆ ಓದಿ. ಪತ್ರಿಕೋದ್ಯಮಿ, ಇತಿಹಾಸ ಪ್ರಾಧ್ಯಾಪಕ, ಕರ್ನಾಟಕ ಸರಕಾರದ ಗೆಝೆಟಿಯರ್ ಇಲಾಖೆಯಲ್ಲಿ ಮುಖ್ಯಸ್ಥರಾಗಿದ್ದ ಡಾ. ಸೂರ್ಯನಾಥ ಕಾಮತರಿಗೂ, ಪ್ರಸಿದ್ಧ ಕೀಟ ಶಾಸ್ತ್ರವಿಜ್ಞಾನ ಹಾಗೂ ಛಾಯಾ ಗ್ರಾಹಕರಾಗಿದ್ದ ಡಾ. ಕೃಷ್ಣಾನಂದ ಕಾಮತರಿಗೂ (ಶ್ರೀಮತಿ ಜ್ಯೋತ್ಸ್ನಾ ಕಾಮತರ ಪತಿ) ಹೆಸರಿನ ಸಾಮ್ಯದಿಂದ ಹಲವಾರು ಮಂದಿ ಗೊಂದಲ ಮಾಡಿಕೊಂಡಿದ್ದೂ ಉಂಟು. ಇಬ್ಬರೂ ಡಾಕ್ಟರೇಟ್ ಪಡೆದಿರುವುದು ಮತ್ತಷ್ಟು ಗೊಂದಲಗಳಿಗೆ ಎಡೆ ಮಾಡಿಕೊಡುತ್ತಿತ್ತು.

ಆಕಾಶವಾಣಿಯಲ್ಲಿ ಅಧಿಕಾರಿಯಾಗಿದ್ದ ಜ್ಯೋತ್ಸ್ನಾ ಕಾಮತರನ್ನು ಒಮ್ಮೆ ಭೇಟಿಮಾಡಲು ಅಪರಿಚಿತರೊಬ್ಬರು ಬಂದರು. ಬಂದವರು ನಿಮ್ಮ ಪತಿ ಬರೆದಿರುವ ಪುಸ್ತಕಗಳನ್ನೆಲ್ಲಾ ಓದಿದ್ದೇನೆ, ಬಹಳ ಚೆನ್ನಾಗಿದೆ ಎಂದು ಹೊಗಳ ತೊಡಗಿದರಂತೆ. ಪತಿಯು ಹಲವಾರು ಪುಸ್ತಕಗಳನ್ನು ಬರೆದಿದ್ದರಿಂದ ಸಹಜವಾಗಿಯೇ ಹೊಗಳಿಕೆಗೆ ಪಕ್ಕಾದ ಜ್ಯೋತ್ಸ್ನಾ ಕಾಮತರು ಸಂತೋಷದಿಂದ ಕಾಫಿ ತರಿಸಿಕೊಟ್ಟರು. ಕಾಫಿ ಕುಡಿಯುತ್ತ ಆತ 'ಮತ್ತೇನು ಬರೆಯುತ್ತಿದ್ದಾರೆ ನಿಮ್ಮ ಪತಿ ಸೂರ್ಯನಾಥ ಕಾಮತರು' ಎಂದಾಗ, ದಿಙ್ಮೂಢರಾದ ಜ್ಯೋತ್ಸ್ನಾ ಕಾಮತರು ವಿಪರೀತಕ್ಕೆ ಹೋಗುವುದಕ್ಕೆ ಮುಂಚೆಯೇ ತಡೆಹಾಕುವುದು ಒಳಿತೆಂದು ಭಾವಿಸಿ "ನೀವು ಓದಿರುವ ಪುಸ್ತಕಗಳು ಕೃಷ್ಣಾನಂದ ಕಾಮತರವು, ಅವರು ನನ್ನ ಪತಿ" ಎಂದಾಗ ಅಪರಿಚಿತ ಮಾಯವಾಗಿ ಬಿಟ್ಟನಂತೆ.

ಇನ್ನೊಂದ ಘಟನೆ– ಅಪರಿಚಿತರೊಬ್ಬರು ಸೂರ್ಯನಾಥ ಕಾಮತರನ್ನು ಭೇಟಿಯಾಗಿ 'ನಿಮ್ಮ ಶ್ರೀಮತಿಯವರನ್ನು ಆಕಾಶವಾಣಿಯಲ್ಲಿ ಕಂಡಿದ್ದೆ' ಎಂದರಂತೆ. ಅದಕ್ಕೆ ಸೂರ್ಯನಾಥ ಕಾಮತರು ತಕ್ಷಣ "ಅಲ್ಲೇನು ಕೆಲಸ ಅವಳಿಗೆ?" ಎಂದು ಹೇಳಿ ಸ್ವಲ್ಪ ವಿರಾಮ ಕೊಟ್ಟು, ಬಹುಶಃ ನೀವು ಕಂಡಿರುವುದು ಡಾ. ಕೃಷ್ಣಾನಂದ ಕಾಮತರ ಪತ್ನಿ ಜ್ಯೋತ್ಸ್ನಾ ಕಾಮತರನ್ನು ಎಂದು ಸಂಶಯ ನಿವಾರಿಸಿದಾಗ ಆತ ಬೆಕ್ಕಸಬೆರಗಾಗಿ ನೋಡತೊಡಗಿದರಂತೆ.



ಒಮ್ಮೆ ಕದಂಬ ಅರಸರ ಬಗ್ಗೆ ಸಂಶೋಧನ ಶಿಬಿರವನ್ನು ಬನವಾಸಿಯ ಮಧುಕೇಶ್ವರ ದೇವಾಲಯದ ಆವರಣದಲ್ಲಿ ಏರ್ಪಡಿಸಿದ್ದರಂತೆ. ಡಾ. ಸೂರ್ಯನಾಥ ಕಾಮತರು ಹಾಗೂ ಜ್ಯೋತ್ಸ್ನಾ ಕಾಮತರು ಪ್ರಬಂಧ ಓದಿದರು. ಕಾರ್ಯಕ್ರಮ ಮುಗಿದ ನಂತರ ಜ್ಯೋತ್ಸ್ನಾರವರು

ಸೂರ್ಯನಾಥ ಕಾಮತರೊಡನೆ ಬೆಂಗಳೂರಿಗೆ ಹೊರಟರು. ಬಸ್ಸಿಗೆ ಬೀಳ್ಕೊಡಲು ಬಂದ ಪ್ರೊಫೆಸರೊಬ್ಬರು "ಅನುರೂಪ ದಂಪತಿಗಳು, ಚರಿತ್ರೆಯಲ್ಲಿ ಹೆಚ್ಚು ಹೆಚ್ಚು ಸೇವೆ ಸಲ್ಲಿಸಿ" ಎಂದು ಹರಸಿದರಂತೆ. ಇದನ್ನು ಕೇಳಿದ ಇತರರೆಲ್ಲರೂ ಬಿದ್ದು ಬಿದ್ದೂ ನಕ್ಕರಂತೆ.

ಮತ್ತೊಮ್ಮೆ ಡಾ. ಸೂರ್ಯನಾಥ ಕಾಮತರು ಹಾಗೂ ಡಾ. ಕೃಷ್ಣಾನಂದ ಕಾಮತರು ಕೂಡಿ ಶಿವರಾಮ ಕಾರಂತರನ್ನು ಕಾಣಲು ಹೋದರಂತೆ. ಇವರಿಬ್ಬರನ್ನು ಕಂಡು ಮಾತನಾಡಿಸಿದ ಶಿವರಾಮ ಕಾರಂತರು "ನೋಡಿ, ಬಹಳ ಕಾಲದಿಂದಲೂ ನಿಮ್ಮಿಬ್ಬರ ಹೆಸರಿನ ಗೊಂದಲ ಇದ್ದೇ ಇದೆ. ಇಬ್ಬರೂ ಡಾಕ್ಟರು, ಬರಹಗಾರರು, ಜೊತೆಗೆ ಕಾಮತರ ಗುಂಪಿಗೆ ಸೇರಿದವರು. ಪ್ರಥಮ ಹೆಸರಿನಲ್ಲಿಯೂ ಸಾಮ್ಯತೆಯಿದೆ. ನೀವಿಬ್ಬರೂ ಒಟ್ಟಿಗೆ ಬಂದಿದ್ದರಿಂದ ಸ್ವತಂತ್ರ ವ್ಯಕ್ತಿಗಳೆಂದು ತಿಳಿದುಕೊಳ್ಳಲು ಸಹಾಯವಾಯಿತು. ಆದರೂ ಗೊಂದಲ ಸಂಪೂರ್ಣ ಹೋಯಿತೆನ್ನಲಾಗದು" ಎಂದು ನಗುತ್ತಾ ನುಡಿದರಂತೆ.

ಹೀಗೆ ಇಬ್ಬರ ಹೆಸರಿನ ಸಾಮ್ಯದಿಂದ ಗೊಂದಲಗಳು ಹಲವರನ್ನು ಕಾಡುತ್ತಿದ್ದುದಂತೂ ನಿಜ. ಹೀಗೆ ಇನ್ನೂ ಎಷ್ಟೋ ಜನರ ಹೆಸರಿನ ಅವಾಂತರ ನಡೆದಿರಲೂಬಹುದು.

ಬಿಡಿ, ಅವೆಲ್ಲ ಬಹಳ ವರ್ಷಗಳ ಹಿಂದೆ ನಡೆದ ಘಟನೆಗಳು. ಈಗ ಪ್ರಸ್ತುತಕ್ಕೆ ಬರುತ್ತೇನೆ. ಈಗಲೂ ನನ್ನ ಹಾಗೂ ಪ್ರಖ್ಯಾತ ಭಾಷಣಕಾರರಾದ ವೈ.ವಿ. ಗುಂಡೂರಾವ್‌ರವರ ಹೆಸರಿನ ನಡುವೆ ನಡೆಯುತ್ತಿರುವ ಗೊಂದಲ, ತಮಾಷೆಯ ಘಟನೆಗಳನ್ನು ಸ್ವಲ್ಪ ವಿವರಿಸುತ್ತೇನೆ.

ದಯಮಾಡಿ ಮುಂದೆ ಓದಿ.

ನಾಡಿನ ಪ್ರಸಿದ್ಧ ಪತ್ರಿಕೆಗಳು ಮೊದಲ್ಗೊಂಡು ಸಣ್ಣ ಪತ್ರಿಕೆಗಳು ಅಂದರೆ ಪ್ರಸಾರದಲ್ಲಿ ಕಡಿಮೆಯಿರುವ ಪತ್ರಿಕೆಗಳವರೆಗೆ ಲೇಖನ, ಕಥೆ, ಪ್ರಬಂಧ, ಹಾಸ್ಯಲೇಖನ ಮತ್ತೊಂದು ಎಂದು ಬರೆಯುತ್ತಿರುವ ವೈ.ಎನ್. ಗುಂಡೂರಾವ್ ಆದ ನನ್ನ ಹೆಸರನ್ನು ನೀವು ಪತ್ರಿಕೆಗಳಲ್ಲಿ ಓದಿರಬಹುದು ಇಲ್ಲ ನೋಡಿರಬಹುದು. ಅದೇ ರೀತಿ ಚಿಂತಕರ ಚಾವಡಿ, ಹರಟೆ ಜಗುಲಿ, ಕಾಡುಹರಟೆ– ಊರ ಹರಟೆ ಮುಂತಾದ ಟಿವಿ ಕಾರ್ಯಕ್ರಮಗಳಿಂದ ಮೊದಲ್ಗೊಂಡು ಹಾಸ್ಯೋತ್ಸವಗಳವರೆಗೆ ಭಾಗವಹಿಸಿ ತಮ್ಮ ಭಾಷಣದಿಂದ ಆಕರ್ಷಿಸುತ್ತಿರುವ ವೈ.ವಿ. ಗುಂಡೂರಾವ್‌ರವರನ್ನು ನೋಡಿರುತ್ತೀರಾ ಅಥವಾ ಅವರ ಭಾಷಣ ಕೇಳಿರುತ್ತೀರಾ.

ನನಗೆ ಯಾವಾಗಲೂ ಮನೆಯಲ್ಲಿ ನೆಮ್ಮದಿಯಾಗಿ ಒಂದ್ಕಡೆ ಕೂತ್ಕೊಂಡು ಏನಾದರು ಬರೆಯುತ್ತಿರುವುದೆಂದರೆ ಭಾಳ ಇಷ್ಟ. ಆದ್ರೆ ನನ್ನ ಹೆಸರು ಪತ್ರಿಕೆಗಳಲ್ಲಿ ಪ್ರಕಟಗೊಂಡು ಪ್ರಚಾರಕ್ಕೆ ಬರುತ್ತಿದ್ದಂತೆ ನನ್ನನ್ನೇ ಭಾಷಣಕಾರ ವೈ.ವಿ. ಗುಂಡೂರಾವ್ ಎಂದು ತಪ್ಪು ತಿಳಿದು ಸಂಪರ್ಕಿಸಿದ್ದಿದೆ. ಇದು ಅವರ ತಪ್ಪಲ್ಲ ಬಿಡಿ. ಫೋನ್ ನಂ, ಕೊಟ್ಟವರು ಯಾವ ಗುಂಡೂರಾವ್ ಎಂದು ವಿಚಾರಿಸದೆ ನನ್ನ ನಂಬರ್ ಕೊಟ್ಟರೆ ಅವರೇನು ಮಾಡಿಯಾರು?

ಗೊಂದಲಕ್ಕೊಳಗಾದ ಕೆಲವರು ಭಾಷಣಕ್ಕೆಂದು ನನ್ನನ್ನೂ ಕರೆಯತೊಡಗಿದರು. ನನಗೆ ಆಶ್ಚರ್ಯವಾದರೂ ಬಹುಶಃ ಪತ್ರಿಕೆಗಳಲ್ಲಿ ನನ್ನ ಹೆಸರು ನೋಡಿ ಕರೆದಿರಬಹುದೆಂದು ಕೆಲವು ಕಾರ್ಯಕ್ರಮಗಳಿಗೆ ಭಾಷಣಕ್ಕೆ ಹೋಗತೊಡಗಿದೆ. ಯಾವ ಬರಹಗಾರನಿಗೆ ಭಾಷಣದ ಹುಚ್ಚು ಇರುವುದಿಲ್ಲ ಹೇಳಿ? ನನಗೂ ಒಂಚೂರು ಭಾಷಣದ ಹುಚ್ಚು ಹಿಡ್ಕೊಂಡು,



ವೈ.ವಿ. ಗುಂಡೂರಾವ್‌ರವರನ್ನು ಕರೆಯುವುದರ ಬದಲು ನನ್ನನ್ನೇ ಕರೆದಿದ್ದಾರೆ ಅನ್ನೋದು ತಿಳಿದರೂ, ನಾನೇನೂ ಮಾತನಾಡದೆ ಸುಮ್ನೆ ಒಪ್ಕೊಂಡು ಭಾಷಣ ಮಾಡಿ ಬಂದಿದ್ದೇನೆ. ಆದರೆ ಕಾರ್ಯಕರ್ತರು ಹಲವಾರು ಬಾರಿ ಭಾಷಣದ ವೈ.ವಿ. ಗುಂಡೂರಾವ್ ಎಂದು ನನ್ನನ್ನೇ ಕರೆದು ಬೇಸ್ತು ಬಿದ್ದಿರುವ ಸಂದರ್ಭಗಳೂ ಉಂಟು. ಅದನ್ನು ಹೇಳಿ ಬಿಡ್ತೇನೆ ಕೇಳಿ–

'ಖಡ್ಗ ಕೊಟ್ಟ ಮೇಲೆ ಯುದ್ಧಕ್ಕೆ ಹೋಗಲೇಬೇಕು' ಅನ್ನೊ ಹಾಗೇ ಭಾಷಣಕ್ಕೆ ಕರೆದ ಮೇಲೆ ಬೇಡ ಅನ್ನೋ ಛಾಯ್ಸ್ ನಂಗಾದರೂ ಎಲ್ಲಿದೆ ಹೇಳಿ? ಹೀಗೊಂದು ಕಾರ್ಯಕ್ರಮ. ಭಾಷಣಕ್ಕೆ ಕರೆದರು. ಹೋದೆ. ಭಾಷಣ ಮಾಡಿದೆ. ಏನೇನೋ ಹೇಳಿದೆ. ಏನು ಹೇಳಿದೆ ಅನ್ನೋದು ನನಗೇ ತಿಳಿಯದು. ಇನ್ನು ಶ್ರೋತೃಗಳಿಗೆ ತಿಳಿಯುವುದಾದರೂ ಹೇಗೆ? ಒಟ್ಟಿನಲ್ಲಿ ಸಪ್ಪೆ ಭಾಷಣ. ನಾನೇ ಒಪ್ಕೊಂಡ್ ಬಿಡ್ತೀನಿ. ವೈ.ವಿ. ಗುಂಡೂರಾವ್ ಅಷ್ಟು ಆಕರ್ಷಕವಾಗಿ ನಾನು ಮಾತನಾಡಲಾರೆ. ಅಂತೂ ಕಾರ್ಯಕ್ರಮ ಮುಗಿಯಿತು. ಶ್ರೋತೃಗಳೆಲ್ಲರೂ ಭಾಷಣ ಕೇಳ್ಕೊಂಡು ಎದ್ಹೋದ್ರು. ಆದ್ರೆ ಕಾರ್ಯಕ್ರಮ ಏರ್ಪಡಿಸಿದ ಕಾರ್ಯಕರ್ತರಿಗೆ ಸಮಾಧಾನ ಆದ್ರೆ ತಾನೇ ಸಂಭಾವನೆ, ಭಾಷಣದ ನಂತರ ರೂಮಿಗೆ ಕರೆದೊಯ್ದು ತಿಂಡಿ–ಕಾಫಿ ಕೊಟ್ರು ತಿಂದೆ, ಹಣ್ಣಿನ ಬುಟ್ಟಿ ಕೊಟ್ರು. ತಗೊಂಡೆ. ಪಕ್ಕದ ಕೊಠಡಿಯಿಂದ ಅದೇನೋ ಪಿಸಪಿಸ–ಗುಸಗುಸ. ವಾರೆ ನೋಟ ಬೀರಿದೆ. ಸಂಭಾವನೆಯನ್ನು ಹಾಕಿದ ಕವರ್‌ನಿಂದ ಒಂದೆರಡು ನೋಟು ವಾಪಸ್ ತೆಗೆದದ್ದು ಕಾಣಿಸ್ತು. ಕಾರ್ಯಕರ್ತರು ವೈ.ವಿ. ಗುಂಡೂರಾವ್‌ರವರನ್ನು ಕರೆಯುವುದರ ಬದಲು ನನ್ನನ್ನು ಕರೆದು ಬೇಸ್ತು ಬಿದ್ದಿದ್ದಾರೆ ಅಂತಾ ತಿಳೀತು. ವೈ.ವಿ. ಗುಂಡೂರಾವ್ ಅನ್ಕೊಂಡು ಸ್ವಲ್ಪ ಜಾಸ್ತಿ ಸಂಭಾವನೆ ಹಾಕಿದ್ರು ಅಂತಾ, ಕಾಣುತ್ತೆ, ಸಪ್ಪೆ ಭಾಷಣಕ್ಕೆ ಇಷ್ಟೊಂದು ಹಣ ಯಾಕೆ ಅಂತ ವಿಷಯ ತಿಳಿದ ಮೇಲೆ ವಾಪಸ್ ತೆಗೆದಿರಬೋದು! ನನ್ನ ಯೋಗ್ಯತೆ ಎಷ್ಟೂಂತ ನನಗೊತ್ತಿಲ್ವೇ... 'ಸಿಕ್ಕಷ್ಟೇ ನನ್ನ ಪುಣ್ಯ' ಅಂತ ಕೊಟ್ಟಿದ್ದನ್ನ ಜೇಬಿಗಿಳಿಸ್ದೆ. ನನ್ನ ಅದೃಷ್ಟ ಹೀಗಿದ್ರೆ ಇನ್ನು ಕಾರ್ಯಕರ್ತರು ಏನ್ಮಾಡ್ತಾರೆ ಹೇಳಿ?

ಇದು ಹೆಸರಿನಿಂದ ಆಗ್ತಿರೋ ಕನ್‌ಫ್ಯೂಷನ್ ಅಂತಾ ನಮ್ಮಿಬ್ರರಿಗೂ ಗೊತ್ತು. ಪತ್ರಿಕೆಗಳಲ್ಲಿ ನನ್ನ ಲೇಖನ ಪ್ರಿಂಟಾದ ದಿನ ವೈ.ವಿ. ಗುಂಡೂರಾವ್‌ಗೆ ಫೋನ್ ಮಾಡಿದ ಅವನ ಸ್ನೇಹಿತರು "ಸಾರ್, ಪತ್ರಿಕೆಯಲ್ಲಿ ನಮ್ಮ ಲೇಖನ ಬಾಳ ಚೆನ್ನಾಗಿತ್ತು" ಎಂದು ಅಭಿನಂದನೆ ಸಲ್ಲಿಸುವುದು. ಆಗ ವೈ.ವಿ. ಗುಂಡೂರಾವ್ ಥಾಂಕ್ಯೂ ಥಾಂಕ್ಯೂ ಎಂದು ಹೇಳುವುದು. ಹೀಗೆ ಹತ್ತಾರು ಫೋನ್ ಕಾಲ್ ಬಂದ ನಂತರ ವೈ.ವಿ. ಗುಂಡೂರಾವ್‌ರವರಿಂದ ನನಗೆ ಫೋನು. "ನೋಡಿಪ್ಪ, ನೀವು ಬರೆದ ಲೇಖನ ನೋಡಿ ನನಗೆ ಅಭಿನಂದಿಸುತ್ತಿದ್ದಾರೆ... ಕಾಂಪ್ಲಿಮೆಂಟ್ಸ್ ಎಲ್ಲಾ ನಿಮಗೆ ಡೈವರ್ಟ್ ಮಾಡ್ತಿದೀನಿ" ಅಂತಾ ನನಗೆ ಹೇಳೋದು ಇವೆಲ್ಲ ದಿನಬೆಳಗಾದ್ರೆ ನಡೀತಾನೇ ಇತ್ತು.

ಶಿವರಾತ್ರಿ ಜಾಗರಣೆಯ ಕಾರ್ಯಕ್ರಮ, ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಗೆರಾತ್ರಿ. ಇಡಿ ರಾತ್ರಿ ಹಾಸ್ಯ ಕಾರ್ಯಕ್ರಮ. ನಾನು ನನ್ನ ಸ್ನೇಹಿತ ಸಂಡೂರ್... ವೆಂಕಟೇಶ್ ಇಬ್ಬರೂ ಸೇರಿ ನಮ್ಮಿಬ್ಬರ ಹಾಗೂ ಇನ್ನೂ ಕೆಲವು ಹಾಸ್ಯ ಪುಸ್ತಕಗಳ ಮಾರಾಟ ಮಾಡಲು ತಗೊಂಡ್ಹೋಗಿದ್ವಿ. ಒಳಗಡೆ ವೈ.ವಿ. ಗುಂಡೂರಾವ್ ಭಾಷಣ. ಹೊರಗಡೆ ವೈ.ಎನ್. ಗುಂಡೂರಾವ್ ಆದ ನನ್ನ ಪುಸ್ತಕ ಮಾರಾಟ. ಕಾರ್ಯಕ್ರಮಕ್ಕೆ ಬಂದವರೆಲ್ರೂ ಪುಸ್ತಕಗಳನ್ನು ಕೈಲಿ ತಗೊಂಡು ನೋಡೋದು, ಓ! ಇವತ್ತು ಭಾಷ್ಣ ಮಾಡ್ತಾಯಿದ್ದಾರಲ್ಲ ಅವರು ಬರೆದಿರೋ ಪುಸ್ತಕಾನಾ? ಕೊಡಿ, ಕೊಡಿ ಎಂದು ದುಡ್ಡು ಕೊಟ್ಟು ಕೊಳ್ಳೋದು.



ಇದೇ ಟ್ರಿಕ್ಕನ್ನೆ ಮುಂದುವರೆಸಿ ವೈ.ವಿ. ಗುಂಡೂರಾವ್ ಬರೆದ ಪುಸ್ತಕ ಅಂತಾ ಹೇಳಿ ನನ್ನ ಎಲ್ಲಾ ಪುಸ್ತಕಾನೂ ಮಾರ್ಕೊಂಡ್ಬಿಟ್ಟೆ. ಒಳಗೆ ಭಾಷಣ ಕುಟ್ತಿರೋ ವೈ.ವಿ. ಗುಂಡೂರಾವ್‌ಗೆ ಗೊತ್ತೇಯಿಲ್ಲ. ಗೊತ್ತಾಗಿದ್ರೆ ಲಾಭದಲ್ಲಿ ಪಾಲು ಕೇಳ್ತಿದ್ರೋ ಏನೋ!

ಬಿಡಿ, ದೂರದಿಂದ ನೋಡೋವ್ರ್‌ಗೆ ಒಂದೇ ಥರಾ ಇದ್ದೀವಿ ಅನ್ನೋದು, ಇನಿಷಿಯಲ್ಸ್ ಬಿಟ್ರೆ ಹೆಸ್ರು ಒಂದೇ ಅನ್ನೋದು, ಪರಿಚಯವೇ ಇಲ್ಲದವರಿಗೆ ಕನ್‌ಫ್ಯೂಷನ್ ಆಗೋದು ಸಹಜ. ಆದ್ರೆ ಹತ್ತಾರು ವರ್ಷ ಒಂದೇ ಸಾಂಸ್ಕೃತಿಕ ಸಂಸ್ಥೆಯಲ್ಲಿ ನಾವಿಬ್ರೂ ಒಟ್ಟಿಗೆ ಕೆಲ್ಸ ಮಾಡ್ತಾಯಿದ್ದಾಗ, ಈ ಸಂಸ್ಥೆಯ ಸದಸ್ಯರೇ ಕನ್‌ಫೋಷನ್ ಮಾಡ್ಕೋತಾ ಇದ್ರು ಅಂದ್ರೆ ಏನ್ ಹೇಳೋದು?

ಸಂಸ್ಥೆಯ ಹತ್ತು ವರ್ಷದ ಸಂಭ್ರಮ. ಸಾವೆನೀರ್ ತಂದ್ವಿ. ಸಾವೆನೀರ್ ಅಂದ್ಮೇಲೆ ಕಾರ್ಯಕಾರಿ ಸಮಿತಿಯ ಸದಸ್ಯರ ಫೋಟೋ ಇಲ್ದೆಯಿದ್ಮೇಲೆ ಅದೆಂತಹ ಮ್ಯಾಗಜಿನ್? ನಮ್ಮ ಫೋಟೋಗಳೂ ಪ್ರಿಂಟ್ ಆದ್ವು. ಪುಸ್ತಕ ಪೂರ್ತಿ ಪ್ರಿಂಟ್ ಆದ್ಮೇಲೆ ನೋಡಿದ್ರೆ ನನ್ನ ಫೋಟೋ ಕೆಳಗೆ ವೈ.ವಿ. ಗುಂಡೂರಾವ್ ಹೆಸರು, ವೈ.ವಿ. ಗುಂಡೂರಾವ್ ಫೋಟೋ ಕೆಳಗೆ ನನ್ನ ಹೆಸರು!! ಪ್ರಿಂಟಿಂಗ್ ಎಲ್ಲಾ ನೋಡ್ಕೋತಾಯಿದ್ದ ಮ್ಯಾನೇಜಿಂಗ್ ಟ್ರಸ್ಟೀಗೇ ಇಂಥ ಕನ್‌ಫ್ಯೂಷನ್. ಇನ್ನು ಪರಿಚಯದಿಲ್ಲದವರ ಪಾಡೇನು?

ಸಾರ್ವಜನಿಕವಾಗಿ, ಸ್ನೇಹಿತರ ಮಧ್ಯೆ ಈ ಹೆಸರಿನ ಕನ್‌ಫ್ಯೂಷನ್ ಇರ್ಲೇಬಾರ್ದು ಅಂತಾ ನಾವಿಬ್ರೂ ಡಿಸೈಡ್ ಮಾಡಿದಾಗ, ಒಂದೇ ವೇದಿಕೆಯ ಮೇಲೆ ಸೇರಿ ಪರಿಹಾರ ಮಾಡ್ಕೊಳ್ಳೋ ಸಂದರ್ಭ ಬಂತು. ನಾನು ಸಂಪಾದಿಸಿದ "ಚೌರ ಸುಖ" ಪ್ರಬಂಧ ಸಂಕಲನ. 'ಅಂಕಿತ ಪುಸ್ತಕ' ಪ್ರಕಾಶಕರಿಂದ ವರ್ಲ್ಡ್ ಕಲ್ಚರ್‌ನಲ್ಲಿ ಬಿಡುಗಡೆ ಕಾರ್ಯಕ್ರಮ ಅಂದಿನ ಬಿಡುಗಡೆ ಕಾರ್ಯಕ್ರಮದಲ್ಲಿ ವೈ.ವಿ. ಗುಂಡೂರಾವ್ ಕೂಡಾ ಒಬ್ಬರು ಮುಖ್ಯ ಭಾಷಣಕಾರರು. ಭಾಷಣದ ಕಡೆಯಲ್ಲಿ ವೈ.ವಿ. ಗುಂಡೂರಾವ್‌ರವರು, ನೋಡಿ ನಮ್ಮಿಬ್ಬರ ಹೆಸರಿನ ಸಾಮ್ಯ ಇರೋದ್ರಿಂದ ಸ್ವಲ್ಪ ಕನ್‌ಫ್ಯೂಷನ್ ಇದೆ. ಭಾಷಣ ಮಾಡ್ತಿರೋ ನಾನು ವೈ.ವಿ. ಗುಂಡೂರಾವ್. ಅಲ್ಲಿ ವೇದಿಕೆಯ ಮೇಲೆ ಕುಳಿತಿರೋರ್ರು ವೈ.ಎನ್. ಗುಂಡೂರಾವ್, ಬಹುಶಃ ಈಗ ಎಲ್ಲರಿಗೂ ಕ್ಲಿಯರ್ ಆಯ್ತು ಅಂತಾ ಕಾಣುತ್ತೆ. ಇನ್ನೊಂದು ವಿಷಯ. ನಾನು ಭಾಷ್ಣಬಿಟ್ಟು ಬರವಣಿಗೆ ಮಾಡೋಲ್ಲ. ಹಾಗೇ ವೈ.ಎನ್. ಗುಂಡೂರಾವ್ ಕೂಡಾ ಬರವಣಿಗೆ ಬಿಟ್ಟು ಭಾಷಣದ ಪ್ರದೇಶಕ್ಕೆ ಅತಿಕ್ರಮಿಸೋ ಹಾಗಿಲ್ಲ. ಏನಪ್ಪ ಎಂದು ನನ್ನ ಕಡೆ ನೋಡಿದರು. ಸರಿ ಎಂದು ಥಮ್ಸ್ ಅಪ್ ಮಾಡಿದೆ. ನಾವಿಬ್ರೂ ಇನ್ನು ಮುಂದೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮುಂದುವರೀತೀವಿ. ದಯವಿಟ್ಟು ಕನ್‌ಫ್ಯೂಷನ್ ಮಾಡ್ಕೋಬೇಡಿ ಎಂದು ಹೇಳಿ ಅವರ ಭಾಷಣ ಮುಂದುವರೆಸಿದರು.

ಭಾಷಣಗಳೆಲ್ಲವೂ ಮುಗಿಯಿತು. ಇಬ್ಬರೂ ವೇದಿಕೆಯಿಂದಿಳಿದು ಬಂದೆವು. ಸಾರ್, ಇಬ್ರೂ ಒಟ್ಗೆ ಸಿಕ್ಕಿದ್ದೀರಾ, ಬಾಳ ಅಪರೂಪ. ಹಸ್ತಾಕ್ಷರ ಹಾಕಿ ಸಾರ್ ಅಂತ ಪುಸ್ತಕ ಕೊಂಡ್ಕೊಂಡು ತುಂಬಾ ಜನ ಸಹಿ ಹಾಕಿಸ್ಕೊಂಡ್ರು. ಸ್ನೇಹಿತರ ಜೊತೆ ಇಬ್ರೂ ಮಾತಾಡ್ತಾ ನಿಂತಿದ್ವಿ. ಅಲ್ಲಿಗೊಬ್ಬ ಓಡೋಡಿ ಬಂದ. ವೈ.ವಿ. ಗುಂಡೂರಾವ್‌ರವರ ಹತ್ತಿರ ಹೋಗಿ "ಸಾರ್ ಇವತ್ತು ಎಲ್ಲಾ ಕ್ಲಾರಿಫೈ ಆಗೋಯ್ತು ಸಾರ್, ಇನ್‌ಯಾವ ಕನ್‌ಫ್ಯೂಷನ್ನು ಇಲ್ಲ ಸಾರ್. ಇವತ್ತಿನಿಂದ ನಿಮ್ಮನ್ನ ಸರಿಯಾಗಿ ತಿಳ್ಕೊಂಡಂಗಾಯ್ತು ಸಾರ್" ಎಂದು ವೈ.ವಿ. ಗುಂಡೂರಾವ್‌ರವರ ಭುಜ ತಟ್ಟುತ್ತಾ ನೀವು ವೈ.ಎನ್. ಗುಂಡೂರಾವ್ ತಾನೇ! ಎಂದ.

ಸುತ್ತಲಿದ್ದವರೆಲ್ಲ ನಗುತ್ತಿದ್ದರೆ ನಾವಿಬ್ಬರೂ ಸುಸ್ತಾಗಿ ಹೋದೆವು.

(ಆಭಾರ : ಡಾ. ಜ್ಯೋತ್ಸ್ನಾ ಕಾಮತ್, ಡಾ. ಜಿ.ಡಿ. ಜೋಶಿ, ಪ್ರೊ. ಅ.ರಾ.ಮಿತ್ರ ಇವರ ಲೇಖನಗಳ ಕೆಲವು ಸಾಲುಗಳಿಗೆ)



# ಜಿಪುಣತನ ವಂಶ ಪಾರಂಪರ್ಯವೇ?

**– ಡಾ. ಸಿ.ಕೆ. ರೇಣುಕಾರ್ಯ**

ಈ ಪ್ರಶ್ನೆ ನನ್ನನ್ನು ಬಹಳ ಸಾರಿ ಕಾಡಿದೆ. ಆದರೆ ಸರಿಯಾದ ಉತ್ತರ ಸಿಕ್ಕಿಲ್ಲ. ಏಕೆಂದರೆ ಅನೇಕ ತಂದೆ ತಾಯಿಯರಿಗೆ, ಅವರು ಎಷ್ಟೇ ಜಿಪುಣರಾದರೂ, ತುಂಬಾ ಧಾರಾಳವಾದ ಮಕ್ಕಳಿದ್ದಾರೆ. ನನ್ನ ಸ್ನೇಹಿತರಲ್ಲೇ ತಂದೆ–ತಾಯಿ ಜಿಪುಣತನದಿಂದ ಕಾಸಿಗೆ–ಕಾಸು ಗಂಟು ಹಾಕಿ ಉಳಿಸಿದ್ದನ್ನು ನೀರಿನಂತೆ ಖರ್ಚು ಮಾಡುತ್ತಿರುವ ಮಕ್ಕಳಿದ್ದಾರೆ.

ಆದರೆ ನಾನು ಈಗ ಹೇಳುವ ಉದಾಹರಣೆ ನನ್ನ ಪ್ರಶ್ನೆಗೆ ವಿಚಿತ್ರ ರೀತಿಯ ಉತ್ತರ ಕೊಡುತ್ತದೆ.

ನನ್ನ ಸಹೋದ್ಯೋಗಿ ಒಬ್ಬನಿದ್ದ. ಅವನ ಹೆಸರು ಸುಧಿಚಂದ್ರ. ಆತ ಚರಿತ್ರೆ ಪ್ರೊಫೆಸರ್. ಜಿಪುಣಾಗ್ರೇಸರ ಚಕ್ರವರ್ತಿ. ಅವನು ದುಡ್ಡು ಮಿಗಿಸುತ್ತಿದ್ದುದೂ, ಅದನ್ನು ದಾಖಲಿಸುತ್ತಿದ್ದುದೂ ತುಂಬಾ ವಿಚಿತ್ರ. ಮೊದ–ಮೊದಲು ಅವನು ಮೈಸೂರಿನಲ್ಲಿ ಸರಸ್ವತೀಪುರಂನಿಂದ ದೇವರಾಜಾ ಮಾರುಕಟ್ಟೆಗೆ ರಿಕ್ಷಾದಲ್ಲಿ ಹೋಗುತ್ತಿದ್ದ. ರಿಕ್ಷಾ ಛಾರ್ಜ್ ರೂ.50 ಎಂದಿಟ್ಟು ಕೊಳ್ಳಿ. ಅವನು 49ರೂ. ಜೋಡಿಸಿಟ್ಟು ಕೊಂಡಿರುತ್ತಿದ್ದ. ರಿಕ್ಷಾದಿಂದ ಇಳಿದಾಗ ರೂ.500 ಅವನಿಗೆ ಕೊಡುತ್ತಿದ್ದ. ಅವನು 'ಚಿಲ್ಲರೆ ಇಲ್ಲ ಸ್ವಾಮಿ' ಎಂದರೆ, ಸುಧಿಚಂದ್ರ ಏನು ಮಾಡುವುದು? ನನ್ನ ಬಳಿ ಕೇವಲ 49ರೂ. ಇದೆ ಎಂದು ಹೇಳುವನು. ರಿಕ್ಷಾದವನು "ಪರವಾಗಿಲ್ಲ ಬಿಡಿ ಸ್ವಾಮಿ" ರೂ.49ತ್ತೇ ಕೊಡಿ ಎಂದರೆ, ಅಷ್ಟನ್ನು ಕೊಟ್ಟು ಬಿಡುತ್ತಿದ್ದ. ಮತ್ತೆ ಸುಧಿಚಂದ್ರ ಮನೆಗೆ ಬಂದು ಪ್ರತಿದಿನ ಉಳಿತಾಯದ ಲೆಕ್ಕ ಬರೆಯುತ್ತಿದ್ದ. ರೂ.1 ರಿಕ್ಷಾ ಉಳಿತಾಯ ಎಂದು ದಾಖಲಿಸುತ್ತಿದ್ದ. ಹೀಗೆ ಪ್ರತಿ ಬಾಬ್ತಿನಲ್ಲಿ ರೂ.1, 2 ಉಳಿತಾಯ ಮಾಡಿ ಲೆಕ್ಕ ಬರೆದು, ತಿಂಗಳ ಕೊನೆಯಲ್ಲಿ ಈ ತಿಂಗಳು ಇಷ್ಟು ಉಳಿಸಿದೆ ಎಂದು ನನಗೆ ಹೇಳುತ್ತಿದ್ದ. ಅವನ ಜಿಪುಣತನವನ್ನು ಹೊಗಳಬೇಕೋ, ತೆಗಳಬೇಕೋ ನನಗೆ ಗೊತ್ತಾಗುತ್ತಿರಲಿಲ್ಲ. ಅವನ ಮಿಗಿತಾಯ, ರಿಕ್ಷಾ, ತರಕಾರಿ, ಇಷ್ಟಕ್ಕೆ ಸೀಮಿತವಾಗಿರಲಿಲ್ಲ. ಮದುವೆ ಮನೆಗೆ ಊಟಕ್ಕೆ ಬರುತ್ತಾನೆ ಎಂದಿಟ್ಟುಕೊಳ್ಳಿ. ಊಟದಲ್ಲಿ ಎರಡು ಲಾಡು ಕೇಳಿ ಹಾಕಿಸಿಕೊಳ್ಳುತ್ತಿದ್ದ. ಒಂದು ಲಾಡು ತಿನ್ನುತ್ತಿದ್ದ. ಇನ್ನೊಂದು ಲಾಡುವನ್ನು ತೆಗೆದಿಟ್ಟುಕೊಳ್ಳುತ್ತಿದ್ದ. ಮನೆಗೆ ಹೋಗಿ ಅದರ ಲೆಕ್ಕ ಹೀಗೆ ಬರೆಯುತ್ತಿದ್ದ. "ರೂ. 1 ಲಾಡುವಿನಿಂದ ಉಳಿತಾಯ". ಹೀಗೆ ನಮ್ಮ ಸುಧಿಚಂದ್ರ ನಿವೃತ್ತನಾಗುವ ವೇಳೆಗೆ ಚಿಲ್ಲರೆ ಉಳಿತಾಯದ ಲೆಕ್ಕ ರೂ. 60,000/– ಆಗಿತ್ತು! ಸ್ವಲ್ಪ ವರ್ಷದ ನಂತರ ಅವನು ಒಂದು ಸ್ಕೂಟರ್ ತೆಗೆದುಕೊಂಡ. ಅದರ ಹಿಂದಿನ ಸೀಟಿನಲ್ಲಿ ಯಾವ ಸ್ನೇಹಿತರನ್ನೂ ಕೂರಿಸುತ್ತಿರಲಿಲ್ಲ. ಕಾರಣ ಹಿಂದಿನ ಟೈರ್ ಬೇಗ ಸವೆದು ಹೋಗುತ್ತದೆ ಎಂದು!

ನಾನು ಮತ್ತು ಅವನು ಒಟ್ಟಿಗೆ ವಿಶ್ರಾಂತರಾದೆವು. ವಿಶ್ರಾಂತನಾದ ನಂತರ ನಾನು ಒಂದು ಇಂಜಿನಿಯರಿಂಗ್ ಕಾಲೇಜಿನಲ್ಲಿ ಪಾರ್ಟ್ ಟೈಂ ಬೋಧಕನಾಗಿದ್ದೆ. ಒಂದು ದಿನ ತರಗತಿ ಮುಗಿಸಿಕೊಂಡು ಸ್ಟಾಫ್ ರೂಂಗೆ ವಾಪಾಸಾಗುತ್ತಿದ್ದೆ. ಕಾಲೇಜಿನ ಕ್ಯಾಷ್ ಕೌಂಟರ್ ಬಳಿ ಒಬ್ಬ ವಿದ್ಯಾರ್ಥಿ ಅಕೌಂಟೆಂಟ್ ಜೊತೆ ಏನೋ ವಾದ ಮಾಡುತ್ತಿದ್ದ. ಆ ಹುಡುಗ 'ಅಂಕಲ್ ಅಂಕಲ್' ಎಂದು ಕರೆದ. ನನ್ನ ಗುರುತು ಹತ್ತಿಲಿಲ್ಲವೆ ಅಂಕಲ್



ನಾನು 'ರವಿಚಂದ್ರ' ಸುಧಿಚಂದ್ರನ ಮಗ, ಎಂದ. ಆಗ ನನಗೆ ನೆನಪಾಯಿತು. ಇವನು ನನ್ನ ಸಹೋದ್ಯೋಗಿ ಸುಧಿಚಂದ್ರನ ಮಗ. ಇಲ್ಲಿ ಏನು? ಎಂದೆ. ನಾನು ಇಲ್ಲಿ ಇಂಜಿನಿಯರಿಂಗ್ ಸೇರಿಕೊಂಡಿದ್ದೇನೆ ಅಂಕಲ್. ಮೂರನೇ ವರ್ಷದಲ್ಲಿದ್ದೇನೆ. ಎಂದ. ಅಷ್ಟರಲ್ಲಿ ನಮ್ಮ ಅಕೌಂಟೆಂಟ್ "ನೋಡಿ ಸರ್, ಈ ಹುಡುಗ ರೂ. 25,000/– ಫೀ ಕಟ್ಟಬೇಕು. ಇವನು ತನ್ನ ಹತ್ತಿರ ಇರುವುದು 24,995/– ಎಂದೂ, ಇನ್ನು ರೂ. 5 ಕೊಡಲು, ರೂ. 500/– ಮುರಿಸಬೇಕು ಎಂದು ಹೇಳಿದ. ನಾನು ಹೋಗಲಿ ರೂ. 5 ಯಾವಾಗಲಾದರೂ ತಂದು ಕೊಡು ಎಂದು ಹೇಳಿದ್ದೇನೆ" ಎಂದು ವರದಿ ಒಪ್ಪಿಸಿದ. ಸುಧಿಚಂದ್ರನ ಮಗ ರವಿಚಂದ್ರ! ಜಿಪುಣತನ ವಂಶ ಪಾರಂಪರ್ಯವೇ? ■

---

## **ಆಸೆ** (ಹಕ್ಕಿಯ ಹಾಡಿಗೆ ತಲೆದೂಗುವ ಹೂ ಎಂಬಂತೆ)

**–ಎಚ್. ಡುಂಡಿರಾಜ್**

(ಕೆ.ಎಸ್.ನ. ಕ್ಷಮಿಸುವರೆ?)

**ಆಕೆಯ ಮಾತಿಗೆ ತಲೆದೂಗುವ ಪತಿ
ನಾನಾಗುವ ಆಸೆ
ಗೋಳಿನ ಗೀತೆಗೆ ಹಿನ್ನೆಲೆಯಲಿ ಶ್ರುತಿ
ನಾನಾಗುವ ಆಸೆ**

**ಆಕೆಯ ಕಿವಿಯಲಿ ಫಳಫಳ ಹೊಳೆಯುವ
ರಿಂಗಾಗುವ ಆಸೆ
ಶಾಪಿಂಗ್ ನಂತರ ಬಿಲ್ಲನು ನೋಡಿ
ದಂಗಾಗುವ ಆಸೆ**

**ಆಕೆಯ ಸುಂದರ ಮೊಗದಲಿ ನಾ ಮೇ–
ಕಪ್ಪಾಗುವ ಆಸೆ
ಕಾಡುವ ನೀಲಿಯ ಬಣ್ಣದ ಟಾಪಿನ
ಜಿಪ್ಪಾಗುವ ಆಸೆ**

**ಆಕೆಯ ಹೃದಯದ ತೋಟದ ಒಳಗೆ
ಜೇನಾಗುವ ಆಸೆ
ಕಪ್ಪು ಕೂದಲಿನ ರಾಶಿಯ ನಡುವೆ
ಹೇನಾಗುವ ಆಸೆ**

**ಆಕೆಯ ಮೂಗಿನ ತುದಿಯಲಿ ಮಿನುಗುವ
ನತ್ತಾಗುವ ಆಸೆ
ಪ್ರೇಮದ ಜಂಗಿ ಕುಸ್ತಿಯ ಕೊನೆಯಲಿ
ಚಿತ್ತಾಗುವ ಆಸೆ**



# ಹರನಮಃ ಪಾರ್ವತೀಪತೆಯೇ ಹರಹರ....!!

**– ಶರತ್ ಕಲ್ಕೋಡ್**

ಊಟದ್ಮನೆಯೆಂದರೆ ನಂಗೆ ಬಹಳಾಯಿಷ್ಟ! ಅಂದ ಮಾತ್ರಕ್ಕೆ ಇವ ಭಾಳ ತಿಂಡಿಪೋತ, ಹೊಟ್ಟೆಭಾಕಾಂತ ತಿಳ್ಕೋಬೇಡಿ. ಒಂದ್ವೇಳೆ ಹಾಗಂದ್ಕೊಂಡ್ರೂ ಪಾಪ ನಿಮ್ದೇನೂ ತಪ್ಪಿಲ್ಲ ಬಿಡಿ. ಬಾಲ್ಯದಲ್ಲೂ ನನ್ನ ಕಂಡ ಕೆಲಹಿರಿಯರು, "ನೋಡೋಕೆ ಮಾಣಿ, ಉಣ್ಣಾಕೆ ಗೋಣಿ" ಸುಖಾಸುಮ್ಮನೆ ಮಕ್ಕರ್ ಮಾಡೋರು! ಸಿಟ್ಟು ನೆತ್ತಿಗೇರಿ, ಮೈಯೆಲ್ಲಾ ಉರಿದರೂ ಅಸಹಾಯಕತೆಯಿಂದ ತೀಟೇ ತೀರಿಸಿಕೊಳ್ಳೀ ಅಂತ ತೆಪ್ಪಗಿರ್ತಿದ್ದೆ. ಏನ್ಮಾಡೋಕ್ಕಾಗುತ್ತೆ ಹೇಳಿ, ಅನ್ನೋರ ಕೈಯಲ್ಲಿ ಅನ್ನಿಸಿಕೊಳ್ಳಲೇಬೇಕಲ್ವಾ!? ಒಟ್ನಲ್ಲಿ ಪ್ರಾರಾಬ್ಧಕರ್ಮ!

ಪ್ರಾರಾಬ್ಧ ಕರ್ಮಯೆಂದನಲ್ಲವೇ? ನಿಜವಿರಬಹುದೂಂತ ಅನಿಸುತ್ತೆ ಕೆಲವೊಮ್ಮೆ! ಅದ್ರಲ್ಲೂ ಈಗ್ನೀನೂಟದ್ಮನೆಯ ಬಫೆ, ಟೇಬಲ್ ಸಿಸ್ಟಮ್ ನೋಡಿದರೆ ಹಾಗೇ ಅನ್ನಸದೇಯಿರಲು ಸಾಧ್ಯವಾ? ದೇವ್ರಾಣೆ ನಂಗೀದ್ಯಾವುದೂ ಹಿಡಿಸೋಲ್ಲ. ಪ್ಲೇಟ್ ಹಿಡಿದು, ಸಾಲಲ್ಲಿ ನಿಂತೋ, ಎಗ್ಗಿಲ್ಲದೇ ನುಗ್ಗಿಯೋ ಯಾರ್‍ಯಾರೋ ಮುಂದೆ ಕೈಚಾಚಿ, ಹಾಕಿದಷ್ಟು ಗಬಗಬನೆ ಮುಕ್ಕಿ ಹಾಳೇನೋ, ಪ್ಲಾಸ್ಟಿಕ್ ತಟ್ಟೇನೋ ಎಸ್ದು, ಓಡೋದಕ್ಕೆ ಊಟ ಅಂತಾರೇನ್ರೀ!? ಇನ್ನು ಆ ಟೇಬಲ್ ಮೀಲ್ಸೋ ಭಗವಂತನೇ ಕಾಪಾಡಬೇಕು! ಬೆನ್ನ ಹಿಂದೆ ಬೊಬ್ಬರ್ಯನ ಹಾಗೆ ನಿಂತು ಅವಸ್ರ ಮಾಡ್ತಯಿದ್ರೆ, ಕುಳಿತವ್ರು ತಿಂದನ್ನ ಸುಖವಾಗಿ ಅರಗಿ ಮೈಗೆ ಹಿಡಯೋದಾದ್ರು ಹೇಗೆ? ನೆಮ್ಮದಿಲಿ ತಿನ್ನಕ್ಕೂ ಬಿಡದ ಊಟ ಥತ್, ಅದೆಂಥ ಊಟಾರೀ!? ಹಾಗಾಗಿ "ಊಟದಮನೆಗೆ ಬಾ" ಅಂತೆಷ್ಟೇ ದೊಡ್ಡ ಮನುಷ್ಯರು, ಮನೆ ಬಾಗಿಲಿಗೆ ಬಂದು ಬಲವಂತ ಮಾಡಿ ಕರೆದ್ರೂ, ಮುಲಾಜಿಗೊಳಗಾಗದೇ ನಾನು ಬಿಲ್‌ಕುಲ್ ಜಪ್ಪಯ್ಯ ಅನ್ನೋದಿಲ್ಲ.

"ಏನೇ ಹೇಳಿ ನೀವು, ಊಟಕ್ಕೂ ಒಂದು ಶಿಸ್ತು, ರೀತಿ ರಿವಾಜು ಇರಬೇಕಲ್ವಾ? ಹಾಗಿದ್ರೆ ಅದೊಂದು ಸಂಸ್ಕೃತಿ.ಇಲ್ಲದಿದ್ರೆ ಏನು, ಎಷ್ಟೆಲ್ಲಾ ಅದ್ವಾನವಾಗುತ್ತೆ ಅನ್ನೋದಕ್ಕೆ ಬಫೆ, ಟೇಬಲ್ ಮೀಲ್ಸ್‌ಗಳೇ ಸಾಕ್ಷಿ!

"ಹಾಗಾದ್ರೆ ನಿಮ್ಮ ಲೆಕ್ಕದಲ್ಲಿ ಯಾವುದು ಕ್ರಮಬದ್ಧವಾದ ಊಟ?"ಯಾರಾದ್ರೂ ಕೇಳಬಹುದಾದ ಪ್ರಶ್ನೆ.ಅದಕ್ಕೆ ನನ್ನ ಸ್ಪಷ್ಟ ಉತ್ತರವಿಷ್ಟೇ: "ಹುಡಗಾಟಿಕೆ ದಿನಗಳಲ್ಲಿ ಕರೆಗೆ ಓಗೊಟ್ಟು ಹೊಡೆದ್ವಲ್ಲಾ, ಆ ಊರ್ಮನಿ ಊಟದ್ಮನೆ ಊಟವೇ ನಿಜವಾದ, ಬರ್ದಾಂಡ್ ಊಟ!"

"ಊಟದ್ಮನೆಗೆ ಬರ್ಬೇಕು..." ಊರ್ಮನೆವರು ಮನೆಗೇ ಬಂದು ನೀಡುತ್ತಿದ್ದ ಆ ಒಂದು ಕರೆ, ಹುಡುಗರಾಗಿದ್ದ ನಮ್ಮಲ್ಲಿ ಸೃಷ್ಟಿಸುತ್ತಿದ್ದ ಆನಂದ, ಸಂಭ್ರಮ, ಉತ್ಸಾಹ, ಪುಲಕ, ನಿರೀಕ್ಷೆ, ತವಕ ನೂರಾರು...

ಮೊಟ್ಟಮೊದಲ ಖುಷಿಯೆಂದರೆ ಊಟದ್ಮನೆ ದಿವ್ಸ ಮನೆಯವರ ಆಕ್ಷೇಪವಿಲ್ಲದೇ, ಸ್ಕೂಲಿಗೆ ಚಕ್ಕರ್ ಹೊಡೀಬಹುದಲ್ಲ! ಹೊಟ್ಟೆಬಿರಿಯವಷ್ಟು ಸಿಹಿತಿಂಡಿ, ಪಾಯಸ ಲಗಾಯಿಸಬಹುದಲ್ಲಾ, ಉರು ಹೊಡೆದ ಪದ್ಯಗಳ ಚೂರ್ಣಿಕೆ ಬಜಾಯಿಸಿ, ಶಭಾಸ್‌ಗಿರಿ ಗಿಟ್ಟಿಸುವುದು. ಚೂರ್ಣಿಕೆ ಅಂತಿಮ ಸಾಲಿನ "ಭೋಜನಕಾಲ ಮಧ್ಯೆ ಹರನಮಃ ಪಾರ್ವತಿಪತೆಯೇ"ಗೆ "ಹರಹರ ಮಹಾದೇವ..." ಗಂಟ್ಲು ಹರಿದು ಹೋಗುವಷ್ಟು ಏರುದನಿ



ಕೋರಸ್ ಅರಚುವುದು, ಇವೆಲ್ಲಕ್ಕಿಂತ ಹೆಚ್ಚಾಗಿ ಎಡಗೈ ಮೇಲೆ ದಕ್ಷಿಣೆ ಎಷ್ಟು ಬೀಳಬಹುದೆಂಬ ಆತಂಕ.. ನಿರೀಕ್ಷೆ...

ದಕ್ಷಿಣೆ ನೀಡುವುದರಲ್ಲೂ ಕೆಲವರ ಮನೆಯಲ್ಲಿ ಚಾಲ್ತಿಯಲ್ಲಿದ್ದದ್ದು ವಿಚಿತ್ರ ಸಂಪ್ರದಾಯ! ಮಕ್ಕಳಿಗೆ ಒಂದು ತರ, ಬಡವರಿಗೆ ಕಮ್ಮಿ... ಶ್ರೀಮಂತರಿಗೆ ಹೆಚ್ಚು... ಅವರವರ ಘನತೆ, ಗೌರವ, ಅಂತಸ್ತಿಗೆ ತಕ್ಕಂತೆ! "ಮುಖ ನೋಡಿ ದಕ್ಷಿಣೆ ಕೊಡು" ಗಾದೆಗೆ ಒಪ್ಪವ ನಡೆ! ಬಲಗಡೆ ಕುಳಿತವರ ಕೈಗೆ, ಎಡಗಡೆ ಕುಳಿತವರ ಕೈಗೆ ಬಿದ್ದ ದಕ್ಷಿಣೆಯೆಷ್ಟು ವಾರೆನೋಟದಲ್ಲೇ ವೀಕ್ಷಿಸಿ, ನಮ್ಮ ಕೈಗೆ ದಕ್ಕಿದ ದಕ್ಷಿಣೆಯೊಡನೆ ತುಲನೆಮಾಡಿ ಖುಷಿಯೋ, ಕರಬುತ್ತಿದ್ದದ್ದೋ ಮಾಮೂಲು. ಅಷ್ಟೇಯಲ್ಲ, ಬಂದ ದಕ್ಷಿಣೆ ಹೇಗೆ ಖರ್ಚು ಮಾಡಬೇಕೆಂಬ ಯೋಜನೆ ವಿಚಾರ-ವಿನಿಮಯ, ಚರ್ಚೆಯೊಂದಿಗೆ ಕಟ್ಟಿಕೊಳ್ಳುತ್ತಿದ್ದದ್ದು ನಾನಾ ಬಗೆ ರೂಪರೇಷೆ...ಕನಸು....

ಕುಡಿಬಾಳೇಲೆ ಮುಂದೆ ಚಕ್ಕಮಕ್ಕ ಹಾಕಿ ಆರಾಮಾಗಿ ಕುಳಿತು, ನೇವೇದ್ಯದ ಜೊತೆ ತೊವ್ವೆ, ಸಾರು. ಹುಳಿ, ಕುಂಬಳ ಪೊಳ್ದ್ಯಾ ಇತ್ಯಾದಿ ಕಲಸಿಕಲಸಿ. ಬಳ್ಳೇ ಮೇಲ್ಭಾಗ ಅಲಂಕರಿಸಿರುತ್ತಿದ್ದ ತರತರದ ಪಲ್ಯ, ಗೊಜ್ಜು, ಚಟ್ನಿ, ಕೊಸಂಬ್ರಿ, ಉಪ್ಪಿನಕಾಯಿ ನೆಂಚಿಕೊಳ್ಳುತ್ತಾ, ಕೆಲವೊಮ್ಮೆ ಹಡೇಪಟ್ಟಾಂಗ, ಬಡಾಯಿ ಕೊಚ್ಚುತ್ತಾ ನಕ್ಕು ನಲಿಯುತ್ತಾ ಗಂಟೆಗಟ್ಟಲೆ ಪೊಗದಸ್ತಾಗಿ ಹೊಡೆಯುತ್ತಿದ್ದೆವಲ್ಲಾ...? ಅದು ಊಟದ್ಮನೆ ಊಟ...

"ಮಗೀನ್ನಾ, ಮಾಣಿನಾ ಸಾಧ್ಯವಾದರೆ ಬೆಳ್ಳಗ್ಗೇನೇ ಬೇಗ ಕಳುಹಿಸಿ" ಊಟಕ್ಕೆ ಕರೆಯ ಬಂದವ್ರು ಸಾಮಾನ್ಯವಾಗಿ ಆಡುವ ವಾಡಿಕೆ ಮಾತು."ಅದಕ್ಕೇನು ಕಳ್ಸಸ್ತೀವಿ, ಅಷ್ಕೆ ಬೇರೇನು ಕೆಲ್ಸ?" ಅಂತ ಹಿರಿಯರು ನಮ್ಮನ್ನ ಕರೆದು "ಏ ಹುಡುಗ್ರಾ, ಬೆಳಗ್ಗೆನೇ ಅವ್ರ ಮನೆಗೆ ಹೋಗ್ರೋ" ಅಂತ ಆರ್ಡರ್ ಮಾಡೋರು. ಹಾಗೇ ಹೋಗೋದು ಅಂದ್ರೆ ನಮಗೆ ಸ್ವಲ್ಪ ಖುಷಿ...ಸ್ವಲ್ಪ ಬೇಸರ...

ಗಂಧಾಕ್ಷತೆ ಅರೆಯೋದು, ಹೂ ಕುಯ್ಯೋದು, ದೇವ್ರಿಗೆ ಅಲಂಕಾರ ಮಾಡೋದ್ರಲ್ಲಿ ನೆರವಾಗೋದು, ತೆಂಗಿನಕಾಯಿ ಹೆರಿಯೋದು (ತುರಿಯುತ್ತಲೇ ಕದ್ದು ಮುಕ್ಕೋದು!), ಪಂಕ್ತಿ ಮೇಲೆ ಅಡ್ಡಾಡುತ್ತಾ "ಅತಳವಿತಳಸುತಳ, ತಳಾತಳ ರಸಾತಳ, ಪಾತಾಳ ಪಚ್ಚೆಪನ್ನೀರು ಗಂಧ ಪರಿಮಳಯುಕ್ತ ಗಂಗಾಮೃತ ಬೇಕೆ? ಯಾರಿಗ್ರೀ ಕಾದಾರಿದ ನೀರು" ವಿಚಾರಿಸುವುದು ಎಂಥ ಖುಷಿ ಕೆಲಸ! ಆದ್ರೆ, ಗದ್ದೆಗೆ ಹೋಗಿ ಹಳ್ಳದಲ್ಲಿ ಬೆಳೆದ ದೂರ್ಬೆ ತಗಂಬಾ, ಅಂಗಳದ ಗರಿಕೆ ಚಿವುಟಿಕೊಂಡು ಬಾ. ತರಕಾರಿ ಹೆಚ್ಚು, ಅಂಗಡಿ ಹೋಗಿ ಸಾಮಾನು ತಗೋಂಬಾ ಇತ್ಯಾದಿ ಬೇಸರಿಸುವ ಕಾರ್ಯಗಳು. ಕಸ ಗುಡಿಸೋದು, ಸಗಣಿ ನೀರು ಬಳಿದು ಸಾರ್ಸೋದು, ರಂಗವಲ್ಲಿ ಚೆಲ್ಲೋದು, ದೀಪಕ್ಕೆಣ್ಣೆ-ಬತ್ತಿ ಹಾಕೋದು, ತರಕಾರಿ ಹೆಚ್ಚೋದು, ಬಾಳೇಯೆಲೆ ತುದಿ ಅಭಿಗಾರ. ಪಾಯಸ, ಕೊಸಂಬ್ರಿ, ಚಟ್ನಿ, ಸಾಸ್ವೆ, ಪಲ್ಯ, ಬಡಸೋದು ಇತ್ಯಾದಿ ಹುಡಿಗಿಯರ ಕೆಲ್ಸ. ಇವುಗಳಲ್ಲಿ ಕೆಲವು ಹೆಣ್ಣುಮಕ್ಕಳಿಗೂ ಬೇಸರ ಮಾತ್ರವಲ್ಲ; ಕಿರಿಕಿರಿಯುಂಟು ಮಾಡಲ್ಲಂತವು. ಆದರೀಗ ಹಿನ್ನೋಟದಲ್ಲಿ ವಿಶ್ಲೇಷಿಸಿದರೆ ಆ ಕೆಲಸ, ಕಾರ್ಯಗಳೆಲ್ಲಾ ಒಂದಲ್ಲೊಂದು ಬಗೆ ಭವಿಷ್ಯಕ್ಕೆ ನೀಡಿದ ತರಬೇತಿ; ಸಹಬಾಳ್ವೆಗೆ ಕಲಿಸಿದ ಪ್ರಾಥಮಿಕ ಪಾಠಗಳು!

ಆ ಊಟದ್ಮನೆ ಊಟದ ಸುಖಾನುಭವ, ವೈಭವಗಳ ಮುಂದೆ ಇಂದಿನ ಗಡಿಬಿಡಿಯ ಬಫೆ, ಟೇಬಲ್ ಮೀಲ್ಸ್ ಎಲ್ಲಾ ಲಲ್ಲೊಳ್ಳೊಟ್ಟೆ ಅನ್ನೋಲ್ಲವೇ? ರುಚಿ, ಆತ್ಮೀಯತೆ ವ್ಯತ್ಯಾಸಗಳ ಸತ್ಯಾಸತ್ಯತೆ ಪಾರಮರ್ಶಿಸಬಲ್ಲ ತಾವೇ ಹೇಳ್ಬೇಕು! ■



# ನೀರಜ ಕವನ ಬರೆದಾಗ

**– ಜಿ.ವಿ. ನಿರ್ಮಲ**

‘ಸ ರಿ ಗ ಮ ಪ ದ ನಿ’ ಸಪ್ತಸ್ವರಗಳಲ್ಲಿ ವಿಶ್ವನಾಥನಿಗೆ ಪ್ರಿಯವಾದ ಅಕ್ಷರವೆಂದ್ರೆ “ರೀ................”. ಅದೇಕೆ ಎಂದು ಕೇಳುವಿರಾ? ನೀರಜಾ ವಿಶ್ವನನ್ನು ಸರಾಗವಾಗಿ ಕೂಗುವುದು ಆ ಸ್ವರದಲ್ಲೇ.

“ರೀ.....” ಅದೋ ಕೇಳುತಿದೆ ನೀರಜಳ ದನಿ

ವಿಶ್ವನಾಥನಿಗೆ ಆ ‘ರೀ..’ಯಲ್ಲಿ ನೀರಜಳ ಮನಸ್ಸಿನ ರಹಸ್ಯವೇ ತಿಳಿಯುತ್ತಿದ್ದ ರಸಭರಿತ ದಿನಗಳಿದ್ದವು. ಸರಸ ಸಂಭಾಷಣೆಗಳು ಉಲಿದ ಕ್ಷಣಗಳಿದ್ದವು. ಆದರೆ ಈಗ ಅರವತ್ತರ ನಂತರ ಅವನಿಗೆ ಸರಸಕ್ಕಿಂತ ತಳಮಳವೇ ಹೆಚ್ಚೆನಿಸುತ್ತಿದೆ. ಆ ಅಕ್ಷರದಲ್ಲಿ ರಹಸ್ಯಕ್ಕಿಂತ ಷರತ್ತುಗಳೇ ಕಾಣಿಸುತ್ತವೆ. ಇಂದಿನ ಷರತ್ತು ಏನಿರಬಹುದೆಂದು

ಯೋಚಿಸಲು ಶುರು ಮಾಡಿದ ವಿಶ್ವ.

“ರೀ.. ಈಗ ನೀವು ಬಿಡುವಾಗಿದ್ದೀರಾ?’ ಎಂದು ನಯವಾಗಿ ಪ್ರಶ್ನೆ ಬಂತು

ಇದೇನಿದು ಎಂದೂ ಇಲ್ಲದ್ದು. ತಾನು ತನ್ನ ಮನೆಯಲ್ಲೇ ಇದ್ದೀನಾ ಎಂದು ನಂಬದಾದ ವಿಶ್ವ. ‘ಆ ನನಗೇನು ಕೆಲ್ಸ?. ನೀನೇ ಆಗಾಗ್ಗೆ ಹೇಳ್ತೀಯಲ್ಲ ರಿಟೈರ್ ಆದ ಮೇಲೆ ಸೋಮಾರಿಯಾದೆ ಅಂತ. ಖರೆ, ನಾನು ಸೋಮಾರಿ, ನೀನು ‘ಸೋ’ ತೆಗೆದು ಹಾಕಿರುವ ‘ಮಾರಿ’ ಅಂತ ಬೇಕಾದ್ರೆ ಹೇಳ್ಕೋ. ನಂದೇನೂ ಅಭ್ಯಂತರವಿಲ್ಲ’

“ಓ ಪರ್‍ವಾಗಿಲ್ವೇ ನೀವೂ ಚೆನ್ನಾಗಿ ಮಾತಾಡೋದನ್ನ ಕಲ್ತಿರೋ ಹಾಗಿದೆ”

“ಸಹವಾಸ ದೋಷ. ನನ್ನ ಹೊಗ್ಳೋದು ಇರ್ಲಿ, ಈಗ ನೀನು ಬಂದ ವಿಷ್ಯ ಹೇಳು”

“ರೀ.. ನಾನೊಂದು ಕವನ ಬರೆದಿದ್ದೀನಿ. ಓದ್ತೀನಿ. ಅದು ಹೇಗಿದೆ ಅಂತ ಹೇಳ್ತೀರಾ?’

“ಆ..... ಏನೆಂದೆ. ನೀನು ಕವನ ಬರೆದ್ಯಾ? ಬರ್‍ದಿದೀನಿ ಅಂದ್ರೆ ಎಲ್ಲಿಂದಾದ್ರೂ ಕಾಪಿ ಮಾಡಿದ್ಯಾ?”

“ರೀ, ಇದು ನನ್ನ ಸ್ವಂತ ರಚನೆ. ಮೊದಲ ಸಾರಿ ಬರೀತಾ ಇದೀನಿ. ಸಂತೋಷಪಟ್ಕೊಂಡು ಹುರಿದುಂಬಿಸೋ ಬದ್ಲು ಹೀಗಾ ಕೇಳೊದು? ಸ್ವಲ್ಪ ಭಯ ಆಗ್ತಿದೆರೀ. ನೀವಲ್ದೆ ನಂಗೆ ಯಾರು ಧೈರ್ಯ ತುಂಬೋರು?”

“ಓ.. ಹಾಗೋ ಸಮಾಚಾರ? ನೀನೇ ನನ್ನ ಧೈರ್ಯಲಕ್ಷ್ಮಿ. ಈಗ ನಾನು ನಿನಗೆ ಅಭಯ ನೀಡಬೇಕಾ? ಸರಿ ಓದು, ಕೇಳೋಣ’

**“ಬರೆಯುವೆನು ನಾನು ಕವನ**
**ನಾನು ಬರೆದೆ ಒಂದು ಕವನ**
**ಬರೆದೆ ನಾನೊಂದು ಕವನ**
**ಇದು ನಾನೇ ಬರೆದಿರುವ ಕವನ”**



“ಅರೆ, ಕವನ ಬರೀತೀನಿ ಅಂತ ಹೇಳಿದ್ದಾಯ್ತಲ್ಲಾ? ಎಷ್ಟು ಸಾರಿ ಅದನ್ನೇ

ಹೇಳ್ತಾ ಇದ್ದೀ? ನ್ಯೂಸ್ ಚಾನೆಲ್‌ನವರು ಒಂದೇ ಸುದ್ದೀನ ಹತ್ತಾರು ಸಾರಿ ತಿರುಗ್ಸಿ ಮುರುಗ್ಸಿ ಹೇಳಿ ಕಿವಿ ತೂತು ಮಾಡಿಬಿಡ್ತಾರಲ್ಲಾ ಹಾಗೆ."

"ಅಯ್ಯೋ, ಅದು ಮತ್ತೆ ಮತ್ತೆ ಓದಿದ್ದಲ್ಲಾರೀ. ನಾನು ಓದಿದ್ದು ನನ್ನ ಕವನದ ಮೊದಲ ನಾಲ್ಕು ಸಾಲುಗಳನ್ನ"

"ಅಲ್ವೇ ನೀರಜ. ಕನ್ನಡ ವರ್ಣ ಮಾಲೆಯಲ್ಲಿ ಐವತ್ತೊಂದು ಅಕ್ಷರಗಳಿವೆ ಅಂತ ಓದಿದ ನೆನಪು. ನೀನು ಹತ್ತು ಅಕ್ಷರದಲ್ಲಿ ಕವನ ಬರೆದು ಮುಗ್ಸೋ ಹಾಗೆ ಕಾಣ್ತಾ ಇದೆ. ಯಾಕೆ ಹಾಗೇನಾದ್ರೂ ಷರತ್ತಿದ್ಯಾ? ಯಾವುದಾದ್ರು ಕಾಂಪಿಟೆಷನ್‌ಗೆ ಕಳಿಸ್ತೀಯಾ?"

"ಥೂ, ನೀವು ಏನೇನೋ ಹೇಳಿ ನನ್ನ ಮೂಡ್ ಕೆಡ್ಸಬೇಡಿ. ಎಷ್ಟು ಮನಸ್ಸಿಟ್ಟು ಬರೀತಾ ಇದೀನಿ ಗೊತ್ತಾ? ನಂಗೂ ಗೊತ್ತು ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳಿವೆ ಅಂತ. ನಂಗೂ ಕನ್ನಡ ಬರತ್ತೆ."

"ಅದು ಹೋಗ್ಲಿ. ಈಗ ಕವನ ಯಾಕೆ ಬರೀತಾ ಇದಿ. ಅದನ್ನಾದ್ರು ಹೇಳು"

"ಇದೊಳ್ಳೆ ಪ್ರಶ್ನೆ ಆಯ್ತಲ್ಲಾ. ಕವಿಗಳು ಕವನ ಬರೆಯೋದು ಮನಸ್ಸಂತೋಷಕ್ಕೆ. ಅಷ್ಟೂ ತಿಳಿದಿಲ್ವಾ? ಕವಿಗಳಿಗೆ ಸ್ಫೂರ್ತಿ ಬಂದಾಗ ಕವನ ಬರೀದೇ ಸುಮ್ನಿರೋಕ್ಕೆ ಆಗೋದೇ ಇಲ್ವಂತೆ. ಬರೆದ್ಮೇಲೆ ಯಾವ್ದಾದ್ರೂ ಯುಗಾದಿ ಸಂಚಿಕೇಗೆ ಕಳಿಸ್ತೀನಿ."

"ಓ ಹಾಗಾದ್ರೆ ತಾವು ಕವಿಯಾ? ಅಲ್ಲ, ಅಲ್ಲ, ಕವಯತ್ರಿಯಾ? ಈಗ ತಮಗೆ ಸ್ಫೂರ್ತಿ ಬಂದಿದ್ಯಾ?"

"ಒಂದಷ್ಟು ಕವನಗಳನ್ನು ಬರೀತಾ ಹೋದ್ರೆ, ಮುಂದೆ ಒಂದಿನ ನಾನೂ ಕವಯತ್ರಿ ಆಗ್ಬಹುದ್ದು."

"ಬೇಡ ನೀರಜಾ. ನೀನು ಈ ವಯಸ್ಸಿನಲ್ಲಿ ಈ ಸಾಹಸಕ್ಕೆ ಕೈ ಹಾಕ್ಬೇಡ. ಈಗಾಗ್ಲೇ ಎಷ್ಟೋ ಜನ ಕವಿಗಳು, ಕವಯತ್ರಿಯರೂ ಇದ್ದಾರೆ. ಅವರ ಕವನಗಳನ್ನು ಓದ್ತಾ ಇದ್ರೆ ಒಂದು ಜೀವನ ಯಾಕೆ? ಐದಾರು ಜೀವನಗಳು ಕಳೀಬಹುದ್ದು. ಆರಾಮವಾಗಿರು."

"ಆಹಾ, ನೀವು ಸೋಮಾರಿ ಅಂತ ಮತ್ತೊಮ್ಮೆ ಪ್ರೂವ್ ಮಾಡೇ ಬಿಟ್ರಲ್ಲ. ನೀವು ಓದೋದೂ ಇಲ್ಲ. ಬರಿಯೋ ಮಾತಂತೂ ಇಲ್ವೇ ಇಲ್ಲ."

"ಹೌದು ನೀರಜಾ. ನಾನು ಸೋಮಾರಿ. ಇನ್ನು ಮುಂದೆ ಪ್ರಸಿದ್ಧ ಕವಯತ್ರಿ ನೀರಜಳ ಪತಿ. ಎಲ್ರೂ ಬರೀತಾ ಹೋದ್ರೆ ಕೇಳೋರು ಯಾರು? ಭೇಷ್ ಅನ್ನೋರ್ಯಾರು? ಈಗ ನಿನ್ನ ಕವನಾನ ಮುಂದೆ ಓದು. ನಾನೇ ಮೊದಲ ಕೇಳುಗ ಅಲ್ವಾ? ಇನ್ಮೇಲೆ ಕೇಳೊದನ್ನ ಅಭ್ಯಾಸ ಮಾಡ್ಕೋತೀನಿ"

"ಸರಿ ಮತ್ತೆ ಕೇಳಿ"

**ಕವನಕ್ಕೆ ಯಾವುದೊಳ್ಳೆಯ ವಿಷಯ?**
**ಬೇಕಾ ಕವನಕ್ಕೊಂದು ವಿಷಯ?**
**ವಿಷಯವಿಲ್ಲದೆ ಕವನವಿಲ್ಲವಾ?**
**ಕವನಕ್ಕೆ ವಿಷಯ ಬೇಕೇ ಬೇಕಾ?"**

"ಅಬ್ಬಬ್ಬಾ, ನಿನಗೆ ಯಾವ ಸುದ್ದಿ ವಾಹಿನಿಯಿಂದ ಸ್ಫೂರ್ತಿ? ಸಮುದ್ರದ ಅಲೆಗಳಂತೆ ಮತ್ತೆ ಮತ್ತೆ ಅದೇ ಪದಗಳು ಬಂದು ಅಪ್ಪಳಿಸ್ತಾ ಇವೆ. ಸುನಾಮಿಯಾದ್ರೆ ವಾಸಿ. ಒಟ್ಟಿಗೆ



ಬಂದು ಕೊಚ್ಕೊಂಡು ಹೊರಟ್ಹೋಗ್ತಾ ಇತ್ತು. ನೀನು ಹೀಗೇ.. ಬರೀತಾ ಹೋದ್ರೆ ಖಂಡಿತವಾಗಿ ಮಹಾಕಾವ್ಯ ಬರಿಯೋದ್ರಲ್ಲಿ ಸಂದೇಹವೇ ಇಲ್ಲ. ಆದ್ರೆ ಅದನ್ನ ಕೇಳೋದು ಒನ್ ಆಂಡ್ ಓನ್ಲಿ ಪುರುಷೋತ್ತಮ, ಅಂದ್ರೆ ನಾನು ಮಾತ್ರ. ಅಯೋಧ್ಯೆಯ ರಾಮನಂತೂ ಅಲ್ಲ. ನಿನ್ನ ಪತಿ ಕಾಶಿ ವಿಶ್ವನಾಥ"

"ಯಾಕ್ರಿ ಹಾಗಂತೀರಾ? ಇನ್ನೂ ಮೂರು ಪುಟಗಳಿವೆ. ಈಗ ನಾನು ಓದಿರೋದು ಎರಡೇ ಎರಡು ಪದ್ಯಗಳನ್ನ. ಮುಂದೆ ಹೋಗ್ತಾ ಹೋಗ್ತಾ ಚೆನ್ನಾಗಿದೆ. ಸುಮ್ನೆ ಕೇಳಿ.

**ಕವನಕ್ಕಿರಲೇ ಬೇಕೆ ಪ್ರಾಸ?**

**ತ್ರಾಸವಿಲ್ಲದೆ ಬರುವುದೇ ಪ್ರಾಸ?**

**ಪ್ರಾಸ ತರುವುದೇ ಕವನಕೆ ಹಾಸ?**

**ಪ್ರಾಸವಿಲ್ಲದರೆ ಆಗುವುದೇ ಅಭಾಸ?"**

"ನೀರಜಾ, ಈಗ ನಾನೊಂದು ಕ್ಲೂ ಕೊಡ್ಲಾ? ಕವನಕ್ಕೆ ಈಗೀಗ ಪ್ರಾಸವೇ ಬೇಡ. ಗದ್ಯವನ್ನು ಬರೆದು ತೋಚಿದಂತೆ ಆ ಸಾಲುಗಳನ್ನು ಕತ್ತರಿಸಿ ಜೋಡಿಸಿದರೆ ಕವನ ರೆಡಿ. ಏನಂತೀಯಾ?"

"ಆಹಾ, ಅದೂ ಸುಲಭವಲ್ಲ. ಬೇಕಾದ್ರೆ ಬರೆದು ನೋಡಿ. ಆಗ ಗೊತ್ತಾಗತ್ತೆ"

"ಹಾಗಾದ್ರೆ ಇನ್ನೊಂದು ಉಪಾಯ ಹೇಳ್ತೀನಿ. ಮೊದಲ್ನೇ ಸಾಲಿನಲ್ಲಿ ಒಂದು ಪದ, ಎರಡ್ನೇ ಸಾಲಲ್ಲಿ ಎರಡು ಪದಗಳು, ಮೂರ್ನೇ ಸಾಲಲ್ಲಿ ಮೂರು ಹೀಗೆ ಒಂದೊಂದು ಸಾಲಿಗೂ ಪದಗಳ್ನ ಹೆಚ್ಚಿಸ್ತಾ ಹೋಗು. ಅದೊಂದು ತರಹ ಹೊಸ ಶೈಲಿ ಅಂತ ನೀನು ಬೇಗ ಹೆಸರು ಗಳಿಸಬಹುದು"

"ಅಬ್ಬಬ್ಬಬ್ಬಾ! ಎಷ್ಟು ಸುಲಭ್ವಾಗಿ ಹೇಳ್ತೀರಿ. ಅದೆಂತದ್ದು ಅಂತ ಒಂದು ಸ್ಯಾಂಪಲ್ ಹೇಳಿ ನೋಡೋಣ"

"ಆಂ.., ಅಯ್ಯೋ ಪಾಪ ಅಂತ ಉಪಾಯ ಹೇಳಿದ್ರೆ ನನ್ನ ಬುಡಕ್ಕೇ ಬಂತಲ್ಲ. ಇರು ಯೋಚ್ನೆ ಮಾಡಿ ಹೇಳ್ತೀನಿ ಅದ್ಸರಿ. ನೀರಜಾ ನೀನು ಬರ್ದಿರೋದು ಮೂರು ಪುಟಗಳಾ ಅಥ್ವಾ ನೂರು ಪುಟಗಳನ್ನ ಹೀಗೆ ಬರ್ದು ಬರ್ದು ತುಂಬ್ಸಿದೀಯಾ?"

"ನಾನು ಬರ್ದಿರೋದು ಇರ್ಲಿ. ಈಗ ನಿಮ್ಮ ಕವನಕ್ಕೆ ನಾನು ಕಾಯ್ತಾ ಇದೀನಿ. ಬೇಗ ಹೇಳಿ"

"ಸರಿ ಕೇಳು. ನಂದು ಟ್ರೈಯಲ್. ದಿಢೀರ್ ಅಂತ ಬರ್ದಿರೋದು. ಕೇಳು.

**ಓ,**
**ನನ್ನೊಲವಿನ ಗೆಳತಿ**
**ನಂಗೆ ನಿನ್ನೊಳು ಪ್ರೀತಿ**
**ದಿನದಿನವೂ ಹೆಚ್ಚುತಿದೆ ಅದರ ಮಿತಿ**
**ತುಂಬಿ ತುಳುಕಿ ಚೆಲ್ಲಿದರೆ ದೇವರೇ ಗತಿ**

"ಅಬ್ಬಬ್ಬಾ, ಪರವಾಗಿಲ್ವೇ ನೀವೂನೂ. ಚಿಗಿತುಕೊಂಡು ಬಿಟ್ರಿ.'



"ಆಗ್ಲೇ ಹೇಳಿದ್ನಲ್ಲಾ ನೀರಜಾ ಸಹವಾಸ ದೋಷ ಅಂತ"

"ಅಲ್ಲ, ಎಷ್ಟು ಚೆನ್ನಾಗಿ ಸಾಲು ಸಾಲಿಗೂ ಒಂದೊಂದು ಪದ ಹೆಚ್ತಾ ಹೋಗಿದೆ. ಹೀಗೇ ಬರೀತಾ ಹೋದ್ರೆ ಕೊನೇ ಸಾಲಲ್ಲಿ ಎಷ್ಟು ಪದಗಳಿರತ್ತೋ?"

"ಅದು ಬಿಡು. ನಾನು ಕೊನೇ ಸಾಲಿಗೆ ಬಂದಾಗ ಯೋಚಿಸೋಣ. ಈಗ ನೀ ಬರ್ದಿರೋದೆಲ್ಲಾ ಈಗ್ಲೇ ಕೇಳ್ಬೇಕಾ ಅಥ್ವಾ ಕಮರ್ಶಿಯಲ್ ಬ್ರೇಕ್ ಏನಾದ್ರೂ ಇದ್ಯಾ?"

"ಮಾತ್ಮಾತ್ಗೂ ಸುದ್ದಿ ವಾಹಿನಿ ಅಂತ ನನ್ನ ಹೀಯಾಳಿಸ್ತಾ ಇದ್ರಿ. ಈಗ ನಿಮ್ಗೆ ಬ್ರೇಕ್ ಬೇಕಾ? ಒಂದೈದು ಹತ್ತು ನಿಮಿಷ ಕೇಳಕ್ಕೆ ಬ್ರೇಕ್ ಬೇರೆ ಬೇಕಾ?"

"ಖಂಡಿತ ಬ್ರೇಕ್ ಬೇಕೇ ಬೇಕು."

"ಓ, ನಂಗೊತ್ತಿಲ್ಲವಾ ಬ್ರೇಕಿನ ರಹಸ್ಯ. ಬ್ರೇಕಿನಲ್ಲಿ ಬರುವ ಹೆಂಗಳೆಯರ ಮೇಲೆ ನಿಮ್ಮ ಕಣ್ಣು, ಈಗ್ತಾನೇ ಯಾವ್ದೋ ಗೆಳತಿ ತಲೇಲಿ ಬಂದಿದ್ಳು. ಕಣ್ಣು ತಾನೆ ಮುಖದ ಮುಂದೆ ಇರೋದು. ಸುದ್ದಿ ಕೇಳ್ಳೋ ಕಿವಿ ಇರೋದು ತಲೆಯ ಪಕ್ಕದಲ್ಲಿ ತಾನೆ?"

"ಆಹಾ, ಕಿವಿ ಎಲ್ಲಿದೆ, ಕಣ್ಣೆಲ್ಲಿದೆ ಅಂತ ನಂಗೂ ಗೊತ್ತು. ಟಿವಿ ಬ್ರೇಕ್ ವಿಷ್ಯದಲ್ಲಿ ನೀನು ಹೇಳೋದು ಸರಿ. ನಿನ್ನ ಕವನ ವಾಚನದ ಬ್ರೇಕ್‌ನಲ್ಲಿ ನಾನು ನೋಡುವುದೇನಿದೆ? ಅದೂ ಅಲ್ದೆ ನಂಗೆ ಇತ್ತೀಚಿಗೆ ಕಣ್ಣು ಮಂಜಾಗುತ್ತಿರುವ ವಿಷ್ಯ ನಿಂಗೂ ಗೊತ್ತು"

"ಅಬ್ಬಬ್ಬಾ, ಈ ನಿಮ್ಮ ತರ್ಲೆ, ತಲೆಹರಟೆಗಳಲ್ಲಿ ನಾನು ಏನು ಓದ್ತಾ ಇದ್ದೆ ಅಂತಾನೇ ಮರ್ತು ಹೋಯ್ತಲ್ರೀ? ಕಣ್ಣು, ಕಿವಿ, ಮೂಗು, ಬಾಯಿ ಅಂತ ಎಲ್ಲೆಲ್ಲಿಗೋ ಹೋಗ್ತಾ ಇದೆ. ಕವನ ಬರಿಯೋದಕ್ಕಿಂತ ಓದೋದೇ ಕಷ್ಟದ ಕೆಲ್ಸವಾಯ್ತಲ್ಲಾ?"

"ನೋಡಿದ್ಯಾ? ನಿಂಗೂ ಗಂಟ್ಲು ಒಣಗಿ ಆಯಾಸ ಆಗಿದೆ. ನೀನು ದಣಿದ್ರೆ ನಂಗೆ ನೋಡೋಕ್ಕಾಗಲ್ಲ."

"ಅಯ್ಯೋ ಪಾಪ. ನಿಮ್ಗೆ ನನ್ನ ಬಗ್ಗೆ ತುಂಬಾ ಕಾಳಜಿಯಲ್ವಾ? ಸರಿ ಹಾಗಾದ್ರೆ. ಸುಮ್ನೆ ಕೂತಿರ್ತೀನಿ. ಒಂದ್ಲೋಟ ಕಾಫಿ ಮಾಡ್ಕೊಂಡು ಬರ್ತೀರಾ?"

"ಓ, ನೀನು ಸುಮ್ಮನೆ ಮಾತಾಡ್ದೆ ಕೂತಿದ್ರೆ ಎರಡು ಲೋಟ ಬೇಕಾದ್ರೂ ಮಾಡ್ತೀನಿ. ಇಬ್ರೂ ಕೂತು ಬಿಸಿಬಿಸಿ ಕಾಫಿ ಕುಡ್ಯೋಣಾ. ಏನಂತಿ? ಕೊನೇಲಿ ಒಂದು ಕಿವಿ ಮಾತು ಹೇಳ್ತೀನಿ ನೀರಜಾ. ಕಾಫಿ ಮಾಡ್ಕೊಂಡು ಬನ್ನಿ ಅಂತ ಪದೇ ಪದೇ ಹೇಳು. ಆದ್ರೆ ಕವನ ಕೇಳಿ ಅಂತ ಮಾತ್ರ ಯಾವತ್ತೂ ಹೇಳ್ಬೇಡ"

■

---

## ಅಸಾಧ್ಯ

ಅವನು ಖಿನ್ನನಾಗಿದ್ದ. ಚಿಕಿತ್ಸೆಗಾಗಿ ಮನೋವೈದ್ಯರ ಬಳಿ ಹೋದ. ಅವನನ್ನು ಪರೀಕ್ಷಿಸಿದ ವೈದ್ಯರು 'ಖುಷಿಯಿಂದ ಇರಲು ಪ್ರಯತ್ನಿಸಿ. ಉದಾಹರಣೆಗೆ ಕೆಲಸ ಮಾಡುವಾಗ ಹಾಡಲು ಪ್ರಯತ್ನಿಸಿ' ಎಂದರು.

'ಅದು ಅಸಾಧ್ಯ ಡಾಕ್ಟರ್'.

'ಏಕೆ?'

'ನಾನು ಆರ್ಕೆಸ್ಟ್ರಾದಲ್ಲಿ ಕೊಳಲು ಬಾರಿಸುವ ಕಲಾವಿದ.'



# ಪ್ರಾಣಿಗಳ ಪಬ್ ಪಾರ್ಟಿ

– ಇ.ಆರ್. ರಾಮಚಂದ್ರನ್

ಪ್ರಾಣಿಗಳ ಮಧ್ಯೆ ಇರುವೆಗಳು ಗುಂಪಿನಲ್ಲಿ ಕೂತು ಹರಟೆ ಹೊಡೆಯುತ್ತಿದ್ದವು.

'ಸಾಕಪ್ಪಾ ಸಾಕು. ಇವತ್ತು ಎಷ್ಟು ಮಿಲಿ ಮೀಟರ್ ನಡೆದೆವೋ ದೇವ್ರಿಗೇ ಗೊತ್ತು! ನನಗಂತೂ ಕಾಲು ಸವೆದು ಹೋಯ್ತು. ಇನ್ನು ಮೇಲೆ ಈ ಪಾರ್ಟಿ, ಗೀರ್ಟಿ ನನ್ನಿಂದಾಗಲ್ಲ.'

'ಯಾಕೇ! ನೀನು ಇನ್ನೂ ಗಟ್ಟಿಮುಟ್ಟಾಗಿದೀಯಲ್ಲ. ಹೋದ ವಾರ ನಮ್ಮ ಪಕ್ಕದ ಕಾಲೋನಿಯವಳು ದೇವರ ಸಮಾರಾಧನೆ ಅಂತ ನನ್ನ ಕರೆದುಕೊಂಡು ಹೋದಳು.'

'ನೀನು ಈ ವಯಸ್ನಲ್ಲೂ ಇದಕ್ಕೆಲ್ಲಾ ಸೈ. ಊಟಕ್ಕೆ ಕಾಯ್ತಾ ಇರ್ತಿಯಾ!'

'ಅಯ್ಯೋ ಕೇಳು. ಅಲ್ಲಿ ಹೋದರೆ ಮೆನು ಒಂದು ನೂರು ಮೈಕ್ರೊ ಲೀಟರ್ ಬೆಲ್ಲದಪಾಕ ಮತ್ತೆ ಹತ್ತಿರದಲ್ಲೇ ಕಚ್ಚಿ ತಿನ್ನೋದಕ್ಕೆ ಮುಷ್ಕರ ಮಾಡುತ್ತಿದ್ದ ಒಂದಿಷ್ಟು ಮನುಷ್ಯರ ಕಾಲುಗಳು, ತೊಡೆಗಳು. ಪಾಕದಲ್ಲಿ ಸಿಕ್ಹಾಕಿಕೊಂಡು ಒದ್ದಾಡಿಬಿಟ್ಟೆ. ಬ್ರೀದಿಂಗ್ ಟ್ರಬಲ್ ಶುರುವಾಯ್ತು.'

'ಮತ್ತೆ ಆಸ್ತಮಾನಾ?'

'ಇಲ್ಲ.. ಆಸ್ತಮ ವಾಸಿಯಾಗಿದೆ. ನನ್ನ ಸೊದರತ್ತೆ ಮಗ ಒಂದು ಆಯುರ್ವೇದದ ಅಂಗಡಿಯ ಹಿಂದೆ 1 – ರೂಮ್ ಬಿಲದಲ್ಲಿದ್ದಾನೆ. ಆವಾಗಾವಾಗ ಅಲ್ಲಿ ಎಕ್ಸ್ಟ್ರಾ ಮೆಡಿಸಿನ್ನ ಅಲ್ಲೇ ಎಸಿತಾರೆ. ಹಾಗಾಗಿ ಅವನಿಗೆ ಎಲ್ಲಾ ಔಷಧಿಗಳು ಪರಿಚಯ. ಯಾವುದೋ ಪರಾಕ್ಸೈಡ್ ಅಂತೆ. ಅದು ಎಸೆದಿದ್ದ ಜಾಗದಲ್ಲಿ ದಿನಕ್ಕೆ ಮೂರು ಸರ್ತಿ 2 ವಾರ ರೌಂಡು ಹೊಡೆಸ್ದ.. ಹೊಡೆದು ಈಗ ವಾಸಿಯಾಗಿದೆ.'

'ಮತ್ತೆ ಇದು ಯಾವ ಬ್ರೀದಿಂಗ್ ಟ್ರಬಲ್?'

'ಸಮಾರಾಧನೇಲಿ ಗೊತ್ತಿಲ್ಲದೆ ಪಾನಕ ಇರಬಹುದು ಅಂತ ಡೈವ್ ಹೊಡೆದೆ. ಅದು ಬೆಲ್ಲದ ಪಾಕ. ಪಾಕದಲ್ಲಿ ಸಿಕ್ಕಿಹಾಕಿಕೊಂಡೆ. ಮೈಯೆಲ್ಲಾ ಅಂಟು ಅಂಟು..ಉಸಿರಲ್ಲೆಲ್ಲಾ ಪಾಕ. ಥೂ.'

ಅಯ್ಯೊ! ಮತ್ತೆ ಹೇಗೆ ವಾಸಿಯಾಯ್ತು?'

'ಅಲ್ಲಿ ಪಕ್ಕದಲ್ಲೇ ಮೋರಿ ಲೀಕಾಗಿ ನೀರು ಹರಿಯುತ್ತಿತ್ತು. ಪಕ್ಕದಲ್ಲಿದ್ದವರ ಇಬ್ಬರ ಬೆನ್ನಿನ ಮೇಲೆ ಭಾರ ಹಾಕಿ ಮೂಗು ಮುಚ್ಚಿ ಮೂರು ಮುಳುಗು ಹಾಕಿದೆ. ನಾನು ಕಾಶಿಗೆ ಹೋಗಿ ಮಾಡುವ ಕೆಲಸ ಇಲ್ಲೇ ಮಾಡಿದೆ. ಆವಾಗ ಅಂಟು ಇಳಿಯಿತು. ಪಕ್ಕದಲ್ಲೇ ದೊಡ್ಡ ಟೆಂಟಿನ ಹಾಗೆ ಒಂದು ಕಾಗದ ಬಿದ್ದಿತ್ತು. ಅದರ ಕೊನೆಗೆ ಹೋಗಿ ಎದೆ ಉಜ್ಜಿದ ಮೇಲೆ ಉಸಿರು ವಾಪಸ್ಸು ಬಂತು. ನಾನು ಇಷ್ಟು ಮಾಡುವ ತನಕ ಪಕ್ಕದವರು ನನ್ನನ್ನೇ ದೊಡ್ಡಕಣ್ಣು ಬಿಟ್ಟು ನೋಡ್ತಿದ್ವು..ಸ್ವಲ್ಪನೂ ನಾಚಿಕೆ ಇಲ್ಲದೋವು.'



'ಈಗ ಯಾರಿಗೆ ತಾನೆ ನಾಚಿಕೆ ಇದೆ?'

'ಅಲ್ಲಿ ನೋಡು. ನಮ್ಮ ಜಿಂ ಕೋಚ್ ಬರ್ತಿದಾರೆ..ಕುಂಟ್ತಾ ಇದಾರೆ....ಏನಾಯ್ತು ಸಾರ್?

'ಮೊನ್ನೆ ಮಂಡ್ಯಗೆ ಕೋಚಿಂಗ್ ಕ್ಲಾಸ್ ಮಾಡ್ತೋದಕ್ಕೆ ಹೋಗಿದ್ದೆ. ಅಲ್ಲಿಯವರು ಸಾಯಂಕಾಲ ಒಂದು ಶುಗರ್ ಪಾರ್ಟಿ ಏರ್ಪಾಡು ಮಾಡಿದ್ದರು. ನಾನು ಸ್ವಲ್ಪ ತಿಂದು ಮನೆಗೆ ತೊಗೊಂಡು ಹೊಗೋಣಾಂತ ಒಂದು ಪಾರ್ಸಲ್ ಮಾಡ್ಸಿ ಬೆನ್ನಿನ ಮೇಲೆ ಹಾಕಿಕೊಂಡೆ.'

' ಸಾರ್! ಅಲ್ಲಿಂದ ಮೈಸೂರಿಗೆ ನಡೆದ್ರಾ?'

' ಛೇ! ಛೆ! ಮೈಸೂರಿನ ಕಡೆ ಒಂದು ಸ್ಕೂಟರ್ ಹೋಗ್ತಿತ್ತು. ಅದರಲ್ಲಿ ಹತ್ತಿ ಕೂತ್ಕೊಂಡೆ. ಸ್ವಲ್ಪ ಹೊತ್ತಿನಲ್ಲಿ ಬೆನ್ನು ನೋವು ಶುರುವಾಯ್ತು.. ನಾನು ಸಕ್ಕರೆ ಅಂದು ಕೊಂಡು ಬೆನ್ನಿಗೆ ಏರಿಸಿದ್ದು ಕಲ್ಲುಸಕ್ಕರೆ!'

' ಅಯ್ಯೋ ರಾಮ.. ಅದು ಕಡಿಮೆ ಅಂದರೆ 5 ಐದು ಪಟ್ಟು ಭಾರವಲ್ಲವಾ? ಒಂದು ನೂರು ಮಿಲಿಗ್ರಾಂ ಆದ್ರೂ ಇರುತ್ತೆ.'

'ಹೌದು..ನಾನು ಮೆಲ್ಲಗೆ ತೆವಳಿಕೊಂಡು ಹೋಗಿ ಸ್ಕೂಟರ್ ಓಡಿಸೋವ್ನ ಕಾಲು ಜೋರಾಗಿ ಕಚ್ಚಿದೆ. ಅವನು ಸ್ಕೂಟರ್ ನಿಲ್ಲಿಸಿ ಕಾಲು ಕೊಡವುದಕ್ಕೆ ಇಳಿದ. ನಾನು ಮುಂಚೆಯೇ ಇಳಿದೆ. ಅಲ್ಲಿ ಓಡಾಡುತ್ತಿದ್ದಾಗ ನಮ್ಮ ಪಕ್ಕದ ಊರಿನವರು ಒಂದು ಸಮ್ಮರ್ ಕ್ಯಾಂಪ್ ಮಾಡ್ತಿದ್ರು ಮಕ್ಕಳಿಗೆ.. ಅದು ಕಾಣಿಸ್ತು..'

'ಈಗ್ಯಾವ ಕ್ಯಾಂಪು ಮಕ್ಕಳಿಗೆ?'

'ನೇರವಾಗಿ ನಡೆಯುವುದಕ್ಕೆ ಕಲಿಸ್ತಾರಲ್ಲಾಮ್ಮಾ.... ... ಬೇಸಿಕ್ ಕ್ಯಾಂಪ್. ಅಲ್ಲಿಬ್ಬ್ರು ಕೋಚ್ಗಳ ಜೊತೆಗೆ ಸೇರಿ ಆ ಕಲ್ಸಕ್ಕರೆಯನ್ನು ಇಳಿಸಿ ಮುರಿದು ಎಲ್ಲಾರೂ ಹಂಚಿಕೊಂಡ್ವಿ.'

'ಮತ್ತೆ ವಾಪಸ್ಸು ಹೇಗೆ ಬಂದ್ರಿ ಸಾರ್?'

'ಇನ್ನೊಬ್ಬ ರೋಡ್ ಬದಿಯಲ್ಲಿ ಸ್ಕೂಟರ್ ನಿಲ್ಸಿ ಫೌಂಟನ್ ಬಿಡಕ್ಕೆ ಬಂದ. ಆಗ ನಾನು ಅವನ ವೀಲ್ ಹತ್ತಿಕೊಂಡೆ! ಇನ್ನು ನಾನು ಬರ್ತಿನಿ. ಒಳಗೆ ಹೋಗಿ ಮಿಕ್ಕವರನ್ನು ನೋಡಿ ಬರ್ತೀನಿ....'

ಆಗ್ಲಿ ಸಾರ್! ನೊಡ್ಕೊಳ್ಳಿ.

'ಅಲ್ಲಿ ನೋಡಿದ್ಯಾ ಇವತ್ತು ಈ ಪಾರ್ಟಿಗೆ ಆನೆಗಳು ಬಂದಿದೆ. ಬಹಳ ಭರ್ಜರಿ ಪಾರ್ಟಿನೇ. ಅವುಗಳಿಗೆ ಪ್ರಾಬ್ಲಂ ಆಗಿ ನಮ್ಮೆಲ್ಲರ ಸಪೋರ್ಟು, ಅದರಲ್ಲೂ ನಮ್ಮ ಕಾಲೋನಿಯ ಇಲಿಗಳ ಸಹಾಯ ಕೇಳಕ್ಕೆ ಬಂದಿದೆಯಂತೆ.'

'ಯಾರು ನಿನಗೆ ಹೇಳಿದ್ದು?'

'ನನಗೆ ಗೊತ್ತಾಗಿದ್ದು ನಮ್ಮ ಕೊರಿಯರ್‌ವಾಲಿ ಸೊಳ್ಳೆಯಿಂದ.'

'ಯಾವ ನ್ಯೂಸ್ ಸಿಕ್ಕಿದ್ರೂ ನ್ಯೂಸ್ ಸಿಕ್ಕ ತಕ್ಷಣ ಸೈರನ್ ಹಾಕಿಕೊಂಡು ಎಲ್ಲಾಕಡೆ ನ್ಯೂಸ್ ಹರಡ್ತಾಳೆ! ಸರಿಯಾಗಿ ಕೇಳದಿದ್ರೆ ಮತ್ತೆ ಮತ್ತೆ ಕಿವಿ ಹತ್ರ ಕೂಗಿ ಹೇಳ್ತಾಳೆ!'

'ಅವಳ ನ್ಯೂಸ್ ಅಷ್ಟು ರೆಲಯಬಲ್ ಅಲ್ಲ ಅಂತ ಹೇಳ್ತಾರೆ. ಲೇಟೆಸ್ಟ್ ಏನು ನ್ಯೂಸ್?'

' ಮಡಕೇರಿಯಲ್ಲಿ ಆನೆಗಳಿಗೆ ಎಲ್ಲಾಕಡೆಯೂ ಬರದ ಹಾಗೆ ರೈತರು ಬಲೆಗಳು ಹಾಕಿದ್ದಾರೆ. ಇದರಿಂದ ಅವಕ್ಕೆ ಊಟ, ನೀರು ಖೋತಾ ಆಗಿ ಏಕಾದಶಿ



ಉಪವಾಸವಾಗಿದೆ. ಬಲೆಯನ್ನು ಕಚ್ಚಿಹಾಕುವುದಕ್ಕೆ ಆನೆಗಳು ನಮ್ಮೂರ ಇಲಿಯನ್ಸ್ ಸಹಾಯ ಕೇಳಿದೆಯಂತೆ. ಅವುಗಳ ರೇಟ್ಗೆ ಆನೆಗಳು ಒಪ್ಪಿಲ್ಲ ಅಂತ ಸುದ್ದಿ.'

'ಇಲ್ಲಿಗೆ ಯಾಕೆ ಬಂದಿವೆ ಹಿಂಡು ಹಿಂಡಾಗಿ?'

'ನಮ್ಮ ಕಾಲೊನಿ ಪಂಚಾಯ್ತಿ ಛೇರ್ಮನ್ನ ಮಾವ – ಹಲ್ಲಪ್ಪ ಮಡಕೇರಿಲಿ ಒಬ್ಬ ಡೆಂಟಿಸ್ಟ್ ಕ್ಲಿನಿಕ್ ಹತ್ತಿರ ನೈಟ್ ಡ್ಯೂಟಿ ಮಾಡ್ತಾನೆ. ಇಲಿಗಳನ್ನು ರಾತ್ರಿ ಅಲ್ಲಿಗೆ ಕರೆಸಿ, ಒಂದೊಂದಾಗಿ ಅವುಗಳ ಹಲ್ಲನ್ನು ಹಲ್ಲಪ್ಪ ಫೈಲ್ನಿಂದ ಉಜ್ಜಿ ಚೂಪು ಮಾಡಿಸಿಕೊಟ್ಟರೆ ಇಲಿಗಳು ಬಿಲವನ್ನು ಕಚ್ಚಿ ಹಾಕಿ ಆನೆಗಳು ಸರಾಗಿ ಓಡಾಡಬಹುದು. ಟಾಕ್ಸ್ ನಡೀತಾಇದೆ. ಆನೆಗಳು ಏನು ಕೊಡುವುದಕ್ಕೂ ತಯಾರ್ ಅಂತ ಸೊಳ್ಳೆ ನಿನ್ನೆ ನ್ಯೂಸ್ ಹೇಳಿದ್ಳು. ಇವತ್ತು ಏನಾಗುತ್ತೋ ನೋಡ್ಬೇಕು.'

'ಏನಾಗುತ್ತೆ? ಕಾಂಪ್ರೊಮೈಸ್ ಮಾಡ್ಕೊಳ್ತಾರೆ. ನಮ್ ಸೊಳ್ಳೆವಾಲಿ ಹೇಳ್ದಂಗೆ ಮ್ಯಾಟರ್ ಲೈಫ್ ಎಂಡ್ ಡೆಥ್ ಅಲ್ವಾ...'

'ಅದೂ ಸರಿ.. ನೀನು ಮತ್ತೆ... ರೀ–ಫಿಲ್ ಬರ್ತಿಯಾ?'

ಅದಕ್ಕೆ ತಾನೆ ಬಂದಿರೋದು.... ಹೋಗೋಣ.. ಅಲ್ಲಿ ನೋಡು. ಚಿ! ಚಿ! ಮಿಸ್ಟರ್ ಎಂಡ್ ಮಿಸಸ್ ನೊಣ ಕುಡಿದು ಬಿದ್ದಿದ್ದಾರೆ.. ಸ್ವಲ್ಪಾನು ನಾಚಿಕೆ ಇಲ್ಲ.'

'ಅವರು ಯಾವಾಗಲೂ ಮಾಡೋದೇ ಹೀಗೆ. ಅದಿರ್ಲಿ..ಇವತ್ತು ಮ್ಯೂಸಿಕ್ ಚೆನ್ನಾಗಿದೆ ಅಲ್ವಾ?'

'ಹೌದು. ಯಾವುದೋ ಹೊಸಾ ಗ್ರೂಪ್ ಅಂತೆ ಅದರಲ್ಲಿ ಟೈಗರ್ ಸೊಳ್ಳೆ, ಯೆಲ್ಲೊ ಫಿವರ್ ಸೊಳ್ಳೆ, ಏಡಿಸ್ ಸೊಳ್ಳೆ, ಮಲೇರಿಯ ಸೊಳ್ಳೆ ಎಲ್ಲಾ ಇದೆ. ಸಂಗೀತ ಜೋರಾಗಿರುತ್ತೆ. ಕಚ್ಚಕ್ಕೂ ಕಾಲುಗಳು ಚೆನ್ನಾಗಿದೆ... ಇದು ಡ್ರೈವಿನ್ ಥಿಯೇಟರ್ ಜಾಗ ಅಲ್ವಾ? ನಮಗೆ ಸುಗ್ಗಿ ಇವತ್ತು!'

'ಜಾಸ್ತಿ ಏರಿಸ್ಕೋಬೇಡ..ಕಂಟ್ರೋಲ್ ಇರ್ಲಿ.. ಸ್ಕೂಟರ್ ಇಲ್ಲ ಆಟೊ ಸಿಕ್ಕಿದ್ರೆ ಸೀದಾ ಹೊರಟು ಮನೆ ಸೇರ್ಕ್ಕೊಳ್ಳೋಣ. ಡ್ರೈವರ್ನ ಕಚ್ಚೋದಕ್ಕೆ ಹೋಗ್ಬೇಡ. ದಾರೀಲಿ ಪ್ರಾಬ್ಲಂ ಆದ್ರೆ ಬಿಲ ಸೇರೋದು ಕಷ್ಟ ಆಗುತ್ತೆ'.

'ಸರಿ. ಲಾಸ್ಟ್ ಡ್ರಿಂಕ್. ವನ್ ಫರ್ ದ ರೋಡ್.'

■

ಹಳೇ ₹100 ನೋಟು ಮಾರ್ಚ್ ವೇಳೆ ಸ್ಥಗಿತ.'ಆರ್ ಬಿಐ ಎಜಿಎಂ




ಮಾಸ್ಕ ಧರಿಸದವರಿಂದ 7.18 ಕೋಟಿ ದಂಡ ವಸೂಲಿ.!ಸುದ್ದಿ



ಅಲ್ಲಾ ಕೊರೋನಾ ಹೆಸರಲ್ಲಿ ಇನ್ನು ಏನೇನು ವಸೂಲಿ ಮಾಡ್ತಾರೊ, ಈ ಸರ್ಕಾರದವರು ಅಲ್ವೇನೊ...!

# ಎಲ್ಲಿ ಹೋದವು ಆ ದಿನಗಳು?!

**– ವಾಣಿ ಸುರೇಶ್**

ನಮ್ಮನೇಲಿ ಸುಜೂ ಅಂತ ಒಂದು ಮುದ್ದು ಲಾಬ್ರಡಾರ್ ನಾಯಿ ಇತ್ತು. ಬರೀ ಗಂಡು ದಿಕ್ಕಿರೋ ನಮ್ಮನೇಲಿ ಎಲ್ಲರೂ ಅದನ್ನ – "ನಿನ್ನ ಮಗಳೂ ನಿನ್ನ ಮಗಳೂಂತಂತಿದ್ರು. ಮೊದಮೊದಲು ನಂಗೆ ಸ್ವಲ್ಪ ಮುಜುಗರವೇ ಆದರೂ ಆಮೇಲಾಮೇಲೆ ಅದೇ ಅಭ್ಯಾಸಾನೂ ಆಗ್ಹೋಯ್ತು‌ನ್ನಿ. ಆ ನನ್ನ ಸುಖಪ್ರಾರಬ್ಧ ಹೊರಗೆ ಒಂದು ಚೂರು ಮಳೆ ಹನಿ ಬಿದ್ದ ತಕ್ಷಣ – ನಾನೂ ಮಳೇಲಿ ನೆನೀಬೇಕು, ಆಚೆ ಬಿಡೂಂತ ಒಂದೇ ಸಮ ಬೊಗಳಿ, ಆಚೆ ಬಿಡದಿದ್ದರೆ ಗಲಾಟೆ ಎಬ್ಬಿಸಿಬಿಡೋದು!

ಅಲ್ಲ ಯಾಕೀಗ ಆ ವಿಷಯ ಅಂದ್ರಾ, ಅದ್ಸರಿ ಬಿಡಿ.

ಎಷ್ಟೋ ವರ್ಷದ ಮೇಲೆ ಈಗಿಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಅಪರೂಪವಾದ ಮಳೆ, ಗಾಳಿ, ಛಳಿ! ಒಳ್ಳೇ ಪುಷ್ಯಮಾಸದಲ್ಲೇ ಶ್ರಾವಣಮಾಸ ಬಂದು ಬಿಟ್ಟಿದೆಯೇನೋಂತ ಅನ್ನಿಸ್ಬೇಕು ಹಾಗೆ! ಆದರೆ ಏಳು ಡಿಗ್ರಿ ಸೆಲ್ಸಿಯಸ್ ಕಾರಣ ಗಾಜಿನ ಕಿಟಕಿಗಳನ್ನ ಸದಾ ಭದ್ರವಾಗಿ ಮುಚ್ಚಿಯೇ ಇರಬೇಕಾದ ಪರಿಸ್ಥಿತಿಯಿಂದ ಅಷ್ಟು ಚೆನ್ನಾಗಿ ಸುರೀತಿರೋ ಮಳೆಯ ಶಬ್ದಾನೂ ಕೇಳಿ ಖುಷಿಪಡೋಹಾಗಿಲ್ಲ. ಹೋಗಲಿ ನಡುಗಿಸೋ ಛಳೀನ್ನೂ ಲೆಕ್ಕಿಸದೇ ಆಚೆ ಕಾಲಿಟ್ಟರೆ, ಮುಂಗಾರಿನ ಹಾಗೇ ಇದ್ದರೂ ನಮ್ಮ ಮುಂಗಾರಿನ ಸ್ಪೆಷಾಲಿಟಿಯಾದ ಮಣ್ಣಿನ ಘಮವೇ ಬೇಡವೆ? ಇದೆಲ್ಲಾ ಸೇರಿ ಈ ಕಟು ವಾಸ್ತವಕ್ಕೆ ಕನ್ನಡಿ ಹಿಡಿದ ಹಾಗಾಗಿಬಿಡತ್ತೆ ನೋಡಿ. ಹಾಗಾಗಿ ಪಕ್ಕದ ಟೀಪಾಯಿನ ಮೇಲೆ ಬಿಸಿ ಬಿಸೀ ಪಕೋಡದ ತಟ್ಟೆ, ಕೈಯ್ಯಲ್ಲಿ ಹಬೆಯಾಡ್ತಿರೋ ಕಾಫಿ ಇದ್ದರೂ ಮನಸ್ಸನ್ನ ಕಾಡೋದು ಮಾತ್ರಾ ನಮ್ಮೂರ ನೆನಪೇ!..

"ಏಯ್ ಹಾಗೆ ಓಡಬೇಡ್ವೇ ಈ ಮಳೇಲಿ! ಕೊಚ್ಚೇಲಿ ಬಿದ್ದು ಅಮ್ಮನ್ ಕೈಲಿ ಬೈಸ್ಕೊತೀಯಾ ಅಷ್ಟೇ" – ಅಂತ ಕೂಗಿದ್ದು ನಂದಿ ಬೆಟ್ಟದಲ್ಲಿ ಅವತ್ತು ಆ ಬಣ್ಣಬಣ್ಣದ ಚುಟುಚಿ ಹೂವಿನಗಿಡಗಳ ನಡುವೆ ಸೋನೇಮಳೇಲಿ ಖುಷಿಯಾಗಿ ಕುಣೀತಿದ್ದಿದ್ದ ನನಗೆ. ಅವರಕ್ಕನ ಮಾತು ಕೇಳಿ ನನ್ನನ್ನ ವಾಪಸ್ ಎಳ್ಕೊಂಡು ಹೋಗಕ್ಕೆ ಛತ್ರಿ ತೊಗೊಂಡುಬಂದಿದ್ದ ನಂಗಿಂತ ಹತ್ತು ವರ್ಷ ದೊಡ್ಡೋನಾದ ಸೋದರಮಾವ. ಹಾಳಾದ ಹವಾಯಿ ಚಪ್ಪಲಿ ಪ್ರಭಾವ, ನನ್ನ ಹೊಸಾ ಪಿಂಕ್ ಲಂಗದ ಭರ್ತಿ ಕೆಸರು ಚಿತ್ತಾರ! ಹಾಗಾಗಿ ನಾನೇನೂ ಬಿದ್ದು ಲಂಗ ಕೊಚ್ಚೆ ಮಾಡಿಕೊಳ್ಳಲಿಲ್ಲ ಅಂತ ಅಮ್ಮನ ಹತ್ತಿರ ನಾನು ಪ್ರೊಟೆಸ್ಟೂ ಮಾಡೋ ಹಾಗಿರಲಿಲ್ಲ. "ಮಳೆ ಬಂದರೆ ಇದರ ಅವಾಂತರ ಹೀಗೇ"– ಅಂತ ಅಮ್ಮ ನನ್ನ ಅವತಾರಾನ ಅವರ ಜೊತೆಯಲ್ಲಿದ್ದ ನಮ್ಮಜ್ಜಿ ಚಿಕ್ಕಜ್ಜಿಯರಿಗೆ ತೋರಿಸಿ, ಅಲವತ್ತುಕೊಳ್ತಿದ್ದಿದ್ದು ಈಗಂದಹಾಗಿದೆ! ಕೊನೆಗೆ ಅಮ್ಮ ಅವರ ಸೀರೆ ಸೆರಗಲ್ಲೇ ತಲೆ ಒರೆಸಿ, ತಂದಿದ್ದ ಅವರ ಕಸಿನ್ ಮದುವೆಮನೆಯ ಚಕ್ಕುಲಿ, ಪುರಿ ಉಂಡೆಯ ಆಸೆ ತೋರಿಸಿ, ನಾವು ಹೋಗಿದ್ದ ವ್ಯಾನ್ನಲ್ಲಿ ಅವರುಗಳ ಮಧ್ಯದಲ್ಲೇ ಮತ್ತೆ ಮಳೆಗೆ ಓಡದೇ ಇರಲೀಂತ ಕುಕ್ಕ್ ಹಾಕಿದ್ದರು. ಎಲ್ಲಿ ಹೋದವೋ ಆ ದಿನಗಳು?

ಇದಾದ ಎರಡು ಮೂರು ವರ್ಷಗಳಾಗಿರಬೇಕು. ಎದುರು ಮನೆ ಶಕ್ಕೂ ಆಟಕ್ಕೆ ಕರೆಯಕ್ಕೆ ಬಂದಿದ್ದಳು. ಆಗಲೂ ಅಷ್ಟೇ, ಮೂರ್ನಾಲ್ಕು ದಿನದಿಂದ ಒಂದೇ ಸೋನೆಮಳೆ. ಅಮ್ಮಂಗೂ ನನ್ನನ್ನ ಕಾದು ಕಾದು ಸಾಕಾಗಿತ್ತೇನೋ.. ಹೊರಗೆಲ್ಲೂ ಹೋಗಕೂಡದೂ ಅನ್ನೋ ಕಂಡೀಶನ್ ಹಾಕಿ ಕಳಿಸಿ ಶಕ್ಕೂ ಮನೆಗೆ ಕಳಿಸಿ ಕೈತೊಳ್ಕೊಂಡರು. ಆದರೆ



ಅವರ್ಗೇನ್ ಗೊತ್ತಿತ್ತು ನಮ್ಮ ಪ್ಲಾನು! ಮನೆಯಿಂದಾಚೆ ಕಾಲಿಟ್ಟ ತಕ್ಷಣ ನಾವಿಬ್ರೂ ಮಳೇಲಿ ಓಡಿದ್ದೇ ನಮ್ಮನೆ ಹತ್ತಿರಾನೇ ಇದ್ದ ಹೊಳೇ ಕಡೆಗೆ! ಮಳೆಯಲ್ಲಿ ಕೆಂಪಗೆ ಹರಿಯೋ ಹೇಮಾವತೀಗೆ ನಾವು ಕಲ್ಲೆಸೀಬೇಡ್ವೇ? ಆ ಖುಷಿ ಅಮ್ಮಂದಿರಿಗೇನ್ ಗೊತ್ತು? ಎಷ್ಟೊತ್ತಾಗಿತ್ತೋ ಏನೋ ಅವಳಣ್ಣ ವರದ ಬಂದಾಗಲೇ ಗೊತ್ತು. ಅವಳ ಬೆನ್ನಮೇಲೆ ಗುದ್ದಿ ಇಬ್ರನ್ನೂ ಬೈದು ಎಳ್ಕೊಂಡು ಹೋಗಿದ್ದ! ಮನೇಗೆ ಹೋಗಕ್ಕೆ ಹೆದರ್ಕೊಂಡು, ಶಕ್ಕೂ ಅಮ್ಮನ ಕೈಲೇ ತಲೆ ಒರೆಸಿಸಿಕೊಂಡು ಆಗೆಲ್ಲಾ ಸದಾ ಉರೀತಾನೇ ಇರ್ತಿದ್ದ ಅವರ್ಮನೆ ನೀರೊಲೆ ಮುಂದೆ ಕೂತ್ಕೊಂಡು, ಅವರು ಕೊಟ್ಟ ಕೋಡ್ಬಳೆ, ರವೆ ಉಂಡೆಗಳನ್ನ ತಿಂದು ಮುಗಿಸೋ ಹೊತ್ತಿಗೆ ಲಂಗ ಒಣಗಿತ್ತು! ಈಗ ಶಕ್ಕೂ ಎಲ್ಲಿದಾಳೋ? ಜೋರು ಹೊಡೀತಿದ್ದ ವರದ ಎಲ್ಲೋ ಯಾರಿಗ್ಗೊತ್ತು?

ಇನ್ನೂ ಕೆಲವು ವರ್ಷಗಳ ನಂತರದ ಕತೆ ಇದು.. "ಗಿರಿಜಾ ಇದ್ದಾಳೇನ್ರೀ ಶಾಂತಮ್ಮಾ?" ಕೂಗ್ತಿದ್ದೆ ಅವರ ಮನೆ ಮೆಟ್ಟಲಮೇಲೆ ನಿಂತ್ಕೊಂಡು. "ಈ ಮಳೇಲೆಲ್ಲಿ ಹೋಗ್ತಾಳೆ. ಸಂಗೀತದ ಮೇಷ್ಟರು ಬಂದಿದ್ದಾರೆ. ನೀನೂ ಅಲ್ಲೇ ಹೋಗು" – ಅನ್ನಬೇಕು ಅವರು, ಬಾಗಿಲು ತೆಗೀತಾ. ಅಲ್ಲಿ ರೂಮಲ್ಲಿ ನಡೀತಿದ್ದ ನಾಟಕ ಇವತ್ತಿಗೂ ಅವರಿಗೆ ಗೊತ್ತಿರಲಾರದು ಪಾಪ. ಮೇಷ್ಟರಿಗೆ ಅವರಮ್ಮನ ಹತ್ತಿರ ಹೇಳಿದರೆ ಎಲ್ಲಿ ಪಾಠದಮನೆ ಬಿಟ್ಟು ಹೋಗತ್ತೋ ಅನ್ನೋ ಚಿಂತೆ ಇರಬೇಕು, ಹಾಗಾಗಿ ಅವರೂ ನಮ್ಮ ಚೇಷ್ಟೆಗೆ ಒಂದು ತರಾ ಶಾಮೀಲಾಗಿದ್ರು. ರೂಮಲ್ಲಿ ಮೇಷ್ಟರ ಮುಂದೆ ಪೆಚ್ಚುಮುಖ ಹಾಕೊಂಡು ಕೂತಿದ್ದ ಗಿರಿಜಂಗೆ ನನ್ನನ್ನ ನೋಡಿದ ತಕ್ಷಣ ಕಣ್ಣು ಮಿಂಚಿ, ಕಮಲದ ಹಾಗೆ ಮುಖ ಅರಳೋದು. ಸಂಗೀತ ಕಂಡರಾಗದ ಅವಳಿಗೆ ಆ ಪಾಪದ ಕುರುಡು ಮೇಷ್ಟರ ಪಾಠ ಒಂದು ಶಿಕ್ಷೆ. ಮಾಮೂಲಿನ ಹಾಗೆ ನನ್ನನ್ನ ಮೆತ್ತಗೆ ಅವರ ಮುಂದೆ ಕೂತ್ಕೋ ಅಂತ ಸನ್ನೆ ಮಾಡಿ ಅವಳು ಭತ್ತದ ಪೆಟ್ಟೆ ಹಿಂದೆ ಚೇಷ್ಟೆ ಮಾಡಕ್ಕೆ ಸದ್ದಿಲ್ಲದೇ ಹೋಗೋಳು. ಅಷ್ಟೊತ್ತಿಗಾಗಲೇ ಸಾಕಷ್ಟು ಕಲಿತಿದ್ದ ನನಗೆ ಜಂಟಿವರಸೆ ಒಂದು ಕಷ್ಟವೇ?ನಾನು ಒಂದು ಲೈನ್ ಹಾಡಕ್ಕಿಲ್ಲ, ಮೇಷ್ಟರು ಹಾರ್ಮೋನಿಯಂ ನಿಲ್ಲಿಸಿ "ಗಿರಿಜನ್ನ ಫ್ರೆಂಡ್ ಏನಮ್ಮ? ನೀನು ಯಾವಾಗ ಬಂದೇ?" ಅನ್ನಬೇಕು. ಸಂಗೀತ ಬರದ ಶಿಷ್ಯೆ ಜೊತೆ ತಲೆ ಚೆಚ್ಕೊಂಡು ಅವರಿಗೂ ಪಾಪ ಸಾಕಾಗಿರ್ತಿತ್ತೇನೋ, ಅವರೂ – "ನಾಡಿದ್ದು ಬರ್ತೀನಮ್ಮ ಗಿರಿಜಾ. ಅಷ್ಟೊತ್ತಿಗೆ ಸರಿಯಾಗಿ ಪ್ರಾಕ್ಟೀಸ್ ಮಾಡಿರಬೇಕು" ಅಂತ ಪೆಟ್ಟೆ ಹಿಂದೆ ಕೂತಿದ್ದ ಗಿರಿಜನ್ಗೆ ಹೇಳಿ ಕ್ಲಾಸ್ ಮುಗಿಸಬೇಕು. ಆ ದಿನಾನೂ ಮೇಷ್ಟನ್ನ ಗೇಟಿನವರೆಗೂ ಹಿಡಿದುಕೊಂಡು ನಡೆಸುವ ನೆವದಲ್ಲಿ ಎಲ್ಲಿಲ್ಲದ ಭಕ್ತಿಯಿಂದ ಅವರ ಕೈ ಹಿಡ್ಕೊಂಡು ಆಚೆ ಬಂದ್ವಿ. ಹೊರಗೆ ಬಂದ್ಮೇಲೆ ಒಳಗ್ಯಾರು ಹೋಗ್ತಾರೆ ಅಷ್ಟು ಒಳ್ಳೆಯ ಸೋನೆಮಳೆ ಬರ್ತಿರೋವಾಗ. ಅಷ್ಟಕ್ಕೂ ಅವಳೂ ನಂದೇ ಸ್ವಭಾವದ ನನ್ನ ಬೆಸ್ಟ್ ಫ್ರೆಂಡ್ ಅಲ್ವೇ! ಸುರೀತಿದ್ದ ಮಳೇಗೆ ಅವರ ಮನೆಯ ಚೈನಾ ಸಂಪಿಗೆ ಧಾರಾಳವಾಗಿ ಸುರಿಸಿದ್ದ ರೇಕುಗಳ ಘಮ್ ಅನ್ನೋ ಆ ಕಾರ್ಪೆಟ್ ಮೇಲೆ ನಡೆಯೋದೇ ಒಂದು ಮಜಾ! ಆಗ "ರತ್ನಗಿರಿ ರಹಸ್ಯ" ಸಿನೆಮಾ, ಅದರ ಹಾಡುಗಳೂ ಮಹಾ ಫೇಮಸ್ಸು. ನಾನು ಆ ಸಂಪಿಗೆ ರೇಕಿನ ಕಾರ್ಪೆಟ್ ಮೇಲೆ ಕುಣೀತಾ – "ಅಮರಾ ಮಧುರಾ ಪ್ರೇಮ" ಅಂತ ಹಾಡಕ್ಕೆ ಶುರುಮಾಡಬೇಕು. ಗಿರಿಜಾನೇ ನನ್ನ ಸಖಿ! ಅಷ್ಟೊತ್ತಿಗೆ ಅವರಮ್ಮಂಗೆ ಗೊತ್ತಿಲ್ಲದೇ ಆಚೆ ಬಂದಿದ್ದ ಅವಳ ತಮ್ಮ ಚಂದ್ರು, ಮರದ ಹಿಂದಿಂದ ನೆಗೀತಾ ಬಂದು ನಮ್ಮಿಬ್ರನ್ನ ಹೆದರಿಸೋ ನಾಟಕ ಆಡೋನು! ಎಷ್ಟೊತ್ತಾದ್ರೂ ಒಳಗೆ ಬರದಿದ್ದ ನಮ್ಮನ್ನ ಹುಡುಕ್ಕೊಂಡು ಅವರಮ್ಮ ಆಚೆ ಬಂದು ಎಲ್ಲರನ್ನೂ ಗದರಿಸಿ ಒಳಗೆ ದಬ್ಬಿ ಬಾಗಿಲು ಹಾಕಬೇಕು! ಇವತ್ತು ಆ ಚಂದ್ರು ಒಬ್ಬ



ಪ್ರಸಿದ್ಧ ಹಾರ್ಟ್ ಸರ್ಜನ್ ಅಂತೆ – ಮೊನ್ನೆ ಫೋನಲ್ಲಿ ಗಿರಿಜಾ ಹೇಳ್ತಿದ್ದಳು.

ಅವತ್ತು ನಮ್ಮೆಲ್ಲಾರನ್ನೂ ಕಟ್ಕೊಂಡು ಭದ್ರಾವತಿಯಿಂದ ಕೆಮ್ಮಣ್ಣುಗುಂಡಿಗೆ ಹೋಗಿದ್ರು! ಆ ಮಳೆ, ಆ ಕೆಂಪು ಕೆಸರಿನ ರಾಡಿ, ಅದನ್ನೇ ನಾವು ಕಚಪಚ ಅಂತ ತುಳ್ಕೊಂಡು, ಜಿಗಣೆ ಹತ್ತಿದ್ರೂ ಕೇರೇ ಮಾಡದೇ ಮರದ ಕೆಳಗೆ ಬಿದ್ದಿರ್ತಿದ್ದ ನೇರಳೇ ಹಣ್ಣನ್ನ ಆಯಕ್ಕೆ ಹೋಗ್ತಿದ್ದಿದ್ದನ್ನ ಹೇಗೆ ತಾನೇ ಮರೆಯೋದು! ಮೊಣಕಾಲಿನ ಮೇಲಿನವರೆಗೂ ಹತ್ತಿಕೊಂಡಿರ್ತಿದ್ದ ಆ ಜಿಗಣೆಗಳಿಗೆ ಸುಣ್ಣ ಹಚ್ಚಿ ಬಿಡಿಸೋರು, ಚಿಕ್ಕಕ್ಕಿದ್ದ ಆ ಹಾಳಾದೋವು ನಮ್ಮ ರಕ್ತ ಕುಡಿದಮೇಲೆ ಗುಂಡಗೆ ಇಷ್ಟು ದಪ್ಪ ಆಗಿರೋವು! ಅವನ್ನ ಬಿಡಿಸಿ ತೆಗೆದ ಮೇಲೆ ರಕ್ತ ಜಿನುಗ್ತಿರೋದು. ಇನ್ನು ಆ ಕೆರೆತವೋ ಉರಿಯೋ ಕೇಳಬೇಡಿ. ಆದರೆ ಮಡಿಲು ತುಂಬಾ ಇರ್ತಿದ್ದ ನೇರಳೆ ಹಣ್ಣು ಅದೆಲ್ಲವನ್ನೂ ಮರೆಸಿಬಿಡೋದು! ಆ ಕರೀ ಕರೀ ನೇರಳೆ ಹಣ್ಣು, ಆ ಮಳೆ, ಗಾಳಿ, ಛಳಿ, ಈಗೆಲ್ಲಿ?

ಅದೂ ಈ ಬೆಚ್ಚಗಿನ ಟ್ರಿಪ್ಲಿಕೇನ್ ಬೀಚಿನಲ್ಲಿ?! ಆಗಿಂದಾಗಲೇ ಮುಳುಗಿದ ಸೂರ್ಯ, ಆಗಷ್ಟೇ ಸಮುದ್ರದಂಚಿಂದ ಮೇಲೇಳುತ್ತಿದ್ದ ಚಂದ್ರ, ಬೆಚ್ಚಗಿದ್ದ ಮರಳಿನ ಮೇಲೆ ನಮ್ಮ ಹೆಜ್ಜೆಯ ಸುಳಿವು ಸಿಕ್ಕ ತಕ್ಷಣ ಸರಸರಾಂತ ಓಡಿ ಮರಳಲ್ಲಿ ತೂತು ಮಾಡ್ಕೊಂಡು ಮರೆಯಾಗ್ತಿದ್ದ ಆ ಪುಟಾಣಿ ಏಡಿಗಳು.. ತರತರಾವರಿ ಕಪ್ಪೆ ಚಿಪ್ಪುಗಳು.. ಬಾಳಗೆಳೆಯನ ಜೊತೆಯಲ್ಲಿ ಮಾತಿಲ್ಲದೆ ಹೆಜ್ಜೆ ಹಾಕ್ತಿದ್ದ ಇನ್ನೂ ಮಧುಚಂದ್ರದ ಮೂಡಲ್ಲೇ ಇದ್ದ ದಿನಗಳು.. ನನ್ನ ಮನಸ್ಸಲ್ಲಿ ಮೆಲ್ಲಗೆ ಗುನುಗುತ್ತಿದ್ದ "ಬಾಲಿಕಾ ವಧು" ಸಿನೆಮಾದ – "ಬಡೇ ಅಚ್ಛೇ ಲಗ್ತೇ ಹೈ, ಏ ಧರತೀ, ಏ ರೈನಾ, ಔರ್ ತುಮ್" ಅನ್ನೋ ಹಾಡು!.. ಆಹಾ ಸ್ವರ್ಗಕ್ಕೆ ಕಿಚ್ಚು ಹಚ್ಚುವ ಕ್ಷಣಗಳು ಅಂದ್ರೆ ಇದೇ ಇರ್ಬೇಕೂಂತ ಅಂದ್ಕೊತಿರೋವಾಗ್ಲೇ ಎಲ್ಲಿತ್ತೋ ಅಷ್ಟೊಂದು ಮೋಡಗಳು.. ಸಣ್ಣಗೆ ಮಳೆ ಹನಿಗಳು ಶುರುವಾಗೇಬಿಟ್ಟಿತು .. ಇನ್ನೂ ಖುಷಿಯಿಂದ ಮನಸ್ಸಲ್ಲೇ ಗುನಗ್ತಿದ್ದ ನನ್ನ ಹಾಡಿಗೆ ಮತ್ತಷ್ಟು ಜೋಶ್! ಆದರೆ ಜೊತೆಯಲ್ಲಿದ್ದ ಸಿಟಿಯಲ್ಲಿ ಬೆಳೆದಾತ ಆ ಹೂ ಮಳೆಗೆ ಬೆದರಿ – "ಅಯ್ಯೋ ಮಳೆ.. ಓಡು ಓಡು" ಅಂತಂದಿದ್ದು ಮಾತ್ರಾ ನನಗೆ ಅರ್ಥವಾಗಿರಲಿಲ್ಲ! ಹೂ ಮಳೆಗೆ ಹೆದರೋದು ಅಂದರೇನೂಂತ ಅಂದಿಗೂ ಇಂದಿಗೂ ಅರ್ಥ ಆಗಲೇ ಇಲ್ಲವಲ್ಲ!.. ಕಟ್ ಕಟ್ ಕಟ್.. ಇದೇನು ವಿಚಿತ್ರ ಶಬ್ದ? ಅದೂ ಮಳೇಲಿ ಮನಸ್ಸಿಲ್ಲದ ಮನಸ್ಸಲ್ಲಿ ಮರಳಿನ ಮೇಲೆ ಬೇಗ ಬೇಗ ಹೆಜ್ಜೆ ಹಾಕುವಾಗ!

"ಆಹಾ! ಹುಣಸೆ ಮರ ಮುಪ್ಪಾದ್ರೂ ಹುಳಿ ಮುಪ್ಪಾಗಲ್ವಂತೆ! ಸರಿಯಾಗಿದ್ದೀಯಾ! ಹೇ, ಕಂ ಆನ್ ಗೈಸ್, ನಿಮ್ಮಜ್ಜಿ ಹೇಗೆ ಕಿಟಕಿಯ ಬ್ಲೈಂಡ್‌ನೆಲ್ಲಾ ತೆಕ್ಕೊಂಡು ಸ್ಟಾರ್ಮ್ ಎಂಜಾಯ್ ಮಾಡ್ತಿದ್ದಾರೇಂತ ನೋಡ್ಡೋರಂತೆ ಬನ್ನಿ"! – ನಮ್ಮ ರೂಮ್ ಬಾಗಿಲು ತೆಕ್ಕೊಂಡು ಬಂದ ಮಗ ಅವನ ಮಕ್ಕಳನ್ನ ಕೂಗಿದ.

ಮಳೆಯೇ ಪಾವನವಾದ ಇಲ್ಲಿ, ನನ್ನ ರೂಮಿನ ಕಿಟಕಿ ಪೂರ್ತಿ ತೆಕ್ಕೊಂಡು ಒಂದು ವಾರದಿಂದ ಸುಯ್ಯಂತ ಬೀಸ್ತಾ ಬಂದಿರೋ ಚಳೀಗಾಳಿ–ಮಳೇನ ಹಿಗ್ಗುತ್ತಾ ನೋಡ್ತಾ ಕೂತಿರುವಾಗ ಹೀಗೆ ರಸಭಂಗವಾಗೋದುಂಟೇ! ಶಾಂತಂ ಪಾಪಂ – ಅಂತ ಗೊಣಗಿಕೊಂಡು ಆರಿ ಅಕ್ಷತೆಯಾಗಿ ಕೆನೆಗಟ್ಟಿದ್ದ ಕಾಫೀನ ತಣ್ಣಗಾಗಿದ್ದ ಪಕೋಡ ನೆಂಚಿಕೊಂಡು ತಿನ್ನುಕ್ಕೆ ಶುರುಮಾಡಿದೆ.

ಅಂತೂ ಇಷ್ಟು ವರ್ಷಕ್ಕೆ, ನಿಜ, ಸುಜನ್ನ ನನ್ನ ಮಗಳು ಹೌದು ಅಂತ ಮನಸ್ಸಿಗೆ ಒಪ್ಪಿಗೆಯಾಯ್ತು!

■



# ಇದೂ ಒಂದು ಚಟವೇ

– ಕುಮುದಾ ಪುರುಷೋತ್ತಮ್

ಹಲೋ...ಹಲೋ...,ಇದು ಸುಜೀ ಮನೇನಾ?

ಹೌದು, ನೀವು?

ನಾನೇ.. ಗುರ್ತು ಸಿಗಲಿಲ್ವಾ?

ಅಯ್ಯೋ ನೀನಾ. ಅಪರೂಪಕ್ಕೆ ಫೋನ್ ಮಾಡಿದ್ದೀ. ಅದಕ್ಕೇ ತಕ್ಷಣ ಧ್ವನಿ ಗೊತ್ತಾಗ್ಲಿಲ್ಲ.

ನಿಮ್ಮೆಜಮಾನ್ರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ರೂಂತ ತಿಳೀತು. ಏನಾಗಿತ್ತು ಅಂತ ಕೇಳೋಕ್ಕೆ ಫೋನ್ ಮಾಡ್ದೆ.

ನನ್ನ ತಾಪತ್ರಯ ಅದ್ಯಾಕೆ ಕೇಳ್ತೀಯ. ನಾನಿನ್ನೂ ಈಗ ಚೇತರಿಸಿಕೊಳ್ತಾ ಇದೀನಿ. ಅಂದು ಡಾಕ್ಟ್ರಬಳಿ ಹೋದಾಗ ಮೈಕೈ ಎಲ್ಲಾ ತಣ್ಣಗಾಗಿ ನಾಲಿಗೆ ಒಣಗಿ ಸಂಡಿಗೆಯಾಗಿ ಹೃದಯ ಡಬ್ಬಾ...ಡಬ್ಬಾಂತ ಹೊಡ್ಕೊಂಡ್ತು.

ಯಾರ್ಗೇ? ನಿಮ್ಮೆಜಮಾನ್ರಿಗಾ?

ಇಲ್ಲಪ್ಪ. ಎಲ್ಲಾ ಆಗಿದ್ದು ನಂಗೇ. ಅವ್ರು ಮಾತ್ರ ಕರ್ಬೂಜದ ಹಣ್ಣಿನ್ಹಾಂಗೆ ತಣ್ಣಗೇ ಇದ್ರು. ನನ್ನ ಸ್ಥಿತಿ ಕಂಡು ಡಾಕ್ಟ್ರೇ ದಿಗಿಲು ಪಟ್ಕೊಂಡ್ರು.

ನಿಂದಿರ್ಲೀ. ಯಜಮಾನ್ರಿಗೇನಾಗಿತ್ತು ಅದು ಹೇಳು.

ಹೇಳ್ತೀನಿ. ಅದಕ್ಯಾಕಿಷ್ಟು ಅವಸರ ಪಡ್ತೀ? ಹೇಳ್ತಿದ್ನೆಲ್ಲಾ. ನಾವು ಹೋದ್ವೆಲ್ಲಾ ಆ ಡಾಕ್ಟ್ರು ಬಲು ಒಳ್ಳೆಯೋರು. ಅವ್ರು ನಮಗೆ ಮೊದ್ಲಿಂದ ಗೊತ್ತು. ಅವ್ರ ಮನೇವ್ರು ನಮ್ಮ ತಂದೆ ಮನೆ ಔಟ್ ಹೌಸಿನಲ್ಲಿ ಬಾಡಿಗೆಗೆ ಇದ್ರು. ಅಷ್ಟೇನು ಅನುಕೂಲವಂತರಲ್ಲ.

ಬಾಡಿಗೆ ಕೊಟ್ರೆ ಕೊಡೊವ್ರು ಇಲ್ದಿದ್ರೆ ಕೈಆಡಿಸಿಬಿಡೊವ್ರು. ಈತ ಮಾತ್ರ ಕಷ್ಟಪಟ್ಟು ವ್ಯಾಸಂಗಮಾಡಿ ಡಾಕ್ಟ್ರಾದ್ರು. ನನ್ನನ್ನು ಕಂಡ್ರೆ

ಅದೇ ವಿಶ್ವಾಸ ಇಟ್ಕೊಂಡಿದ್ದಾರೆ.

ಡಾಕ್ಟ್ರು ಯಜಮಾನ್ರನ್ನ ಪರೀಕ್ಷೆ ಮಾಡಿ ಏನು ಹೇಳಿದ್ರು?

ಮಹರಾಯ ಬಾಯೇ ಬಿಡ್ಲಿಲ್ಲ! ಹನುಮಂತನ ಬಾಲದ ಹಾಗೆ ಅಷ್ಟುದ್ದ ಟೆಸ್ಟುಗಳ ಪಟ್ಟಿ ಬರೆದು ಎದುರಿಗೇ ಇದ್ದ ಲ್ಯಾಬಿಗೆ ಕಳಿಸಿದರು ನನ್ನನ್ನ.

ಟೆಸ್ಟುಗಳು ನಿನಗಾ ನಿಮ್ ಯಜಮಾನ್ರಿಗಾ?

ಬರ್ದಿದ್ದು ಅವ್ರಿಗೇ. ಆದ್ರೆ ನಾನು ಬಿಡ್ತೀನಾ? ಮುನ್ನೆಚ್ಚರಿಕೆಯಾಗಿ ನಾನೂ ಎಲ್ಲಾ ಟೆಸ್ಟುಗಳನ್ನೂ ಮಾಡಿಸ್ಕೊಂಡು ಬಿಟ್ಟೆ. ಆ ಲ್ಯಾಬು ನಡ್ಸೋದು ಯಾರು ಗೊತ್ತಾ? ನಮ್ಮತ್ತೆ ಮನೆ ಕಡೆ ಬಳಗ. ದೇವ್ರಂಥಾ ಮನುಷ್ಯ. ಇಬ್ಬರು ಮಕ್ಕಳು. ಒಂದು ಗಂಡು ಒಂದು ಹೆಣ್ಣು. ಬಲು ಮುದ್ದು ಮಕ್ಳು. ಇನ್ನೂ ಮುದ್ದು ಮುದ್ದಾಗೇ ಮಾತಾಡತ್ವೆ ವರ್ಷ ಹದಿನೆಂಟಾದ್ರೂನೂವೆ.



ಸುಜೀ, ಅದಿರ್ಲಿ. ಬರ್ಕೊಟ್ಟಿದ್ದ ಟೆಸ್ಟ್ ರಿಸಲ್ಟ್ ಬಂತಾ?

ಇದೆಂಥಾ ಪ್ರಶ್ನೆ? ಬಸುರಿ ಆಗಿದ್ದೋಳಿಗೆ ಹೆರಿಗೆ ಆಯ್ತೇ ಅನ್ನೋಹಾಗೆ. ಅದಕ್ಕಾಕೆ ತಲೆ ಕೆಡಿಸ್ಕೋತೀ? ಅಲ್ಲಿದ್ದ ಡಾಕ್ಟ್ರು ಹೆಂಡ್ತಿ ಯಾರು ಗೊತ್ತಾ? ಅದೇ ಕಣೇ. ನಮ್ಮ

ಕ್ಲಾಸಿನಲ್ಲಿ ನಾಗರತ್ನ ಅಂತ ಇದ್ಲು ನೋಡು. ನಾವೆಲ್ಲಾ ಕುಳ್ಳಿ ನಾಗಿ ಅಂತಿದ್ವಿ. ಅವಳ ದೊಡ್ಡಪ್ಪನ ಅಳಿಯನ ತಂಗಿ. ಅವ್ಳೆ ಈ ಲ್ಯಾಬಿನಲ್ಲಿ ರಿಸೆಪ್ಷನಿಸ್ಟು ಕೂಡ. ನನ್ನ ನೋಡಿ ಒಂದು ನಗೆ ಬೀರಿ ಫೋನ್ ಮಾಡುವವಳಂತೆ ನಟಿಸಿದಳು. ನಾನೇನು ಫೋನು ಕಂಡಿಲ್ವಾ? ಹಿಡಿದು ಅಲುಗಾಡಿಸಿ ಅರ್ಧ ಗಂಟೆ ಮಾತನಾಡಿಸಿಯೇ ಬಿಟ್ಟೆ.

ಸುಜೀ, ನಿಮ್ಮ ಯಜಮಾನರ ಆರೋಗ್ಯದ ವಿಷಯಕ್ಕೆ ಬಾ.

ಅದಕ್ಕೇ ಬರ್ತಾಇದ್ದೀನಿ. ಅದಕ್ಕೆ ಮುಂಚೆ ಇಲ್ಕೇಳು. ಅವಳನ್ನ ನಾಗರತ್ನಾ ಬಗ್ಗೆ ಕೇಳಿದೆ. ಆ ಕುಳ್ಳಿ ಗಂಡ ಆರು ಅಡೀನಂತೆ!

ನೀನೇ ಊಹೆ ಮಾಡ್ಕೊ. ಆರಡಿ, ನಾಲ್ಕೂವರೆ ಅಡಿ ಅಂದ್ರೆ ಅಮಿತಾಬ್ ಜಯಾ ಜೋಡಿಯಂತಿರತ್ತೆ. ಮಕ್ಳು ಹೇಗಿದ್ದಾರೆ ಅಂತ ಕುತೂಹಲಕ್ಕೆ ಕೇಳಿದೆ. ಮಗ ನಾಲಕ್ಕೂವರೆನಂತೆ ಮಗಳು ಆರು ಅಡಿನಂತೆ. ಬ್ರಹ್ಮನ ಹಾಸ್ಯ ಪ್ರಜ್ಞೆಗೆ ಎಣೆಯೇ ಇಲ್ಲಾ.

ಅಲ್ವಾ?

ಆಪ್ರೇಷನ್ ಮಾಡಿದ್ರಾ?

ಮೊದ್ಲು ಅಡ್ಮಿಟ್ ಮಾಡಿ. ಪರಿಸ್ಥಿತಿ ನೋಡ್ಕೊಂಡು ನಿರ್ಧಾರ ಅಂತಂದ್ರು. ಅದೇ ಸಮಯಕ್ಕೆ ನಮ್ಮ ಯಜಮಾನ್ರ ಅಣ್ಣ ಅತ್ತಿಗೆ ತಮ್ಮ ಮಕ್ಕಳ ಸೈನ್ಯದ ಸಮೇತ ಬಂದು ವಕ್ರಸಿದ್ರು. ಹೇಳಿದ್ದು ನಿನ್ನ ಸಹಾಯಕ್ಕೆ ಅಂತ. ಮಾಡಿದ್ದು ಊರು ಸುತ್ತಿದ್ದು. ಲಾಕ್ ಲಾಕ್ ಡೌನ್ ವೇಳೆ ಕೆಲಸದವ್ರು ಇಲ್ದೆ ಅವ್ರಿ ಬೇಯ್ಸಿ ಹಾಕೀ ಹೈರಾಣಾದೆ, ಲಾಕ್ಡೌನ್ ಇದ್ರೂ ನಂಬಾವ ಪೋಲೀಸ್ನೋವ್ರ ಕಣ್ತಪ್ಪಿಸಿ ಲಾಲ್‌ಬಾಗ್, ವಿದಾನಸೌಧ, ಕಬ್ಬನ್ ಪಾರ್ಕೂಂತ ಹೆಂಡ್ತಿಮಕ್ಳನ್ನು ಸುತ್ತಿಸಿದ್ರು. ಒಂದೆರಡು ಬಾರಿ ಪೋಲೀಸ್ನೋರ ಲಾಠಿ ರುಚೀನೂ ನೋಡಿದ್ರಂತೆ. ಆ ಮಕ್ಳು ಜಂಭದಿಂದ ಹೇಳ್ಕೊಂಡ್ವು. ದಿನಾ ಊರು ಸುತ್ತಿ ಮನೇಗೆ ಬಂದ್ಕೂಡ್ಲೆ ಇವತ್ತು ಇಷ್ಟು ಏಟು ಅಷ್ಟು ಏಟು ಅಂತ ಕ್ರಿಕೆಟ್ ಸ್ಕೋರ್ ಥರ ಹೇಳ್ತಿದ್ವು ಕಣೆ.

ಕೊನೇಗಾದ್ರೂ ಆಪರೇಷನ್ ಮಾಡಿದ್ರಾ?

ಲಾಕ್ ಡೌನ್ ತೆಗದ್ರಲ್ಲಾ ಅವತ್ತೇ ಆಯ್ತು. ಎಲ್ರೂ ಲಾಕ್ ಡೌನನ್ನ ತೆಗಳೋರೇ. ಅದ್ರಿಂದ ಎಷ್ಟು ಒಳ್ಳೇದಾಯ್ತು ಗೊತ್ತಾ?

ಅಡುಗೆಯವ್ರು ಬರ್ದೇ ನಾನೇ ಅಡುಗೆ ಮನೆ ಸೇರಿದ್ನಾ. ನಲವತ್ತು ದಿನಕ್ಕೆ ಖಾಲಿಯಾಗ್ತಿದ್ದ ಅಡುಗೆ ಅನಿಲ ಐವತ್ತು ದಿನ ಬಂತು. ತಿಂಗ್ಳಿಗೆ ಬೇಕಾಗ್ತಿದ್ದ ನಾಲ್ಕು ಲೀಟರ್ ಕಡ್ಲೆಕಾಯೆಣ್ಣೆ ಮೂರಕ್ಕಿಳೀತು. ನೀರಿನ ಬಿಲ್ಲು ಮಾಮೂಲಿಗಿಂತ ನೂರು ಕಮ್ಮಿ!

ಹೊರಗೆ ಹಾಳು ಮೂಳು ತಿಂದು ಹೊಟ್ಟೆ ಕೆಡಸ್ಕೋತಿದ್ದ ನಾವೆಲ್ರೂ ಆರೋಗ್ಯದಿಂದ ಇದ್ದು ಡಾಕ್ಟರ್ ಬಿಲ್ಲು ಉಳೀತು.

ಹಾಗಾದ್ರೆ ನಿಮ್ಮೆಜಮಾನ್ರು ಈಗ ಆರೋಗ್ಯವಾಗಿದ್ದಾರಾ?

ಆ ವೇಳೆಗೆ ಸರಿಯಾಗಿ ಗೊಗ್ಗರಧ್ವನಿಯ ಹಿಮ್ಮೇಳ ಕೇಳಿಬಂತು

"ಸುಜ್ಯಾ, ನಂಗೇನು ಕಾಫಿ ಬೆರೆಸಿ ಕೊಡ್ತೀಯೋ ಅಥ್ವ ಹೀಗೇ ಫೋನ್ ಮುಂದೆ.........?

ನಂಗ್ಯಾಕೆ ಗಂಡ ಹೆಂಡಿರ ಜಗ್ಳ? ನನಗೆ ಬೇಕಾದ ಉತ್ತರ ಸಿಕ್ಕಿತ್ತು. ಫೋನ್ ಕುಕ್ಕಿದೆ. ■



# ನಮ್ಮೊಳಗೊಬ್ಬ ಕಳ್ಳನಿದ್ದಾನೆಯೆ?

**– ಗಣೇಶ ಹೆಗಡೆ**

ಕೆಲವು ಕಳ್ಳರು ಸಾಕ್ಷಾತ್ ಪ್ರಾಮಾಣಿಕರಂತೆಯೂ, ಕೆಲವು ಪ್ರಾಮಾಣಿಕರು ಸಾಕ್ಷಾತ್ ಕಳ್ಳರಂತೆಯೂ ನಮ್ಮ ಕಣ್ಣಿಗೆ ಗೋಚರಿಸುತ್ತಾರೆ.

ಈ ಮೇಲಿನ ಮಾತನ್ನು ಬಲು ವರ್ಷಗಳ ಹಿಂದೆ ಪ್ರತಿಪಾದಿಸಿದವರು ಬೇರ್‍ಯಾರೂ ಅಲ್ಲ, ಪ್ರಸಿದ್ಧ ಸಾಹಿತಿ, ಹಾಸ್ಯ ಬ್ರಹ್ಮ ದಿವಂಗತ ಬೀಚಿಯವರು. ಈ ವಿಚಾರ ಈಗ್ಯಾತಕ್ಕೆ ನೆನಪಿಗೆ ಬಂತು ಅಂದಿರಾ? ಮೊನ್ನೆ ನಮ್ಮ ಮನೆಯಲ್ಲಿ ಏನಾಯ್ತೂಂದ್ರೆ, ನಮ್ಮ ಮನದನ್ನೆ ವಾರ್ಡ್ ರೋಬ್ ಕ್ಲೀನ್ ಮಾಡುವ ಕಾರ್ಯಕ್ರಮ ಹಮ್ಮಿಕೊಂಡು ಸೀರೆಯ ಸ್ಟಾಕ್ ನೆಲ್ಲಾ ನೆಲದ ಮೇಲೆ ಹರಡಿ ಕೊಂಡಿದ್ದಳು. ಇದ್ದಕ್ಕಿದ್ದಂತೆಯೆ ಅವಳು 'ರ್‍ರೀ...ಈ ಸೀರೆಯ ಕೆಳಗೆ ತುಂಬಾ ದುಡ್ಡು ಮುಚ್ಚಿಟ್ಟಿದ್ದೆ. ನೀವೇನಾದರೂ......ಎಂದು ಗಾಬರಿ ಮಿಶ್ರಿತ ದನಿಯಲ್ಲಿ ಕೂಗಿಕೊಂಡಿದ್ದಳು. ಅವಳ ಅನುಮಾನದ ದೃಷ್ಟಿಯನ್ನು ಎದುರಿಸಲಾಗದೆ, ನಿರಪರಾಧಿಯಾದ ನಾನು ಸವಿವರಣೆ ಕೊಡಲು ಹೋಗಿ ವಿಫಲನಾಗಿಬಿಟ್ಟಿದ್ದೆ. ಸರಿಯಾಗಿ ಹುಡುಕು? ಎಂದೆ. 'ನೀವೂ ಹುಡುಕಿರಿ ಎಂದಳು. ಆಗಲೆ ಸ್ವಾಮಿ, ಕಳೆದು ಹೋದ ಹಣವನ್ನು ಅವಳೂ ಮತ್ತು ಕಳೆದು ಹೋದ ಮಾನವನ್ನೂ ನಾನೂ ಏಕ ಕಾಲದಲ್ಲಿ ಹುಡುಕಲು ಆರಂಭಿಸಿದ್ದು. ಪ್ರತಿ ಮಾನವನಲ್ಲೂ ಒಬ್ಬ ಕಳ್ಳನಿದ್ದಾನೆಯೆ? ಎಂಬ ಪ್ರಶ್ನೆ ಆಗಲೇ ಸ್ವಾಮಿ ನನ್ನೆದರು ಬೃಹದಾಕಾರವಾಗಿ ಬೆಳೆದು ನಿಂತಿದ್ದು.

ಆಗ ನನ್ನ ನೆರವಿಗೆ ಬಂದಿದ್ದು, ರಾಮಾಯಣ, ಮಹಾಭಾರತ ಕಾವ್ಯಗಳ ಕೆಲವು ದೃಶ್ಯ ಪ್ರಸಂಗಗಳು ಹಾಗೂ ಪಾತ್ರಗಳು–ಸನ್ಯಾಸಿ ವೇಷ ತೊಟ್ಟು, ಪತಿವ್ರತೆ ಸೀತಾಮಾತೆಯ ಮುಂದೆ ಭಿಕ್ಷಕ್ಕೆ ನಿಂತ ರಾವಣನಲ್ಲೊಬ್ಬ ಕಳ್ಳ ಅಂದು ಅಡಗಿರದಿದ್ದರೆ ಇಷ್ಟೆಲ್ಲಾ ರಾಮಾಯಣವೇ ಆಗುತ್ತಿರಲಿಲ್ಲ ಎನಿಸಿತು. ಅತ್ತ ಶ್ರೀರಾಮನಾದರೊ, ಸುಗ್ರೀವನ ಜತೆಗೂಡಿ, ಮರೆಯಲ್ಲಿ ನಿಂತು ವಾಲಿಯ ಸಂಹಾರ ಮಾಡಿದ್ದುದು ಸರಿಯೆ? ಎಂಬ ಪ್ರಶ್ನೆ ತುಂಬಾ ಕಾಡಿತು. ಇಂಥಹ ಸತ್ಪುರುಷನೊಳಗೂ ಒಬ್ಬ ಕಳ್ಳ ಅಡಗಿ ಕುಳಿತಿದ್ದನೆ? ಎಂಬ ಸಂಶಯ ಕಾಡಿತು. ಇನ್ನು ಮಹಾಭಾರತದ ವಿಚಾರಕ್ಕೆ ಬಂದರೆ, ಈ ಚಿಂತೆಗೆ ಪೂರಕ ಪಾತ್ರ ಸಾಕ್ಷಿಗಳು ಒಂದೇ, ಎರಡೇ? ಬೆಣ್ಣೆ ಕಳ್ಳ ಶ್ರೀ ಕೃಷ್ಣ ನಂತರದ ದಿನಗಳಲ್ಲಿ ಪಾಂಡವರ ಪಕ್ಷಪಾತಿಯಾಗಿ ಶತೃ ವೀರರಾದ ಕರ್ಣ, ದುರ್ಯೋಧನ ಮುಂತಾದವರನ್ನು ವಧಿಸಲು ಕಳ್ಳತನದಿಂದ ಸಹಾಯ ಮಾಡಿದುದು ಮುಜುಗರದ ವಿಚಾರವಾಗಿತ್ತು. ಈ ದುಃಶ್ಚಟ ಧರ್ಮರಾಯನನ್ನೂ ಬಿಡಲಿಲ್ಲ. 'ಅಶ್ವತ್ಥಾಮೊ ಹತಃ ಕುಂಜರಃ ಎಂಬ ಸಣ್ಣ ಸುಳ್ಳು ಹೇಳಿದ ಕಾರಣಕ್ಕಾಗಿ, ಅವನಿಗೆ ನರಕ ದರ್ಶನವಾಯ್ತು ಇಲ್ಲಿ ಸಮಾಧಾನಕರ ವಿಷಯಗಳೆಂದರೆ ಈ ಮಹನೀಯರು ನಂತರದ ದಿನಗಳಲ್ಲಿ ಈ ಅಪವಾದಗಳನ್ನೆಲ್ಲಾ ಮೀರಿ ಬೆಳೆದು ನಮ್ಮಿಂದ ಪೂಜಿಸಲ್ಪಟ್ಟರು. ಹೀಗೆಲ್ಲಾ ದೃಷ್ಟಾಂತಗಳು ಕಣ್ಣೆದುರಿಗೇ ಇದ್ದರೂ, ನನ್ನ ಪತ್ನಿ ಹಾಗೆ ಅನುಮಾನ ಪಡಬಾರದಿತ್ತು ಎಂದು ಖೇದವಾಯಿತು. ನಮ್ಮ ಹುಡುಕಾಟ ಮತ್ತೆ ಮುಂದುವರೆಯಿತು.



ನಮ್ಮೊಳಗಿರುವ 'ಕಳ್ಳ'ನನ್ನು ಮೊದಲು ಗುರ್ತಿಸುವುದು ತಾಯಿ ಎಂಬ ವಿಚಾರದ ಬಗ್ಗೆ ಮನಸ್ಸುಜಾರಿತು. ತಾಯಿಯ ತೊಡೆಯ ಮೇಲೆ ಮಲಗಿರುವ ಒಂದು ವರ್ಷದ ಹಸುಗೂಸು ಅಚಾನಕ್ಕಾಗಿ ತಾಯಿಯ ಕುತ್ತಿಗೆಯೆಡೆಗೆ ಕೈ ಚಾಚಿ ಚಿನ್ನದ ಸರವನ್ನು ಘಟ್ಟಿಯಾಗಿ ಹಿಡಿದುಕೊಂಡಾಗ, ಕೊಂಚವೂ ವಿಚಲಿತಳಾಗದ ಆ ತಾಯಿಯ ಕೊರಳಿನಿಂದ

ಹೊರಳುವ ಮೊದಲ ಉದ್ಗಾರ 'ಛೀ ಕಳ್ಳ! ಎಂದು ಇಂಥಹ ಹಸುಗೂಸುಗಳು ಭವಿಷ್ಯದಲ್ಲಿ ಪ್ರಖ್ಯಾತ ಸರಗಳ್ಳರಾಗಿರುವುದೊ ಅಥವಾ ಚಿನ್ನದ ವ್ಯಾಪಾರಿಗಳಾಗಿರೊ ನಿದರ್ಶನಗಳೂ ಉಂಟು ಎನ್ನಿ. ನನಗೆ ಈ ಅನುಭವದ ನೆನಪಿರಲು ಸಾಧ್ಯವಿಲ್ಲ. ಏಕಾಂತದಲ್ಲಿ ಹೆಂಡತಿಯ ಗಲ್ಲ ಸವರಿ 'ಛೀ ಕಳ್ಳ! ಎಂದು ಗದರಿಸಿಕೊಂಡಿರುವ ನೆನಪಂತೂ ಇದೆ. ಇನ್ನೂ ಕೆಲವು ಉದಾಹರಣೆಗಳತ್ತ ನೋಟ ಹರಿಸಿದರೆ, ದಿವಂಗತ ಬೀಚಿಯವರದು ಎಂಥಹ ಸತ್ಯ ಚಿಂತನೆ ಎನ್ನಿಸುತ್ತದೆ.

ಸಭೆ, ಸಮಾರಂಭಗಳಲ್ಲಿ ಹೆಂಡತಿಯ ಪಕ್ಕ ತೀರಾ ಸಂಭಾವಿತರ ಸೋಗಿನಲ್ಲಿ ಕುಳಿತಿರುವ ನಮಗೆ ದಿಢೀರನೆ, ಅಪ್ರತಿಮ ಸುಂದರಿಯೊಬ್ಬಳ ದರ್ಶನ ಪ್ರಾಪ್ತಿಯಾದಾಗ ನಮ್ಮೊಳಗಲ್ಲಡಗಿ ಕುಳಿತಿರುವ ಕಳ್ಳ ಸುಮ್ಮನಿರಲು ಸಾಧ್ಯವೇ? ಮಡದಿಯೊಡನೆ ವಾಯು ವಿಹಾರಕ್ಕೆ ಹೊರಟಿರುವಾಗಲು ಇಂಥಹದೇ ಮುಜುಗರದ ಸಂಗತಿಗಳು ನಮಗೆ ದುರಾಗುತ್ತದೆ. ಅದಕೆಂದೆ ಏನೋ ಇಂಥಹ ಪ್ರಸಂಗಗಳಲ್ಲಿ ನನ್ನ ಪೊಲೀಸು ಮಡದಿ ಮುಂಚೆಯೆ ಜಾಗೃತಳಾಗಿ 'ರ್ರೀ ಅಲ್ಲಿ, ಹೋಗ್ತಿದ್ದಾಳಲ್ಲಾ ಆ ಹುಡುಗಿ ಯಾರು ಗೊತ್ತಾಯ್ತೆ? ಎಂಬ ಪ್ರಶ್ನೆ ಎಸೆದು ನಮ್ಮೊಳಗಿನ ಕಳ್ಳನನ್ನು ಹುಡುಕಲು ಪ್ರಾರಂಭಿಸುತ್ತಾಳೆ.

ನಾವು ಜಾಣ ಪುರಷರಲ್ಲವೆ?. ಇಂಥಹ ಸಮಯದಲ್ಲೇ, ಸಂಭಾವಿತನದ ಸೋಗು ನಮ್ಮಲ್ಲಿ ಪರಕಾಯ ಪ್ರವೇಶ ಮಾಡಿ, ನಮ್ಮನ್ನು ಸಂದಿಗ್ಧ ಪರಿಸ್ಥಿತಿಯಿಂದ ಕಾಪಾಡಲು ಪ್ರಯತ್ನಿಸುತ್ತದೆ. ಹೀಗೆಯೆ ನಮ್ಮ ಅನ್ವೇಷಣೆ ಮುಂದುವರೆಸುತ್ತಾ ಹೋದರೆ ಮೊದಲುಂಟೆ? ಕೊನೆಯುಂಟೆ?

ಕನ್ನಡ ಸಾಹಿತ್ಯದ ಒಬ್ಬ ಎಂ.ಎ., ಪದವೀಧರನೊಬ್ಬನು 'ಕನ್ನಡ ಸಾಹಿತ್ಯದಲ್ಲಿ ಕೃತಿಚೌರ್ಯ' ಎಂಬ ಅದ್ಭುತ ವಿಷಯವನ್ನು ಆಯ್ದುಕೊಂಡು, ಒಂದು ಪ್ರಬುದ್ಧ ಪ್ರಬಂಧ ಮಂಡಿಸಿ ಪಿ.ಹೆಚ್.ಡಿ., ಪದವಿಯನ್ನು ಗಳಿಸಿಕೊಂಡಿದ್ದ. ಮತ್ತೊಬ್ಬ ವಿದ್ಯಾರ್ಥಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ' ಪಿ.ಎಚ್.ಡಿ., ಪ್ರಬಂಧ ಮಂಡನೆಯಲ್ಲೇ ಕೃತಿಚೌರ್ಯ – ಒಂದು ಪೂರ್ವ ನೋಟ ಎಂಬ ಪ್ರಬಂಧ ಮಂಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ. ಇಂಥಹ ಪಿ.ಹೆಚ್.ಡಿ., ಪದವೀಧರರ ಮೇಲೆ ನಮಗೆ ನಖ ಶಿಖಾಂತ ಸಿಟ್ಟಿರಬಹುದಲ್ಲವೆ?

ಸಮಾಜದ ವ್ಯವಸ್ಥೆ ಹಾಗೂ ಶಾಂತಿ ಕಾಪಾಡುವ ಕೆಲವು ಪೊಲೀಸರು ಇದಕ್ಕೆ ಅಪವಾದವಾಗಿರುವುದು ನಿಜಕ್ಕೂ ಖೇದದ ಸಂಗತಿ. ತಮ್ಮೊಳಗೇ 'ಕಳ್ಳ'ನನ್ನ ಅಡಗಿಸಿ ಕೊಂಡೇ ಹೊರಗಳ್ಳನನ್ನು ಹಿಡಿಯುವ ಅವರ ಇರಾದೆಯ ಬಗ್ಗೆ ನನಗೆ ಯಾವಾಗಲೂ ಕನಿಕರ. ಅದಕ್ಕೆಂದೆ ಏನೂ ನನಗೆ ಜೈಲಿನೊಳಗಿರುವ ಕಳ್ಳನಿಗೂ ಜೈಲಿನ ಹೊರಗಿರುವ ಅಧಿಕಾರಿಗೂ ಹೆಚ್ಚೇನೂ ವ್ಯತ್ಯಾಸ ಕಾಣ ಸಿಗದು.

"ಯಾವ ಕಾರಣಕ್ಕೂ ರಾಜಕಾರಣಿಗಳ ಹಾಗು ಅದನ್ನೇ ಕಸುಬಾಗಿರಿಸಿಕೊಂಡಿರುವ ಮಠದ ಸನ್ಯಾಸಿಗಳನ್ನು ಕೆಣಕಲು ಎಂದಿಗೂ ಪ್ರಯತ್ನಿಸಬೇಡ ಎಂದೆಚ್ಚರಿಸುತ್ತದೆ ನನ್ನ ಸುಷುಪ್ತ ಮನಸ್ಸು. ಈ ಎರಡೂ ಕ್ಷೇತ್ರಗಳಲ್ಲಿ ಒಂದು ಕಾದಂಬರಿಗಾಗುವಷ್ಟು ಲೇಖನ ಸಾಮಾಗ್ರಿಗಳು ನನಗೆ ದೊರಕುವ ಸಂಭವವಿದ್ದರೂ ನಾನು ಸಾಕಷ್ಟು ಅಂತರ ಕಾಯ್ದುಕೊಳ್ಳುತ್ತೇನೆ.

ಹೀಗೆ ಸಹೃದಯಿ ವಾಚಕರೆ, ಮಡದಿಯ ಒಂದು ಸಣ್ಣ "ಕಳೆದುಕೊಳ್ಳುವಿಕೆ"ಯಿಂದ ಆರಂಭವಾದ ಈ ಚಿಂತನೆಯ ಭಾರವನ್ನು ಇನ್ನೂ ಹೊತ್ತು ಕೊಳ್ಳುವುದು ನನ್ನಿಂದ




ಅಸಾಧ್ಯ. ಆದ್ದರಿಂದ ನಿಮಗರಿವಿಲ್ಲದಂತೆಯೇ ಈ ಭಾರವನ್ನು ನಿಮ್ಮ ತಲೆಯ ಮೇಲೊ ಅಥವಾ ಒಳಗೊ ಹೊರಿಸಿ ಬಿಟ್ಟಿದ್ದೇನೆ. ಆದರೆ ದಯವಿಟ್ಟು ಕ್ಷಮಿಸಿ, ನೀವು ನಿಮ್ಮೊಳಗಿನ ಕಳ್ಳನನ್ನು ಹಿಡಿದುಕೊಂಡಿರೊ ಅಥವಾ ಅವನ ಕೈಗೇ ಸಿಕ್ಕಿ ನರಳದಿರೋ? ಇದು ನನಗೆ ಬೇಡದ ವಿಷಯ.

ಹುಲು ಮಾನವನಲ್ಲಂತೂ ಸರಿ, ಆದರೆ ನಾವು ಅಚಲವಾಗಿ ನಂಬಿರುವ ದೇವರಲ್ಲೂ ಒಬ್ಬ ಕಳ್ಳ ಅಡಗಿದ್ದಾನೆ ಎಂದರೆ ನಂಬಲು ಸಾಧ್ಯವೇ? ನಮಗೆ ನೆಮ್ಮದಿಯ ಬದುಕಂತೂ ಬೇಡ, ಆದರೆ ನೆಮ್ಮದಿಯ ಸಾವೂ ಬೇಡವೇ? ಆದರೆ, ಅಂತಕನಲ್ಲೂ ಒಬ್ಬ ಕಳ್ಳ ಅಡಗಿ ನಮ್ಮ ಪ್ರಾಣ ಹರಣ ಕಳ್ಳತನದಿಂದ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಇಂಥಹುದೇ ವಿಚಾರಗಳಲ್ಲಿ ಮಹಾಭಾರತದಲ್ಲಿ ಯಕ್ಷನ ಕೆಲವು ಸಂದೇಹಗಳಿಗೆ ಶ್ರೀ ಧರ್ಮರಾಯನು ಸಮಂಜಸ ಉತ್ತರ ಕೊಟ್ಟು ತೃಪ್ತಿ ಪಡಿಸಿದ. ಆದರೆ ಈ 'ಮೋದಿ ಭಾರತದಲ್ಲಿ' ನನ್ನಂಥಹ ಪ್ರಾಮಾಣಿಕನಿಗೆ ಸಮಝಾಯಿಷಿ ನೀಡುವುರಾದರೂ ಯಾರು? ■




ಪೋಲಿಸ್ ರಕ್ಷಣೆ ಬೇಕಂತೆ.!ಇವರ ಮನೆ ಮೇಲೆ ಇರುವ ಬಾಡಿಗೆದಾರರು 6 ತಿಂಗಳಿಂದ ಬಾಡಿಗೆ ಕೊಡಲಿಲ್ವಂತೆ ಸರ್...!





ಈ ಲಸಿಕೆ ಬಂದಾಗಿಂದ ಜನ ಅಂತರನು ಕಾಪಾಡ್ತಾ ಇಲ್ಲ,ಮಾಸ್ಕ್ ಹಾಕೊಂಡು ಇರೋದಿಲ್ಲ ಕಣ್ಲಾ..!ನಮ್ಮನ್ನ ಜನ ಸಂಪೂರ್ಣವಾಗಿ ಮರತೆ ಹೋಗಿದ್ದಾರೆ...!

## ನೆನಪಿನ ಚಿತ್ತಾರ

**ವೈ.ಎನ್. ಗುಂಡೂರಾವ್**

ತೇಜು ಪಬ್ಲಿಕೇಶನ್ಸ್, ಬೆಂಗಳೂರು

ಪುಟಗಳು 247 ಬೆಲೆ ರೂ.200




ಶೀರ್ಷಿಕೆಯೇ ಹೇಳುವಂತೆ ಇದು ಸುರುಳಿ ಬಿಡಿಸಿಕೊಂಡ ನೆನಪುಗಳು. ಒಂದಲ್ಲ ಒಂದು ಹಂತದಲ್ಲಿ ಎಲ್ಲರಿಗೂ ವಿಶೇಷವಾಗಿ ಲೇಖಕರಾದವರಿಗೆ ತಮ್ಮ ನೆನಪುಗಳನ್ನು ಕೆದಕಬೇಕು ಮತ್ತು ಅವುಗಳನ್ನು ದಾಖಲಿಸಬೇಕು ಅನಿಸುತ್ತದೆ. ಅಂಥಾ ಅನಿಸಿಕೆಯನ್ನು ಪುಸ್ತಕ ರೂಪದಲ್ಲಿ ತಂದಿದ್ದಾರೆ ಅಪರಂಜಿ ಲೇಖಕ ಬಳಗದ ವೈ.ಎನ್. ಗುಂಡೂರಾವ್. ಚಿತ್ತಾರದಲ್ಲಿ 75 ಸವಿನೆನಪುಗಳಿವೆ. ಬಹುಶ: ಲೇಖಕರು 75 ವರ್ಷದ ಗಡಿ ದಾಟಿದ ನೆನಪಿಗೆ ಲೇಖನಗಳನ್ನು 75ಕ್ಕೆ ಸೀಮಿತಗೊಳಿಸಿರಬಹುದು. ಇಲ್ಲಿರುವ 75 ಲೇಖನಗಳೂ ತುಂಬಾ ವಿಶೇಷ ಅನಿಸುತ್ತದೆ. ಕಾರಣ ಲೇಖಕರು ಎಂದೋ ಕಂಡು ಅನುಭವಿಸಿ ಆನಂದಿಸಿದ ರಸನಿಮಿಷಗಳನ್ನು ಇಂದು ಕಾಣುತ್ತಿದ್ದಾರೇನೋ ಅನ್ನುವಷ್ಟು ಸಹಜವಾಗಿ ಮತ್ತು ಓದುಗರ ಕಣ್ಣಿಗೆ ಕಟ್ಟುವಂತೆ ಬಿಡಿಸಿದ್ದಾರೆ. ನಿಜಕ್ಕೂ ಇವೆಲ್ಲಾ ಅಪರೂಪದ ಘಟನೆಗಳು. ಆಫೀಸರ್ಸ್ ನಶ್ಯವೂ, ಬೀಡಿಕಟ್ಟೂ, ಆನೆಗೆ ಸಿಕ್ಕಿಬಿದ್ದಾಗ, ಸೈಕಲ್ ಕಳುವು ಮಾಡುತ್ತಿದ್ದ ವಿದ್ಯಾರ್ಥಿಗಳು, ಕತ್ತಲಾಗೋಕೆ ಮುಂಚೆ ಮನೆಗೆ ಸೇರ್ಕೊಳಿ ಮುಂತಾದ ಕೆಲವೇ ಲೇಖನಗಳನ್ನು ಉದಾಹರಿಸಿದರೆ ಇನ್ನುಳಿದ ಲೇಖನಗಳ ಸವಿರುಚಿ ತಿಳಿದಂತಾಗುತ್ತದೆ.

ಲೇಖಕರು ಯಾವುದೇ ವಿಷಯವನ್ನು ತೆಗೆದುಕೊಂಡರೂ ಕಣ್ಣಿಗೆ ಕಟ್ಟುವಂತೆ ಪ್ರಸ್ತುತಪಡಿಸುವುದರಲ್ಲಿ ನಿಷ್ಣಾತರಾಗಿರುವುದರಿಂದ ಇಲ್ಲಿ ಅವರ ಅನುಭವಗಳನ್ನು ದಾಖಲಿಸುವುದು ಸುಲಭವಾಗಿದೆ. ಇಡೀ ಗ್ರಂಥ ಅತ್ಯಂತ ಆಪ್ತತೆಯಿಂದ ಓದಿಸಿಕೊಂಡು ಹೋಗುತ್ತದೆ. ಸಂಪೂರ್ಣ ಪುಸ್ತಕವನ್ನು ಓದಿದಾಗ ಹಳ್ಳಿಯ ಮತ್ತು ನಗರದ ಅನುಭವದ ಒಂದು ಪರಿಪೂರ್ಣ ಚಿತ್ರಣ ದೊರಕಿದಂತಾಗುತ್ತದೆ.

ಲೇಖಕರಿಗೆ ಶುಭ, ಪ್ರಕಾಶಕರಿಗೆ ಶುಭ ಮತ್ತು ಕೊಂಡು ಓದುವ ಬಂಧುಗಳಿಗೂ ಶುಭ ಬಯಸಿ ಅಪರಂಜಿ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಾಳೆ.

*– ಬೇಲೂರು ರಾಮಮೂರ್ತಿ*

# ಕೊಂಕು ಜೀವಿ

– ಪ್ರಕಾಶ್ ಶೆಟ್ಟಿ

ಯಾವ ಘಳಿಗೆಯಲ್ಲಿ ಇವನು ಹುಟ್ಟಿದನೋ! ಅದಕ್ಕಿಂತಲೂ ಹೆಚ್ಚು ಕಾಡುವ ಪ್ರಶ್ನೆ ಏನಪ್ಪಾಂದ್ರೆ ಈ ಮನುಷ್ಯನಿಗೆ ಯಾವ ಕೆಟ್ಟ ಘಳಿಗೆಯಲ್ಲಿ 'ಕೊಂಕೇಶ' ಎಂಬ ಹೆಸರಿಟ್ಟರೋ ಎಂದು! ಸಾಧಾರಣವಾಗಿ ನಮಗೆಲ್ಲಾ ಗೊತ್ತಿರುವ ಹಾಗೆ ಹೆಸರಿಗೆ ತಕ್ಕಂತೆ ಇರುವವರು ತೀರಾ ವಿರಳ. ಒಂದು ವೇಳೆ ಎಲ್ಲರೂ ಹಾಗಿರುತ್ತಿದ್ದರೆ ನಮ್ಮ ಸುತ್ತ ಮುತ್ತ ದೇವತಾ ಮನುಷ್ಯರೇ ತುಂಬಿರುತ್ತಿದ್ದರು. ಅಷ್ಟೊಂದು ದೇವರ ಹೆಸರುಗಳಿರುವ ವ್ಯಕ್ತಿಗಳು ನಮ್ಮಲ್ಲಿದ್ದಾರೆ! ಕೊಂಕೇಶ ಮಾತ್ರ ತನ್ನ ಹೆಸರಿಗೆ ಕಳಂಕ ತರುವುದಿಲ್ಲ ಎಂದು ಶಪಥ ಹಾಕಿರಬೇಕು. ಆದ್ದರಿಂದ ಅವನಿಗೆ ಸ್ವಲ್ಪ ಕೊಂಕು ಜಾಸ್ತಿಯೇ. ಹಾಂ ! ಸ್ವಲ್ಪ ಕೊಂಕು ಜಾಸ್ತಿ– ಅಂದೆನಲ್ಲ...ಈ ಮಾತನ್ನು ಅವನು ಎಲ್ಲಾದರೂ ಕೇಳಿದರೆ ಮುಗಿಯಿತು. ' ರೀ! ಸ್ವಲ್ಪ ಕೊಂಕು ಜಾಸ್ತಿ ಅಂದ್ರೆ ಏನ್ರೀ? ಒಂದೋ, ಸ್ವಲ್ಪ ಅಂತ ಹೇಳಿ, ಅಥವಾ ಜಾಸ್ತಿ ಅನ್ನಿ! 'ಎಂದು ಅವನ ವಾದ ಮಂಡಿಸಿಯೇಬಿಡುತ್ತಾನೆ. ಅದು ಕೋಂಕೇಶ.



ಅಪರೂಪಕ್ಕೆ ಗೆಳೆಯರು ಯಾರಾದರೂ ಸಿಕ್ಕಿದರೆ 'ಹೇಗಿದ್ದೀರಿ? ಎಂದು ಮಾತಿಗೆ ಮುನ್ನ ಪೀಠಿಕೆ ಹಾಕುವುದು ಸರ್ವೆ ಸಾಮಾನ್ಯ. ಆದರೆ ಕೊಂಕೇಶನಲ್ಲಿ ಅಂತಹ ಪೀಠಿಕೆ ಹಾಕಿದರೆ ಚಾಟಿಯೇ ಬೀಸುತ್ತಾನೆ! 'ಯಾಕ್ರೀ.. ನನಗೆ ಸೌಖ್ಯ ಇಲ್ಲಾಂತ ಯಾರು ನಿಮಗೆ ಹೇಳಿದ್ದು?' ಎಂದು ಆತ ಹೇಳುವಾಗ ನಾವು ಉತ್ತರಿಸಲಾಗದೆ ತಡವರಿಸ ಬೇಕಾಗುತ್ತದೆ. ಒಟ್ಟಾರೆ ಈ ಮಹಾಶಯನ ಜತೆ ಮಾತನಾಡುವಾಗ ನಾವು ಎಷ್ಟು ಎಚ್ಚರದಿಂದ ಇದ್ದರೂ ಸಾಲದು. ಏನೂ ಬೇಡ, ಮಧ್ಯಾಹ್ನದ ಹೊತ್ತು ಅವನು ಎಲ್ಲಾದರೂ ಸಿಕ್ಕಿದಾಗ 'ಊಟ ಆಯಿತಾ, ಕೊಂಕೇಶರೇ?' ಎಂದು ಕೇಳಿದರೂ ಅಷ್ಟೇ. 'ಇಲ್ಲ, ನಿಮ್ಮ ಲೆಕ್ಕದಲ್ಲಿ ಊಟ ಕೊಡಿಸ್ತೀರಾ? ಯಾವ ಹೋಟ್ಲಿಗೆ ಹೋಗೋಣ?' ಎಂದೆಲ್ಲಾ ಹೇಳಿ ನಮಗೆ ಶಾಕ್ ನೀಡುತ್ತಾನೆ.

ಅವನ ಹೆಂಡತಿಗಂತೂ ಇದೆಲ್ಲಾ ಅಭ್ಯಾಸವಾಗಿಬಿಟ್ಟಿದೆ. 'ರೀ.. ಒಂದು ವಿಷ್ಯ ಗೊತ್ತಾ?' ಎಂದು ಆಕೆ ಏನೋ ಹೇಳಲು ಹೊರಟರೆ, ಈ ಜ್ಞಾನಿ ಅಲ್ಲೇ ಅವಳ ಮಾತಿಗೆ ಬ್ರೇಕ್ ಹಾಕಿ 'ಗೊತ್ತು ಬಿಡೇ...ಆ ಡೊಳ್ಳಪ್ಪನ ಮಗಳ ಬಗ್ಗೆ ತಾನೇ? ರಾತೋರಾತ್ರಿ ಯಾರೋ ಆಟೊ ಡ್ರೈವರ್ ಜತೆ ಓಡಿ ಹೋದಳಂತೆ. ಪಾಪ..ಡೊಳ್ಳಪ್ಪ...' ಎಂದು ಕೊಂಕೇಶ ಹೇಳುವುದನ್ನು ಹೆಂಡತಿ ಕಣ್ಣರಳಿಸಿಕೊಂಡು ಕೇಳಿದರೂ, ಅಸಲಿಗೆ ಆಕೆ ಹೇಳಬೇಕಿದ್ದ ವಿಷ್ಯ ಅದಾಗಿರಲಿಲ್ಲ. ಗಂಡ ರಾತ್ರಿ ಮನೆಗೆ ತಲಪುವುದು ತಡವಾಯಿತು ಎಂದಾದರೆ ಎಲ್ಲಾ ಅರ್ಧಾಂಗಿಗಳಂತೆ ಈಕೆಯೂ ಫೋನ್ ಮಾಡಿ 'ಎಲ್ಲಿದ್ದೀರಾ?' ಎಂದು ಕೇಳುತ್ತಾಳೆ. ಆದರೆ ಕೊಂಕೇಶ ಎಲ್ಲಾ ಗಂಡಂದಿರಂತೆ ಡೀಸೆಂಟಾಗಿ ಉತ್ತರಿಸುವುದಿಲ್ಲ. 'ಸಿ.ಎಂ ಜತೆಗಿದ್ದೀನಿ' ಎಂದೋ, 'ಸ್ಮಶಾನ ಕಾಯ್ತಿದ್ದೀನಿ' ಎಂದೋ , 'ಗೋಲಿ ಆಡುತ್ತಿದ್ದೇನೆ' ಎಂದೋ ಹೇಳುವುದನ್ನು ಆತ ಕರಗತ ಮಾಡಿಕೊಂಡಿದ್ದಾನೆ. ದಿನ ಹೋದಂತೆ ಅವನ ನಾಲಗೆ ಹುಚ್ಚುಚ್ಚಾಗಿ ವರ್ತಿಸುವುದನ್ನು ನೋಡಿ ತಡೆಯಲಾರದೆ ಒಮ್ಮೆ ಅವನ ಹೆಂಡತಿ ಏನಾದರೂ ಬುದ್ಧಿವಾದ ಹೇಳಿ ಎಂದು ನನ್ನಲ್ಲಿ ಕೇಳಿಕೊಂಡಳು. ನನಗೆ ಬಾಯಿ ಅಗಲಿಸಿಟ್ಟ ಮೊಸಳೆಯ ಎದುರು ನಿಂತಂತಾದರೂ ಪ್ರಯತ್ನಿಸುತ್ತೇನೆ ಎಂದು ಹೇಳಿದ್ದೆ.

ಕೊಂಕೇಶ ದಾರಿಯಲ್ಲಿ ಸಿಕ್ಕಿದ. 'ಕೊಂಕೇಶ, ನೀನು ಬೇಸರ ಮಾಡದಿದ್ದರೆ ಒಂದು ಮಾತು ಹೇಳಲಾ?' ನಾನು ಹೇಳಿದ್ದು ಇಷ್ಟೇ. 'ಓಹ್! ಮಾತಿಗೆ ಮುನ್ನ ಕಂಡಿಷನ್ ಅಪ್ಲೈಡ್! ಅಂದರೆ ಬೇಸರ ಆಗುವಂತಹ ವಿಚಾರ ಎಂಬುದು ಗ್ಯಾರಂಟಿಯಾಯಿತು. ಹಾಗಾದರೆ ದಯವಿಟ್ಟು ಹೇಳಬೇಡಿ' ಎಂದು ಅವನು ನನಗೆ ಬುದ್ಧಿವಾದ ಹೇಳುವುದಕ್ಕೆ ಅವಕಾಶವನ್ನೇ  ಮಾಡಿಕೊಡಲಿಲ್ಲ. ಕೊಟ್ಟಿದ್ದರೂ ನಾನು ಮುಖಕ್ಕೆ ಉಗಿಸಿಕೊಳ್ಳುತಿದ್ದೆ ಎಂಬುದು ಬೇರೆ ವಿಷಯ. ನಾನೇ ಮಾತನ್ನು ಬೇರೆಡೆ ತಿರುಗಿಸಿದೆ. 'ನಮ್ಮ ಶಾಂತಪ್ಪನೋರ ಹೆಂಡತಿಯ ಸರಗಳ್ಳತನವಾಯಿತಲ್ಲ... ಪೊಲೀಸರು ವಿದಿನ್ ಟ್ವೆಂಟಿಫೋರ್ ಹವರ್ಸ್ ಕಳ್ಳನನ್ನು ಹಿಡಿದುಬಿಟ್ಟರಂತೆ? ' ಓಹೋ...ಹೌದೇನ್ರಿ?!' ಕೊಂಕೇಶ ಸಂತೋಷ ವ್ಯಕ್ತಪಡಿಸುತ್ತಾನೆ ಎಂದೇ ತಿಳಿದಿದ್ದೆ. ಅವನಿಂದ ಬಂದ ಹನಿಮುತ್ತುಗಳೇ ಬೇರೆ! 'ಈ ಪೊಲೀಸರು ಮಾಡುವುದು ಇಷ್ಟೇ ಬಿಡಿ. ಕಳ್ಳರನ್ನ ಹಿಡಿದು...ಬಿಡುತ್ತಾರೆ. ಅವರಿಗೆ ಕಳ್ಳರೆಲ್ಲಾ ಗೊತ್ತಿರುವವರೇ...'

ನಮ್ಮ ಹುಚ್ಚಪ್ಪ ನಗರ ನಿವಾಸಿಗಳ ಸಂಘದ ಕನ್ನಡ ರಾಜ್ಯೋತ್ಸವದಂದು ನಡೆದ ಈ ಸಂದರ್ಭವನ್ನು ಮಾತ್ರ ಮರೆಯುವುದು ಸಾಧ್ಯವೇ ಇಲ್ಲ. ಅನೇಕರು ಸುರಸುಂದರ ಕನ್ನಡ ಚಿತ್ರಗೀತೆಗಳನ್ನು ಕರ್ಕಶವಾಗಿ ಹಾಡುತಿದ್ದರು. ಕೊಂಕೇಶ ಮಹಾಶಯ ಆ ಪಟ್ಟಿಯಲ್ಲಿ ಕೊನೆಯವನಾಗಿದ್ದ. ಕಾರ್ಯಕ್ರಮ ನಿರ್ವಾಹಕ 'ಈಗ ಕೊನೆಯದಾಗಿ ಶ್ರೀಮಾನ್ ಕೊಂಕೇಶ ಅವರು ಹಾಡಲಿದ್ದಾರೆ' ಎಂದು ಹೇಳಿದ ತಕ್ಷಣ ಕೊಂಕೇಶ ಮೈಕ್ ಎದುರು ಪ್ರತ್ಯಕ್ಷನಾದ. 'ನಮ್ಮ ಕಾರ್ಯಕ್ರಮ ನಿರ್ವಾಹಕರು ಕೊನೆಯದಾಗಿ ನಾನು ಈ ಹಾಡನ್ನು ಹಾಡಲಿದ್ದೇನೆ ಅಂದಿದ್ದು ಅಕ್ಷಮ್ಯ. ನಿಮ್ಮಾಣೆಗೂ ನಾನು ಈ ಹಾಡು ಹಾಡಿದ ನಂತರ ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆಯನ್ನೇನೂ ಮಾಡಿಲ್ಲ' ಎಂದು ಮುಖ ಕೆಂಪಗೆ ಮಾಡಿಕೊಂಡು ಹೇಳಿದರೂ ಪ್ರೇಕ್ಷಕರು ಬಿದ್ದು ಬಿದ್ದು ನಕ್ಕರು. ■



# ಧವಳಕೇಶ ಚರಿತ್ರೆ

**– ಮಹಾಬಲ ಕೆ.ಎನ್.**

"ಸಾರ್, ಇದೊಂದು  ಹೊಸಾ ಬ್ರಾಂಡ್, ಹೇರ್‌ಡೈ ಬಂದಿದೆ ಈ ಸಾರಿನಾದ್ರೂ ಹಾಕಲಾ?" ಕೂದಲು ಕತ್ತರಿಸುತ್ತ ಕೇಳಿದ ಕೇಶಾಲಂಕಾರಿ ಲಕ್ಷ್ಮೀಕಾಂತ.

ಈ 'ಸಾರೀನಾದ್ರೂ' ಎಂದು ಅವನು ಪ್ರತಿಬಾರಿ ನನ್ನ ಕೂದಲ ಬಣ್ಣ ಬದಲಿಸಲು ಆಮಿಷ ತೋರಿಸುವುದು. ನಾನು ಅದಕ್ಕೆ ಸೊಪ್ಪು ಹಾಕದೆ ಸದಾ  ಬೇಡವೆಂಬ ಉತ್ತರ ನೀಡುವುದು ಬಹುಶಃ ದಶಕಗಳಿಂದಲೇ ನಡೆದು ಬಂದಿರುವ ಸಂಪ್ರದಾಯವೇನೋ.

ಪ್ರತಿ ಬಾರಿ  ನನ್ನ ಮನಃಪರಿವರ್ತನೆ ಆಗಿರಬಹುದು ಎಂಬ ವ್ಯಾಪಾರ ದೃಷ್ಟಿಕೋನದ ಆಶಾವಾದ ಅವನದ್ದು.

ನಾನು ಯಥಾಪ್ರಕಾರ ಉತ್ತರಿಸಿದೆ "ಬೇಡ" ಎಂತಲೇ.

"ಇಲ್ಲಿ ಕೇಳಿ ಸಾರ್. ಈಗೊಬ್ರು ಪ್ರೆಸ್ಟಿಜ್ ಅಪಾರ್ಟಮೆಂಟಿನ ನಿವಾಸಿ ಬಂದಿದ್ದರು. ಹತ್ತಿರ ಹತ್ತಿರ ಎಂಬತ್ತು ವರ್ಷ. ಹೋದ ವಾರ ತಾನೆ ಅಮೆರಿಕಾದ ಮಗನ ಮನೆಯಿಂದ ಬಂದಿದ್ರು. ಅವರ ಟೀ ಶರ್ಟ್ ಏನು? ಜೀನ್ಸ್ ಪ್ಯಾಂಟ್ ಏನು ಆಹಾ ಇದ್ದರೆ ಅವರ ಹಾಗೆ ಇರಬೇಕು. ಅಲ್ಲಿಂದಲೇ ಹೊಸಾ ಬ್ರಾಂಡ್ ಕೂದಲ ಬಣ್ಣ ತಂದಿದ್ದರು. ಅವರ ಕೂದಲು ಕಪ್ಪು ಆಗೋವರ್ಗೂ ನನ್ನ ಬಿಡಲೇ ಇಲ್ಲ.ನಿಮಗೇನು ಸಾರ್ ಆಗಿರೋದು. ಅವರಷ್ಟು ವಯಸ್ಸಾಗಿದೆಯೇ?" ಪ್ರಶ್ನಿಸಿದ.

"ನೋಡಯ್ಯ, ಅವರ ತಲೆ, ಬಣ್ಣ ಅವರಿಗಿರಲಿ. ನನ್ನದು ನನಗೆ? ಕೇಶಕರ್ತನ ವೆಚ್ಚ ಎಷ್ಟಾಯ್ತು?" ಎಂದು ಚರ್ಚೆ ಸಮಾಪ್ತಿ ಮಾಡಿದೆ.

"ಸರಿ ಸರಿ, ನಿಮ್ಮ ಹತ್ತಿರ ಮಾತಾಡಿರೋ ಟೈಮಿನಲ್ಲಿ ಹತ್ತು ಜನಕ್ಕೆ ಬಣ್ಣ ಹಾಕಿರಬೋದಿತ್ತು. ಅದ್ಸರೀ ಮನೇಲಿ ಅಕ್ಕಾವ್ರು ಬಣ್ಣ ಹಾಕಿಸಕ್ಕೆ ಡಿಮ್ಯಾಂಡ್ ಮಾಡಿಲ್ವಾ?" ಮತ್ತೊಂದು ವರಸೆ ತೆಗೆದ.

"ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡಬಾರದೆಂದು ಖಡಕ್ಕಾಗಿ ಹೇಳಿಬಿಟ್ಟಿದ್ದೇನೆ ಲಕ್ಷ್ಮೀಕಾಂತ." ಎಂದೆ.

"ಸರಿ ಬಿಡಿ" ಎನ್ನುತ್ತಾ ಹೊದೆಸಿದ್ದ ಬಟ್ಟೆ  ವದರಿ ನೂರು ರೂಪಾಯಿ ವಸೂಲಿ ಮಾಡಿದ.

ಹೌದು ಮನೆಯವರು ಕೇಳಿದ್ದು ನಿಜ. "ಸೋಮವಾರದಿಂದ ಹೊಸಾ ಊರು, ಹೊಸಾ ಬ್ರಾಂಚು. ಅಲ್ಲಿಗಾದ್ರೂ ಮೊದಲ ದಿನವೇ ಬಣ್ಣ ಹಾಕಿಸಿಕೊಂಡು ಹೋಗ್ರೀ. ಇವರು ಹೀಗೇ ಇದ್ರು ಅಂತ ತಿಳಿಕೋತಾರೆ" ಎಂದು ಒಮ್ಮೆ ಸಲಹೆ ನೀಡಿದ್ದುಂಟು.

ಅದಕ್ಕೆ ನನ್ನ ಭಂಡ ಸಮಜಾಯಿಷಿ "ನಿನಗೆ ಗೊತ್ತಿಲ್ಲ, ನಾನು ಆ ಬ್ರಾಂಚಿಗೆ ಕಾಲಿಡುವ ಮುನ್ನವೇ, ನನ್ನ ಎಲ್ಲಾ ದಾಖಲೆಗಳು ಅಲ್ಲಿಗೆ ತಲುಪುವ ಮೊದಲೇ ನನ್ನ ಎಲ್ಲಾ ಬಂಡವಾಳ ವಿವಿಧ ಮೂಲಗಳಿಂದ ಆಲ್ಲಿಗೆ ರವಾನೆಯಾಗಿ ಬಿಟ್ಟಿರುತ್ತವೆ. 'ಓ ಅವನಾ ಸ್ವಲ್ಪ ದಪ್ಪ, ಎತ್ತರಾನೂ ಅಲ್ಲ  ಕುಳ್ಳೂ ಅಲ್ಲ, ಅರ್ಧ ಬಿಳಿ, ಅರ್ಧ ಕಪ್ಪು ಕೂದಲು, ಪರವಾಗಿಲ್ಲ, ಯಾರ ತಂಟೆಗೂ ಬರಲ್ಲ, ಆದರೆ ಕೆಣಕಿದರೆ ಸುಮ್ಮನಿರೋಲ್ಲ



ಇಂಥ ಮಾಹಿತಿಗಳು ಕ್ಷಣಾರ್ಧದಲ್ಲಿ ರವಾನೆಯಾಗಿರುತ್ತದೆ, ಬಣ್ಣ ಬದಲಾಯಿಸಲು ಸಾಧ್ಯವಿಲ್ಲ....".

ಇನ್ನೂ ಏನೇನೋ ಹೇಳುವವನಿದ್ದೆ.ಮಡದಿ "ಬಿಡಿ ಬಿಡಿ ಆಗೋಲ್ಲ ಅಂತ ಹೇಳೋಕ್ಕೆ , ಇಷ್ಟೊಂದು ಏಕೆ ಮಾತು?" ಎನ್ನುತ್ತ ಟಿ ವಿ ಸೀರಿಯಲ್ ನೋಡಲು ಹೊರಟಳು.

ಹಾಗೆ ಮಡದಿಯ ಬಾಯಿ ಮುಚ್ಚಿಸಿದವನಿಗೆ ಈ ಕೇಶಾಲಂಕಾರಿ ಯಾವ ಲೆಕ್ಕ? ಎಂದುಕೊಂಡೆ.

ಈ ಬಿಳಿಕೂದಲನ್ನು ಮೊದಲು ಗಮನಿಸಿ, ಟೀಕಿಸಿದ ವ್ಯಕ್ತಿ ಸಾಕ್ಷಾತ್ ನಮ್ಮಮ್ಮನೇ. ಅಲ್ಲೊಂದು ಇಲ್ಲೊಂದು ಇಣಕುತ್ತಿದ್ದ ಬಿಳಿ ಕೂದಲನ್ನು ತನ್ನ ತರಾತುರಿಯ ದಿನಚರ್ಯೆಯ ನಡುವೆಯೂ ಗಮನಿಸಿ "ಅಯ್ಯೋ ಈ ವಯಸ್ಸಿಗೇ ಬಾಲನೆರೆ. ಲಕ್ಷಣವಾಗಿ ಸೀಗೇಪುಡಿ ಹಚ್ಚಿಕೊಂಡು ತಲೆಸ್ನಾನ ಮಾಡದೆ ಸೋಪು ಹಚ್ಚಿಕೊಂಡರೆ ಇನ್ನೇನಾಗತ್ತೆ. ಎಲ್ಲಾ ನಿಮ್ಮಪ್ಪನ ಬಳುವಳಿ' ಎಂದು ತಮ್ಮ ತೀರ್ಮಾನ ತಿಳಿಸಿಬಿಟ್ಟರು.

ಶ್ವೇತಕೇಶಗಳನ್ನು ಹುಡುಕಿ ಕಿತ್ತುಹಾಕೋಣವೆಂಬ ಆಲೋಚನೆ ಮಾಡಿದಾಗ ಅದಕ್ಕೂ ಒಂದು ಅಡ್ಡಿಯ ಕಿವಿಮಾತು ಬಂತು "ಹಾಗೆ ಕಿತ್ತ ಒಂದು ಕೂದಲಿನ ಜಾಗದಲ್ಲಿ ನಾಲ್ಕು ಬೆಳೆಯತ್ತೆ ಹುಷಾರು" ಎಂಬ ಎಚ್ಚರಿಕೆ. ಅಲ್ಲಿಗೆ ಆ ಯೋಜನೆ ವಿಫಲ.

ನಿಧಾನವಾಗಿಯಾದರೂ ಶ್ವೇತಕೇಶಗಳ ಫಸಲು ಹೆಚ್ಚು ಹೆಚ್ಚು ಬೇರೂರಲು ಪ್ರಾರಂಭಿಸಿ ಅರ್ಧಶತಕದ ವಯಸ್ಸಿನ ಗಡಿ ತಲುಪುದರೊಳಗೆ ಬಿಳಿಕೂದಲು ಸ್ವತಂತ್ರ ಬಹುಮತ ಪಡೆಯುವಷ್ಟು ಸಂಖ್ಯಾಬಾಹುಳ್ಯ ಪ್ರದರ್ಶಿಸಿತು.

"ಅಯ್ಯೋ ಪಾಪ" ಯಾವಾಗಿನಿಂದ ಹೀಗೆ? ಎಂದು ಕೇಳುವ ಅನುಕಂಪದ ಅನುಯಾಯಿ.

"ಆ ತೈಲ ಬಳಸಿ ನೋಡಿದ್ರಾ? ಅದರ ಮಾರಾಟಗಾರ ನನಗೆ ಗೊತ್ತು. ಕಳಿಸಲಾ?"ಎನ್ನುವ ಸುಗಮದಾರ. ಇವೆಲ್ಲ ಕೇಳಿ ಇದುವರೆಗೆ ಕೇಶವರ್ಣದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದ ನಾನೂ ಅದರ ಬಗ್ಗೆ ಚಿಂತಿಸಲು ಆರಂಭಿಸಿದೆ. ಈ ನಡುವೆ ನನ್ನ ಕೇಶಾಲಂಕಾರಿಯಂತೂ ಬಗೆಬಗೆಯ ಸಮ್ಮಿತಿಗಳ ಪ್ರಯೋಗದಿಂದ ನನ್ನ ಮನಃಪರಿವರ್ತನೆಯತ್ತ ಸತತವಾಗಿ ಪ್ರಯತ್ನಿಸುವುದನ್ನು ಮುಂದುವರೆಸಿದ್ದ.

ಹೀಗಿರುತ್ತಾ ಒಂದು ದಿನ ಈ ನಿಟ್ಟಿನಲ್ಲಿ ನನ್ನ ಮನಸ್ಸಿಗೆ ಸಮಾಧಾನ ತರುವಂತಹ ಒಂದು ಪ್ರಸಂಗ ನಡೆಯಿತು. ನಮ್ಮ ಬ್ಯಾಂಕಿನ ಕನ್ನಡ ಸಂಘದ ಆಶ್ರಯದಲ್ಲಿ ಯಶವಂತ ಚಿತ್ತಾಲ ಅವರ ಶಿಕಾರಿ ಕಾದಂಬರಿ ಕುರಿತ ವಿಚಾರ ಸಂಕಿರಣವೊಂದು ಏರ್ಪಾಟಾಗಿತ್ತು.ಆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕವಿ, ವಿಮರ್ಶಕ ಸುಮತೀಂದ್ರ ನಾಡಿಗ ಅವರು ಶಿಕಾರಿಯ ಮುಖ್ಯ ಪಾತ್ರ ನಾಗನಾಥ ಅಕಾ ನಾಗಪ್ಪನ ಕೀಳರಿಮೆಯ ಕುರಿತು ಮಾತನಾಡುತ್ತಾ ಪ್ರಪಂಚದಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ಬಗೆಯ ಕೀಳರಿಮೆ ಇರುತ್ತದೆಂದು ಹೇಳಿ, ತಮಗೂ ತಮ್ಮ ಸಂಪೂರ್ಣ ಬಿಳಿಗೂದಲ ಬಗ್ಗೆ ಒಂದು ಬಗೆಯ ಕೀಳರಿಮೆ ಇತ್ತೆಂದೂ ಕಾಲಕ್ರಮೇಣ ಇದನ್ನು ಒಂದು ಹೆಮ್ಮೆ, ಗೌರವದ ಸಂಕೇತ ಎಂದು ಭಾವಿಸಿ ಆತ್ಮವಿಶ್ವಾಸದಿಂದ ಇರುವುದಾಗಿಯೂ ತಿಳಿಸಿದ್ದು, ನನಗೆ ಬಿಳಿಗೂದಲ ಸುಳಿಯಿಂದ ಹೊರಬರಲು ವಿದುರ ಪಾಂಡವರಿಗೆ ಅರಗಿನ ಮನೆಯಿಂದ ಹೊರಗೆ ಬರುವ ಉಪಾಯ ತಿಳಿಸಿದೆಷ್ಟೇ ಅಪ್ಯಾಯಮಾನವಾಗಿ ಕಂಡಿತು.



ಹೌದು ನಿಜಕ್ಕೂ ಮಾನವನಿಗೆ ಬಿಳಿಗೂದಲೆಂಬುದು ಗೌರವ, ಹಿರಿತನ ತರುವ ಸಾಧನವೇ ಸರಿ. ಋಷಿಮುನಿಗಳು, ಭೀಷ್ಮದ್ರೋಣಾದಿಗಳು ಸೀರಿಯಲ್ಲುಗಳಲ್ಲಿ ಬಿಳಿಕೂದಲಿನಿಂದಲೇ ಎಂಟ್ರಿ ಕೊಟ್ಟಿಲ್ಲವೆ? ಎಷ್ಟೋ ಬಹು ರಾಷ್ಟೀಯ ಕಂಪನಿಗಳಲ್ಲಿ ಕಿರಿಯರು ಬೇಗಬೇಗ ಪದೋನ್ನತಿ ಪಡೆದು ತಮಗಿಂತ ಹಿರಿಯರಾದವರನ್ನು ಕೈಕೆಳಗಿನ ಉದ್ಯೋಗಿಯಾಗಿ ಪಡೆದಾಗ ಕಿರಿಯ ಬಾಸ್ ಶೇಕಡ ನೂರು ಕಪ್ಪಾದ ತಮ್ಮ ಕೂದಲನ್ನು ಅರ್ಧ ಬಿಳಿಬಣ್ಣವಾಗಿಸಿ ಇಂಥ ಸಾಲ್ಟ್ ಅಂಡ್ ಪೆಪ್ಪರ್ ಡೈಯಿಂಗಿನಿಂದ ಹಿರಿತನದ ನೋಟ ಪಡೆಯುತ್ತಾರಂತೆ. ಹೀಗಿರುವಾಗ ಮತ್ತೇಕೆ ಬಿಳಿಗೂದಲ ಬಗ್ಗೆ ಅವಹೇಳನ?!

ಟಿವಿ ಧಾರಾವಾಹಿ ಹಾಗೂ ಸಿನಿಮಾಗಳಲ್ಲಿ ಹಾಗೆ ಬಂದು ಹೀಗೆ ಹೋಗುವ ಸಾದಿಲ್ವಾರು ಪಾತ್ರಗಳನ್ನು ವಹಿಸುವ ನನ್ನ ಆತ್ಮೀಯ ಮಿತ್ರ ಆರು ತಿಂಗಳ ನಂತರ ಸಿಕ್ಕ. ತಲೆಗೂದಲು ಈಗ ಸಂಪೂರ್ಣ ಬಿಳಿಬಣ್ಣದಿಂದ ಹೊಳೆಹೊಳೆಯುತ್ತಿತ್ತು. "ಇದೇನಯ್ಯಾ ಮಿತ್ರ? ಹೋದ ಸಾರಿ ಕಂಡಾಗ ಇಷ್ಟೊಂದು ಬಿಳಿ ಇರಲಿಲ್ಲ. ಹೇಗಾಯಿತು ಈ ಅನಾಹುತ?" ಎಂದು ಕುತೂಹಲದಿಂದ ಕೇಳಿದೆ.

"ಏನೂ ಇಲ್ಲಯ್ಯ. ನಾಳೆ ಧಾರಾವಾಹಿ ಶೂಟಿಂಗ್ ಇದೆ. ತೀರಾ ವಯಸ್ಸಾದ ಮುದುಕನ ಪಾತ್ರ. ಅದಕ್ಕೇ ಈ ಬಣ್ಣ." ಎಂದ.

ಅದಕ್ಕೆ ನಾನು "ಅಲ್ಲಯ್ಯ ವಯಸ್ಸಾದವರು ಎಂದರೆ ಬಿಳಿಕೂದಲವರೇ ಆಗಬೇಕಾ? ಬಕ್ಕತಲೆಯವರೂ ಇರಬಹುದಲ್ಲ."ಎಂದು ಪಾಟೀಸವಾಲು ಹಾಕಿದೆ.

"ನೋಡಯ್ಯಾ, ನಾವು ನಟರು ನಿರ್ದೇಶಕರ ಕೈಗೊಂಬೆಗಳು. ಅವರು ಹೇಳಿದ ಹಾಗೆ ಮಾತ್ರ ಕೇಳಬೇಕು. ಹಾದಿ ಬೀದಿಯವರ ಮಾತು ಕೇಳೋಕಾಗೋಲ್ಲ"ಎನ್ನುತ್ತಾ ಜಾಗ ಖಾಲಿ ಮಾಡಿದ.

ಅಂತೂ ಹಿರಿತನದ ಸ್ಥಾನಮಾನಕ್ಕೆ ಮುದಿತನದ ನೋಟಕ್ಕೆ ಬಿಳಿಗೂದಲೇ ಲಾಯಖ್ಖಾದದ್ದು ಎಂಬುದಕ್ಕೆ ಇದು ಮತ್ತೊಂದು ಪುರಾವೆ ಅಷ್ಟೆ.

ನನ್ನದೇ ಒಂದು ಸ್ವಾರಸ್ಯಕರ ಅನುಭವದಿಂದ ಈ ಶ್ವೇತಕೇಶ ಚರಿತ್ರೆಗೆ ಮಂಗಳ ಹಾಡಬಯಸುತ್ತೇನೆ.

ನಾನು ಹೆಬ್ಬಾಳ ಎಸ್ಟೀಮ್ ಮಾಲಿನ ಹಿಂದೆ ಇರುವ ಚಿರಂಜೀವಿ ಲೇ ಔಟಿನಲ್ಲಿದ್ದ ಸರ್ಕೋ ಎಂಬ ಬಿ ಪಿ ಓ ಕಂಪನಿಗೆ ನನ್ನ ಸೇವಾವಧಿಯ ಕೊನೆಯ ಎರಡು ವರುಷ ಬ್ಯಾಂಕಿನಿಂದ ಪ್ರತಿನಿಯುಕ್ತಿ ಹೊಂದಿದ್ದೆ. ಮನೆಯಿಂದ ಇಪ್ಪತ್ತೈದು ಕಿಮೀ ಇದ್ದುದರಿಂದ ಹಾಗೂ ಟ್ರಾಫಿಕ್ ಕಿರಿಕಿರಿಯ ಕಾರಣ ಬಿಎಂಟಿಸಿ ಬಸ್ಸಿನಲ್ಲೇ ಹೋಗುತ್ತಿದ್ದೆ. ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಯಲಹಂಕ ಮೂಲಕ ಹೋಗುವ ಬಸ್ ಹಿಡಿಯುತ್ತಿದ್ದೆ. ಬಹುಪಾಲು ದಿನ ಸೀಟ್ ಸಿಗುತ್ತಿತ್ತು. ಒಮ್ಮೊಮ್ಮೆ ನಿಂತೇ ಪಯಣಿಸಬೇಕಾಗಿತ್ತು.

ಆ ದಿನವೂ ನಾನು ಮೊದಲ ನಿಂತ ಪ್ರಯಾಣಿಕ. ಕಂಡಕ್ಟರ್ ಟಿಕೆಟ್ ನೀಡುತ್ತಾ ಬಂದು ನನ್ನನ್ನೊಮ್ಮೆ (ಅಂದರೆ ನನ್ನ ಬಿಳಿಕೂದಲನ್ನು ಅನ್ನಿ) ನೋಡಿ ಹಿರಿಯ ನಾಗರಿಕರ ಸೀಟಿನಲ್ಲಿದ್ದ ಮತ್ತೊಬ್ಬ ಕರಿಕೂದಲ ವ್ಯಕ್ತಿಯತ್ತ ನೋಡಿ "ಎದ್ದೇಳಿ, ಸೀನಿಯರ್ ನಿಂತಿದ್ದಾರೆ. ಕಾಣ್ತಾ ಇಲ್ಲವಾ " ಎಂದು ಜಬರಿಸಿದ. "ನಾನು...."ಎಂದು ಆ ಪ್ರಾಣಿ ಹೇಳುವಷ್ಟರಲ್ಲಿ "ಎಲ್ಲಾ ಗೊತ್ತು, ಏಳ್ರೀ ಮರ್ಯಾದೆಯಿಂದ " ಎಂದು ಅವರನ್ನು ಎಬ್ಬಿಸಿ "ಸಾರ್ ನೀವು ಕುತ್ಕೊಳ್ಳಿ" ಎಂದು ನನಗೆ ಹೇಳಿದ. ನಾನು ಸೀನಿಯರ್ ಅಲ್ಲ



ಅಂತ ಹೇಳಲೂ ಅವಕಾಶ ನೀಡಲಿಲ್ಲ. ಹಾಗೆ ಸೀಟಿನಿಂದ ವಂಚಿತನಾದ ಆಸಾಮಿ ಮೆಲ್ಲನೆ ನನ್ನತ್ತ ಬಗ್ಗಿ ಮೆಲುದನಿಯಲ್ಲಿ "ನಿಮ್ಮ ವಯಸ್ಸು ಎಷ್ಟು?" ಎಂದು ಕೇಳಿದ. "ಐವತ್ತೊಂಬತ್ತು"ಎಂದೆ. "ನೋಡಿ ನನ್ನ ವಯಸ್ಸು ಅರವತ್ತೆರೆಡು. ಏನೋ ಕೂದಲಿಗೆ ಬಣ್ಣಹಾಕಿದ ಮಾತ್ರಕ್ಕೆ ನಾನು ಸೀನಿಯರ್ ಅಲ್ಲವಾ?" ಎಂದು ಅಲವತ್ತುಕೊಂಡ.

"ನೀವೇ ಕೂತ್ಕೊಳ್ಳಿ ಬನ್ನಿ" ಎಂದು ಏಳಲು ಹೋದೆ.ಕಂಡಕ್ಟರ್ ದೂರದಿಂದಲೇ ನೋಡುತ್ತಿದ್ದವನು "ಏನ್ರೀ ಮತ್ತೆ ನಿಮ್ಮ ಕಿರಿಕಿರಿ ಬಸ್ಸಿನಿಂದ ಇಳಿಸಬೇಕಾ?" ಎಂದು ಪಾಪ ಆ ನಿಜವಾದ ಹಿರಿಯಪ್ರಜೆಗೆ ಗದರಿಸಿದ.

ಈಗ ಹೇಳಿ, ಅರವತ್ತು ತಲುಪುವ ಒಂದು ವರುಷ ಮೊದಲೇ, ಅದೂ ನಾನು ಸೇವೆಯಲ್ಲಿರುವಾಗಲೇ ಹಿರಿಯ ಪ್ರಜೆಯ ಸ್ಥಾನಮಾನ ದಯಪಾಲಿಸಿದ ನನ್ನ ಶ್ವೇತಕೇಶವನ್ನು ಹೇಗೆ ಗೌರವಿಸದೆ ಇರಲಿ? ಸುತ್ತಲಿನ ಆಮಿಷಗಳಿಗೆ ಏಕೆ ಬಲಿಯಾಗಲಿ?

■

---

# ‘ಯಾರದ್ದು ಸ್ಕೂಟರ್?’

ತಂದೆ ಸ್ಕೂಟರ್ ರಿಪೇರಿ ನಡೆಸುತ್ತಿದ್ದರು. ಮಗ ಬೇರೆಡೆ ನೌಕರಿ ಹಿಡಿದಿದ್ದ. ಪ್ರತಿ ದಿನ ಆಫೀಸಿಗೆ ಹೋಗಲು ರಿಪೇರಿ ಆಗಿದ್ದ ಸ್ಕೂಟರ್ ಬಳಸುತ್ತಿದ್ದ. ಅದು ಟೆಸ್ಟ್ ರೈಡ್ ಆಗಿದ್ದು ಎಲ್ಲ ಸರಿ ಇದೆ ಎಂದು ತಿಳಿದ ಮೇಲೆ ಅದರ ಮಾಲೀಕನಿಗೆ ಗಾಡಿ ಕೊಡಲಾಗುತ್ತಿತ್ತು. ಹೀಗೆ ಪ್ರತಿ ದಿನ ಒಂದೊಂದು ಸ್ಕೂಟರ್ ನಲ್ಲಿ ಬರುವಾಗಲೂ ಸಹೋದ್ಯೋಗಿಗಳು ‘ನಿಂದೇನಾ ಗಾಡಿ?’ ಎಂದು ಕೇಳುತ್ತಿದ್ದರು. ಇವನು ಸಮಾಜಾಯಿಷಿ ನೀಡುತ್ತಿದ್ದ. ಕೊನೆಗೊಂದು ದಿನ ಇವನೇ ಒಂದು ಸ್ಕೂಟರ್ ಕೊಂಡ. ಅದರ ಮೇಲೆ ಧಿಮಾಕಿನಿಂದ ಆಫೀಸಿಗೆ ಬಂದ. ಅದರಿಂದ ಇಳಿಯುತ್ತಿದ್ದಂತೆ ಸಹೋದ್ಯೋಗಿಯೊಬ್ಬ ಬಂದು ‘ಯಾರದ್ದು ಸ್ಕೂಟರ್?’ ಎಂದು ಕೇಳುವುದೆ?

